ವಿಶ್ವವಾಣಿ
ವಿಶ್ವಾಸವೇ ವಿಶ್ವ

ಕೇರಳದಲ್ಲಿ ಎರಡು ದಿನ ಶೋಕಾಚರಣೆ

ನೈಸರ್ಗಿಕ ವಿಪತ್ತಿಗೂ ಹೆಚ್ಚು ಗುರಿಯಾದ ಕೇರಳ

PUBLIC NOTICE

This is to inform that, the Original sale Deed 3751/1964-65, dated 15-03-1965, by **Tolaram & Akkalapp to Manickam,** regarding Site No.11, formed out of Sy No.59, Situated at Ulsoor Civil station, Bangalore, measuring East to West 40 feet and North to South 22½ feet has been lost or misplaced.

Any person who come across or find the said original document are hereby requested to return the same or inform it to the undersigned immediately

M.SHANMUGAM,
S/o. Late. Manickam, No.93, 19th Cross, Lakshmipuram, Ulsoor, Bangalore-560008.

ವಿರಾಮ
ಪ್ರತಿ ಭಾನುವಾರ

PUBLIC NOTICE

General Public is informed that, **B. Kathiravan** S/o Late Balachandran, aged about 50 years, R/at No.2716, 14th main Road, RPC Layout, Vijayanagar, Bangalore - 560040. has lost original allotment letter dated 19.08.1975, Possession certificate issued by the Government of Karnataka office of the City Improvement Trust Board, dated 29-11-1976, & BDA Khatha Issued by the concerned authority while shifting my house. Allotment letter/ Possession certificate of the Property bearing Site No.2716, 14th Main Road, R.P.C. Layout, Vijayanagar, Bangalore - 40.

A Complaint is lodged in Chandra Layout, Police station, on dated 25.06.2024 Lost Report No.1114733/2024. Finders may return the same to contact at **Sathyendranath, Advocate, 9449594801**

IN THE COURT OF THE 12th ADDL CITY CIVIL & SESSIONS JUDGE AT BENGALURU

P & S.C. No. 379 of 2024 (CCH-27)

PETITIONERS: (1) Smt. REKHA SADASIVAN, aged about 55 years, Daughter of (Late) Dr. S. K. Sadasivan, Aadhar No. 2077 7193 3719. **(2) Sri. ARUN SADASIVAN,** aged about 47 years, Son of (Late) Dr. S. K. Sadasivan., Aadhar No. 6560 9202 5774. Both Residing at No. 7/1, 3rd 'B' Cross, 80 feet Road, Michael Palya, Indiranagar, Bengaluru-560 038. **-V/s-**
RESPONDENT: Nil

PUBLIC NOTICE

Whereas the Petitioners have filed the above Petition under Section 372 of the Indian Succession Act praying the Hon'ble Court to grant Succession Certificate in their favour in respect of the Shares / Debentures mentioned in the TV schedule hereunder and the Bank Accounts mentioned in the 'B' schedule hereunder owned by their father Dr. S. K. Sadasivan who expired on 17/07/2019.

Interested persons are hereby informed to appear before the Hon'ble XII Additional City Civil and Sessions Judge's Court (CCH:27) Bengaluru on **17-08-2024** at 11:00 A.M. in person or by pleader duly instructed to show cause against the granting of the Succession Certificate, failing which, the matter will be heard and determined without any claim or objection.

THE A SCHEDULE SHARES / DEBENTURES

Item No.1: DLF CEMENT LIMITED

Certificate No.	Distinctive No.	No of Securities	Folio No.
Debenture 0145106	From 11400741 To 11400760	20	0029368
Debenture 0145108	From 11400781 To 11400800	20	0029368
Debenture 0145107	From 11400761 To 11400780	20	0029368
Debenture 0145105	From 11400721 To 11400740	20	0029368
Debenture 0145104	From 11400701 To 11400720	20	0029368

Item No.2: RELIANCE POLYPROPYLENE LIMITED

Certificate No.	Distinctive No.	No of Securities	Folio No.
00664219	From 166571801 To 166571900	100	29265615
00664218	From 166571701 To 166571800	100	29265615

Item No.3: LARSEN & TOUBRO LIMITED

Certificate No.	Distinctive No.	No of Securities	Folio No.
3919448	From 135618454 To 135618463	10	07367902

Item No.4: THE SOUTH INDIA BANK LTD

Certificate No.	Distinctive No.	No of Securities	Folio No.
065968	From 6037321 To 6037420	100	57/036
00352581	From 44607564 To 44607663	100	SB094445

THE 'B' SCHEDULE ASSETS

ITEM No. 1: The amount available as on date in S.B. A/c No. 45511296097 with Standard Chartered Bank, (IFSC: SCBL0036073) Koramangala, Bengaluru, linked with Demat Account No. IN30036020329793 of the said Bank, maintained by (Late) Dr. S. K. Sadasivan.

ITEM No. 2: The amount available as on date in S.B. A/c No. 028910011001891 with Union Bank of India (IFSC: UBIN 0802891) Indira Nagar, Bengaluru, maintained by (Late) Dr. S. K. Sadasivan.

Given under my hand and the seal of the court on 25-07-2024
By order of the court, Senior Sheristedar, City Civil Court, Bangalore.

Advocate for Petitioner: **M.D. ALAVANDAR**
#144 A, 5th Cross, 8th Main, Defence Layout, Sahakara Nagar, Bengaluru-560 092.

IN THE COURT OF THE CITY CIVIL JUDGE AT BENGALURU (CCH-28)

P & S.C. No. 378 of 2024

PETITIONERS: (1) Smt. REKHA SADASIVAN, aged about 55 years, Daughter of (Late) Dr. S. K. Sadasivan, Aadhar No. 2077 7193 3719. **(2) Sri. ARUN SADASIVAN,** aged about 47 years, Son of (Late) Dr. S. K. Sadasivan., Aadhar No. 6560 9202 5774. Both Residing at No. 7/1, 3rd 'B' Cross, 80 feet Road, Michael Palya, Indiranagar, Bengaluru-560 038.

-V/s-

RESPONDENT: Nil

PUBLIC NOTICE

Whereas the Petitioners have filed the above Petition under Section 372 of the Indian Succession Act praying the Hon'ble Court to grant Succession Certificate in their favour in respect of the Shares / Debentures mentioned in the 'A' schedule hereunder and the Bank Account mentioned in the 'B' schedule owned by their mother Smt. Gajalaxmi Sadasivan who expired on 16/02/2014. Interested persons are hereby informed to appear before the Hon'ble XIV Additional City Civil and Sessions Judge's Court [CCH:28], Bengaluru on the **05/09/2024** at **11:00 A.M.** in person or by pleader duly instructed to show cause against the granting of the Succession Certificate, failing which, the matter will be heard and determined without any claim or objection.

THE 'A' SCHEDULE SHARES / DEBENTURES.

ITEM No. 1: TITAN COMPANY LIMITED

Certificate No.	Distinctive Nos.	No. of Securities	Folio No.
00009703	From: 22739281 To: 22740680	1400	TWG0000196

ITEM No. 2: JINDAL VIJAYANAGAR STEEL LTD

Certificate No.	Distinctive Nos.	No. of Securities	Folio No.
4970339	From: 0944257901 To: 0944258000	100	JV50530444
4970338	From: 0944257801 To: 0944257900	100	JV50530444
2490273	From: 0696251301 To: 0696251400	100	JV50013208
4970337	From: 0944257701 To: 0944257800	100	JV50530444
2490274	From: 0696251401 To: 0696251500	100	JV50013208

ITEM No. 3: TITAN INDUSTRIES LIMITED: (Formerly TITAN WATCHES LIMITED)

Certificate No.	Distinctive Nos.	No. of Securities	Folio No.
Debenture: 670	From: 5485 To: 5493	9	IWG000196
9703	From: 22739281 To: 22740680	1400	TWG0000196
E 00018420	From: 0029471478 To: 0029471533	56	TWG00196
00025065	From: 0027943023 To: 0027943026	4	TWA05176
00001529	From: 0024050251 To: 0024050260	10	TIA05176

ITEM No. 4: LARSEN & TOUBRO LIMITED.

Certificate No.	Distinctive Nos.	No. of Securities	Folio No.
3919448	From: 135618454 To: 135618463	10	07367902
0384340	From: 581094663 To: 581094672	10	74680461

ITEM No. 5: ULTRA TECH CEMENT LIMITED.

Certificate No.	Distinctive Nos.	No. of Securities	Folio No.
00220603	035837130	1	74680461

ITEM No. 6: SHRIRAM INDUSTRIAL ENTERPRISES LTD.

Certificate No.	Distinctive Nos.	No. of Securities	Folio No.
112078	From: 437266 To: 437285	20	11264
112079	From: 437286 To: 437295	10	11264
112080	From: 437296 To: 437297	2	11264
Debenture: 27741	From: 2599802 To: 2599830	29	11264
250491	From: 18691698 To: 18691726	29	11264
210641	From: 15920904 To: 15920932	29	11264

ITEM No. 7: SIEL LIMITED.

Certificate No.	Distinctive Nos.	No. of Securities	Folio No.
348157 & 348158	From: 27266147 To: 27266157	11	0011264
458101 to 458103	From: 32515655 To: 32515686	32	0011264
478442 & 478443	From: 33706642 To: 33706647	6	0011264
00458102	From: 32515675 To: 32515684	10	0011264
00458101	From: 32515655 To: 32515674	20	0011264
00348158	27266157	1	0011264
00348157	From: 27266147 To: 27266156	10	0011264
00478442	From: 33706642 To: 33706646	5	0011264
00458103	From: 32515685 To: 32515686	2	0011264
00478443	33706647	1	0011264

THE 'B' SCHEDULE ASSET

The amount available as on date in S.B. A/c No. 45511286512 with Standard Chartered Bank, (IFSC: SCBL0036073) Koramangala, Bengaluru, maintained by Smt. Gajalaxmi Sadasivan, now deceased.

Given under my hand and seal of the court on this 25/07/2024
By order of the Court, Senior Sheristedar, City Civil Court, Bengaluru

Advocate for Petitioner: **M.D. ALAVANDAR**
#144 A, 5th Cross, 8th Main, Defence Layout, Sahakara Nagar, Bengaluru-560 092.

ಆಂಗ್ಲ ಚಾರ್ಜ್‌ಶೀಟ್: ಹೈಕೋರ್ಟ್ ಸೂಚನೆ

ಅಪರಾಧ ಸುದ್ದಿಗಳು

ಬೆಂಗಳೂರು: ಹಿಜಾಬ್ ಕುರಿತಂತೆ ಆದೇಶ ನೀಡಿದ್ದ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಬೆದರಿಕೆ ಹಾಕಿದ ಆರೋಪದಲ್ಲಿ ಇಬ್ಬರು ಆರೋಪಿಗಳ ವಿರುದ್ಧ ಸಲ್ಲಿಸಲಾಗಿದ್ದ ಆರೋಪ ಪಟ್ಟಿಯ ಆಂಗ್ಲ ಭಾಷೆಯ ಅನುವಾದಿತ ಪ್ರತಿಗಳನ್ನು ಒದಗಿಸುವಂತೆ ರಾಜ್ಯ ಸರಕಾರಕ್ಕೆ ಹೈಕೋರ್ಟ್ ನಿರ್ದೇಶಿಸಿದೆ.

ಪ್ರಕರಣದ ಆರೋಪಿಗಳಾದ ಆರ್.ರಹಮತ್-ಉಲ್ಲಾ ಮತ್ತು ಜಮಾಲ್ ಮೊಹಮ್ಮದ್ ಉಸ್ಮಾನ್ ಅವರು ತಮ್ಮ ವಿರುದ್ಧ ಸಲ್ಲಿಕೆಯಾಗಿರುವ ಆರೋಪ ಪಟ್ಟಿಯನ್ನು ಆಂಗ್ಲಭಾಷೆಯಲ್ಲಿ ಒದಗಿಸಲು ಕೋರಿ ಸಲ್ಲಿಸಿದ್ದ ಅರ್ಜಿ ವಜಾಗೊಳಸಿದ್ದ ವಿಚಾರಣಾ ನ್ಯಾಯಾಲಯದ ಕ್ರಮವನ್ನು ಪ್ರಶ್ನಿಸಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಈ ಸೂಚನೆ ನೀಡಿ ಅರ್ಜಿಯನ್ನು ಇತ್ಯರ್ಥಪಡಿಸಿ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ವೇಲನ್, ನಮ್ಮ ಕಕ್ಷಿದಾರರಿಗೆ ಕನ್ನಡ ಭಾಷೆ ಅರ್ಥವಾಗುವುದಿಲ್ಲ, ಓದಲು ಅಥವಾ ಬರೆಯಲು ಬರುವುದಿಲ್ಲ. ಆದ್ದರಿಂದ ಆಂಗ್ಲ ಭಾಷೆಯಲ್ಲಿ ಪ್ರತಿಗಳನ್ನು ಒದಗಿಸಬೇಕು ಎಂದು ನ್ಯಾಯಪೀಠಕ್ಕೆ ಕೋರಿದರು. ವಕೀಲರಾಗಿರುವ ತಮಗೆ ಕನ್ನಡ ಭಾಷೆಯನ್ನು ಕೇವಲ ಮಾತನಾಡುವುದು ಬರುತ್ತದೆ. ಆದರೆ, ತಮಗೆ ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುವುದಿಲ್ಲ ಎಂದಿದ್ದರು. ಅಲ್ಲದೇ, ಸಿಬಿಐ ವಿರುದ್ಧದ ನರೋತ್ತಮ್ ಧಾಕಡ್ ಪ್ರಕರಣದಲ್ಲಿ ಅಗತ್ಯವಿದ್ದರೆ ಮತ್ತು ಆರೋಪಿಗಳ ವಿರುದ್ಧದ ಆರೋಪ ಪಟ್ಟಿಯಲ್ಲಿ ಹೇಳಲಾದ ಭಾಷೆಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ಸಾಬೀತುಪಡಿಸಿದರೆ, ಅನುವಾದಿತ ಆವೃತ್ತಿಯನ್ನು ಒದಗಿಸುವುದು ಅಗತ್ಯವಾಗುತ್ತದೆ ಎಂದು ನ್ಯಾಯಪೀಠದ ಗಮನಕ್ಕೆ ತಂದರು. ಆದ್ದರಿಂದ ನಮಗೆ ಆಂಗ್ಲಭಾಷೆಯ ಪ್ರತಿ ಒದಗಿಸಬೇಕು ಎಂದು ಕೋರಿದರು. ವಾದ ಆಲಿಸಿದ ಪೀಠ, ಆರೋಪಪಟ್ಟಿ ಭಾಷಾಂತರ ಪ್ರತಿಗಳು ಮತ್ತು ಆರೋಪ ಪಟ್ಟಿಯಲ್ಲಿ ಸೇರಿಸಿರುವ ವಿಷಯಗಳನ್ನು ಆಂಗ್ಲ ಭಾಷೆಯಲ್ಲಿ ಅರ್ಜಿದಾರರ ವಕೀಲರಿಗೆ ಒದಗಿಸುವಂತೆ ರಾಜ್ಯ ಸರಕಾರಕ್ಕೆ ಆದೇಶಿಸಿತು.

ಪ್ರಕರಣದ ಹಿನ್ನೆಲೆ: ಶಾಲಾ- ಕಾಲೇಜುಗಳಲ್ಲಿ ಹಿಜಾಬ್ ಧರಿಸುವ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆ ನಡೆಸಿದ ಹೈಕೋರ್ಟ್, ಹಿಜಾಬ್ ಕಡ್ಡಾಯವಲ್ಲ ಎಂದು ತಿಳಿಸಿತ್ತು. ಇದರಿಂದ ಅಸಮಾಧಾನಗೊಂಡಿದ್ದ ತಮಿಳುನಾಡು ತೌಹೀದ್ ಜಮಾತ್ ಸಮಿತಿ ಸದಸ್ಯರಾಗಿದ್ದ ಅರ್ಜಿದಾರರು ಮಧುರೈನಲ್ಲಿ ಆಯೋಜಿಸಿದ್ದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ಮಾತನಾಡುವಾಗ, ಹಿಜಾಬ್ ತೀರ್ಪು ನೀಡಿದ್ದ ನ್ಯಾಯಾಧೀಶರಿಗೆ ಬೆದರಿಕೆ ಹಾಕಿದ್ದರು.

ಈ ಸಂಬಂಧ ಮಧುರೈನಲ್ಲಿ ಎಫ್‌ಐಆರ್ ದಾಖಲಿಸಲಾಗಿದ್ದು, ಅವರನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿತ್ತು. ಈ ಭಾಷಣದ ವಿಡಿಯೋ ವ್ಯಾಪಕವಾಗಿ ಪ್ರಸಾರವಾಗಿತ್ತು. ಬಳಿಕ ಸುಧಾ ಕಟ್ವಾ ಎಂಬುವರು ಬೆಂಗಳೂರಿನ ವಿಧಾನ ಸೌಧದ ಠಾಣೆಯಲ್ಲಿ ಐಪಿಸಿ ಮತ್ತು ಯುಎಪಿಎ ಸೆಕ್ಷನ್‌ಗಳ ಅಡಿಯಲ್ಲಿ ದೂರು ದಾಖಲಿಸಿದ್ದರು. ಈ ಸಂಬಂಧ ಪೊಲೀಸರು ವಿಚಾರಣಾ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದ್ದರು.

ಚಿನ್ನಾಭರಣ ಕಳ್ಳತನ: ಮೂವರ ಬಂಧನ

ಬೆಂಗಳೂರು: ಕೆಲಸ ಮಾಡುತ್ತಿದ್ದ ಮಾಲೀಕರ ಮನೆಯಲ್ಲಿ ಲಕ್ಷಾಂತರ ರು. ಮೌಲ್ಯದ ಚಿನ್ನಾಭರಣ ಕಳ್ಳತನ ಮಾಡಿದ್ದ ಮನೆ ಕೆಲಸದಾಕೆ ಸೇರಿದಂತೆ ಮೂವರನ್ನು ಮಾರತಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಬಂಧಿತ ಆರೋಪಿಗಳಾದ ದಿವ್ಯಾ, ಮಂಜು ಹಾಗೂ ಜೋಮನ್ ಎಂಬುವರಿಂದ 30 ಲಕ್ಷ ಮೌಲ್ಯದ ಚಿನ್ನಾಭರಣ ವಶಪಡಿಸಿಕೊಂಡು ಆರೋಪಿಗಳನ್ನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಯಮಲೂರಿನ ದಿವ್ಯಶ್ರೀ ಟೆಕ್ ಪಾರ್ಕ್‌ನ ವಿಲ್ಲಾದಲ್ಲಿ ನೆಲೆಸಿದ್ದ ಉದ್ಯಮಿ ಮನೆಯಲ್ಲಿ ದಿವ್ಯಾ ಎರಡು ವರ್ಷಗಳಿಂದ ಕೆಲಸ ಮಾಡುತ್ತಿದ್ದಳು. ರಜೆ ಹಿನ್ನೆಲೆಯಲ್ಲಿ ಮಾಲೀಕರ ಕುಟುಂಬ ಜು. 13 ರಂದು ಪ್ರವಾಸಕ್ಕೆ ತೆರಳಿತ್ತು. 27ರಂದು ಪ್ರವಾಸ ಮುಗಿಸಿ ವಾಪಸಾಗಿ ಪರಿಶೀಲಿಸಿದಾಗ ವಜ್ರ ಸೇರಿದಂತೆ ಲಕ್ಷಾಂತರ ಮೌಲ್ಯದ ಚಿನ್ನಾಭರಣ ಕಳ್ಳತನವಾಗಿರುವುದು ಗೊತ್ತಾಗಿದೆ. ಈ ಸಂಬಂಧ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಏಳು ಮಂದಿ ವಿರುದ್ಧ ಅನುಮಾನ ವ್ಯಕ್ತಪಡಿಸಿ, ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಮನೆಕೆಲಸದಾರರನ್ನು ತೀವ್ರ ವಿಚಾರಣೆಗೆ ಒಳಪಡಿಸಿದಾಗ ದಿವ್ಯಾ ಕಳ್ಳತನ ಮಾಡಿದ್ದನ್ನು ಒಪ್ಪಿಕೊಂಡಿದ್ದಾಳೆ ಎಂದು ಪೊಲೀಸರು ತಿಳಿಸಿದ್ದಾರೆ.

ಹಂತಹಂತವಾಗಿ ಕಳವು

ಕಳೆದ ಎರಡು ವರ್ಷಗಳಿಂದ ಮಾಲೀಕರ ಮಕ್ಕಳನ್ನು ನೋಡಿಕೊಳ್ಳುವ ಕೆಲಸ ಮಾಡುತ್ತಿದ್ದ ದಿವ್ಯಾ, ಹಂತಹಂತವಾಗಿ ಕಳೆದ ಆರು ತಿಂಗಳಿಂದ ಚಿನ್ನಾಭರಣ ಎಗರಿಸಿದ್ದಾಗಿ ವಿಚಾರಣೆ ವೇಳೆ ಬಾಯ್ಬಿಟ್ಟಿದ್ದಾಳೆ. ಅಲ್ಲದೇ ಪೊಲೀಸರ ವಿಚಾರಣೆ ವೇಳೆ ಕೈ ಕೊಯ್ದುಕೊಳ್ಳಲು ಯತ್ನಿಸಿ ಹೈಡ್ರಾಮ ಮಾಡಿದ್ದಳು. ಈಕೆ ನೀಡಿದ ಮಾಹಿತಿ ಮೇರೆಗೆ 30 ಲಕ್ಷ ಚಿನ್ನಾಭರಣ ವಶಪಡಿಸಿಕೊಳ್ಳಲಾಗಿದೆ. ಕಳ್ಳತನ ಮಾಡಿದ ಮಾಲನ್ನು ಮಂಜು ಬಚ್ಚಿಟ್ಟು, ವಿಲೇವಾರಿ ಮಾಡುವ ಕೆಲಸವನ್ನು ಡ್ರೈವರ್ ಜೋಮನ್‌ಗೆ ವಹಿಸಿದ್ದಳು. ಇನ್ನೇನು ಆಭರಣಗಳನ್ನು ಅಡವಿಡಲು ಮುಂದಾಗುವಷ್ಟರಲ್ಲೇ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಪುನೀತ್ ಕೆರೆಹಳ್ಳಿಗೆ ಷರತ್ತುಬದ್ಧ ಜಾಮೀನು ಮಂಜೂರು

ಬೆಂಗಳೂರು: ಮಾಂಸ ಸಾಗಣೆಗೆ ಅಡ್ಡಿಪಡಿಸಿದ ಪ್ರಕರಣದಲ್ಲಿ ಬಂಧಿತರಾಗಿದ್ದ ರಾಷ್ಟ್ರ ಜಾಗೃತಿ ಸಂಘಟನೆ ಅಧ್ಯಕ್ಷ ಪುನೀತ್ ಕೆರೆಹಳ್ಳಿಗೆ ನಗರದ 5ನೇ ಎಸಿಎಂಎಂ ಕೋರ್ಟ್ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದೆ.

ಪರಿಶೀಲನೆ ವೇಳೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿ ಆರೋಪದಲ್ಲಿ ಬಂಧನ ಅಗಿದ್ದ ಪುನೀತ್ ಕೆರೆಹಳ್ಳಿಗೆ ಜುಲೈ 27ರಂದು ಕೋರ್ಟ್ 14 ದಿನ ನ್ಯಾಯಾಂಗ ಬಂಧನ ವಿಧಿಸಿತ್ತು. ಇದರ ಬೆನ್ನಲ್ಲೇ ಷರತ್ತಿನ ಜಾಮೀನು ನೀಡಲಾಗಿದೆ. ಪ್ರತಿ ತಿಂಗಳ ಮೊದಲ ಭಾನುವಾರ ಠಾಣೆಗೆ ಹಾಜರಾಗಿ ಸಹಿಮಾಡಬೇಕು. ದೇಶಬಿಟ್ಟು ಹೋಗಬಾರದು, ಸಾಕ್ಷಿಗಳ ಮೇಲೆ ಪ್ರಭಾವ ಬೀರಬಾರದು. ಮತ್ತೆ ಇಂತಹದ್ದೇ ಅಪರಾಧ ಕೃತ್ಯದಲ್ಲಿ ಭಾಗಿ ಆಗಬಾರದು ಎಂದು ಕೋರ್ಟ್ ಷರತ್ತು ವಿಧಿಸಿ, ಜಾಮೀನು ಮಂಜೂರು ಮಾಡಿದೆ. ಬೆಂಗಳೂರಿಗೆ ಕುರಿಮಾಂಸದ ನೆಪದಲ್ಲಿ ನಾಯಿಮಾಂಸವನ್ನು ಬೇರೆ ರಾಜ್ಯದಿಂದ ತರಿಸಿ ಮಾರಾಟ ಮಾಡಲಾಗುತ್ತಿದೆ ಎಂದು ಪುನೀತ್ ಕೆರೆಹಳ್ಳಿ ಆರೋಪಿಸಿ, ಮೆಜೆಸ್ಟಿಕ್‌ಗೆ ಬರುತ್ತಿದ್ದ ಮಾಂಸದ ವಾಹನಗಳನ್ನು ತಡೆದಿದ್ದರು. ಪೊಲೀಸರು ಮಧ್ಯಪ್ರವೇಶಿಸಿ, ಮಾಂಸದ ದಾಸ್ತಾನನ್ನು ವಶಪಡಿಸಿಕೊಂಡಿದ್ದರು. ಪೊಲೀಸರ ಭದ್ರತೆಯಲ್ಲಿ ಕೋಲ್ಡ್ ಸ್ಟೋರೇಜ್‌ಗೆ ಮಾಂಸ ತುಂಬಿದ ನಾಲ್ಕು ವಾಹನಗಳು ರವಾನೆಯಾಗಿದ್ದವು. ಈ ವೇಳೆ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದರಿಂದ ಪುನೀತ್ ಕೆರೆಹಳ್ಳಿಯನ್ನು ಪೊಲೀಸರು ಬಂಧಿಸಿದ್ದರು.

ಗಾಂಜಾ ಸೇವನೆಗೆ ಹಣ ಹೊಂದಿಸಲು ಮೊಬೈಲ್ ಕಳವು

ಬೆಂಗಳೂರು: ಗಾಂಜಾ ಚಟ ತೀರಿಸಿಕೊಳ್ಳಲು ನಿರ್ಮಾಣ ಹಂತದ ಕಟ್ಟಡಗಳು ಹಾಗೂ ಶೆಡ್‌ಗಳಲ್ಲಿ ರಾತ್ರಿ ವೇಳೆ ತೆರಳಿ ಕಾರ್ಮಿಕರ ಮೊಬೈಲ್‌ಗಳನ್ನು ಕಳ್ಳತನ ಮಾಡುತ್ತಿದ್ದ ಖದೀಮನನ್ನು ವೈಟ್‌ಫೀಲ್ಡ್ ಠಾಣೆ ಪೊಲೀಸರು ಸೆರೆಹಿಡಿದಿದ್ದಾರೆ.

ಬಿಹಾರದ ಅಬ್ದುಲ್ ರಜಾಕ್ (22) ಬಂಧಿತ ಆರೋಪಿ. ಈತನಿಂದ 4.5 ಲಕ್ಷ ರು. ಮೌಲ್ಯದ 32 ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಕಾಡುಗೋಡಿಯಲ್ಲಿ ನೆಲೆಸಿದ್ದ ಈತ, ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದಾನೆ. ತಂದೆ ಹಲವು ವರ್ಷಗಳಿಂದ ನಗರದಲ್ಲಿ ನೆಲೆಸಿ ಕೂಲಿ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಗಾಂಜಾ ಚಟ ಬೆಳೆಸಿಕೊಂಡಿದ್ದ ಆರೋಪಿ, ಹಣ ಹೊಂದಿಸಲು ಮೊಬೈಲ್ ಕಳ್ಳತನ ಮಾಡುತ್ತಿದ್ದ. ಕದ್ದ ಮೊಬೈಲ್‌ಗಳನ್ನು ಕಡಿಮೆ ಬೆಲೆಗೆ ಮಾರಾಟ ಮಾಡಿ, ಬಂದ ಹಣದಲ್ಲಿ ಗಾಂಜಾ ಖರೀದಿಸುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಶ್ರೀರಾಮ ಸೌಹಾರ್ದ ಕ್ರೆಡಿಟ್ ಕೋ-ಆಪರೇಟಿವ್ ಲಿ
ನಂಜಮ್ಮ ತಿಮ್ಮರಾಯ ರೆಡ್ಡಿ ಬಿಲ್ಡಿಂಗ್, ಹೊಸೂರು ಮುಖ್ಯರಸ್ತೆ, ಚಂದಾಪುರ ಅಂಚೆ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ -560 081

ಸಾಮಾನ್ಯ ಸಭೆಯ ಸೂಚನೆ ಹಾಗೂ ಆಹ್ವಾನ ಪತ್ರಿಕೆ

2023-24ನೇ ಸಾಲಿನ ಇಪ್ಪತ್ತೊಂಭತ್ತನೇ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ : 18-08-2024 ರಂದು ಭಾನುವಾರ ಬೆಳಿಗ್ಗೆ 10.30 ಗಂಟೆಗೆ ಚಂದಾಪುರದಲ್ಲಿರುವ ಕೆ.ಎನ್.ಟಿ. ಕಲ್ಯಾಣ ಮಂದಿರದಲ್ಲಿ ಸಹಕಾರಿಯ ಅಧ್ಯಕ್ಷರಾದ ಶ್ರೀ ಟಿ.ರಾಮಸ್ವಾಮಿರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಗುವುದು. ಸದಸ್ಯರೆಲ್ಲರು ಸಭೆಗೆ ಸಕಾಲಕ್ಕೆ ಆಗಮಿಸಿ ಕಾರ್ಯಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

ದಿನಾಂಕ : 27-07-2023
ಸ್ಥಳ : ಬೆಂಗಳೂರು

ಸಹಿ/- ಕಾರ್ಯದರ್ಶಿ
ಆಡಳಿತ ಮಂಡಳಿ ಅಪ್ಪಣೆ ಮೇರೆಗೆ

ಶ್ರೀ ಕಾಳಿಕಾಂಬ ಸೌಹಾರ್ದ ಸಹಕಾರಿ ಸಂಘ ನಿಯಮಿತದ 21ನೇ ವಾರ್ಷಿಕ ಮಹಾಸಭೆ ಕದಂಬ ಗಾರ್ಡೇನಿಯದಲ್ಲಿ ನಡೆಯಿತು. ಕಾರ್ಯಕ್ರಮದಲ್ಲಿ ಸದಸ್ಯರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಸಹಕಾರಿ ಅಧ್ಯಕ್ಷ ಲ| ರಾಮಚಂದ್ರ, ಉಪಾಧ್ಯಕ್ಷ ಶ್ರೀ ರವಿ ಆಚಾರ್ಯ, ನಿರ್ದೇಶಕರು, ಹಾಗೂ ಮುಖ್ಯ ಕಾರ್ಯನಿರ್ವಾಹಕ ಎಚ್ .ಎಸ್ . ಸದಾಶಿವ ಹಾಗೂ ಸಿಬ್ಬಂದಿ ವರ್ಗ ಇದ್ದರು.

ಆರ್ಥಿಕ ಆಸ್ತಿಯ ಭದ್ರತೆ ಮತ್ತು ಪುನನಿರ್ಮಾಣ ಮತ್ತು ಬಡ್ಡಿಯ ಹಿತಾಸಕ್ತಿ ರಕ್ಷಣಾಕ್ರಮದ ಅಧಿನಿಯಮ 2002 ಸೆಕ್ಷನ್ 13 (2) ಕಾಲಂನ ಪ್ರಕಾರ ಜಾರಿ ಮಾಡುವದಕ್ಕಾಗಿ ಕೊಟ್ಟ ಸೂಚನೆ (ಅಧಿನಿಯಮ)

ಅ ನಂ.	ಸಾಲಗಾರರ ಹೆಸರು (ಎ)	ಅಡವು ಇಟ್ಟ ಆಸ್ತಿಯ ವಿವರ (ಬಿ)	ಎನ್‌ಪಿಎಯ ತಾರೀಖು (ಸಿ)	ಬಾಕಿ ಉಳಿದ ಕೊಡಬೇಕಾದಹಣ (ಡಿ)
1.	ಸಾಲ ಖಾತೆ ನಂ. HHLANN00370302 1. ಅನೀಶ್ ಐಸಾಕ್ (ಪಿಒಎ ಹೋಲ್ಡರ್ ಅನಿಲ್ ಶಾಂತಿಯಾಲ್ ಐಸಾಕ್ ಮೂಲಕ) 2. ಅನಿಲ್ ಶಾಂತಿಯಾಲ್ ಐಸಾಕ್ (ಗ್ಯಾರೆಂಟರ್)	ಫ್ಲಾಟ್ ನಂ. ಟಿ- 904, 9ನೇ ಮಹಡಿ, ಬ್ಲಾಕ್ ಟಿ ಅರ್ಬಾನ ಅವೆನ್ಯೂ ಬೆಂಗಳೂರು ಗ್ರಾಮಾಂತರ ಬೆಂಗಳೂರು-562114 ಕರ್ನಾಟಕ	05.05.2024	08.07.2024 ರಂದಿನಂತೆ ರೂ. 78,77,163.44/- (ರೂಪಾಯಿ ಎಪ್ಪತ್ತ ಎಂಟು ಲಕ್ಷ ಎಪ್ಪತ್ತ ಏಳು ಸಾವಿರದ ನೂರ ಅರವತ್ತ ಮೂರು ಮತ್ತು ಪೈಸೆ ನಲವತ್ತ ನಾಲ್ಕು ಮಾತ್ರ)
2.	ಸಾಲ ಖಾತೆ ನಂ. HHLSKN00405033 1. ಜನಾರ್ದನ ದುರ್ಗಪ್ಪ ಮೊಗೇರ್ ಅಲಿಯಾಸ್ ಡಾ. ಜನಾರ್ದನ್ 2. ಹೇಮಾ ಮಂಜುನಾಥ ಹೆಬ್ಬೈ ಅಲಿಯಾಸ್ ಡಾ. ಹೇಮಾವತಿ 3. ಮಹಾಬಲೇಶ್ವರ ಡಿ ಮೊಗೇರ್ (ಗ್ಯಾರೆಂಟರ್)	ಫ್ಲಾಟ್ ನಂ. ಎಚ್ 502, ಬ್ಲಾಕ್ ಎಚ್, 5ನೇ ಮಹಡಿ, ಅರ್ಬಾನ ಆಕ್ವಾ2, ಕನ್ನಮಂಗಲ ಗ್ರಾಮ ದೇವನಹಳ್ಳಿ ಹೋಬಳಿ ಕನ್ನಮಂಗಲ ಗ್ರಾಮ, ಕಸಬಾ ಹೋಬಳಿ, 25 ಕರ್ನಾಟಕ ಬೆಂಗಳೂರು-562110 ಕರ್ನಾಟಕ	10.05.2024	08.07.2024 ರಂದಿನಂತೆ ರೂ. 80,72,853.97/- (ರೂಪಾಯಿ ಎಂಬತ್ತು ಲಕ್ಷ ಎಪ್ಪತ್ತ ಎರಡು ಸಾವಿರದ ಎಂಟು ನೂರ ಐವತ್ತ ಮೂರು ಮತ್ತು ಪೈಸೆ ತೊಂಬತ್ತ ಏಳು ಮಾತ್ರ)
3.	ಸಾಲ ಖಾತೆ ನಂ. HHLBGM00505840 1. ಆರೋಕಿಯಮರಿ ಚಿನ್ನಪ್ಪ ಅಲಿಯಾಸ್ ಆರೋಕಿಯಮರಿ ಸುದೀಪ್ ಕುಮಾರ್ (ಸಹ-ಸಾಲಗಾರ, ಪತ್ನಿ ಹಾಗೂ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ಉತ್ತರಾಧಿಕಾರಿ) 2. ಶೆರ್ಲಿ ಉದಯ ಕುಮಾರ್ (ಸಹ-ಸಾಲಗಾರ, ತಾಯಿ ಹಾಗೂ ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ಉತ್ತರಾಧಿಕಾರಿ) 3. ಉದಯ ಕುಮಾರ್ ಅಲಿಯಾಸ್ ಉದಯ್ ಕುಮಾರ್ (ತಂದೆ ಹಾಗೂ ದಿವಂಗತ ಸುದೀಪ್ ಕುಮಾರ್ ಅಲಿಯಾಸ್ ಸುದೀಪ್ ಕುಮಾರ್ ಅವರ ಕಾನೂನು ವಾರಸುದಾರರು) 4. ಬೆಲ್ಲಾ (ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಅಪ್ರಾಪ್ತ ಮಗಳು ಹಾಗೂ ಕಾನೂನು ಉತ್ತರಾಧಿಕಾರಿ ನ್ಯಾಚುರಲ್ ಗಾರ್ಡಿಯನ್ ಮೂಲಕ) 5. ಗೇಬ್ರಿಯೆಲ್ಲಾ (ದಿವಂಗತ ಸುದೀಪ್ ಕುಮಾರ್ ಯು ಅಲಿಯಾಸ್ ಸುದೀಪ್ ಕುಮಾರ್ ಅವರ ಅಪ್ರಾಪ್ತ ಮಗಳು ಹಾಗೂ ಕಾನೂನು ಉತ್ತರಾಧಿಕಾರಿ ನ್ಯಾಚುರಲ್ ಗಾರ್ಡಿಯನ್ ಮೂಲಕ)	ಸೈಟ್ ನಂ. 42 ಮತ್ತು 43, ಆಸ್ತಿ ಸಂಖ್ಯೆ. 84, ಮನೆ ಪಟ್ಟಿ ಸಂಖ್ಯೆ. ಖಾತಾ. 317, ಬೈರತಿ ಗ್ರಾಮ, ಬಿದರಹಳ್ಳಿ ಹೋಬಳಿ ಬೆಂಗಳೂರು ದಕ್ಷಿಣ ತಾಲೂಕು ಬೆಂಗಳೂರು - 560077 ಕರ್ನಾಟಕದಲ್ಲಿ ಸ್ಥಿತವಾಗಿದೆ	04.04.2024	18.07.2024 ರಂದಿನಂತೆ ರೂ. 38,78,965.26/- (ರೂಪಾಯಿ ಮೂವತ್ತ ಎಂಟು ಲಕ್ಷ ಎಪ್ಪತ್ತ ಎಂಟು ಸಾವಿರದ ಒಂಬೈನರ ಅರವತ್ತ ಐದು ಮತ್ತು ಪೈಸೆ ಇಪ್ಪತ್ತ ಆರು ಮಾತ್ರ)

ಈ ಮೇಲೆಹೆಸರಿಸಲಾದಸಾಲಗಾರರುಆರ್ಥಿಕಶಿಸ್ತು ಮತ್ತು ಸಾಲದ ಖಾತೆಯಜವಾಬ್ದಾರಿಯಹೊಣೆಯನ್ನು ಸರಿಯಾಗಿ ಪಾಲಿಸದೇಇದ್ದುದರಿಂದಕಂಪನಿಯು ತಮ್ಮ ಲೆಕ್ಕಾಶಾಸ್ತ್ರಪುಸ್ತಕಗಳಆಧಾರದಿಂದ ಈ ಸಾಲ ಪಡೆದವರ ಈಗ ಕೊಡಬೇಕಾದಮೊತ್ತವನ್ನು ಕಾಲಮ್ ಡಿ ಸಾಮಾನ್ಯ ಉದ್ಯೋಗ ನಿರ್ವಹಣೆಯ ಪ್ರಕಾರ, ಕೊಡದೇವಿಫಲರಾಗಿದ್ದಾರೆಎಂದುತೋರಿಸಿಕೊಟ್ಟಿದೆ.

ಪ್ರತಿಯೊಬ್ಬ ಸಾಲ ಪಡೆದವ (ರು) ಮರಳಿ ಸಾಲ ತೀರಿಸುವಬಗ್ಗೆ ದೀರ್ಘಕಾಲದ ತೀವ್ರಉಪೇಕ್ಷೆತೋರಿಸಿದುದರಿಂದ ಅವರ ಸಾಲದ ಖಾತೆಯನ್ನು ಕಂಪನಿಯವರು ನಿರ್ದಿಷ್ಟಪಡಿಸಲಾದ ನಿಯಮಗಳಂತೆ ಅನುತ್ಪಾದಕ ಆಸ್ತಿ (ಕಾಲಮ್ ಸಿಯಲ್ಲಿನ ತಾರೀಖಿನಂದು) ಎಂದುವರ್ಗೀಕರಿಸಿದ್ದಾರೆ. ತತ್ಪರಿಣಾಮವಾಗಿ ಆ್ಯಕ್ಟ್‌ನಸೆಕ್ಷನ್ 13 (2) ಅಧಿನಿಯಮದಂತೆ ಪ್ರತಿಯೊಬ್ಬಸಾಲಗಾರನಿಗೆ (ರಿಗೆ) ಸೂಚನೆಗಳನ್ನುಕೂಡಾ ನೀಡಲಾಗಿದೆ.

ಈ ಮೇಲಿನದ್ದರ ಕಾರಣ ಈ ಮೇಲೆಹೆಸರಿಸಲಾದ ಪ್ರತೀಯೊಬ್ಬ ಸಾಲಗಾರನಿಗೆ (ರಿಗ)ಕಂಪೆನಿಯು ಈ ಮೇಲೆಕಾಲಮ್ ಡಿಯಲ್ಲಿ ದರ್ಶಿಸಲಾದ ಬಾಕಿ ಮೊತ್ತವನ್ನು ಈ ತನಕದಬಡ್ಡಿ ,ವೆಚ್ಚಗಳುಮತ್ತು ಚಾರ್ಜಸ್‌ನೊಂದಿಗೆ ಈ ಸೂಚನೆ ಪ್ರಕಟವಾದ 60 ದಿನಗಳಲ್ಲಿ ಪಾವತಿಸುವಮೂಲಕಕಂಪೆನಿಯ ಮೇಲಿನ ಅವನ/ಅವಳ ಸಂಪೂರ್ಣ ಬಾಧ್ಯತೆಯನ್ನು ಪೂರ್ಣಗೊಳಿಸಬೇಕೆಂದು ಈ ಮೂಲಕಕೇಳಿಕೊಳ್ಳುತ್ತಿದ್ದು ಇದಕ್ಕೆ ತಪ್ಪಿದಲ್ಲಿ, ಕಂಪನಿಯು ಈ ಮೇಲೆಕಾಲಮ್ ಬಿಯಲ್ಲಿ ನಮೂದಿಸಲಾದಅಡವುಇಟ್ಟ ಆಸ್ತಿಯನ್ನು ಸ್ವಾಧೀನ ಪಡಿಸಿಕೊಳ್ಳಲುಅರ್ಹವಾಗಿದೆಮತ್ತು ಕಂಪೆನಿ ಕಾನೂನಿನಲ್ಲಿ ಉಪಲಬ್ಧವಿರುವಇತರಕ್ರಮಗಳನ್ನು ಕೂಡಾತೆಗೆದುಕೊಳ್ಳುತ್ತದೆ.

ಎಸ್‌ಏಆರ್‌ಎಫ್‌ಏಇಎಸ್‌ಐ (SARFAESI) ಆ್ಯಕ್ಟ್‌ನ ಸೆಕ್ಷನ್ 13ರ ಸೆಕ್ಷನ್ (8)ರ ನಿಬಂಧನೆಗಳ ವಿಶಿಷ್ಟ ಭಾಷೆಯಲ್ಲಿರುವ ಮುಂದಿನ ವಿಷಯವನ್ನು ದಯವಿಟ್ಟು ಗಮನಿಸಿರಿ: ''ಒಬ್ಬ ಸಾಲಗಾರನು ಅಡವಿನ ಆಧಾರದ ಮೇಲೆ ತನಗೆ ಸಾಲ ಕೊಟ್ಟಿರುವವನಿಗೆ, ಆತ ಸಾರ್ವಜನಿಕ ಹರಾಜಿನ ಮೂಲಕ, ಸಾರ್ವಜನಿಕರಿಂದ ಕೊಟೇಶನ್‌ಗಳನ್ನು, ಟೆಂಡರನ್ನು ಆಹ್ವಾನಿಸುವ ಮೂಲಕ ಅಥವಾ ಖಾಸಗಿ ಕರಾರಿನ ಮೂಲಕ ಅಡವಿಟ್ಟಿರುವ ಆಸ್ತಿಯನ್ನು(ಗಳನ್ನು) ಮಾರಾಟ ಮಾಡಲು ನೋಟೀಸನ್ನು ಪ್ರಕಟಿಸುವ ತಾರೀಖಿನ ತನಕ ಮಾತ್ರ, ಆತನ ಎಲ್ಲಾ ವ್ಯವಹಾರದ ವೆಚ್ಚಗಳು, ಚಾರ್ಜುಗಳು ಮತ್ತು ಖರ್ಚುಗಳೊಂದಿಗೆ ತನ್ನಿಂದ ಬಾಕಿ ಇರುವ ಹಣದ ಸಂಪೂರ್ಣ ಮೊತ್ತವನ್ನು ಸಲ್ಲಿಸಬಹುದು. ಜೊತೆಯಲ್ಲೇ ಇದನ್ನೂ ಗಮನಿಸಬಹುದು: ಸಾಲಗಾರನು ಮೇಲೆ ಹೇಳಿರುವ ಕಾಯಿದೆಬದ್ಧವಾಗಿ ಆದೇಶಿಸಿರುವ ಸಮಯದ ಚೌಕಟ್ಟಿನೊಳಗೆ ತಾನು ಅಡವಿಟ್ಟಿರುವ ಆಸ್ತಿಯನ್ನು ಬಿಡಿಸಿಕೊಳ್ಳದೆ ಹೋದರೆ, ಸಾಲಗಾರನು ಆ ಆಸ್ತಿಯನ್ನು ಬಿಡಿಸಿಕೊಳ್ಳುವ ಹಕ್ಕಿಗೆ ಅರ್ಹನಿಲ್ಲದಿರಬಹುದು''

ಎಸ್‌ಎಆರ್‌ಎಫ್‌ಎಇಎಸ್‌ಐ ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (13)ರ ನಿಬಂಧನೆ ಪ್ರಕಾರ ಒಂದೋ ಮಾರಾಟ, ಲೀಸ್ ಅಥವಾ ಅನ್ಯಥಾ (ಅವನ ವ್ಯಾಪಾರದ ಸಾಮಾನ್ಯ ವಿಧಾನದ ಹೊರತಾಗಿ)ವಿಧಾನದಿಂದ ಸೂಚನೆಯಲ್ಲಿ ಉಲ್ಲೇಖಿಸಲಾದ ಯಾವುದೇ ಸೆಕ್ಯೂರ್ಡ್ ಆಸ್ತಿಯನ್ನು ಸೆಕ್ಯೂರ್ಡ್ ಕ್ರೆಡಿಟರರ ಲಿಖಿತ ಪೂರ್ವ ಸಮ್ಮತಿ ಇಲ್ಲದೆ ನೀವು ವರ್ಗಾಯಿಸುವುದನ್ನು ಈ ಮೂಲಕ ನಿಷೇಧಿಸಲಾಗಿದೆ.

ಸಮ್ಮಾನ್ ಕ್ಯಾಪಿಟಲ್ ಲಿಮಿಟೆಡ್
(ಹಿಂದೆ ಇಂಡಿಯಾಬುಲ್ಸ್ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ ಎಂದು ಕರೆಯಲಾಗುತ್ತಿತ್ತು)
ಸ್ಥಳ : ಬೆಂಗಳೂರು **ಅಧಿಕೃತ ಅಧಿಕಾರಿ**

ಅಪಘಾತ ಪ್ರಕರಣ; ಲಾರಿ ಚಾಲಕನ ಬಂಧನ

ಬೆಂಗಳೂರು: ದ್ವಿಚಕ್ರ ವಾಹನಕ್ಕೆ ಡಿಕ್ಕಿ ಹೊಡೆದು ಸವಾರರಿಬ್ಬರ ಸಾವಿಗೆ ಕಾರಣನಾಗಿದ್ದ ಬಿಬಿಎಂಪಿ ಕಸದ ಲಾರಿಚಾಲಕನನ್ನು ಬಂಧಿಸಲಾಗಿದೆ.

ಅಪಘಾತದ ಬಳಿಕ ಪರಾರಿಯಾಗಿದ್ದ ಚಾಲಕ ಶಿವಶಂಕರ್ ಎಂಬಾತನನ್ನು ಹಲಸೂರು ಗೇಟ್ ಸಂಚಾರಿ ಠಾಣಾ ಪೊಲೀಸರು ಸೆರೆ ಹಿಡಿದಿದ್ದಾರೆ. ಲಾರಿ ಡಿಕ್ಕಿಯಾಗಿ ಮೈಮೇಲೆ ಹರಿದು ಟಿಸಿಎಸ್ ಕಂಪನಿಯ ಉದ್ಯೋಗಿಗಳಾಗಿದ್ದ ಪ್ರಶಾಂತ್ ಹಾಗೂ ಶಿಲ್ಪಾ ಮೃತಪಟ್ಟ ಘಟನೆ ಭಾನುವಾರ ರಾತ್ರಿ ಕೆ.ಆರ್.ಸರ್ಕಲ್ ಬಳಿ ನಡೆದಿತ್ತು. ಅಪಘಾತದ ಬಳಿಕ ಸ್ಥಳದಿಂದ ಚಾಲಕ ಸ್ಥಳದಿಂದ ಪರಾರಿಯಾಗಿದ್ದ. ಪಾನಮತ್ತನಾಗಿ ಲಾರಿ ಚಾಲನೆ ಮಾಡಿದ ಶಂಕೆ ವ್ಯಕ್ತವಾಗಿದ್ದು, ಆತನ ರಕ್ತದ ಮಾದರಿ ಸಂಗ್ರಹಿಸಲಾಗಿದೆ. ವೈದ್ಯಕೀಯ ವರದಿಯ ಬಳಿಕ ಸತ್ಯಾಂಶ ಹೊರಬರಲಿದೆ.

ಕಸದ ಲಾರಿಗಳಿಗೆ ವೇಗಮಿತಿ ನಿಗದಿಗೆ ಚಿಂತನೆ

ಬಿಬಿಎಂಪಿ ಕಸದ ಲಾರಿಗಳಿಂದ ಪದೇ ಪದೇ ಅಪಘಾತ ಸಂಭವಿಸುತ್ತಿದ್ದು, ವೇಗಮಿತಿ ಅಳವಡಿಸಲು ಸಂಚಾರಿ ಪೊಲೀಸರು ಚಿಂತನೆ ನಡೆಸುತ್ತಿದ್ದಾರೆ. ಪ್ರಸ್ತುತ ಕಸದ ಲಾರಿಗಳಿಗೆ ಗಂಟೆಗೆ 60 ಕಿ.ಮೀ ವೇಗಮಿತಿ ಇದೆ. ಆದಾಗ್ಯೂ ಚಾಲಕರ ನಿರ್ಲಕ್ಷ್ಯ ಹಾಗೂ ಅತಿವೇಗದಿಂದ ಅಪಘಾತಗಳು ಸಂಭವಿಸುತ್ತಿವೆ. ಆದ್ದರಿಂದ ಕಸದ ಲಾರಿಗಳಿಂದ ಸಂಭವಿಸಿರುವ ಅಪಘಾತ ಪ್ರಕರಣಗಳ ವರದಿ ಸಿದ್ಧಪಡಿಸಿ ವೇಗಮಿತಿಯನ್ನು ಮತ್ತಷ್ಟು ತಗ್ಗಿಸಲು ಚಿಂತಿಸಲಾಗುತ್ತಿದೆ. ಅಲ್ಲದೇ ಕಸದ ದುರ್ವಾಸನೆಯ ನಡುವೆ ಕೆಲಸ ಮಾಡಬೇಕಿರುವುದರಿಂದ ಕೆಲವು ಚಾಲಕರು ಪಾನಮತ್ತರಾಗಿ ವಾಹನ ಚಲಾಯಿಸುತ್ತಿರಬಹುದು ಎಂಬ ಅನುಮಾನ ವ್ಯಕ್ತಪಡಿಸಿರುವ ಪೊಲೀಸರು ವಿಶೇಷ ಕಾರ್ಯಾಚರಣೆ ಹೆಚ್ಚಿಸಲು ಸಿದ್ಧತೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಪೊಲೀಸ್ ತರಬೇತಿ; ತಗ್ಗಿದ ಬಿಎಂಟಿಸಿ ಅಪಘಾತ

ಬೆಂಗಳೂರು: ಕೆಲ ವರ್ಷದ ಹಿಂದೆ 'ಕಿಲ್ಲರ್ ಬಿಎಂಟಿಸಿ' ಎನ್ನುವ ಹಣೆಪಟ್ಟಿಯನ್ನು ತೊಡೆದು ಹಾಕಲು ನಿರಂತರ ಪ್ರಯತ್ನದಿಂದ, ಇದೀಗ ಅಪಘಾತ ಪ್ರಕರಣಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗಿದೆ.

ಬಿಎಂಟಿಸಿ ಬಸ್‌ಗಳಿಂದ ನಿರಂತರ ಅಪಘಾತದಿಂದ ಎಚ್ಚೆತ್ತ ಬಿಎಂಟಿಸಿ, ಸಂಚಾರ ಪೊಲೀಸರ ನಿರಂತರ ತರಬೇತಿ ಹಿನ್ನೆಲೆಯಲ್ಲಿ ಸರಕಾರಿ ಬಸ್‌ಗಳಿಂದ ನಗರದಲ್ಲಿ ಸಂಭವಿಸುತ್ತಿದ್ದ ಅಪಘಾತ ಪ್ರಮಾಣದಲ್ಲಿ ಗಣನೀಯ ಇಳಿಕೆಯಾಗಿದೆ. ಟ್ರಾಫಿಕ್ ಪೊಲೀಸರು ಚಾಲಕರಿಗೆ ಸುರಕ್ಷಿತ ಬಸ್ ಚಾಲನೆ ಬಗ್ಗೆ ತರಬೇತಿ ನೀಡುತ್ತಿರುವ ಪರಿಣಾಮ ಈ ವರ್ಷ ನಾಲ್ಕು ಅಪಘಾತ ಪ್ರಕರಣಗಳು ದಾಖಲಾಗಿರುವುದು ಹೊರತುಪಡಿಸಿ ಹೆಚ್ಚಿನ ಸಂಖ್ಯೆಯಲ್ಲಿ ಅಪಘಾತ ಪ್ರಕರಣಗಳು ದಾಖಲಾಗಿಲ್ಲ.

ಅಪಘಾತಗಳ ಸಂಖ್ಯೆ ಇಳಿಮುಖ : ಈ ಹಿಂದೆ ಸರಿಯಾದ ನಿರ್ವಹಣೆಯಿಲ್ಲದೇ, ಬ್ರೇಕ್‌ಯಿಲ್ಲದೇ ಬಸ್‌ಗಳಿಂದ ಅಪಘಾತವಾಗುತ್ತಿದೆ ಎಂಬ ದೂರುಗಳು ಕೇಳಿಬಂದಿತ್ತು. ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ಬಿಎಂಟಿಸಿ ಹಾಗೂ ಕೆಎಸ್ಆರ್‌ಟಿಸಿ ಬಸ್‌ಗಳಲ್ಲಿ ಸಾಕಷ್ಟು ಸುಧಾರಣೆ ಕಂಡು ಬಂದಿದ್ದರೂ ಅಪಘಾತಗಳ ಸಂಖ್ಯೆ ಕಡಿಮೆಯಾಗಿರಲಿಲ್ಲ. ಈ ಬಗ್ಗೆ ಪರಿಹಾರ ಕಂಡುಕೊಳ್ಳಲು ನಗರದಲ್ಲಿ ಬಿಎಂಟಿಸಿ ಚಾಲಕರು, ನಿರ್ವಾಹಕರಿಗೆ ಸಂಚಾರಿ ಪೊಲೀಸರು ಟ್ರಾಫಿಕ್ ಮ್ಯಾನೇಜ್‌ಮೆಂಟ್ ಕೇಂದ್ರದಲ್ಲಿ ತರಬೇತಿ ನೀಡುತ್ತಿದ್ದಾರೆ. ಇದರ ಪರಿಣಾಮ ಅಪಘಾತಗಳ ಸಂಖ್ಯೆ ಗಣನೀಯವಾಗಿ ಇಳಿದಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚಾಲಕರ ಸಮಸ್ಯೆಗೆ ಪರಿಹಾರ: ತರಬೇತಿ ಸಮಯದಲ್ಲಿ ಚಾಲಕರು ಹಾಗೂ ನಿರ್ವಾಹಕರು ಮುಖ್ಯವಾಗಿ ಸಮಯ ನಿರ್ವಹಣೆ ಸಮಸ್ಯೆ, ಸರಿಯಾದ ಸಮಯದಲ್ಲಿ ನಿಗದಿಯಾದ ಸ್ಥಳಕ್ಕೆ ಹೋಗಬೇಕು, ಸರಿಯಾದ ವಿಶ್ರಾಂತಿ ಇಲ್ಲದಿರುವುದು, ದಿನಕ್ಕೆ 10-12 ಗಂಟೆಗಳ ಕಾಲ ಕರ್ತವ್ಯ ನಿರ್ವಹಣೆ ಸೇರಿದಂತೆ ಹಲವು ಸಮಸ್ಯೆಗಳ ಬಗ್ಗೆ ಅಳಲು ತೊಂಡಿಕೊಂಡಿದ್ದರು. ಇದಕ್ಕೆ ಪರಿಹಾರ ಎಂಬಂತೆ ಒತ್ತಡ ಸಂದರ್ಭದಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು. ಜಾಗರೂಕತೆಯಿಂದ ಹೇಗೆ ವಾಹನ ಚಲಾಯಿಸಬೇಕು. ರಸ್ತೆ ತಿರುವುಗಳಲ್ಲಿ ಯಾವ ರೀತಿ ಮುಂಜಾಗ್ರತೆ ತೆಗೆದುಕೊಳ್ಳಬೇಕು ಎಂಬುದರ ಸಂಪೂರ್ಣ ತರಬೇತಿ ಚಾಲಕರಿಗೆ ನೀಡಲಾಗಿದೆ.

ಇನ್ನು ಅಪಘಾತಗಳು ಹೆಚ್ಚಾಗಿ ಸಂಜೆ ಹಾಗೂ ಮುಂಜಾನೆ ವೇಳೆಯೇ ಘಟಿಸುತ್ತಿದ್ದು, ಆ ಸಂದರ್ಭದಲ್ಲಿ ಬಸ್ ಚಾಲಕರು ಯಾವ ರೀತಿ ಎಚ್ಚರಿಕೆಯಿಂದಿರಬೇಕು ಎಂಬುದನ್ನೂ ತರಬೇತಿಯಲ್ಲಿ ಹೇಳಿಕೊಡಲಾಗಿದೆ. ಈ ತರಬೇತಿಯಿಂದ ಅಪಘಾತ ಪ್ರಕರಣಗಳು ಗಣನೀಯವಾಗಿ ಇಳಿಕೆಯಾಗಿದೆ. 2022ರಲ್ಲಿ ಒಟ್ಟು 33 ಬಸ್ ಅಪಘಾತ ಪ್ರಕರಣಗಳು ದಾಖಲಾಗಿದ್ದರೆ, 2023ರಲ್ಲಿ 35 ಪ್ರಕರಣಗಳು ದಾಖಲಾಗಿವೆ. ಪ್ರಸಕ್ತ ವರ್ಷ ಕೇವಲ ನಾಲ್ಕಕ್ಕೆ ಇಳಿದಿದೆ. ಈ ಅಂಕಿ - ಅಂಶ ಪರಿಗಣಿಸಿದಾಗ ತರಬೇತಿ ಕಾರ್ಯಾಗಾರ ಬಹುತೇಕ ಯಶಸ್ವಿಯಾಗಿದೆ ಎಂದು ನಗರ ಸಂಚಾರ ವಿಭಾಗದ ಜಂಟಿ ಪೊಲೀಸ್ ಆಯುಕ್ತ ಎಂ.ಎನ್.ಅನುಚೇತ್ ತಿಳಿಸಿದ್ದಾರೆ.

ಪ್ರಜ್ವಲ್ ಪ್ರಕರಣ: ರಾಹುಲ್ ಮೇಲೆ ಕ್ರಮಕ್ಕೆ ಪಿಐಎಲ್

ಬೆಂಗಳೂರು: ಕಳೆದ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಜೆಡಿಎಸ್‌ನ ಉಚ್ಚಾಟಿತ ಸಂಸದ ಪ್ರಜ್ವಲ್ ರೇವಣ್ಣ ಅವರು 400 ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರ ಎಸಗಿ, ಅವರ ವಿಡಿಯೊ ಮಾಡಿಕೊಂಡಿದ್ದಾರೆ ಎಂದು ಸಾರ್ವಜನಿಕವಾಗಿ ಸುಳ್ಳು ಹರಡಿದ ಆರೋಪದ ಮೇಲೆ ಲೋಕಸಭಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ವಿರುದ್ಧ ಕ್ರಮ ಕೈಗೊಳ್ಳಲು ನಿರ್ದೇಶಿಸಬೇಕು ಎಂದು ಕರ್ನಾಟಕ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಕೆಯಾಗಿದೆ.

ಆಲ್ ಇಂಡಿಯಾ ದಲಿತ ಆಕ್ಷನ್ ಸಮಿತಿಯ ರಾಷ್ಟ್ರೀಯ ಅಧ್ಯಕ್ಷ ಚಿ. ನಾ. ರಾಮು ಮತ್ತು ರಾಷ್ಟ್ರೀಯ ಮಹಿಳಾ ಘಟಕದ ಅಧ್ಯಕ್ಷೆ ಸುಶೀಲಾ ದೇವರಾಜ್ ಅವರಿಂದ ಜಿಆರ್ ಲಾ ಫರ್ಮ್ ಮೂಲಕ ಪಿಐಎಲ್ ಸಲ್ಲಿಕೆಯಾಗಿದ್ದು, ಅದು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಅರ್ಜಿಯಲ್ಲಿ ರಾಹುಲ್ ಗಾಂಧಿ, ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗ, ರಾಜ್ಯ ಗೃಹ ಇಲಾಖೆ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರನ್ನು ಪ್ರತಿವಾದಿಗಳನ್ನಾಗಿಸಲಾಗಿದೆ.

ದ್ವೇಷಭಾಷಣದ ಮೂಲಕ ಮಹಿಳೆಯ ಘನತೆಗೆ ಚ್ಯುತಿ ಉಂಟುಮಾಡಿರುವ, ಸಂವಿಧಾನ ಮತ್ತು ಭಾರತೀಯ ನಾರಿಗೆ ಒದಗಿಸಿರುವ ಸಾಂವಿಧಾನಿಕ ರಕ್ಷಣೆಗೆ ಅವಿಧೇಯತೆ ತೋರಿರುವ ರಾಹುಲ್ ಗಾಂಧಿ ವಿರುದ್ಧ ಕ್ರಮಕೈಗೊಳ್ಳಲು ರಾಷ್ಟ್ರೀಯ ಮತ್ತು ರಾಜ್ಯ ಮಹಿಳಾ ಆಯೋಗ, ರಾಜ್ಯ ಗೃಹ ಇಲಾಖೆ ಮತ್ತು ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ನಿರ್ದೇಶಿಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿದೆ. ಮಹಿಳೆಯ ಘನತೆಗೆ ಚ್ಯುತಿ ಉಂಟು ಮಾಡುವ ಮೂಲಕ ಆಕೆಗೆ ಅವಮಾನ, ನೋವು, ವೇದನೆ ಉಂಟುಮಾಡಿರುವ ಅಸಾಂವಿಧಾನಿಕ ಭಾಷಣಕ್ಕೆ ರಾಹುಲ್ ಬೇಷರತ್ ಕ್ಷಮೆ ಕೋರಲು ಆದೇಶಿಸಬೇಕು. ಮಹಿಳೆಯ ಘನತೆಗೆ ಹಾನಿ ಮಾಡಿರುವ ರಾಹುಲ್ ಹಾಗೂ ಇತರೆ ಪ್ರತಿವಾದಿಗಳಿಗೆ ಸಾರ್ವಜನಿಕ ಹುದ್ದೆಯ ದುರ್ಬಳಕೆ, ಸಾರ್ವಜನಿಕ ನಂಬಿಕೆಗೆ ಹಾನಿ, ಸಾಂವಿಧಾನಿಕ ನಿಬಂಧನೆಗಳ ಉಲ್ಲಂಘನೆಗಾಗಿ ಭಾರತೀಯ ನ್ಯಾಯಸಂಹಿತೆಯಡಿ ಸಾಂಕೇತಿಕವಾಗಿ ದಂಡ ವಿಧಿಸಬೇಕು ಎಂದು ಮನವಿ ಮಾಡಲಾಗಿದೆ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ
ಜೀವನದಲ್ಲಿ ಸದಾ ನೋಡುತ್ತಲೇ ಇರಬೇಕು. ನಡೆದು ಬಂದ ಹಾದಿಯಲಿ ಹಿಂಬದಿ ನೋಡಿ ಅನುಭವ ಪಡೆಯಬೇಕು. ಮುಂದೆ ನೋಡಿ ಭರವಸೆ ಗಳಿಸಬೇಕು. ಸುತ್ತಲೂ ನೋಡಿ ವಾಸ್ತವವನ್ನು ತಿಳಿದುಕೊಳ್ಳಬೇಕು ಮತ್ತು ನಮ್ಮೊಳಗೇ ನೋಡಿ ನಮ್ಮನ್ನು ಅರಿಯಬೇಕು.

ವಕ್ರತುಂಡೋಕ್ತಿ
ಕೆಲವರು ಕುಡಿಯುತ್ತಾರೆ, ಬೇರೆಯವರು ಆಸಕ್ತಿದಾಯಕವಾಗಿ ಕಾಣಲಿ ಎಂದು.

ಪ್ರಕೃತಿ ವಿಕೋಪಕ್ಕೆ ಬೆಚ್ಚಿಬಿದ್ದ ಕೇರಳ । ಸರಣಿಯಂತೆ ಗುಡ್ಡಗಳ ಕುಸಿತ । ಎರಡು ಗ್ರಾಮ ಪೂರ್ಣ ನೆಲಸಮ । 123 ಮಂದಿ ಜೀವಂತ ಸಮಾಧಿ । ಸಮರೋಪಾದಿ ರಕ್ಷಣಾ ಕಾರ್ಯ

ವಯನಾಡು ಅಲ್ಲೋಲ ಕಲ್ಲೋಲ

ವಯನಾಡು: 'ಗಾಡ್ಸ್ ಓನ್ ಕಂಟ್ರಿ'(ದೇವರ ಸ್ವಂತ ನಾಡು) ಎಂದೇ ಕರೆಸಿಕೊಳ್ಳುವ ಕೇರಳವು ಪ್ರಕೃತಿಯ ಸಿಟ್ಟಿಗೆ ಬೆಚ್ಚಿಬಿದ್ದಿದೆ. ಸತತ ಮಳೆಯ ಕಾರಣ ವಯನಾಡು ಲೋಕಸಭಾ ಕ್ಷೇತ್ರದಲ್ಲಿ ಭಾರೀ ಭೂಕುಸಿತವಾಗಿದ್ದು, ಎರಡು ಗ್ರಾಮಗಳು ಬಹುತೇಕ ನಿರ್ನಾಮವಾಗಿವೆ. ಇನ್ನೆರಡು ಗ್ರಾಮಗಳು ಬಹಳಷ್ಟು ಹಾನಿಗೀಡಾಗಿವೆ. ಪರಿಣಾಮ, 123 ಮಂದಿ ಜೀವ ಕಳೆದುಕೊಂಡಿದ್ದಾರೆ. ನೂರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಮಣ್ಣಿನಡಿ ಸಿಲುಕಿದ ವರ ಪತ್ತೆ ಕಾರ್ಯ ಮುಂದುವರಿದಿದ್ದು ಸಾವಿನ ಸಂಖ್ಯೆ ಹೆಚ್ಚಳವಾಗುವ ಸಾಧ್ಯತೆ ಇದೆ. ಕೇರಳ ಸರಕಾರ 2 ದಿನಗಳ ಶೋಕಾಚರಣೆ ಘೋಷಿಸಿದೆ.

ಮಂಗಳವಾರ ನಸುಕಿನಲ್ಲಿ ಸಂಭವಿಸಿದ ಭೀಕರ ಗುಡ್ಡ ಕುಸಿತದಲ್ಲಿ ವಯನಾಡಿನ ಮೆಪ್ಪಾಡಿ ಬಳಿಯ ಮುಂಡಕ್ಕೈ ಹಾಗೂ ಚೂರಲ್‌ಮಲ ಗ್ರಾಮಗಳು ಅಕ್ಷರಶಃ ಮಣ್ಣುಪಾಲಾಗಿವೆ. ಧಾರಾಕಾರ ಮಳೆಗೆ ಚಳಿ ಎಂದು ಬೆಚ್ಚಗೆ ಹೊದ್ದು ಮಲಗಿದ್ದ 2 ಗ್ರಾಮಗಳ ಜನತೆ ನಿದ್ರೆಯಲ್ಲೇ ಪ್ರಾಣ ಕಳೆದುಕೊಂಡಿದ್ದಾರೆ. ಪೊಲೀಸ್ ಇಲಾಖೆ ಸಿಬ್ಬಂದಿ, ಅಗ್ನಿಶಾಮಕ ದಳ, ರಾಷ್ಟ್ರೀಯ ವಿಪತ್ತು ನಿರ್ವಹಣಾ ದಳದ (ಎನ್‌ಡಿಆರ್‌ಎಫ್) 4 ತಂಡಗಳು, ಸೇನಾ ಎಂಜಿನಿಯರ್‌ಗಳ ತಂಡ, ಸೇನಾ ಯೋಧರು ಮತ್ತು ನೌಕಾಪಡೆಯ ಹಲವು ತಂಡಗಳು ಧಾವಿಸಿದ್ದು, ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ನಿರತ ವಾಗಿವೆ. ಕೇರಳದಲ್ಲಿ 2019ರ ಪ್ರವಾಹ ಬಳಿಕ ನಡೆದ ಅತಿ ದೊಡ್ಡ ದುರಂತ ಇದಾಗಿದೆ.

ಮಳೆಗೆ ನೆಲಸಮವಾದ ವಯನಾಡು ಜಿಲ್ಲೆಯ ಮುಂಡಕ್ಕೈ, ಚೂರಲ್‌ಮಲ ಗ್ರಾಮಗಳು

ತುಂಬಿ ಹರಿಯುತ್ತಿದ್ದ ಚಲಿಯಾರ್ ನದಿಯಲ್ಲಿ ತೇಲಿ ಬರುತ್ತಿರುವ ಮೃತದೇಹಗಳು

ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿ ಹೋಗಿದ್ದರಿಂದ ರಕ್ಷಣಾ ಕಾರ್ಯಕ್ಕೂ ತೊಂದರೆ

ಗುಡ್ಡ ಕುಸಿದ ಪ್ರದೇಶದಲ್ಲಿ ಜನವಸತಿಯ ಗ್ರಾಮಗಳು ಇದ್ದವು ಎಂಬ ಕುರುಹೇ ಇಲ್ಲ

ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆ ಕೊಚ್ಚಿ ಹೋಗಿದ್ದರಿಂದ ರಕ್ಷಣಾ ಕಾರ್ಯಕ್ಕೂ ತೊಂದರೆ

ಗುಡ್ಡವೂ ಕಾಣೆ, ಗ್ರಾಮಗಳೂ ಕಣ್ಮರೆ

ಗುಡ್ಡಗಳು ಕುಸಿದು ಅದರ ಮಣ್ಣು, ಬಂಡೆಗಳು ಜಾರಿ ಬಂದ ರಭಸಕ್ಕೆ ಮುಂಡಕ್ಕೈ ಹಾಗೂ ಚೂರಲ್‌ಮಾಲ ಗ್ರಾಮಗಳಲ್ಲಿನ ಮನೆಗಳು ನೆಲಸಮವಾಗಿವೆ. ಕೆಲವು ಮನೆಗಳು ಮಣ್ಣಿನಡಿ ಮುಚ್ಚಿಹೋಗಿವೆ. ಗುಡ್ಡ ಕುಸಿದಿರುವ ಪ್ರದೇಶದಲ್ಲಿ ಈ ಮೊದಲು ಅಲ್ಲೊಂದು ದೊಡ್ಡ ಗುಡ್ಡ ಇತ್ತು, ಮಗ್ಗುಲಲ್ಲೇ ಜನವಸತಿಯ ಗ್ರಾಮವಿತ್ತು ಎಂಬ ಕುರುಹೇ ಇಲ್ಲದಂತಾಗಿದೆ. ಗುಡ್ಡವಿದ್ದ ಜಾಗವೀಗ ಸಮತಟ್ಟು ಪ್ರದೇಶದಂತಾಗಿದೆ. ಗ್ರಾಮಗಳು ಮಣ್ಣಿನಿಂದ ಮುಚ್ಚಿಹೋಗಿವೆ. ಚೂರಲ್‌ಮಾಲ ನದಿಯ ಬಳಿ ಬಂಡೆ ಒಡೆದ ಕಾರಣ ನದಿ ಮೊದಲಿಗಿಂತ ನಾಲ್ಕು ಪಟ್ಟು ದೊಡ್ಡದಾಗಿ ಹರಿಯುತ್ತಿದ್ದು, ಗುಡ ಕುಸಿತ ನಡೆದ ಸ್ಥಳದಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹರಿಯುತ್ತಿದೆ.

ಪ್ರಧಾನಿ ಸಂತಾಪ, ಪರಿಹಾರ

ಭೂಕುಸಿತದಲ್ಲಿ ಸಾವನ್ನಪ್ಪಿದವರ ಕುಟುಂಬಸ್ಥರಿಗೆ ಪ್ರಧಾನಿ ಮೋದಿ 2 ಲಕ್ಷ ರು. ಪರಿಹಾರ, ಗಾಯಗೊಂಡವರಿಗೆ 50 ಸಾವಿರ ರು. ಸಹಾಯಧನ ಘೋಷಿಸಿದ್ದಾರೆ. ಜತೆಗೆ ಸಿಎಂ ಪಿಣರಾಯಿ ವಿಜಯನ್ ಜತೆಗೂ ಪ್ರಧಾನಿ ಮಾತನಾಡಿದ್ದು, ಮಾಹಿತಿ ಪಡೆದಿದ್ದಾರೆ. ಸರಕಾರಕ್ಕೆ ಎಲ್ಲ ರೀತಿಯ ನೆರವು ನೀಡುವುದಾಗಿ ತಿಳಿಸಿದ್ದು, ಬಿಜೆಪಿ ಕಾರ್ಯಕರ್ತರು ರಕ್ಷಣಾ ಕಾರ್ಯದಲ್ಲಿ ನೆರವು ನೀಡಲಿದ್ದಾರೆ ಎಂದು ತಿಳಿಸಿದ್ದಾರೆ.

ಸಾವಿನ ಸಂಖ್ಯೆ ಹೆಚ್ಚುವ ಭೀತಿ

ಜನರು ಪ್ರವಾಹದ ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ಹಲವರು ಮಣ್ಣಿನಡಿ ಜೀವಂತ ಸಮಾಧಿಯಾಗಿದ್ದಾರೆ. ಮಂಗಳವಾರ ಸಂಜೆವರೆಗೆ ಒಟ್ಟು 106 ಮೃತದೇಹಗಳು ಪತ್ತೆಯಾಗಿವೆ. ಇನ್ನೂ ಹಲವರು ಕಣ್ಮರೆಯಾಗಿದ್ದಾರೆ. ನೂರಾರು ಮಂದಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ ಎನ್ನಲಾಗಿದೆ.

ಎರಡು ಬಾರಿ ಕುಸಿದ ಗುಡ್ಡಗಳು

ಧಾರಾಕಾರ ಸುರಿಯುತ್ತಿರುವ ಮಳೆಯ ನೀರಿನಿಂದ ಪ್ರವಾಹ ಸೃಷ್ಟಿಯಾಗಿದೆ. ಪರಿಣಾಮ, ಮಂಗಳವಾರ ನಸುಕಿನ 1.30ರ ವೇಳೆ ಶುರುವಾದ ಗುಡ್ಡ ಕುಸಿತ ಮುಂಜಾನೆ 4 ಗಂಟೆವರೆಗೂ ಮುಂದುವರಿದಿದೆ. ಈ ಅವಧಿಯಲ್ಲಿ ಮುಂಡಕ್ಕೈ ಮತ್ತು ಚೂರಲ್‌ಮಾಲ ಗ್ರಾಮಗಳ ಸುತ್ತಲಿನ ಪ್ರದೇಶದಲ್ಲಿ ಬೃಹತ್ ಗುಡ್ಡಗಳ ಕುಸಿತ ಎರಡು ಬಾರಿ ಸಂಭವಿಸಿದೆ.

ಕರ್ನಾಟಕ ಸರಕಾರವು ಕೇರಳ ಸರಕಾರದ ವಿಪತ್ತು ನಿರ್ವಹಣಾ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು, ಅಗತ್ಯ ನೆರವು ಒದಗಿಸಲಾಗುತ್ತಿದೆ. ಕನ್ನಡಿಗರು ಸಿಲುಕಿ ಕೊಂಡಿರುವ ಬಗ್ಗೆ ಪ್ರಾಥಮಿಕ ಮಾಹಿತಿ ದೊರೆತಿದ್ದು, ಅವರ ರಕ್ಷಣೆಗೆ ಎಲ್ಲ ಪ್ರಯತ್ನ ಮಾಡಲಾಗುವುದು.
- ಸಿದ್ದರಾಮಯ್ಯ, ಮುಖ್ಯಮಂತ್ರಿ

ಇಬ್ಬರು ಐಎಎಸ್ ಅಧಿಕಾರಿಗಳ ನಿಯೋಜನೆ

ವಯನಾಡಿನಲ್ಲಿ ರಕ್ಷಣೆ ಮತ್ತು ಪರಿಹಾರ ಕಾರ್ಯಾಚರಣೆಗೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದ್ದು, ಇಬ್ಬರು ಐಎಎಸ್ ಅಧಿ ಕಾರಿಗಳನ್ನು (ಪಿ.ಸಿ.ಜಾಫರ್, ಮೊಬೈಲ್ ಸಂಖ್ಯೆ: 9448355577 ಹಾಗೂ ದಿಲೀಶ್ ಶಶಿ, ಸಂಖ್ಯೆ: 9446000514 ಅವರನ್ನು ನಿಯೋಜಿಸಲಾಗಿದೆ ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಗುಂಡ್ಲುಪೇಟೆಯ ಝಾನ್ಸಿರಾಣಿ ಮತ್ತು ಆಕೆಯ ಮಗು ದುರಂತದಲ್ಲಿ ಕಾಣೆಯಾಗಿದ್ದಾರೆ.

ಕರಾವಳಿ, ಮಲೆನಾಡಿನಲ್ಲಿ ಭಾರೀ ಮಳೆ । ಉಕ್ಕೇರಿದ ನದಿಗಳು, ಸಂಪರ್ಕ ಕಡಿತ

ರಾಜ್ಯದಲ್ಲೂ ಗುಡ್ಡ ಕುಸಿತ: ಶಿರಾಡಿ ಬಂದ್

ಬೆಂಗಳೂರು: ರಾಜ್ಯಾದ್ಯಂತ ಅಬ್ಬರದ ಮಳೆಯಾಗುತ್ತಿದ್ದು, ಹಲವೆಡೆ ಜನಜೀವನ ಅಸ್ತವ್ಯಸ್ತವಾಗಿದೆ. ಮಲೆನಾಡು, ಕರಾವಳಿ, ಉತ್ತರ ಕರ್ನಾಟಕ ಭಾಗದ ಹಲವು ದಿನಗಳು ಉಕ್ಕಿಹರಿಯುತ್ತಿದ್ದು, ರಸ್ತೆಗಳು ಜಲಾವೃತವಾಗಿವೆ. ನದಿಗಳ ನೀರು ಗ್ರಾಮಗಳಿಗೆ ನುಗ್ಗಿದ್ದು, ಜನರು ಕಂಗಾಲಾಗಿದ್ದಾರೆ. ಗುಡ್ಡ, ನದಿಪಾತ್ರದಲ್ಲಿರುವ ಜನರು ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಸೂಚನೆ ನೀಡಲಾಗಿದೆ.

ಶಿರಾಡಿ ಘಾಟ್‌ನಲ್ಲಿ ಮತ್ತೆ ಭೂಕುಸಿತ: ಕಳೆದ ವಾರವಷ್ಟೇ ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಶಿರಾಡಿ ಘಾಟಿಯ ದೊಡ್ಡತಪ್ಪಲೆ ಬಳಿ ಭೂಕುಸಿತ ಸಂಭವಿಸಿ ರಾಷ್ಟ್ರೀಯ ಹೆದ್ದಾರಿ 75 ರಲ್ಲಿ ಸಂಚಾರ ಸ್ಥಗಿತಗೊಂಡಿತ್ತು. ಇದೀಗ ಮತ್ತೆ ಅದೇ ಜಾಗದಲ್ಲಿ ಭೂಕುಸಿತ ಸಂಭವಿಸಿದೆ. ಹಲವು ವಾಹನಗಳು ಮಣ್ಣಿನಡಿ ಸಿಲುಕಿವೆ. → 4

ಶಿರಾಡಿ ಬದಲಿ ರಸ್ತೆ ಮಾಯ!

ಸಕಲೇಶಪುರ ತಾಲೂಕು ಕುಂಬರಡಿ-ಕಾರ್ಲೇ ಎಸ್ಟೇಟ್ ಮಧ್ಯೆ ಭಾರೀ ಪ್ರಮಾಣದ ಭೂ ಕುಸಿತ ಸಂಭವಿಸಿ ಶಿರಾಡಿ ಹೆದ್ದಾರಿಗೆ ಬದಲಿಯಾಗಿ ಬಳಸುತ್ತಿದ್ದ ರಸ್ತೆ ಸುಮಾರು 200 ಮೀಟರ್‌ಗೂ ಹೆಚ್ಚು ಕೊಚ್ಚಿ ಹೋಗಿದೆ. ಹತ್ತಾರು ಗ್ರಾಮಗಳ ಸಂಪರ್ಕ ರಸ್ತೆ ಕಡಿತವಾಗಿದೆ.

ಇಂದು ಕೂಡ ಮಳೆ ಅಬ್ಬರ

ದಕ್ಷಿಣ ಕನ್ನಡ, ಉಡುಪಿ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಕನ್ನಡ ಮತ್ತು ಹಾಸನ ಜಿಲ್ಲೆಗಳ ಪ್ರತ್ಯೇಕ ಕಡೆ ಗಾಳಿಯೊಂದಿಗೆ ವ್ಯಾಪಕ ಮಳೆಯಾಗುವ ಸಾಧ್ಯತೆಯಿದೆ. ಜತೆಗೆ ಬೆಳಗಾವಿ ಮತ್ತು ಮೈಸೂರಿನಲ್ಲೂ ಮಳೆ ಮುಂದುವರಿಯಲಿದೆ.

ಉ. ಕರ್ನಾಟಕದಲ್ಲೂ ಮಳೆ, ಪ್ರವಾಹ

ಮಹಾರಾಷ್ಟ್ರದಲ್ಲಿ ಭಾರಿ ಮಳೆಯಾದ ಪರಿಣಾಮ ಕೃಷ್ಣಾ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದೆ. ಕೃಷ್ಣಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಉಪ ನದಿಗಳಾದ ಘಟಪ್ರಭಾ ಮತ್ತು ಮಲಪ್ರಭಾ ನದಿಗಳು ತುಂಬಿ ಹರಿಯುತ್ತಿವೆ. ಇದರಿಂದ ಬೆಳಗಾವಿ, ಬಾಗಲಕೋಟೆ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ.

ಮತ್ತೊಂದು ವಿಕ್ರಮ

ಮನು-ಸರಬ್ಜೋತ್ ಜೋಡಿಗೆ ಕಂಚು

ಇತಿಹಾಸ ಬರೆದ ಭಾಕರ್

ಪ್ಯಾರಿಸ್: 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ವಿಭಾಗದಲ್ಲಿ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ ಜೋಡಿ ಕಂಚಿನ ಪದಕ ಗೆದ್ದಿದೆ. ಆ ಮೂಲಕ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಭಾರತದ ಪದಕ ಪಟ್ಟಿಗೆ ಮತ್ತೊಂದು ಕಂಚು ಸೇರ್ಪಡೆಯಾಗಿದೆ. ಮಂಗಳವಾರ ನಡೆದ ಪೈಪೋಟಿಯಲ್ಲಿ ಮನು ಮತ್ತು ಸರಬ್ಜೋತ್ ಜೋಡಿ ದಕ್ಷಿಣ ಕೊರಿಯಾದ ಯೆ ಜಿನ್ ಒಹ್ ಮತ್ತು ವೊನೊಹೊ ಲೀ ಅವರನ್ನು 579 ಸ್ಕೋರ್‌ಗಳಲ್ಲಿ ಸೋಲಿಸಿದ್ದಾರೆ. ಒಂದೇ ಒಲಿಂಪಿಕ್ಸ್ ಕೂಟದಲ್ಲಿ ಎರಡು ಪದಕ ಜಯಿಸಿದ ಭಾರತದ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಮನು ಭಾಕರ್ ಪಾತ್ರರಾಗಿದ್ದಾರೆ. ಭಾನುವಾರ (ಜು.28) ನಡೆದ ಮಹಿಳೆಯರ 10 ಮೀಟರ್ ಏರ್ ಪಿಸ್ತೂಲ್ ವಿಭಾಗದಲ್ಲಿ ಮನು ಭಾಕರ್ ಕಂಚು ಗೆದ್ದಿದ್ದರು. ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಪದಕ ಜಯಿಸಿದ ಭಾರತದ ಮೊದಲ ಮಹಿಳೆ ಮನು ಆಗಿದ್ದಾರೆ.

ಹಾಕಿಯಲ್ಲಿ ಗೆದ್ದ ಭಾರತ

ರಡನೇ ಪಂದ್ಯದಲ್ಲಿ ಡ್ರಾ ಮಾಡಿಕೊಂಡಿದ್ದ ಭಾರತ ಇದೀಗ ಮೂರನೇ ಪಂದ್ಯದಲ್ಲಿ ಗೆಲುವು ಸಾಧಿಸಿದೆ. ಮಂಗಳವಾರ ನಡೆದ ಪಂದ್ಯದಲ್ಲಿ ಭಾರತ ಐರ್ಲೆಂಡ್ ವಿರುದ್ಧ 2-0 ರಿಂದ ಗೆಲುವು ಸಾಧಿಸಿದೆ. ಆ ಮೂಲಕ ಹಾಕಿಯಲ್ಲಿ ಕ್ವಾರ್ಟರ್ ಫೈನಲ್ ಸ್ಥಾನ ಬಹುತೇಕ ಖಚಿತಪಡಿಸಿಕೊಂಡಿದೆ.

ಅಗ್ರ ಸ್ಥಾನಕ್ಕೇರಿದ ಸಾತ್ವಿಕ್

ಬ್ಯಾಡ್ಮಿಂಟನ್‌ನಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ವಿರುದ್ಧ ತಮ್ಮ ಅಂತಿಮ ಗುಂಪಿನ 'ಸಿ' ಪಂದ್ಯದಲ್ಲಿ ನೇರ ಸೆಟ್‌ಗಳಲ್ಲಿ ಗೆಲುವು ಸಾಧಿಸಿದ್ದಾರೆ.

ಆರ್ಚರಿಯಲ್ಲಿ ಮಿಶ್ರ ಫಲ

ಭಾರತದ ಬಿಲ್ಲುಗಾರ್ತಿ ಭಜನ್ ಕೌರ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಪ್ರೀ ಕ್ವಾರ್ಟರ್ ಫೈನಲ್ ತಲುಪಿದ್ದಾರೆ. 64ನೇ ಸುತ್ತಿನ ಪಂದ್ಯದಲ್ಲಿ ಇಂಡೋನೇಷ್ಯಾದ ಸೈಫಾ ನುರಾಫಿಫಾ ಕಮಾಲ್ ಅವರ ವಿರುದ್ಧ ಭರ್ಜರಿ ಗೆಲುವು ಸಾಧಿಸಿದ್ದಾರೆ.

ಹೊರಬಿದ್ದ ಪನ್ವರ್

ಒಲಿಂಪಿಕ್ಸ್‌ನ ರೋಯಿಂಗ್ ಸ್ಪರ್ಧೆಯಿಂದ ಭಾರತ ಹೊರಬಿದ್ದಿದೆ. ದೇಶದ ಏಕೈಕ ರೋವರ್ ಬಲರಾಜ್ ಪನ್ವರ್ ಕ್ವಾರ್ಟರ್‌ಫೈನಲ್‌ನಲ್ಲಿ ಐದನೇ ಸ್ಥಾನ ಪಡೆದರು. 25 ವರ್ಷ ವಯಸ್ಸಿನ ಈ ಸೈನಿಕ ಮಂಗಳವಾರ ನಡೆದ ಸಿಂಗಲ್ಸ್ ಸ್ಕಲ್ಸ್ ಸ್ಪರ್ಧೆಯಿಂದ ನಿರ್ಗಮಿಸಿದ್ದಾರೆ.

ಲೋಕಸಭೆಯ ಸಚೇತಕರಾಗಿ ಕೋಟ ನೇಮಕ

ಬೆಂಗಳೂರು: ಚಿಕ್ಕಮಗಳೂರು ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರನ್ನು ಲೋಕ ಸಭೆಯ ಸಚೇತಕರನ್ನಾಗಿ ನೇಮಿಸಿ ಬಿಜೆಪಿ ಆದೇಶ ಹೊರಡಿಸಿದೆ. ಕೇಂದ್ರೀಯ ಬಿಜೆಪಿ ಮುಖ್ಯ ಸಚೇತಕ ಸೇರಿದಂತೆ 16 ಮಂದಿ ಸಚೇತಕರನ್ನು ನೇಮಿಸಿದೆ. ಮುಖ್ಯಸಚೇತಕ ರಾಗಿ ಡಾ. ಸಂಜಯ್ ಜೈಸ್ವಾಲ್ ಅವರನ್ನು ನೇಮಿಸಲಾಗಿದೆ. ಅವರೊಂದಿಗೆ 16 ಸಚೇತಕರು ಕಾರ್ಯನಿರ್ವಹಿಸಲಿದ್ದು, ಅವರಲ್ಲಿ ಕೋಟ ಶ್ರೀನಿವಾಸ್ ಪೂಜಾರಿಯೂ ಒಬ್ಬರು. ತಮ್ಮನ್ನು ಲೋಕಸಭೆಯ ಸಚೇತಕರನ್ನಾಗಿ ನೇಮಕ ಮಾಡಿದ ಬಿಜೆಪಿ ಸಂಸದೀಯ ಮಂಡಳಿಗೆ ಪೂಜಾರಿ ಅವರು ಧನ್ಯವಾದ ಸಲ್ಲಿಸಿದ್ದಾರೆ. ಬಿಜೆಪಿಯ ಸಂಸದೀಯ ಮಂಡಳಿ ನನ್ನನ್ನು ಲೋಕಸಭಾ ಸಚೇತಕ ಹುದ್ದೆಗೆ ಪರಿಗಣಿಸಿ ಆಯ್ಕೆ ಮಾಡಿರುವುದಕ್ಕೆ ಪ್ರಧಾನಿ ನರೇಂದ್ರ ಮೋದಿಯವರಿಗೆ, ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಹಾಗೂ ಪಕ್ಷದ ಮುಖಂಡರಿಗೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ ಟ್ವೀಟರ್‌ನಲ್ಲಿ ಬರೆದುಕೊಂಡಿದ್ದಾರೆ.

ಪುಟ ತೆರೆದಂತೆ...

ಕೂದಲೆಳೆ ಅಂತರದಲ್ಲಿ ಅಮೃತ ವಿಷವಾಯಿತು!
ಹಿಂದಿರುಗಿ ನೋಡಿದಾಗ
ಡಾ.ನಾ.ಸೋಮೇಶ್ವರ
ಸಂ.ಪುಟ | 6

ರಾಜಕಾರಣಕ್ಕೆ ಬಿಟ್ಟಿರಲಾರದ ಹಗರಣದ ನಂಟು

ವಿದ್ಯಮಾನ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
ಸಂ.ಗಮ | 7

ಮಾತಂದ್ರೆ ಮಾತು

ಬಿಜೆಪಿ ಕೇಂದ್ರದಲ್ಲಿ ಯಾವತ್ತೇ ಅಧಿಕಾರಕ್ಕೆ ಬಂದರೂ ಕರ್ನಾಟಕಕ್ಕೆ ಅನ್ಯಾಯ ತಪ್ಪಿದ್ದಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ಅಥವಾ ಬಿಜೆಪಿ ಅಧಿಕಾರದಲ್ಲಿ ಇರಲಿ ಆಗಲೂ ಬಿಜೆಪಿ ಕರ್ನಾಟಕಕ್ಕೆ ಚೊಂಬು ಕೊಟ್ಟಿದೆ. ಕರ್ನಾಟಕಕ್ಕೆ ಕಾಂಗ್ರೆಸ್ ಸರಕಾರ ಸಾಕಷ್ಟು ಕೊಡುಗೆ ನೀಡಿದೆ. ಬಿಜೆಪಿ ಹಾಗೂ ನರೇಂದ್ರ ಮೋದಿಯವರು ಕರ್ನಾಟಕಕ್ಕೆ ನಯಾ ಪೈಸೆ ಕೊಡುಗೆ ನೀಡದಿದ್ದರೂ ದುರದೃಷ್ಟವಶಾತ್ 19 ಜನ ಸಂಸದರನ್ನು ನಮ್ಮ ಮತದಾರರು ಆಯ್ಕೆ ಮಾಡಿ ಕಳುಹಿಸಿದ್ದಾರೆ. ಇದು ನಮ್ಮ ಜನರ ದುರದೃಷ್ಟ.

- ರಾಮಲಿಂಗಾರೆಡ್ಡಿ
ಸಚಿವ

38,525 ಕೋಟಿ ರು. ಅಬಕಾರಿ ಆದಾಯ ಸಂಗ್ರಹದ ಗುರಿ । ಗುರಿಗಿಂತ 970 ಕೋಟಿ ರು. ಕುಂಠಿತ

ಹಬ್ಬಗಳಲ್ಲಿ ಮದ್ಯ ಬಂದ್; 517 ಕೋಟಿ ನಷ್ಟ

ಬೆಂಗಳೂರು: ಅಬಕಾರಿ ಸುಂಕ ರಾಜ್ಯದ ಬೊಕ್ಕಸ ತುಂಬಿಸುವ ಪ್ರಮುಖ ಮೂಲಗಳಲ್ಲಿ ಒಂದಾಗಿದೆ. ಮದ್ಯದ ಬೆಲೆ ಏರಿಕೆಯಿಂದ ಇತ್ತೀಚೆಗೆ ಅಬಕಾರಿ ಆದಾಯದಲ್ಲಿ ಕೊರತೆ ಕಂಡುಬರುತ್ತಿದೆ. ಈ ಮಧ್ಯೆ ಹಬ್ಬ ಹರಿದಿನ ಸೇರಿ ವಿವಿಧ ಕಾರಣಗಳಿಗಾಗಿ ಆಯಾ ಜಿಲ್ಲೆಗಳಲ್ಲಿನ ಮದ್ಯ ಮಾರಾಟ ನಿಷೇಧದಿಂದ ಸರಕಾರದ ಬೊಕ್ಕಸಕ್ಕೆ ಬರೋಬ್ಬರಿ 517 ಕೋಟಿ ರು. ಆದಾಯ ನಷ್ಟವಾಗಿದೆ.

ಪ್ರಸಕ್ತ 2024-25ರ ಬಜೆಟ್‌ನಲ್ಲಿ 38,525 ಕೋಟಿ ರು. ಅಬಕಾರಿ ಆದಾಯ ಸಂಗ್ರಹದ ಗುರಿ ಇಡಲಾಗಿದೆ. ಆದರೆ ಆರಂಭದಲ್ಲೇ ನಿರೀಕ್ಷಿತ ಅಬಕಾರಿ ಆದಾಯ ಸಂಗ್ರಹ ಸಾಧ್ಯವಾಗುತ್ತಿಲ್ಲ. ಬಜೆಟ್ ಗುರಿಯಂತೆ ಎರಡು ತಿಂಗಳಲ್ಲಿ 6,420 ಕೋಟಿ ರು. ಅಬಕಾರಿ ಸುಂಕ ಸಂಗ್ರಹಿಸಬೇಕಾಗಿದೆ. ಆದರೆ, ಎರಡು ತಿಂಗಳಲ್ಲಿ 5,450 ಕೋಟಿ ರು. ಮಾತ್ರ ಸಂಗ್ರಹಿಸಲಾಗಿದೆ. ಈ ಮೂಲಕ ಬಜೆಟ್ ಗುರಿಗಿಂತ 970 ಕೋಟಿ ರು. ಕುಂಠಿತವಾಗಿದೆ.

2023-24 ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಸರಕಾರ ಅಬಕಾರಿ ಮೂಲಕ 36,000 ಕೋಟಿ ಆದಾಯ ಸಂಗ್ರಹದ ಗುರಿ ನಿಗದಿ ಪಡಿಸಿದ್ದರು. ಆದರೆ, ಆರ್ಥಿಕ ವರ್ಷದಲ್ಲಿ ಕೇವಲ 34,629 ಕೋಟಿ ರು. ಸಂಗ್ರಹ ಮಾಡಲು ಸಾಧ್ಯವಾಯಿತು. ಬಜೆಟ್ ಗುರಿಗಿಂತ 1,371 ಕೋಟಿ ರು. ಸಂಗ್ರಹ ಕುಂಠಿತವಾಗಿತ್ತು. ಮದ್ಯ ದರ ಏರಿಕೆ ಹಿನ್ನೆಲೆ ಮದ್ಯ ಮಾರಾಟ ಪ್ರಮಾಣ ಕಡಿಮೆಯಾಗಿದ್ದು, ನಿರೀಕ್ಷಿತ ಆದಾಯ ಗುರಿ ಮುಟ್ಟಲು ಸಾಧ್ಯವಾಗಿಲ್ಲ ಎಂದು ಅಬಕಾರಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಹಬ್ಬ ಹರಿದಿನಗಳು, ವಿಶೇಷ ದಿನಗಳು ಸೇರಿ ನಾನಾ ಕಾರಣಗಳಿಗಾಗಿ ಆಯಾ ಜಿಲ್ಲೆಗಳಲ್ಲಿ ಮದ್ಯ ಮಾರಾಟ ನಿಷೇಧ ಆದೇಶಗಳಿಂದ ಸರಕಾರದ ಬೊಕ್ಕಸಕ್ಕೆ 2023-24 ಸಾಲಿನಲ್ಲಿ 517.30 ಕೋಟಿ ರು. ನಷ್ಟ ಅನುಭವಿಸಿದೆ. 2023-24 ಸಾಲಿನಲ್ಲಿ ಹಬ್ಬ ಹರಿದಿನ, ಜಾತ್ರೆ, ಚುನಾವಣೆ, ಮತ ಎಣಿಕೆ, ವಿಶೇಷ ದಿನಗಳು ಹೀಗೆ ವಿವಿಧ ಕಾರಣಗಳಿಂದ ಜಿಲ್ಲಾವಾರು ಮದ್ಯ ಮಾರಾಟ ನಿಷೇಧದಿಂದ 517.30 ಕೋಟಿ ರು. ಆದಾಯ ಖೋತಾ ಆಗಿದೆ ಎಂದು ಮಾಹಿತಿ ನೀಡಿದ್ದಾರೆ. ಮದ್ಯ ಮಾರಾಟ ನಿಷೇಧ ಆದಾಯಗಳಿಂದ ದೇಶೀಯ ಮದ್ಯ (ಐಎಂಎಲ್)ದಲ್ಲಿ 444.52 ಕೋಟಿ ರು. ನಷ್ಟವಾಗಿದ್ದರೆ, ಬಿಯರ್‌ನಲ್ಲಿ ಅಂದಾಜು 72.78 ಕೋಟಿ ರು. ಆದಾಯ ನಷ್ಟವಾಗಿದೆ.

- ವಿವಿಧೆಡೆ 603 ದಿನಗಳ ಕಾಲ ಮದ್ಯ ಮಾರಾಟ ನಿಷೇಧ
- ಆರ್ಥಿಕ ವರ್ಷದಲ್ಲಿ ಕೇವಲ 34,629 ಕೋಟಿ ರು. ಆದಾಯ
- ಬಿಯರ್‌ನಲ್ಲಿ ಅಂದಾಜು 72.78 ಕೋಟಿ ರು. ಆದಾಯ

ಎಲ್ಲೆಲ್ಲಿ ಎಷ್ಟು ದಿನ ನಿಷೇಧ?

ಜಿಲ್ಲೆ	ಮದ್ಯಮಾರಾಟ ನಿಷೇಧ
ಬೆಂಗಳೂರು ನಗರ	82
ವಿಜಯನಗರ	44
ಚಾಮರಾಜ ನಗರ	29
ದಕ್ಷಿಣ ಕನ್ನಡ	26
ಉತ್ತರ ಕನ್ನಡ	25
ಬೆಳಗಾವಿ	25
ಕೊಪ್ಪಳ	22
ಯಾದಗಿರಿ	22

ಲವ್ ಜಿಹಾದ್‌ಗೆ ಜೀವಾವಧಿ ಸಜೆ

ಲಖನೌ: ಲವ್ ಜಿಹಾದ್ ವಿರುದ್ಧ ಕ್ರಮ ತೆಗೆದುಕೊಳ್ಳುವ ದಿಸೆಯಲ್ಲಿ ಉತ್ತರ ಪ್ರದೇಶ ಸರಕಾರವು ಮಹತ್ವದ ಹೆಜ್ಜೆ ಇರಿಸಿದೆ. ಲವ್ ಜಿಹಾದ್‌ನಲ್ಲಿ ತೊಡಗುವವರಿಗೆ ಗರಿಷ್ಠ ಜೀವಾವಧಿ ಶಿಕ್ಷೆ ವಿಧಿಸುವ ಉತ್ತರ ಪ್ರದೇಶ ಕಾನೂನು ಬಾಹಿರ ಧಾರ್ಮಿಕ ಮತಾಂತರ (ತಿದ್ದುಪಡಿ) ವಿಧೇಯಕಕ್ಕೆ ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಅಂಗೀಕಾರ ದೊರೆತಿದೆ. ರಾಜ್ಯಪಾಲರ ಅಂಕಿತ ಸಿಕ್ಕರೆ ವಿಧೇಯಕವು ಕಾಯಿದೆಯಾಗಿ ಜಾರಿಗೆ ಬರಲಿದ್ದು, ಲವ್ ಜಿಹಾದ್‌ನಲ್ಲಿ ತೊಡಗಿಸಿಕೊಂಡವರಿಗೆ ಗರಿಷ್ಠ ಜೀವಾವಧಿ ಶಿಕ್ಷೆ ಹಾಗೂ 5 ಲಕ್ಷ ರು. ವರೆಗೆ ದಂಡ ವಿಧಿಸಲಾಗುತ್ತದೆ.

130 ಕಿ.ಮೀ ವೇಗಮಿತಿ ದಾಟಿದರೆ ಎಫ್‌ಐಆರ್

ಬೆಂಗಳೂರು: ಇತ್ತೀಚಿನ ದಿನಗಳಲ್ಲಿ ಸಂಭವಿಸುತ್ತಿರುವ ರಸ್ತೆ ಅಪಘಾತ ಪ್ರಕರಣಗಳಿಗೆ ಅತಿ ವೇಗದ ಚಾಲನೆ ಕಾರಣವಾಗುತ್ತಿದೆ. ಆದರಿಂದ ಆ.1ರಿಂದ ವೇಗದ ಚಾಲನೆಗೆ ಎಫ್‌ಐಆರ್ ದಾಖಲಿಸಿಕೊಳ್ಳಲು ನಿರ್ಧರಿಸಲಾಗಿದೆ. ರಾಜ್ಯಾದ್ಯಂತ ಗಂಟೆಗೆ 130 ಕಿ.ಮೀ.ಗಿಂತಲೂ ವೇಗವಾಗಿ ಸಂಚರಿಸುವ ಎಲ್ಲ ವಿಧದ ವಾಹನ ಚಾಲಕರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗುವುದು ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಎಚ್ಚರಿಸಿದ್ದಾರೆ.

ಹಳ್ಳಿ-ಹಳ್ಳಿಗೆ ಬಿಜೆಪಿ ಭ್ರಷ್ಟಾಚಾರ ತಿಳಿಸಿ; ಸ್ಥಳೀಯ ನಾಯಕರಿಗೆ ಸೂಚನೆ
ಪಾದಯಾತ್ರೆ ಹೋದ ಭಾಗದಲ್ಲೆಲ್ಲ ಕಾಂಗ್ರೆಸ್ ನಾಯಕರ ಸುದ್ದಿಗೋಷ್ಠಿ
ಬಿಜೆಪಿ ಯಾತ್ರೆ ತಲುಪುವ ಒಂದು ದಿನದ ಮೊದಲೇ ಕಾಂಗ್ರೆಸ್ ಸಮಾವೇಶ

ಪಾದಯಾತ್ರೆಗೆ ಠಕ್ಕರ್

ಬೆಂಗಳೂರು: ಮುಡಾ, ವಾಲ್ಮೀಕಿ ಹಗರಣವನ್ನು ಮುಂದಿಟ್ಟುಕೊಂಡು ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಬೆಂಗಳೂರು-ಮೈಸೂರು ಪಾದಯಾತ್ರೆಗೆ ಸಜ್ಜಾಗಿರುವ ಬಿಜೆಪಿ-ಜೆಡಿಎಸ್‌ಗೆ ಠಕ್ಕರ್ ಕೊಡಲು ಸಜ್ಜಾಗಿರುವ ಕಾಂಗ್ರೆಸ್, ಪಾದಯಾತ್ರೆ ಆಗಮಿಸುವ ಮೊದಲೇ ಬಿಜೆಪಿ ಹಗರಣಗಳನ್ನು ತಿಳಿಸಲು ಸಜ್ಜಾಗಿದೆ.

ಬಿಜೆಪಿಗೆ ಠಕ್ಕರ್ ಕೊಡಲು ಸಜ್ಜಾಗಿರುವ ಕಾಂಗ್ರೆಸ್ ನಾಯಕರು ಈಗಾಗಲೇ ಬಿಜೆಪಿ-ಜೆಡಿಎಸ್ ತೆರಳುವ ಮಾರ್ಗದುದ್ದಕ್ಕೂ, ಸ್ಥಳೀಯ ಕಾಂಗ್ರೆಸ್ ನಾಯಕರ ಮೂಲಕ ಬಿಜೆಪಿ-ಜೆಡಿಎಸ್ ಅವಧಿಯಲ್ಲಿ ಆಗಿರುವ ಹಗರಣಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿ ಸಲು ಸಜ್ಜಾಗಿರುವಂತೆ ಸೂಚನೆ ನೀಡಲಾಗಿದೆ. ಪಾದಯಾತ್ರೆ ಬರುವ ಮೊದಲೇ, ಬಿಜೆಪಿ ಅವಧಿಯ ಭ್ರಷ್ಟಾಚಾರವನ್ನು ಸ್ಥಳೀಯ ಮಟ್ಟದಲ್ಲಿ ತಿಳಿಸುವಂತೆ ಸ್ಥಳೀಯ ನಾಯಕರಿಗೆ ಸೂಚನೆ ನೀಡಲಾಗಿದೆ.

ಸಿಎಂ ಸಿದ್ದರಾಮಯ್ಯ ಅವರು ಕೆಲ ಹಿರಿಯ ಸಚಿವರೊಂದಿಗೆ ತುರ್ತು ಸಭೆ ನಡೆಸಿ, ಯಾವ ರೀತಿಯಲ್ಲಿ ಪಾದಯಾತ್ರೆಗೆ ಪ್ರತಿಕ್ರಿಯಿಸಬೇಕು ಎಂದು ಚರ್ಚೆ ನಡೆಸಿದ್ದಾರೆ. ಬಿಜೆಪಿ-ಜೆಡಿಎಸ್ ಪಾದಯಾತ್ರೆ ನಡೆಸಿ ಮುಡಾ ನಿವೇಶನ ಹಂಚಿಕೆ ಹಾಗೂ ಮಹರ್ಷಿ ವಾಲಿಕಿ ಹಗರಣದ ಕುರಿತು ಜನಜಾಗೃತಿ ಮೂಡಿಸಲು ಮುಂದಾಗಿವೆ. ಇದಕ್ಕೆ ತಿರುಗೇಟು ನೀಡಲು ಕಾಂಗ್ರೆಸ್ ಮುಂದಾಗಿದೆ. → 4

ಪಾದಯಾತ್ರೆ ಮುಂದಕ್ಕೆ

ಹಲವೆಡೆ ಮಳೆ ಹಿನ್ನೆಲೆ ಕೃಷಿ ಚಟುವ ಟಿಕೆ ಪ್ರಾರಂಭವಾಗಿದೆ. ಹಲವೆಡೆ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಈ ಹಿನ್ನೆಲೆಯಲ್ಲಿ ಪಾದಯಾತ್ರೆ ಮುಂದೂಡಲು ಜೆಡಿಎಸ್ ಕೋರ್ ಸಮಿತಿ ನಿರ್ಧರಿಸಿದೆ ಎಂದು ಜಿ.ಟಿ.ದೇವೇಗೌಡ ತಿಳಿಸಿದ್ದಾರೆ. ಇದರೊಂದಿಗೆ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳ ಜಂಟಿ ಪಾದಯಾತ್ರೆ ಆರಂಭದ ಬಗ್ಗೆಯೇ ಸಂಶಯ ಮೂಡಿದೆ. ಬಿಜೆಪಿ ಈ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಸಿಎಂ, ಸಚಿವರು ಭಾಗಿ

ಏಳು ದಿನಗಳ ಕಾಲ ನಡೆಯುವ ಪಾದಯಾತ್ರೆಗೆ ಠಕ್ಕರ್ ಕೊಡಲು ಏಳು ದಿನ ಸಮಾವೇಶಗಳನ್ನು ಆಯೋಜಿಸಲು ಕಾಂಗ್ರೆಸ್ ಚಿಂತನೆ ನಡೆಸಿದೆ. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಸೇರಿ ಸಚಿವರು ಒಂದೊಂದು ಸಮಾವೇಶ ದಲ್ಲಿ ಭಾಗವಹಿಸಲು ತೀರ್ಮಾನಿಸಲಾ ಗಿದೆ. ಯಾರ್‍ಯಾರು, ಯಾವ್ಯಾವ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕು ಎನ್ನುವುದರ ಬಗ್ಗೆಯೂ ಚರ್ಚೆ ನಡೆದಿದೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಸಾಲ ಮರುಪಾವತಿಗೆ ಕ್ರಮ ತೆಗೆದುಕೊಂಡ ಭಾರತಕ್ಕೆ ಧನ್ಯವಾದ ಹೇಳಿದ ಮಾಲ್ಡೀವ್ಸ್ ಸುದ್ದಿ



ರಾಜಕೀಯ ದ್ವೇಷಕ್ಕಾಗಿ ಇಡಿ ರಾಜ್ಯಕ್ಕೆ ಕಾಲಿಟ್ಟಿದೆ

ಬಾಗಲಕೋಟೆ: ಇಡಿಯವರು ಸತ್ಯಶೋಧನೆ ಮಾಡಲು ಬಂದಿಲ್ಲ. ಪ್ರಕರಣದ ವಿಟ್ನೆಸ್‌ಗಳನ್ನು ಹಿಡಿದು ಸಿಎಂ ಹಾಗೂ ಡಿಸಿಎಂಗಳ ವಿರುದ್ಧ ಹೇಳಿಕೆ ಕೊಡಿ ಎಂದು ಒತ್ತಾಯಿಸುವ ಮೂಲಕ ಹಗರಣ ಮುಚ್ಚಿಹಾಕುವ ಇಡಿ ಬಂದಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಆಕ್ರೋಶ ವ್ಯಕ್ತ ಪಡಿಸಿದರು.



ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜಕೀಯ ದ್ವೇಷ ಸಾಧನೆ ಮಾಡಲು ಇಡಿ ರಾಜ್ಯಕ್ಕೆ ಬಂದಿದೆ ಎಂದು ವಾಗ್ದಾಳಿ ನಡೆಸಿದರು.

ರಾಜ್ಯಪಾಲರನ್ನು ಉಪಯೋಗಿಸಿಕೊಂಡು ಸರಕಾರ ಅಲುಗಾಡಿಸುವ ಪ್ರಯತ್ನ ಕರ್ನಾಟಕದಲ್ಲಿ ಬಿಜೆಪಿ ಪ್ರಾರಂಭ ಮಾಡಿದೆ. ರಾಜ್ಯಪಾಲರ ಕಚೇರಿ ಉಪಯೋಗಿಸಿಕೊಂಡು ಜನರಿಂದ ಆಯ್ಕೆಯಾದ ನಮ್ಮ ಸರಕಾರವನ್ನು ಅಲುಗಾಡಿಸಲು ಹೊರಟಿದ್ದಾರೆ. ರಾಜ್ಯಪಾಲರ ಕಚೇರಿಯನ್ನು ದುರುಪಯೋಗ ಮಾಡಲು ಕೇಂದ್ರ ಸರಕಾರ ಹೊರಟಿದೆ ಎಂದು ಆರೋಪಿಸಿದರು.

ಕಳಸಾ ಬಂಡೂರಿ ಯೋಜನೆಗೆ ಬಿಜೆಪಿ ಸರಕಾರ ಇವತ್ತಿಗೂ ಅನುಮತಿ ನೀಡಿಲ್ಲ. ಭದ್ರಾ ಯೋಜನೆಗೂ ಕೇಂದ್ರ ಸರಕಾರ ನಯಾ ಪೈಸೆ ಕೊಟ್ಟಿಲ್ಲ. ಜತೆಗೆ ಮೇಕೆದಾಟು ಯೋಜನೆಗೆ ಅನುಮತಿ ನೀಡಿಲ್ಲ. ಕೇಂದ್ರ ಸಚಿವರಾಗಿರುವ ಕುಮಾರಸ್ವಾಮಿಗೆ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸಲು ಆಗಿಲ್ಲ. ಪ್ರಲ್ಹಾದ್ ಜೋಶಿ ಅವರಿಗೆ ಕಳಸಾ ಬಂಡೂರಿ ಯೋಜನೆಗೆ ಅನುಮತಿ ಕೊಡಿಸಲು ಆಗಿಲ್ಲ. ಕೇಂದ್ರ ಸರಕಾರದ ಅನ್ಯಾಯ ಮುಚ್ಚಿ ಹಾಕಲು ಬಿಜೆಪಿಗರು ಜನರ ಗಮನ ಬೇರೆಡೆ ಸೆಳೆಯಲು ಯತ್ನಿಸುತ್ತಿದ್ದಾರೆ.

-ಕೃಷ್ಣಬೈರೇಗೌಡ ಸಚಿವ

ರಾಜ್ಯದ ಜಲಾಶಯಗಳ ಮಟ್ಟ

	ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
1.	ಕೆಆರ್‌ಎಸ್	124.80	123.75	38,977
2.	ಕಬಿನಿ	2284	2284	30,805
3.	ಹಾರಂಗಿ	2859	2857.03	12,317
4.	ಹೇಮಾವತಿ	2922	2920.98	26,600
5.	ತುಂಗಭದ್ರಾ	1704.81	1691.25	3,02,573
6.	ಆಲಮಟ್ಟಿ	1633	1631.72	1,31,821
7.	ನಾರಾಯಣಪುರ	1615	1607.13	2,90,646

ಗುಡ್ಡ ಕುಸಿತ, ಶಿರಾಡಿ ಬಂದ್

← ಮೊದಲಪುಟದಿಂದ

ಅಪಾಯದ ಮಟ್ಟ ಮೀರಿರುವ ನೇತ್ರಾವತಿ: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಬಂಟ್ವಾಳ ತಾಲೂಕಿನ ಬಿ ಕಸ್ಬಾ ಗ್ರಾಮದಲ್ಲಿ ಪ್ರವಾಹ ಉಂಟಾಗಿದೆ. ನೇತ್ರಾವತಿ ನದಿ ಅಪಾಯದ ಮಟ್ಟ ಮೀರಿ ಹರಿಯುತ್ತಿದ್ದರಿಂದ ಮೀನು ಮಾರುಕಟ್ಟೆ, ದಿನಸಿ, ತರಕಾರಿ ಅಂಗಡಿಗಳೆಲ್ಲಾ ಜಲಾವೃತವಾಗಿವೆ.

ಹಾಸನ ಜಿಲ್ಲೆಯಲ್ಲಿ ಭಾರೀ ಮಳೆ: ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಹಿನ್ನೆಲೆಯಲ್ಲಿ ಹಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಸೇತುವೆಗಳು ಮುಳುಗಡೆಯಾಗಿವೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲೂಕಿನ ಮಠಸಾಗರದ ಸೇತುವೆ ಮುಳುಗಡೆಯಿಂದ ಶಾಲಾ-ಕಾಲೇಜು ವಿದ್ಯಾರ್ಥಿ ಗಳು ಪರದಾಡುವಂತಾಗಿದೆ. ಹೆತ್ತಿ-ಕೃಷ್ಣಾಪುರ-ಮಠಸಾಗರ ಸಕಲೇಶಪುರ ಮಾರ್ಗದ ಸಂಪರ್ಕ ಕಡಿತವಾಗಿದೆ.

ಶಾಲಾ-ಕಾಲೇಜಿಗೆ ರಜೆ: ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಅಬ್ಬರಿಸುತ್ತಿದ್ದು, ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಭಾರಿ ಮಳೆ ಮುಂದುವರಿಯುವ ಮುನ್ಸೂಚನೆ ಇರುವುದರಿಂದ ಜು.31ರಂದು (ಬುಧವಾರ) ಮಲೆನಾಡಿನ ಆರು ತಾಲೂಕಿನ ಶಾಲಾ-ಕಾಲೇಜುಗಳಿಗೆ ಜಿಲ್ಲಾಡಳಿತ ರಜೆ ಘೋಷಣೆ ಮಾಡಿದೆ. ಕೊಪ್ಪ, ಕಳಸ, ಮೂಡಿಗೆರೆ, ಚಿಕ್ಕಮಗಳೂರು, ಶೃಂಗೇರಿ ಮತ್ತು ನರಸಿಂಹರಾಜಪುರ ತಾಲೂಕಿನ ಶಿಶುಪಾಲನಾ ಕೇಂದ್ರ, ಅಂಗನವಾಡಿ, ಶಾಲೆಗಳು, ಪಿಯು, ಪದವಿ ಮತ್ತು ಎಲ್ಲ ರೀತಿಯ ತಾಂತ್ರಿಕ ಶಿಕ್ಷಣ ಸಂಸ್ಥೆಗಳಿಗೆ ರಜೆ ಘೋಷಣೆ ಮಾಡಲಾಗಿದೆ.

ಪಾದಯಾತ್ರೆಗೆ ಠಕ್ಕರ್

← ಮೊದಲಪುಟದಿಂದ

ಸಮಾವೇಶಗಳ ಮೂಲಕ ಜಾಗೃತಿ: ಇನ್ನು ಬಿಜೆಪಿ-ಜೆಡಿಎಸ್ ನಾಯಕರು ಪಾದ ಯಾತ್ರೆ ಮಾಡುವ ಮಾರ್ಗದು ದ್ದಕ್ಕೂ ಬಿಡದಿ, ರಾಮನಗರ, ಮದ್ದೂರು- ಮಂಡ್ಯ, ಮೈಸೂರು ಪ್ರದೇಶಗಳಲ್ಲಿ ಕಾಂಗ್ರೆಸ್ ವತಿಯಿಂದ ಬೃಹತ್ ಸಮಾವೇಶ ಗಳನ್ನು ಆಯೋ ಜಿಸಿ ಜನರಿಗೆ ಸತ್ಯಾಂಶ ತಿಳಿಸಲು ಹಾಗೂ ಬಿಜೆಪಿ-ಜೆಡಿಎಸ್ ಪಾಳ ಯದ ಹಗರಣಗಳ ಬಗ್ಗೆ ಮಾಹಿತಿ ನೀಡಲು ನಿರ್ಧರಿಸಲಾಗಿದೆ. ಸದ್ಯದ ಕಾರ್ಯಕ್ರಮ ಪಟ್ಟಿ ಪ್ರಕಾರ, ಬಿಡದಿ, ರಾಮನಗರ, ಮದ್ದೂರು-ಮಂಡ್ಯ, ಮೈಸೂರು ರಸ್ತೆಯಲ್ಲಿ ನಾಲ್ಕು ಕಡೆ ಸಾರ್ವಜನಿಕ ಸಮಾವೇಶ ನಡೆಸಲು ನಿರ್ಧರಿಸಲಾಗಿದೆ. ಬಿಜೆಪಿಯ ಪಾದಯಾತ್ರೆ ತಲುಪುವ ಒಂದು ದಿನದ ಮೊದಲು ಕಾಂಗ್ರೆಸ್ ನಿಗದಿತ ಸ್ಥಳಗಳಲ್ಲಿ ಬೃಹತ್ ಸಮಾವೇಶಗಳನ್ನು ಆಯೋಜಿಸಲಿದೆ ಎಂದು ಮೂಲಗಳು ತಿಳಿಸಿವೆ.

ಒಡಕು ಉಂಟು ಮಾಡಲು ಶಕುನಿ ರಾಜಕಾರಣ

ಬೆಳಗಾವಿ: ಮೊದಲಿನಿಂದಲೂ ಸಾಕಷ್ಟು ಜನ ಶಕುನಿ ರಾಜಕಾರಣ ಮಾಡಿದ್ದಾರೆ. ಸಿಎಂ ಹಾಗೂ ಡಿಸಿಎಂ ಮಧ್ಯೆ ಎಷ್ಟೇ ಒಡಕು ಉಂಟು ಮಾಡಲು ಪ್ರಯತ್ನಿಸಿದರೂ ಅದು ಯಶಸ್ವಿಯಾಗುವುದಿಲ್ಲ ಎಂದು ಪರೋಕ್ಷವಾಗಿ ರಮೇಶ್ ಜಾರಕಿಹೊಳಿ ವಿರುದ್ಧ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹರಿಹಾಯ್ದರು.

ಸುದ್ದಿಗಾರರೊಂದಿಗೆ ಮಾತನಾಡಿ, ಸಿಎಂ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ ಮಧ್ಯೆ ವಿಷ ಬೀಜ ಬಿತ್ತುವ ಉದ್ದೇಶದಿಂದ ಬಿಜೆಪಿ ನಾಯಕರು ಹೇಳಿಕೆ ನೀಡುತ್ತಿದ್ದಾರೆ. ಆದರೆ ಸುಧೀರ್ಘ ರಾಜಕೀಯ ಅನುಭವ ಇರುವ ಇಬ್ಬರು ನಾಯಕರ ನಡುವೆ ಹುಳಿ

ಹಿಂಡಲು ಸಾಧ್ಯವಿಲ್ಲ ಎಂದರು.

ರಾಜ್ಯಾಧ್ಯಕ್ಷರಿಂದ ಒಳ ಒಪ್ಪಂದದ ರಾಜಕೀಯ ನಡೆಯುತ್ತಿದೆ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಹೇಳಿಕೆಗೆ ಪ್ರತಿಕ್ರಿಯಿಸಿದ ಸಚಿವರು, ಯತ್ನಾಳ್ ಅವರ ಬಗ್ಗೆ ಅಪಾರ ಗೌರವಿದೆ. ಅವರಿಗೆ ಇಂತಹ ಹೇಳಿಕೆಗಳು ಶೋಭೆ ತರುವುದಿಲ್ಲ ಎಂದು ಹೇಳಿದರು.

ಶಾಸಕ ಯತ್ನಾಳ್ ಅವರು, ಬೇಕಿದ್ದರೆ ತಮ್ಮ ಪಕ್ಷದ ಬಗ್ಗೆ ಮಾತಾಡಲಿ, ಇನ್ನೊಂದು ಪಕ್ಷದ ಬಗ್ಗೆ ಮಾತನಾಡುವುದು ಬೇಡ. ಅವರಿಗೆ ಗೊಂದಲ ಸೃಷ್ಟಿಸುವುದೇ ಕೆಲಸ. ಅನಾವಶ್ಯಕ ಹೇಳಿಕೆಗಳಿಂದ ಗೊಂದಲ ಸೃಷ್ಟಿ ಮಾಡಿ , ಸಿಎಂ, ಡಿಸಿಎಂ ನಡುವೆ ತಂದಿಡುವ ಕೆಲಸವನ್ನು ಮೊದಲು ಬಿಡಲಿ ಎಂದು ಸಚಿವರು ತಿರುಗೇಟು ನೀಡಿದರು.

ರಾಜ್ಯಕ್ಕೆ ಅನ್ಯಾಯ ಕೇಂದ್ರ ಸರಕಾರದಿಂದ ಕರ್ನಾಟಕಕ್ಕೆ ಪದೆ ಪದೇ ಅನ್ಯಾಯ ಆಗುತ್ತಿದೆ. ಮೊದಲು ಅದನ್ನು ಸರಿ ಪಡಿಸಲಿ. ಬಳಿಕ ಗ್ಯಾರಂಟಿ ಯೋಜನೆಗಳ ಬಗ್ಗೆ ಬಿಜೆಪಿ ನಾಯಕರು ಮಾತನಾಡಲಿ. ಶೀಘ್ರವೇ ಗೃಹಲಕ್ಷ್ಮಿ ಯೋಜನೆ ಹಣ ಬಿಡುಗಡೆಯಾಗಲಿದೆ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ

ಐ.ಎಫ್.ಟಿ.ಸಂಖ್ಯೆ:09/2024-25
ದಿನಾಂಕ:29-07-2024

ಹಾಸನ ಸಣ್ಣ ನೀರಾವರಿ ವಿಭಾಗ ವ್ಯಾಪ್ತಿಯ ಕಾಮಗಾರಿಗೆ ಕೆಡಬ್ಲ್ಯೂ-1,2,3 ರ ಪ್ರಕಾರ ಅರ್ಹ ಗುತ್ತಿಗೆದಾರರಿಂದ ಐಟಂ ರೇಟ್ ದರದಲ್ಲಿ ಕೆ.ಪಿ.ಪಿ.ಪಿ-ಪ್ರಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ನಲ್ಲಿ ಹಾಸನ ಜಿಲ್ಲೆಯ ಕಾಮಗಾರಿಗೆ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಕರೆಯಲಾಗಿದೆ. ಅಂದಾಜು ಕನಿಷ್ಟ ಮೊತ್ತ ರೂ.5.70 ಲಕ್ಷಗಳು ಮತ್ತು ಗರಿಷ್ಟ ಮೊತ್ತ ರೂ.91.55 ಲಕ್ಷಗಳು. ಟೆಂಡರ್ ಸಲ್ಲಿಸುವ ಕಡೆಯ ದಿ: 07.08.2024 ಸಮಯ 17.00 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಇ-ಪ್ರಾಕ್ ಪೋರ್ಟಲ್ ಹಾಗೂ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದು. ಸೂಚನೆ:ಬಿಡ್ಡುದಾರರು ಜಿ.ಎಸ್.ಟಿ ಸೇರಿದಂತೆ ದರಗಳನ್ನು ನಮೂದಿಸತಕ್ಕದ್ದು.

ಸಹಿ/-ಕಾರ್ಯಪಾಲಕ ಅಭಿಯಂತರರು, ಸಣ್ಣ ನೀರಾವರಿ ವಿಭಾಗ, ಹಾಸನ.

ವಾಸಾಸಂಇ/ಹಿಸನಿ/ಹಾಸನ/244/ಕೆಎಸ್‌ಎಂಸಿಎ/2024-25

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಜೆಇ-1:ಟೆಂಡರ್-03:2024-25 ದಿನಾಂಕ: 29.07.2024

ಇ-ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ಏಕ ಲಕೋಟೆ ಹಾಗೂ ದ್ವಿ ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:- ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ದ್ವಿ ಲಕೋಟೆ ಪದ್ಧತಿ:- ಲೆಕ್ಕ ಶೀರ್ಷಿಕೆ: 5054-04-337-0-01-154 ಜಿಲ್ಲಾ ರಸ್ತೆಗಳು ಸುಧಾರಣೆ:- (1) ಮೊಳಕಾಲ್ಮೂರು ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ-150ಎ ನಾಗಸಮುದ್ರ ಕ್ರಾಸ್‌ನಿಂದ ಹುಚ್ಚುಂಗಿದುರ್ಗ ರಸ್ತೆ ವಯಾ ನಾಗಸಮುದ್ರ ರಸ್ತೆ ಕಿ.ಮೀ. 0.00 ರಿಂದ 7.00 ರವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ (ವ.ಇಂ. 9159)/2ನೇ ಕರೆ
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 200.00
ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ:- (2) ಚಿತ್ರದುರ್ಗ ಜಿಲ್ಲಾ ಖಜಾನೆ ಕಟ್ಟಡಕ್ಕೆ ಬಣ್ಣ ಲೇಪನ, ಮೇಲ್ಛಾವಣಿ ಹಾಗೂ ಇತರೆ ದುರಸ್ಥಿ ಕಾಮಗಾರಿ (ವ.ಇಂ. 10982)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 61.00
ಇ- ಪ್ರೊಕ್ಯೂರ್‌ಮೆಂಟ್ ಮೂಲಕ- ಏಕ ಲಕೋಟೆ ಪದ್ಧತಿ:- ಲೆಕ್ಕ ಶೀರ್ಷಿಕೆ: ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ:- (3) ಚಿತ್ರದುರ್ಗ ಜಿಲ್ಲಾ ಕಾರಾಗೃಹದಲ್ಲಿ ಪುರುಷರು ಮತ್ತು ಮಹಿಳಾ ಸಿಬ್ಬಂದಿಗಳಿಗೆ ಪ್ರತ್ಯೇಕ ಶೌಚಾಲಯಗಳ ನಿರ್ಮಾಣ ಕಾಮಗಾರಿ (ವ.ಇಂ. 10945) ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):- 10.50
ಕ್ರ.ಸಂ. 1 ಮತ್ತು 2ರ ಕಾಮಗಾರಿಗಳ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ.
ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿ:- 12-08-2024 ಸಮಯ 17-30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:- 13-08-2024 ಸಮಯ 16-00 ತಾಂತ್ರಿಕ ಬಿಡ್ ತೆರೆಯುವ ದಿನಾಂಕ:- 14-08-2024 ಸಮಯ 16-15 ಆರ್ಥಿಕ ಬಿಡ್ ತೆರೆಯುವ ದಿನಾಂಕ:- 16-08-2024 ಸಮಯ 11-00
ಕ್ರ.ಸಂ. 3ರ ಕಾಮಗಾರಿ ಟೆಂಡರ್ ದಿನಾಂಕಗಳು ಈ ಕೆಳಕಂಡಂತಿವೆ:- ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 12-08-2024 ಸಮಯ 17-30 ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ 13-08-2024 ಸಮಯ 16-00 ಆರ್ಥಿಕ ಬಿಡ್ ತೆರೆಯುವ ದಿನಾಂಕ:- 14-08-2024 ಸಮಯ 16-15
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/155/2024-25

ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಪುರಸಭಾ ಕಾರ್ಯಾಲಯ, ಬೊಮ್ಮಸಂದ್ರ
ಅತ್ತಿಬೆಲೆ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560 099
ಫೋನ್: 080-27834655, E-Mail: itstaff_ulb_bommasandra@yahoo.com

ಸಂ:TMCB/ENG/MF/TR03/2024-25 ದಿನಾಂಕ: 29.07.2024

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಡಾಕ್ಯೂಮೆಂಟ್KW-1&KW-2ನ ನಿಬಂಧನೆಗಳಂತೆ ಟೆಂಡರ್ ಆಹ್ವಾನಿಸಲಾಗಿದೆ)

2024-25ನೇ ಸಾಲಿನ ಪುರಸಭಾ ನಿಧಿ ಅನುದಾನದಡಿ ಬೊಮ್ಮಸಂದ್ರ ಪುರಸಭೆ ವ್ಯಾಪ್ತಿಯಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಒಟ್ಟು 08 ಕಾಮಗಾರಿಗಳ ಒಟ್ಟು ಮೊತ್ತ ರೂ. 114.15 ಲಕ್ಷಗಳಿಗೆ ಐಟಂವಾರು ಮತ್ತು ಕೆ.ಪಿ.ಪಿ ಪೋರ್ಟಲ್‌ನ ಏಕಲಕೋಟೆ ಪದ್ಧತಿಯಲ್ಲಿ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕೆ.ಪಿ.ಪಿ ಪೋರ್ಟಲ್ ವೆಬ್‌ಸೈಟ್: https://www.kppp.karnataka.gov.in ಮೂಲಕ ಟೆಂಡರ್ ಸಲ್ಲಿಸುವುದು.

ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ **ದಿನಾಂಕ: 14.08.2024ರ ಸಂಜೆ 5:30 ಗಂಟೆಯವರೆಗೆ**, ಟೆಂಡರ್ ತೆರೆಯುವ **ದಿನಾಂಕ : 16.08.2024ರ ಬೆಳಿಗ್ಗೆ 11:00 ಗಂಟೆಗೆ.** ಹೆಚ್ಚಿನ ವಿವರಗಳಿಗಾಗಿ (**itstaff_ulb_bommasandra@yahoo.com**) ಅಥವಾ ಪುರಸಭೆಯ ಕಿರಿಯ ಅಭಿಯಂತರರನ್ನು ಸಂಪರ್ಕಿಸುವುದು.

ಸಹಿ/- ಅಧ್ಯಕ್ಷರು ಪುರಸಭೆ, ಬೊಮ್ಮಸಂದ್ರ | ವಾಸಾಸಂಇ/ವಾಪ್ರ/ಜಿಎ/1169/2024-25 | ಸಹಿ/- ಮುಖ್ಯಾಧಿಕಾರಿ ಪುರಸಭೆ, ಬೊಮ್ಮಸಂದ್ರ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590018, ಕರ್ನಾಟಕ, ಭಾರತ.

ಸಂ.: ವಿ.ತಾ.ವಿ./ಬೆ/ಸ್ಥಾ.ಅ./2024-25/ಐ.ಎಫ್.ಟಿ.ನಂ.24/1918 ದಿನಾಂಕ: 27-07-2024

ಟೆಂಡರ್ ಪ್ರಕಟಣೆ
ದ್ವಿ-ಲಕೋಟೆ ಪದ್ಧತಿ (ಇ-ಪ್ರೋಕ್ಯೂರ್‌ಮೆಂಟ್ ಮೂಲಕ)

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ಕೆ.ಡಬ್ಲ್ಯೂ ರ ಪ್ರಕಾರ ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದ್ವಿಲಕೋಟೆ ಪದ್ಧತಿಯಲ್ಲಿ ಆಮಂತ್ರಿಸಲಾಗಿದೆ. **ಕಾಮಗಾರಿ ಹೆಸರುಗಳು:** 1) ವಿತಾವಿ "ಜ್ಞಾನ ಸಂಗಮ", ಆವರಣ, ಬೆಳಗಾವಿಯಲ್ಲಿ ವಿದ್ಯಾರ್ಥಿಗಳ ಹಾಸ್ಟೆಲ್ ಮೆಸ್ ಕಟ್ಟಡದ ವಿಸ್ತರಣೆಯ ಕಾಮಗಾರಿಯ ಮೊತ್ತ **ರೂ. 79,09,581/- (ತೆರಿಗೆ ಸೇರಿಸಿ).** 2) ವಿತಾವಿ "ಜ್ಞಾನ ಸಂಗಮ", ಆವರಣ, ಬೆಳಗಾವಿಯ ರಜತ ಮಹೋತ್ಸವ ಭವನದ ನೆಲ ಮಹಡಿಯಲ್ಲಿರುವ ಕೇಂದ್ರಿಕೃತ ಪ್ಲೇಸ್‌ಮೆಂಟ್ ಸೆಲ್ ಮತ್ತು COE ಕಛೇರಿಗೆ ಅಂತರಿಕ ಪೀಠೋಪಕರಣಗಳನ್ನು ಒದಗಿಸುವ ಕಾಮಗಾರಿಯ ಮೊತ್ತ **ರೂ.73,99,962/-(ತೆರಿಗೆ ಸೇರಿಸಿ).** 3) ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿಯಲ್ಲಿ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ದುರಸ್ತಿ ನಿರ್ವಹಣೆಯ ಕೆಲಸಗಳ ಕಾಮಗಾರಿಯ ಮೊತ್ತ **ರೂ.76.83,763/- (ತೆರಿಗೆ ಸೇರಿಸಿ).** 4) ವಿತಾವಿ "ಜ್ಞಾನ ಸಂಗಮ", ಅವರಣ, ಬೆಳಗಾವಿಯ ಸ್ನಾತಕೋತ್ತರ ಬ್ಲಾಕ್-1 ರ ಮೊದಲನೇ ಮಹಡಿಯಲ್ಲಿರುವ ಐಟಿಐಎಸ್‌ಎಮ್‌ಯು/ಸಿಎನ್‌ಸಿ/ಪಿಎಮ್‌ಸಿ ಗಳಿಗೆ ನವೀಕರಣಗೊಳಿಸುವ ಕೆಲಸ, ಅಂತರಿಕ ವಿನ್ಯಾಸ ಹಾಗೂ ಇಲೆಕ್ಟ್ರಿಕಲ್ ಕೆಲಸವನ್ನು ನಿರ್ವಹಿಸುವ ಕಾಮಗಾರಿಯ (ಮರು-ಟೆಂಡರ್) ಮೊತ್ತ **ರೂ.69,99,862/- (ತೆರಿಗೆ ಸೇರಿಸಿ).** 5) ವಿತಾವಿ, "ಜ್ಞಾನ ಸಂಗಮ", ಆವರಣ, ಬೆಳಗಾವಿಯ ರಜತ ಮಹೋತ್ಸವ ಭವನದ ನೆಲ ಮಹಡಿಯಲ್ಲಿ UPVC ಕಿಟಕಿಗಳನ್ನು ಒದಗಿಸಿ ಸರಿಪಡಿಸುವುದು ಮತ್ತು ಮೊದಲನೇ ಮಹಡಿಯಲ್ಲಿ ವಾಶ್‌ರೂಮ್‌ನಲ್ಲಿ ಯೂರಿನೆಲ್ಸ್ ಒದಗಿಸಿ ಪ್ಲಾಸ್ಟರಿಂಗ್ ಪೇಂಟಿಂಗ್ ಮತ್ತು ಇನ್ನಿತರ ಸಂಭಂದಿಸಿದ ಕೆಲಸಗಳನ್ನು ನಿರ್ವಹಿಸುವ ಕಾಮಗಾರಿಯ ಮೊತ್ತ **ರೂ.12,52,000/- (ತೆರಿಗೆ ಸೇರಿಸಿ).** ಈ ಕಾಮಗಾರಿಗಳಿಗೆ ಇದೇ ತರನಾದ 50% ರಷ್ಟು ಕಾಮಗಾರಿಯನ್ನು ನಿರ್ವಹಿಸಿದ ಕುರಿತು ಪ್ರಮಾಣ ಪತ್ರವನ್ನು ಇ-ಪೋರ್ಟಲ್‌ನಲ್ಲಿ ಸಲ್ಲಿಸುವುದು. ಇತರೆ ಮಾಹಿತಿಗಳನ್ನು https://kppp.kamataka.gov.in ವೆಬ್‌ಸೈಟ್ ಮೂಲಕ ದಿನಾಂಕ: **29-07-2024** ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ವಾಸಾಸಂಇ/ಬೆಳಗಾವಿ/495/ಅಡ್ವರ್ಟೋ/2024-25

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ (ಸಂಶೋಧನೆ), ಬೆಂಗಳೂರು ಇವರ ಕಛೇರಿ
ಕರ್ನಾಟಕ ಅರಣ್ಯ ಇಲಾಖೆ
1ನೇ ತಿರುವು, ಅರಕೆರೆ ಮೈಕೋ ಬಡಾವಣೆ, ದೊರೆಸಾನಿಪಾಳ್ಯ ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು - 560076
Ph: 080-26580987, Email: dcfsfresearch@gmail.com

ಸಂಖ್ಯೆ. ಉಅಸಂ.ಸಾಅ(ಸಂ)ಸಿಆರ್.07/2024-25 ದಿನಾಂಕ: 22.07.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ

2024-25ನೇ ಸಾಲಿಗೆ ವಿವಿಧ ಜಾತಿಯ ಮರಗಳ ಉತ್ಕೃಷ್ಟ ಗುಣಮಟ್ಟದ ಪರಿಪಕ್ವವಾದ ಬೀಜಗಳನ್ನು ಸಂಗ್ರಹಿಸಿ, ಸಂಸ್ಕರಿಸಿ, ಸರಬರಾಜು ಮಾಡಲು ಅರಣ್ಯ ಗುತ್ತಿಗೆದಾರರಿಂದ 'e-procurement' ಜಾಲತಾಣದ ಮುಖಾಂತರ **ದಿನಾಂಕ 22.07.2024** ರಂದು ಇ-ಟೆಂಡರ್ ಕರೆಯಲಾಗಿದೆ. ಅಧಿಸೂಚನೆ ಸಂಖ್ಯೆ:

1. KFD/2024-25/OW/WORK_INDENT12758
2. KFD/2024-25/OW/WORK_INDENT12757

ಟೆಂಡರ್ ದಾಖಲೆಗಳನ್ನು ರಾಜ್ಯ ಸರ್ಕಾರದ ಜಾಲತಾಣ https://KPPP.karnataka.gov.in ನಲ್ಲಿ ದಾಖಲು ಮಾಡಲಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಚಿಸುವ ನೋಂದಾಯಿತ ಅರಣ್ಯ ಗುತ್ತಿಗೆದಾರರು ಮೇಲ್ಕಂಡ ಜಾಲತಾಣದಿಂದ ಟೆಂಡರ್ ದಾಖಲೆಗಳನ್ನು **ದಿನಾಂಕ 22.07.2024ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ.

ಟೆಂಡರ್ ಅರ್ಜಿಯನ್ನು ಎಲ್ಲಾ ದಾಖಲೆಗಳೊಂದಿಗೆ **ದಿನಾಂಕ 22.07.2024ರಿಂದ ದಿನಾಂಕ 06.08.2024ರ ಸಂಜೆ 5.00 ಗಂಟೆಯೊಳಗೆ** e-procurement ಜಾಲತಾಣದಲ್ಲಿ ಅಪ್‌ಲೋಡ್ ಮಾಡಬಹುದಾಗಿರುತ್ತದೆ. ತಾಂತ್ರಿಕ ಬಿಡ್‌ನ್ನು ಮೇಲ್ಕಂಡ ಕಛೇರಿಯಲ್ಲಿ **ದಿನಾಂಕ 07.08.2024ರಂದು** ತೆರೆಯಲಾಗುವುದು ಹಾಗೂ ಪುರಸ್ಕೃತ ಟೆಂಡರ್‌ದಾರರ ಆರ್ಥಿಕ ಬಿಡ್‌ನ್ನು ನಂತರ ಮೇಲ್ಕಂಡ ಕಛೇರಿಯಲ್ಲಿ ತೆರೆಯಲಾಗುವುದು. ಟೆಂಡರ್‌ನಲ್ಲಿ ಯಾರೂ ಬಿಡ್ ಮಾಡದೇ ಇದ್ದಲ್ಲಿ ಸ್ವಯಂಚಾಲಿತವಾಗಿ 15 ದಿನಗಳವರೆಗೆ (**ದಿನಾಂಕ 08.08.2024ರಿಂದ ದಿನಾಂಕ 23.08.2024**) ಮುಂದೂಡಲ್ಪಟ್ಟಿರುತ್ತದೆ. ಇದನ್ನು ಮರು ಟೆಂಡರ್ ಎಂದು ಪರಿಗಣಿಸಲಾಗುವುದು. ಇ-ಟೆಂಡರ್ ಮೂಲ ಷರತ್ತುಗಳಲ್ಲಿ ಯಾವ ಬದಲಾವಣೆಗಳೂ ಇರುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯಲ್ಲಿ (ಕಛೇರಿಯ ವೇಳೆಯಲ್ಲಿ) ಸಂಪರ್ಕಿಸಬಹುದಾಗಿದೆ.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಮಾಜಿಕ ಅರಣ್ಯ (ಸಂಶೋಧನೆ), ಬೆಂಗಳೂರು

ವಾಸಸಂಇ/ಸಿಪಿ/ಎಎಎ/1158/2024-25

CHANGE OF NAME

I, **Jayasheela Prakash,** W/o G K Prakash, R/o 6, Ganga, 2nd Main, RMV 2nd Stage, 3rd Block, New BEL Road, Bengaluru-560094, have changed my name from **(Old Name) "Jayasheela"** to **(New Name) "Jayasheela Prakash"**. Henceforth, I would like to continue my name as **Jayasheela Prakash** in my all future documents. Vide affidavit dated **30.07.2024** sworn before **Ramesh Kumar K,** BA.LLB Advocate & Notary, Nagasandra post, Bangalore-560073.

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು
ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ, ಮೈಸೂರು -570010
ದೂರವಾಣಿ: 0821-2424673/74 ಇಮೇಲ್: commr_amh@yahoo.in

ಟೆಂಡರ್ ಅಧಿಸೂಚನೆ ಸಂಖ್ಯೆ: ಆ.ಪು.ಸಂ.ಪ/ಸಂ.ವಿ:ಸ.ಸೇ.ಟೆ-5/2024-25 **ದಿನಾಂಕ: 26.07.2024**

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಸೇವೆಗಳನ್ನು ನಿರ್ವಹಿಸಿ ಅನುಭವವಿರುವ ಆಸಕ್ತ/ ಅರ್ಹ/ಸಂಸ್ಥೆ/ಏಜೆನ್ಸಿಗಳು ಈ ಸಲಹಾ ಸೇವೆಗಳ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಇಂಡೆಂಟ್ ನಂ: DAMH/2024-25/SE0007/SE0005 (call-2) ಟೆಂಡರ್ ಡಾಕ್ಯೂಮೆಂಟ್‌ಗಳನ್ನು (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ http:www.kppp.karnataka.gov.inನಲ್ಲಿ **ದಿನಾಂಕ 29.07.2024** ರಿಂದ ಪಡೆಯಬಹುದಾಗಿದೆ. ವಿವರ ಇಂತಿವೆ.

ಕಾಮಗಾರಿಗೆ ಸಂಬಂಧಿಸಿದಂತೆ ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ	02.08.2024, 17.00 ಗಂಟೆಗೆ
ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ	12.08.2024, 16.00 ಗಂಟೆಗೆ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ	14.08.2024, 16.30 ಗಂಟೆಗೆ
ಆರ್ಥಿಕ ಬಿಡ್ ತೆರೆಯುವ ದಿನಾಂಕ	16.08.2024, 11.30 ಗಂಟೆಗೆ

ಸಹಿ/- ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು

DIPR/MYS/KAVITA/338/24-25

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ್ : 08472 / 260776 ಇ ಮೇಲ್- itstaff_ulb_gulbarga@yahoo.com

No: KMP/EE/TS-02/15th FC/06/2024-25 ದಿನಾಂಕ: 29.07.2024

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ ಃ ಕಲಬುರಗಿ ಮಹಾನಗರ ಪಾಲಿಕೆಯಿಂದ 2023-24ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ-4 ರ ಮೂಲಕ 15 ದಿನದ ಅಲ್ಪಾವಧಿ ಟೆಂಡರನ್ನು ದ್ವಿ ಲಕೋಟಿಯಲ್ಲಿ (Two Cover) ನಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ ಗರಿಷ್ಠ ಮೊತ್ತ **ರೂ. 222.50 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 2ನೇ ದರ್ಜೆ ಮತ್ತು ಅದಕ್ಕಿಂತ ಹೆಚ್ಚು. 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಮೊತ್ತ ರೂ. **3,33,750.00** ಗಳು, 5) ಪೂರ್ವಭಾವಿ ಸಭೆ ದಿನಾಂಕ: **13.08.2024 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **13.08.2024 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **14.08.2024 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.08.2024 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಃ ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/261/ಕೆ.ಎಸ್.ಎಂ.ಸಿ.&ಎ/2024-25

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ್ : 08472 / 260776 ಇ ಮೇಲ್- itstaff_ulb_gulbarga@yahoo.com

No: KMP/EE/TS-02/15th FC/06/2024-25 ದಿನಾಂಕ: 29.07.2024

:: ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಅಲ್ಪಾವಧಿ ಟೆಂಡರ್ ಪ್ರಕಟಣೆ ::

1) ಕಾಮಗಾರಿಯ ವಿವರ ಃ ಕಲಬುರಗಿ ಮಹಾನಗರ ಪಾಲಿಕೆಯಿಂದ 2023-24ನೇ ಸಾಲಿನ 15ನೇ ಹಣಕಾಸು ಅನುದಾನದಲ್ಲಿ ಅನುಮೋದನೆಗೊಂಡ ಈ ಕೆಳಕಂಡ ಕಾಮಗಾರಿಗಳಿಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ-4 ರ ಮೂಲಕ 15 ದಿನದ ಅಲ್ಪಾವಧಿ ಟೆಂಡರನ್ನು ದ್ವಿ ಲಕೋಟಿಯಲ್ಲಿ (Two Cover) ನಲ್ಲಿ ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಮೊತ್ತ ಗರಿಷ್ಠ ಮೊತ್ತ **ರೂ. 222.50 ಲಕ್ಷಗಳು.** 3) ಗುತ್ತಿಗೆದಾರರ ಅರ್ಹತೆ ವಿವರಃ 2ನೇ ದರ್ಜೆ ಮತ್ತು ಅದಕ್ಕಿಂತ ಹೆಚ್ಚು. 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಮೊತ್ತ ರೂ. **3,33,750.00** ಗಳು, 5) ಪೂರ್ವಭಾವಿ ಸಭೆ ದಿನಾಂಕ: **13.08.2024 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **13.08.2024 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **14.08.2024 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **17.08.2024 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ ಃ ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advoised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/261/ಕೆ.ಎಸ್.ಎಂ.ಸಿ.&ಎ/2024-25

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ, ಹಳಿಯಾಳ ವಿಭಾಗ (ಉ.ಕ)

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್) (2ನೇ ಕರೆ) ಕೆ.ಡಬ್ಲ್ಯೂ-1, 2, 3 & 4

ಇ-ಮೇಲ್: midhly@yahoo.co.in ಫೋ ನಂ.: 08284-220113

ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2024-25/ 517 ದಿನಾಂಕ: 29/07/2024

ಉಲ್ಲೇಖ: ನಂ:ಕಾನಿಅ/ಸನೀವಿಹ/ತಾವಿ/ಅಲ್ಪಾವಧಿ ಟೆಂಡರ್/4702/2024-25/212 ದಿನಾಂಕ: 05/06/2024

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿ ನವೀಕರಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಐಟಂ ದರದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ-2000 ಮತ್ತು ಇತ್ತೀಚಿನ ತಿದ್ದುಪಡಿಗಳಂತೆ ಈ ಕೆಳಗಿನ ಕಾಮಗಾರಿಗಳಿಗಾಗಿ KW-1, 2, 3 & 4 (ದ್ವಿ-ಲಕೋಟೆ) ಪದ್ಧತಿಯಲ್ಲಿ ''ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್'' ನ ಮುಖಾಂತರ ಟೆಂಡರ ಕರೆಯಲಾಗಿದೆ.

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ. (ರೂ.ಗಳಲ್ಲಿ)	ಟೆಂಡರ್‌ನಲ್ಲಿ ಭಾಗವಹಿಸುವ ಶುಲ್ಕ	ಗುತ್ತಿಗೆದಾರರ ಮೀಸಲಾತಿ	ಕಾಮಗಾರಿ ಪೂರ್ಣಗೊಳಿಸಲು ನಿಗಧಿತ ಅವಧಿ (ಮಳೆಗಾಲ ಸಹಿತ)
''4702-00-101-5-01-436 ನಬಾರ್ಡ ಅಣೆಕಟ್ಟು ಪಿಕಪ್ ಬಂಡಾರ ಕಾಮಗಾರಿಗಳು''						
1.	ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲೂಕಿನ ಶಿರವಾಡ ಪಂಚಾಯತದ ಮಕ್ಕೇರಿಯ ಸರ್ವೆ ನಂ.52ರ ಹತ್ತಿರ ಖಾರಲ್ಯಾಂಡ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ: 1192 2ನೇ ಕರೆ)	149.98	2,25,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಸಾಮಾನ್ಯ	09 ತಿಂಗಳು
''4702-00-101-1-07-139 ಕೆರೆಗಳ ಆಧುನೀಕರಣ''						
2.	ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ಇಸಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಧರ್ಮ ಕೆರೆ ಸ.ನಂ.156ರ ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ನಂ: 1967 2ನೇ ಕರೆ)	100.00	1,00,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಎಸ್.ಟಿ.	6 ತಿಂಗಳು
3.	ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ದೊಡ್ನಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಬ್ಯಾಗದ್ದ ಗ್ರಾಮದ ಕೆರೆ ಸ.ನಂ.35ರ ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ನಂ: 1968 2ನೇ ಕಲೆ)	40.00	80,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಸಾಮಾನ್ಯ	3 ತಿಂಗಳು
4.	ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ಇಸಳೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಒಕ್ಕಲಕೊಪ್ಪ ಕೆರೆ ಅಭಿವೃದ್ಧಿ ಕಾಮಗಾರಿ (ಇಂಡೆಂಟ್ ನಂ: 1965 2ನೇ ಕರೆ)	20.00	40,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಸಾಮಾನ್ಯ	3 ತಿಂಗಳು
''4702-00-101-5-01-139 ಅಣೆಕಟ್ಟು ಮತ್ತು ಪಿಕಪ್ -ಪ್ರಧಾನ ಕಾಮಗಾರಿಗಳು''						
5.	ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ವಾಟ್ನಾಳ್ ಕ್ರಾಸ್ ಹತ್ತಿರ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿ. (ಇಂಡೆಂಟ್ ನಂ: 2002 2ನೇ ಕರೆ)	100.00	2,00,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಎಸ್.ಸಿ.	6 ತಿಂಗಳು
''4711-01-103-1-00-140 ಪ್ರವಾಹ ನಿಯಂತ್ರಣ ಕಾಮಗಾರಿಗಳು''						
6.	ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲ್ಲೂಕು ಸೋಂದಾ ಗ್ರಾಮ ಪಂಚಾಯತಿ ಸ್ವರ್ಣವಲ್ಲಿಮಠದ ಹತ್ತಿರ ಇರುವ ಕೆರೆಗೆ ತಡೆಗೋಡೆ ನಿರ್ಮಾಣ ಕಾಮಗಾರಿ (ಇಂಡೆಂಟ್ ನಂ: 1970 2ನೇ ಕರೆ)	50.00	50,000/-	ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ನಿಯಮದ ಪ್ರಕಾರ	ಎಸ್.ಸಿ.	3 ತಿಂಗಳು

ಖಾಲಿ ಟೆಂಡರ ಫಾರಂಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ : https://kppp.karnataka.gov.in ದಲ್ಲಿ ದಿನಾಂಕ:02-08-2024 ರ ನಂತರದಿಂದ ಡೌನಲೋಡ್ ಮಾಡಿಕೊಳ್ಳುವುದು, ಟೆಂಡರ್ ಕುರಿತಂತೆ ದಿನಾಂಕ: 08-08--2024 ರೊಳಗಾಗಿ ಅನುಮಾನಗಳಿದ್ದರೆ ಕಚೇರಿ ಅಥವಾ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಂಪರ್ಕಿಸಿ ಪರಿಹರಿಸಿಕೊಳ್ಳಬಹುದಾಗಿದೆ. ಟೆಂಡರಗಳನ್ನು ದಿನಾಂಕ:09-08-2024 ರ ಸಾಯಂಕಾಲ 05.15 ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಗಳ ತಾಂತ್ರಿಕ ಹಾಗೂ ಆರ್ಥಿಕ ಬಿಡ್‌ನ್ನು ದಿನಾಂಕ: 12-08-2024 ಸಾಯಂಕಾಲ 05.30 ಗಂಟೆಗೆ ತೆರೆಯಲಾಗುವುದು.

ಕಾಮಗಾರಿಗಳ ಟೆಂಡರನ್ನು ಒಪ್ಪಿಕೊಳ್ಳುವ ಕನಿಷ್ಟ ಅರ್ಹತಾ ಮಾನದಂಡಗಳನ್ನು ಕೆಡಬ್ಲ್ಯೂ- 1,2,3 & 4 ಡಾಕ್ಯುಮೆಂಟ್ ರಲ್ಲಿರುವಂತೆ ಪರಿಗಣಿಸಲಾಗುವುದು ಹಾಗೂ ವೆಬ್‌ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ವಿ.ಸೂ: ಸದರಿ ಟೆಂಡರ್, ಪ್ರಕಟಣೆಗೆ ಸಂಬಂಧಿಸಿದಂತೆ ಯಾವುದೇ ತಿದ್ದುಪಡಿಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-
(ಬಸವರಾಜ ಎಸ್. ಪಾಟೀಲ್)
ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ, ಹಳಿಯಾಳ ವಿಭಾಗ (ಉ.ಕ.)

ರಾಜೀವ್ ಚಂದ್ರಶೇಖರ್
ಕೇಂದ್ರದ ಮಾಜಿ ಸಚಿವ

ಕಾಂಗ್ರೆಸ್ ಈಗ ಅಧಿಕೃತವಾಗಿ ರಾಹುಲ್ ಗಾಂಧಿಯ ಅಸಂಬದ್ಧಗಳ ಭೂಮಿಕೆಯಲ್ಲಿದೆ. ಕಳೆದ ಬಾರಿಗಿಂತಲೂ ವಿಲಕ್ಷಣ ಸಂಗತಿಗಳ ಬಗ್ಗೆ ಮಾತನಾಡುತ್ತ ಈಗ ಪ್ರತಿದಿನ ಹೇಳುವುದೇ ತಮ್ಮ ಗುರಿ ಎಂದು ರಾಹುಲ್ ವರ್ತಿಸುತ್ತಿದ್ದಾರೆ.



ಎನ್. ಮಿನೋಚಾ
ಮಾಜಿ ಸೈನಿಕ

ಸರ್, ದಯವಿಟ್ಟು ನೀವು ಪ್ರಧಾನಿ ಮೋದಿಯವರು ಕಳೆದ 20 ವರ್ಷಗಳಿಂದ ನೀಡಿದ ಭಾಷಣಗಳನ್ನು ಗಂಭೀರವಾಗಿ ಓದಿ. ಇದಕ್ಕಾಗಿ ನೀವು ತಿಂಗಳುಗಳಲ್ಲ, ವರ್ಷಗಳನ್ನಾದರೂ ತೆಗೆದುಕೊಳ್ಳಿ. ಇದು ನಿಮಗೆ ಜ್ಞಾನೋದಯ ನೀಡುವುದು ನಿಶ್ಚಿತ.

ಸಮಾಚಾರ ಸಣ್ಣದಲ್ಲ

ಮುಡಾ: ಸಿಎಂ ಹೆಸರಿಗೆ ಮಸಿ ಬಳಿಯುವ ಹುನ್ನಾರ



ಯಾದಗಿರಿ: ಮುಡಾದಲ್ಲಿ ಮೊದಲೇ ಹಗರಣ ನಡೆದಿದ್ದು, ಆಗ ಬಿಜೆಪಿ ಮುಖ್ಯಮಂತ್ರಿಗಳು ಏನು ಮಾಡುತ್ತಿದ್ದರು, ಈಗ ಸುಖಾಸುಮ್ಮನೇ ಜನಪ್ರಿಯ ಮುಖ್ಯಮಂತ್ರಿ ಸಿದ್ದರಾಮಯ್ಯ ನವರ ಹೆಸರಿಗೆ ಮಸಿ ಬಳಿಯುವ ಹುನ್ನಾರ ನಡೆಯುತ್ತಿದೆ ಎಂದು ಯಾದಗಿರಿ ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪ ದರ್ಶನಾಪುರ ಅವರು ತಿಳಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಎಕರೆ 16 ಗುಂಟೆ ಸ್ಥಳ ಯಾರದ್ದು, ಭೂ ಮಾಲೀಕರಿಗೆ ಅನುಮತಿ ಕೇಳಬೇಕು. ಈ ಎಲ್ಲಾ ತೀರ್ಮಾನ ತೆಗೆದುಕೊಂಡವರು ಬಿಜೆಪಿ ಸರಕಾರದಲ್ಲಿದ್ದ ಸಿಎಂ ಅವರ ಗಮನಕ್ಕೆ ಇರಲಿಲವೇ ಎಂದು ಖಾರವಾಗಿ ಪ್ರಶ್ನಿಸಿದರು. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ 136 ಸ್ಥಾನ ವಿಧಾನಸಭೆಯಲ್ಲಿ ಗೆದ್ದಿದೆ, ಲೋಕಸಭೆ ಫಲಿತಾಂಶದಲ್ಲಿ ಸಹ ಬಿಜೆಪಿ ಅಂದುಕೊಂಡಷ್ಟು ಸ್ಥಾನಗಳು ಸಿಗದೇ ಇರುವ ಕಾರಣ ಹೈ ಕಮಾಂಡ್ ನಲ್ಲಿ ರಾಜ್ಯ ಬಿಜೆಪಿ ನಾಯಕರಿಗೆ ಒತ್ತಡವಿದೆ ಆದ ಕಾರಣ ಬಿಜೆಪಿನಾಯಕರು ಕೆಳಮಟ್ಟದ ರಾಜಕೀಯ ಮಾಡುತ್ತಿದ್ದಾರೆ ಎಂದರು.

ತಿರುಗುಬಾಣವಾದ ಗಾಂಜಾ ಪ್ರಕರಣ

ಶಿವಮೊಗ್ಗ: ವೈಯಕ್ತಿಕ ದ್ವೇಷದ ಹಿನ್ನೆಲೆಯಲ್ಲಿ ಹೆಣ್ಣಿನ ಮನೆಯವರನ್ನು ಗಾಂಜಾ ಪ್ರಕರಣದಲ್ಲಿ ಸಿಲುಕಿಸಲು ಹೋದ ಎಂಜಿನಿಯರ್ ಒಬ್ಬ ತಾನೇ ಸಿಕ್ಕಿಹಾಕಿಕೊಂಡ ಘಟನೆ ಶಿವಮೊಗ್ಗ ಜಿಲ್ಲೆಯಲ್ಲಿ ನಡೆದಿದೆ. ಸಾಗರ ಗ್ರಾಮಾಂತರ ಠಾಣೆಯಲ್ಲಿ ವಿಚಿತ್ರ ಘಟನೆ ನಡೆದಿದ್ದು, ಶಾಂತಕುಮಾರ್‌ಎಂಬಾತನೇ ಈ ಎಂಜಿನಿಯರ್. ಜಿತೇಂದ್ರ ಎಂಬುವವರ ಮನೆಗೆ ಹೆಣ್ಣು ನೋಡಲು ಶಾಂತಕುಮಾರ್ ಹೋಗಿದ್ದ. ನಿಶ್ಚಯವಾಗುವ ವೇಳೆ ಮದುವೆ ಮುರಿದು ಬಿದ್ದಿತ್ತು. ನಂತರ ಶಾಂತಕುಮಾರ್ ಹುಡುಗಿಯ ಮನೆಯವರ ಮೇಲೆ ದ್ವೇಷ ಸಾಧಿಸುತ್ತಿದ್ದ. ಇದಕ್ಕಾಗಿ ಮತ್ತೊಬ್ಬ ವ್ಯಕ್ತಿಯ ಜತೆಗೆ ಸೇರಿಕೊಂಡು ಜಿತೇಂದ್ರ ಅವರ ಮನೆಯ ಹಿಂಭಾಗ ಗಾಂಜಾ ಪೊಟ್ಟಣ ಎಸೆಯುವ ಸಂಚು ಮಾಡಿದ್ದ. ಸರಕಾರಿ ನೌಕರಿಯಲ್ಲಿದ್ದರೂ ವೈಯಕ್ತಿಕ ದ್ವೇಷದಿಂ ದಾಗಿ ಬೇರೆಯವರ ಮನೆಯೊಳಗೆ ಗಾಂಜಾ ಎಸೆದ ಕೃತ್ಯದ ಆರೋಪದ ಮೇಲೆ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ನಾಳೆಯಿಂದ ಕೃಷ್ಣ ಮಾಸೋತ್ಸವ

ಉಡುಪಿ: ಕೃಷ್ಣಮಠದ ಪರ್ಯಾಯ ಪುತ್ತಿಗೆ ಮಠದ ಆಶ್ರಯದಲ್ಲಿ ಆ.1 ರಿಂದ ಸೆ.1 ರವರೆಗೆ ವಿಜೃಂಭಣೆಯಿಂದ ಕೃಷ್ಣ ಮಾಸೋತ್ಸವ ನಡೆಸಲು ನಿರ್ಧರಿಸಲಾಗಿದೆ. ಈವರೆಗೆ ಎರಡು ದಿನಗಳ ಕಾಲ ಆಚರಿಸಲಾಗುತ್ತಿದ್ದ ಕೃಷ್ಣ ಜನ್ಮಾಷ್ಟಮಿಯನ್ನು ಒಂದು ತಿಂಗಳ ಕಾಲ ನಡೆಯಲಿದೆ. ಈ ಅವಧಿಯಲ್ಲಿ ಶ್ರೀ ಕೃಷ್ಣ ಲೀಲೋತ್ಸವವಾಗಿ ಸಾಂಪ್ರದಾಯಿಕ ಮತ್ತು ವೈಭವಪೂರ್ಣ ಕೃಷ್ಣ ಮಾಸೋತ್ಸವವನ್ನು ಏರ್ಪಡಿಸಲಾಗಿದೆ ಎಂದು ಪುತ್ತಿಗೆ ಶ್ರೀಗಳು ತಿಳಿಸಿದ್ದಾರೆ. ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಲು ಸಮಿತಿ ರಚಿಸಲಾಗಿದೆ.ಆ. 1 ರಂದು ಸುಜ್ಞಾನೇಂದ್ರ ತೀರ್ಥರ ಸಂಸ್ಮರಣೆಯೊಂದಿಗೆ ಕೃಷ್ಣ ಮಾಸೋತ್ಸವಕ್ಕೆ ಚಾಲನೆ ನೀಡಲಾಗುವುದು ಎಂದು ಶ್ರೀ ಸುಗುಣೇಂದ್ರ ತೀರ್ಥರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ರಾಜ್ಯ ಬಿಜೆಪಿ ನಾಯಕರಲ್ಲಿ ಭಿನ್ನಮತ, ಪ್ರತ್ಯೇಕ ಪಾದಯಾತ್ರೆ – ಸುದ್ದಿ



ವಿದ್ಯುತ್ ಸ್ಪರ್ಶಕ್ಕೆ ಜಾನುವಾರುಗಳ ಬಲಿ | ತ್ರಿವೇಣಿ ಸಂಗಮ ಮತ್ತೆ ಮುಳುಗಡೆ | ಗ್ರಾಮಗಳಿಗೆ ಜಲದಿಗ್ಬಂಧನ
ಕಬ್ಬು, ಮೆಕ್ಕೆಜೋಳ , ಅರಿಶಿನ ಬೆಳೆ ಹಾನಿ | ಸಂಚಾರಕ್ಕೆ ಅಡಚಣೆ, ಹಲವಡೆ ಜನಜೀವನ ಅಸ್ತವ್ಯಸ್ತ

ವರುಣಾರ್ಭಟಕ್ಕೆ ಮಲೆನಾಡು, ಕರಾವಳಿ ವಿಲವಿಲ

ಬೆಂಗಳೂರು: ರಾಜ್ಯದಲ್ಲಿ ವಿನಾಶಕಾರಿ ಮಳೆಯಿಂದಾಗಿ ಅವಘಡಗಳ ಸರಮಾಲೆ ಸೃಷ್ಟಿಯಾಗಿದೆ. ಕೆಲವೆಡೆ ಬಿಡುವು ನೀಡಿದ್ದ ಮಳೆಯು ಮತ್ತೆ ಅಬ್ಬರಿಸುತ್ತಿದೆ. ಮಹಾರಾಷ್ಟ್ರದ ಪಶ್ಚಿಮಘಟ್ಟ ಪ್ರದೇಶದಲ್ಲಿ ಮಳೆ ಆರ್ಭಟ ಮುಂದುವರಿದಿದ್ದು ಕೃಷ್ಣಾ ನದಿ ಪ್ರವಾಹ ಹೆಚ್ಚಳವಾಗಿದೆ. ಚಿಕ್ಕಮಗಳೂರಿನಲ್ಲಿ ವರುಣನ ಅಬ್ಬರ ಹೆಚ್ಚಾಗಿದೆ. ಚಿಕ್ಕೋಡಿಯಲ್ಲಿ ಹೆಸ್ಕಾಂ ಸಿಬ್ಬಂದಿ ನೀರಿಗೆ ಜಿಗಿದು ವಿದ್ಯುತ್ ಸರಿಪಡಿಸಿದ್ದಾರೆ. ಹಾಸನದಲ್ಲಿ ಶಾಲೆ ಜಲಾವೃತ ಗೊಂಡಿದೆ. ಕೊಡಗಿನಲ್ಲಿ ತುಂಡಾಗಿ ಬಿದ್ದ ವಿದ್ಯುತ್ ತಂತಿ ತುಳಿದು ಜಾನುವಾರು ಮೃತಪಟ್ಟರೆ, ಭದ್ರಾ ನದಿ ಪ್ರವಾಹ 8 ಗ್ರಾಮಗಳಿಗೆ ಜಲದಿಗ್ಬಂಧನ ಹಾಕಿದೆ.

35ಕ್ಕೂ ಅಧಿಕ ಸೇತುವೆಗಳು ಜಾಲವೃತ: ಬೆಳಗಾವಿ ಜಿಲ್ಲೆಯ 35 ಕ್ಕೂ ಅಧಿಕ ಸೇತುವೆಗಳು ಜಲಾವೃತಗೊಂಡಿದ್ದು ಕೃಷ್ಣಾ ನದಿ ಪಾತ್ರದ ಸುಮಾರು 60 ಕ್ಕೂ ಅಧಿಕ ಗ್ರಾಮಗಳಿಗೆ ನೀವು ಆವರಿಸಿದೆ. ಅಥಣಿ ತಾಲೂಕಿನ ನದಿ ಇಂಗಳಗಾಂವ ಗ್ರಾಮ ಜಲಾವೃತಗೊಂಡಿದ್ದು ಸುಮಾರು 30 ಕ್ಕೂ ಅಧಿಕ ಮನೆಗಳು ನದಿ ನೀರಿನಲ್ಲಿ ಮುಳುಗಡೆಯಾಗಿವೆ. ಕೃಷ್ಣಾ ನದಿ ಪ್ರವಾಹ ಪೀಡಿತ ಸ್ಥಳಕ್ಕೆ ಮಂಗಳವಾರ ಕಂದಾಯ ಇಲಾಖೆ ಸಚಿವ ಕೃಷ್ಣ ಬೈರೇಗೌಡ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಿಕ್ಕೋಡಿ, ಅಥಣಿ, ಕಾಗವಾಡ, ರಾಯಬಾಗ, ನಿಪ್ಪಾಣಿ ತಾಲೂಕಿನ ಅನೇಕ ಗ್ರಾಮಗಳು ಸಂಪೂರ್ಣ ಜಲಾವೃತಗೊಂಡಿದ್ದು ಜನ ಕಾಳಜಿ ಕೇಂದ್ರದಲ್ಲಿ ಬದುಕು ಸಾಗಿಸುತ್ತಿದ್ದಾರೆ.

ಆರು ಜಾನುವಾರು ಸಾವು: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲೂಕಿನ ತೆರಾಲು ಗ್ರಾಮದಲ್ಲಿ ಭಾರಿ ಮಳೆಗೆ ವಿದ್ಯುತ್ ತಂತಿ ತುಂಡಾಗಿ ಬಿದ್ದು 6 ಜಾನುವಾರು ಮೃತಪಟ್ಟಿವೆ. ರೈತ ಬೊಜ್ಜಂಗಡ ನಟರಾಜ್‌ಗೆ ಸೇರಿದ ಜಾನುವಾರು ಮೃತಪಟ್ಟಿವೆ. ಬಿರುಸಿನ ಮಳೆಗೆ 11 ಕೆವಿ ವಿದ್ಯುತ್ ತಂತಿ ತುಂಡಾಗಿ ರಸ್ತೆಗೆ ಬಿದ್ದಿತ್ತು. ಗದ್ದೆಯಿಂದ ಕೊಟ್ಟಿಗೆಗೆ ಸಾಲಾಗಿ ಬರುತ್ತಿದ್ದಾಗ ಶಾಕ್ ಹೊಡೆದು, ಒಂದರ ಹಿಂದೆ ಒಂದರಂತೆ ಜಾನುವಾರುಗಳು ದುರ್ಮರಣಕ್ಕೀಡಾಗಿವೆ.

ಹೇಮಾವತಿ ಜಲಾಶಯಕ್ಕೆ ಸಾರ್ವಜನಿಕರಿಗೆ ಪ್ರವೇಶ ನಿರ್ಬಂಧ: ಹಾಸನ ಜಿಲ್ಲೆಯಲ್ಲಿ ನಿಲ್ಲದ ಮಳೆಯ ಆರ್ಭಟಕ್ಕೆ ಹೇಮಾವತಿ ಜಲಾಶಯದಲ್ಲಿ ಒಳಹರಿವು ಏರಿಕೆಯಾಗುತ್ತಲೇ ಇದೆ. ಹೇಮಾವತಿ ಜಲಾಶಯದಿಂದ ವ್ಯಾಪಕ ಪ್ರಮಾಣದಲ್ಲಿ ನೀರು ಬಿಡುಗಡೆ ಮಾಡಲಾಗುತ್ತಿದೆ. ಹೇಮಾವತಿ ಜಲಾಶಯದಿಂದ ಹೊರಬಿಡುತ್ತಿರುವ ನೀರು ಧುಮ್ಮಿಕ್ಕುವುದನ್ನು ಕಣ್ತುಂಬಿಕೊಳ್ಳಲು ನೂರಾರು ಪ್ರವಾಸಿಗರು ಬರುತ್ತಿದ್ದಾರೆ. ಮುಂಜಾಗ್ರತಾ ಕ್ರಮವಾಗಿ ಹಾಸನದ ಗೊರೂರಿನಲ್ಲಿರುವ ಜಲಾಶಯಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧ ಹೇರಲಾಗಿದೆ. ನದಿ ದಡದಲ್ಲೇ ಇರುವ ಹೊಳೆಮಲ್ಲೇಶ್ವರ ದೇವಾಲಯ ಜಲಾವೃತವಾಗಿದೆ.

ತ್ರಿವೇಣಿ ಸಂಗಮ ಮತ್ತೆಮುಳುಗಡೆ: ನಿರಂತರ ಮಳೆಯಿಂದಾಗಿ ಕೊಡಗಿನಲ್ಲಿ ಹೆಚ್ಚಿನ ಆತಂಕ ಸೃಷ್ಟಿಯಾಗಿದೆ. ಬಿಟ್ಟು ಬಿಟ್ಟು ಮಳೆ ಸುರಿಯುತ್ತಿರುವುದರಿಂದ ಅಲ್ಲಲ್ಲಿ ಗುಡ್ಡಗಳ ಮಣ್ಣು ಕುಸಿಯುತ್ತಿದೆ. ಅಪಾಯದಮಟ್ಟ ಮೀರಿ ಹರಿಯುತ್ತಿರುವ ಕಾವೇರಿ ನದಿಯಿಂದ ತಗ್ಗು ಪ್ರದೇಶಗಳಿಗೆ ನೀರು ನುಗ್ಗುವ ಆತಂಕ ಇದೆ. ಇತ್ತ, ಭಾಗಮಂಡಲದ ತ್ರಿವೇಣಿ ಸಂಗಮ ಕ್ಷೇತ್ರ ಮತ್ತೆ ಜಲಮಯವಾಗಿದೆ. ಭಗಂಡೇಶ್ವರ ದೇಗುಲದ ಮೆಟ್ಟಿಲವರೆಗೂ ನೀರು ಬಂದಿದೆ. ಬಿರುಗಾಳಿ, ಮಳೆಗೆ ವಿದ್ಯುತ್ ಕಂಬಗಳು ಧರಾಶಾಹಿಯಾಗುತ್ತಿವೆ. ವಿದ್ಯುತ್ ಸಂಪರ್ಕ ಕಲ್ಪಿಸಲು ಸಿಬ್ಬಂದಿ ಹರಸಾಹಸ ಪಡುತ್ತಿದ್ದಾರೆ.

ನೀರಿಗೆ ಜಿಗಿದು ವಿದ್ಯುತ್ ಸರಿಪಡಿಸಿದ ಹೆಸ್ಕಾಂ ಸಿಬ್ಬಂದಿ

ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಅಬ್ಬರಕ್ಕೆ ಚಿಕ್ಕೋಡಿ ಉಪವಿಭಾಗದ ನದಿಗಳು ಸಮುದ್ರದಂತಾಗಿದೆ. ಪ್ರವಾಹ ಸಮಯದಲ್ಲಿ ಹೆಸ್ಕಾಂ ಸಿಬ್ಬಂದಿ ಕರ್ತವ್ಯ ನಿಷ್ಠೆ ಮೆರೆದಿದ್ದಾರೆ. ಬೆಳಗಾವಿ ಜಿಲ್ಲೆಯ ಕಾಗವಾಡ ತಾಲೂಕಿನ ಜೂಗುಳ ಗ್ರಾಮದಲ್ಲಿ ನೀರಿನಲ್ಲಿ ಧುಮುಕಿ ಅಪಾಯವನ್ನೂ ಲೆಕ್ಕಿಸದೆ ವಿದ್ಯುತ್ ಸರಿಪಡಿಸಿದ್ದಾರೆ. ಆನಂದ ಹೆರವಾಡಿ ಹೆಸ್ಕಾಂ ಸಿಬ್ಬಂದಿ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಬಳಥಣಿ ತಾಲೂಕಿನ ಹಲ್ಯಾಳ ಬಳಿಯ ಸೇತುವೆ ಜಲಾವೃತಗೊಂಡಿದೆ. ಅಥಣಿ –ಗೋಕಾಕ್ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆ ಇದಾಗಿದೆ. ಕೃಷ್ಣಾ ನದಿ ದಂಡೆಯ 20 ಗ್ರಾಮಗಳಿಗೆ ಜಲಕಂಟಕ ಎದುರಾಗಿದೆ.

ಯಾದವಾಡ ಸೇತುವೆ ಮುಳುಗಡೆ: ಮಹಾರಾಷ್ಟ್ರದ ಜಲಾನಯನ ಪ್ರದೇಶಗಳಲ್ಲಿ ಭಾರಿ ಪ್ರಮಾಣದ ಮಳೆಯಾಗುತ್ತಿದೆ. ಪರಿಣಾಮ ಘಟಪ್ರಭಾ ನದಿಯಲ್ಲಿ ನೀರಿನ ಹರಿವು ಹೆಚ್ಚಾಗಿ ಮುಧೋಳ ಪಟ್ಟಣದ ಯಾದವಾಡ ಸೇತುವೆ ಸಂಪೂರ್ಣ ಮುಳುಗಡೆಯಾಗಿದೆ.

ಘಟಪ್ರಭಾ ನದಿಗೆ 80 ಸಾವಿರ ಕ್ಯೂಸೆಕ್ ನೀರು ಹರಿದು ಬಿಡಲಾಗಿದೆ. ನೀರಿನ ಪ್ರಮಾಣದಲ್ಲಿ ಭಾರಿ ಏರಿಕೆ ಕಂಡು ಬಂದ ಹಿನ್ನಲೆ ಸೇತುವೆ ಮುಳುಗಡೆಯಾಗಿದೆ. 10ಕ್ಕೂ ಅಧಿಕ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿತವಾಗಿದೆ. ಉತ್ತೂರು, ಮಿರ್ಜಿ ಹಾಗೂ ಯಾದವಾಡಗೆ ಸೇರಿದಂತೆ ಇತರ ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿದುಬಿದ್ದಿದೆ. ಇದರಿಂದ ಜನರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಅಷ್ಟೇ ಅಲ್ಲದೆ ಕಬ್ಬು, ಮೆಕ್ಕೆಜೋಳ, ಅರಿಶಿಣ ಸೇರಿದಂತೆ ಇತರ ಬೆಳೆಗಳು ನೀರುಪಾಲಾಗಿವೆ.

ಕೊಡಗು ಜಿಲ್ಲೆಯಲ್ಲಿ ಭಾರಿ ಮಳೆ ಮುಂದುವರಿದಿದ್ದು, ಭಾಗಮಂಡಲದಲ್ಲಿ ನೀರು ನಿಂತಿರುವುದು.

ಕಾವೇರಿ ನದಿಯಲ್ಲಿ ಮುಂದುವರಿದ ಪ್ರವಾಹ

ಕಾವೇರಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ನದಿತೀರದ ತೋಟ, ಬೆಳೆಗಳು ನೀರಿನಲ್ಲಿ ಮುಳುಗಿದ್ದು ರೈತರು ಕಂಗಾಲಾಗಿದ್ದಾರೆ. ಶ್ರೀರಂಗಪಟ್ಟಣ ತಾಲೂಕಿನ ಶ್ರೀನಿವಾಸ ಅಗ್ರಹಾರ, ಬಾಬುರಾಯನಕೊಪ್ಪಲು, ಗಂಜಾಂ, ಮರಳಾಗಾಲ, ಚಿನ್ನಾಯಕನಹಳ್ಳಿ, ಚಿಕ್ಕಪಾಳ್ಯ, ಹಂಗರಹಳ್ಳಿ, ದೊಡ್ಡಪಾಳ್ಯ, ಶಾಂತಿಕೊಪ್ಪಲು, ಮಹದೇವಪುರ ಗ್ರಾಮಗಳ ಸರಹದ್ದಿನಲ್ಲಿ ನೂರಾರು ಎಕರೆ ಕೃಷಿ ಭೂಮಿ ಜಲಾವೃತವಾಗಿದೆ.

ಅಪಾಯದ ಮಟ್ಟ ಮೀರಿದ ನೇತ್ರಾವತಿ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೋಮವಾರ ಸಂಜೆಯಿಂದ ನಿರಂತರವಾಗಿ ಸುರಿಯುತ್ತಿರುವ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದೆ. ಜಿಲ್ಲೆಯ ಹಲವೆಡೆ ತಗ್ಗು ಪ್ರದೇಶಗಳು ಜಲಾವೃತವಾಗಿದೆ ಇದರಿಂದಾಗಿ ಬಂಟ್ವಾಳ ಪೇಟೆ, ಪಾಣೆ ಮಂಗಳೂರು, ಆಲಡ್ಕ ಸೇರಿದಂತೆ ಹಲವೆಡೆ ನೆರೆ ಕಾಣಿಸಿಕೊಂಡಿದೆ. ಇನ್ನು ಹಲವೆಡೆ ಗುಡ್ಡ ಕುಸಿತದ ಭೀತಿ ಎದುರಾಗಿದೆ. ಮಂಗಳೂರಿನ ಪಡೀಲ್ ರೈಲ್ವೇ ಅಂಡರ್‌ಪಾಸ್ ರಸ್ತೆಯಲ್ಲಿ ನೀರು ತುಂಬಿ ನದಿಯಂತಾಗಿದೆ. ಈ ಮಳೆ ನೀರಿನಲ್ಲೇ ಬಸ್ ಚಲಾಯಿಸಲು ಚಾಲಕ ಯತ್ನಿಸಿದ್ದಾರೆ. ಆದರೆ, ಬಸ್ ಕೊಂಚ ದೂರಸಾಗಿದಾಗ ನೀರು ನುಗ್ಗಿದೆ. ಹಲವಾರು ಮನೆಗಳು ಸೇರಿದಂತೆ ಕೃಷಿ ತೋಟಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

ಭದ್ರಾ ನದಿಯಿಂದ ಗ್ರಾಮಗಳಿಗೆ ಜಲದಿಗ್ಬಂಧನ

ಚಿಕ್ಕಮಗಳೂರಿನಲ್ಲಿ ಭದ್ರಾನದಿ ಅಬ್ಬರಕ್ಕೆ 8 ಗ್ರಾಮಗಳಿಗೆ ಜಲ ದಿಗ್ಬಂಧನವಾಗಿದೆ. ಪ್ರವಾಹಕ್ಕೆ ರಸ್ತೆ ಮುಳುಗಿದ್ದು, ಹುಯಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ 8 ಗ್ರಾಮಗಳು ಸಂಪರ್ಕ ಕಡಿತಗೊಂಡಿದೆ. ರಸ್ತೆಯ ಮೇಲೆ 8-10 ಅಡಿ ನೀರು ನಿಂತಿದೆ. ಇತ್ತ ಕಳಸ-ಹೊರನಾಡು-ಕೊಟ್ಟಿಗೆಹಾರ ಮಾರ್ಗವು ಸಂಪೂರ್ಣ ಬಂದ್ ಆಗಿದೆ. ಭದ್ರೆಯ ಅಬ್ಬರಕ್ಕೆ 20 ಮನೆಯ ಕುಗ್ರಾಮಕ್ಕೆ ಜಲದಿಗ್ಬಂಧನ ಹಾಕಲಾಗಿದೆ. ಹಳ್ಳಿಯಿಂದ ಹೊರಬರಲು ಯಾವುದೇ ಮಾರ್ಗ ಇಲ್ಲದೆ ಸಂಕಷ್ಟಕ್ಕೆ ಗುರಿಯಾಗಿದ್ದಾರೆ. ಸದ್ಯ ಒಂದು ಕಡೆಯಿಂದ ಮತ್ತೊಂದು ಕಡೆ ಹೋಗಲು ಬೋಟ್ ಬಳಕೆ ಮಾಡುವಂತಾಗಿದೆ. ಚಿಕ್ಕಮಗಳೂರಿನಲ್ಲಿ ಭಾರಿ ಮಳೆಗೆ ಅವಾಂತರವೇ ಸೃಷ್ಟಿಯಾಗಿದೆ. ರಾ.ಹೆ.173ರ ಚಾರ್ಮಾಡಿ ಘಾಟಿಯಲ್ಲಿ ಬೃಹತ್ ಮರ ರಸ್ತೆಗುರುಳಿದೆ. ಮೂಡಿಗೆರೆ ತಾಲೂಕಿನ ಚಾರ್ಮಾಡಿ ಘಾಟಿಯಲ್ಲಿ ಸಂಚಾರ ಸಂಪೂರ್ಣ ಸ್ಥಗಿತಗೊಂಡದೆ.

ಬಸ್ಕಿ ಹೊಡೆಸಿದ ಪೊಲೀಸರು

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಭರಚುಕ್ಕಿ ಜಲಪಾತ ಭೋರ್ಗರೆಯುತ್ತಿದ್ದು, ಮುನ್ನೆಚ್ಚರಿಕೆ ಕ್ರಮವಾಗಿ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗಿದೆ. ಯುವಕರ ಗುಂಪೊಂದು ಪೊಲೀಸರ ಕಣ್ಣು ತಪ್ಪಿಸಿ ಜಲಪಾತ ತುದಿಯಲ್ಲಿ ನಿಂತು ಫೋಟೊ, ಸೆಲ್ಫಿ ತೆಗೆದುಕೊಳ್ಳುವ ದುಸ್ಸಾಹಸದಲ್ಲಿ ಈ ಗುಂಪು ತೊಡಗಿತ್ತು. ಈ ವೇಳೆ , ಯುವಕರು ಪೊಲೀಸರ ಕೈಗೆ ಸಿಕ್ಕಿಆಗಿದ್ದಾರೆ. ನಿಯಮ ಉಲ್ಲಂಘಿಸಿದ್ದಕ್ಕಾಗಿ ಯುವಕರಿಗೆ ಪೊಲೀಸರು ಬಸ್ಕಿ ಹೊಡೆಸಿ ಶಿಕ್ಷೆ ಕೊಟ್ಟಿದ್ದಾರೆ. ಯುವಕರು ಬಸ್ಕಿ ಹೊಡೆಯುವ ವಿಡಿಯೊ ಎಲ್ಲೆಡೆ ವೈರಲ್ ಆಗಿದೆ.

ಶ್ರೀರಂಗಪಟ್ಟಣ ತಾ. ಚಿಕ್ಕಪಾಳ್ಯದಲ್ಲಿ ಹೂವಿನ ಬೆಳೆ ನೀರಿನಲ್ಲಿ ಮುಳುಗಿದೆ.

ಸಕಲೇಶಪು ತಾ ಕುಂಬರಡಿ-ಕಾರ್ಲೇ ಎಸ್ಟೇಟ್ ಮಧ್ಯೆ ಭಾರೀ ಪ್ರಮಾಣದ ಭೂ ಕುಸಿತ ಸಂಭವಿಸಿ ಶಿರಾಡಿ ಹೆದ್ದಾರಿಗೆ ಬದಲಿಯಾಗಿ ಬಳಸುತ್ತಿದ್ದ ರಸ್ತೆ ಸುಮಾರು 200 ಮೀಟರ್‌ಗೂ ಹೆಚ್ಚು ಕೊಚ್ಚಿ ಹೋಗಿದೆ.

ಹೊಗೇನಕಲ್ ಜಲಪಾತವೇ ಕಣ್ಮರೆ

ಕಾವೇರಿ ನದಿಯ ಆರ್ಭಟಕ್ಕೆ ಕರ್ನಾಟಕ-ತಮಿಳುನಾಡು ಗಡಿಯಲ್ಲಿರುವ ಹೊಗೇನಕಲ್ ಜಲಪಾತವೇ ಕಣ್ಮರೆಯಾಗಿದೆ. 72 ಅಡಿ ಎತ್ತರದಿಂದ ಆರ್ಭಟಿಸುತ್ತಾ ಧುಮ್ಮಿಕ್ಕುತ್ತಿದ್ದ ಜಲಪಾತದಲ್ಲಿ ಕಾವೇರಿ ತುಂಬಿ ಹರಿಯುತ್ತಿದ್ದಾಳೆ. ಕೆಆರ್‌ಎಸ್ ಹಾಗೂ ಕಬಿನಿ ಜಲಾಶಯಗಳಿಂದ ಹೊರಹರಿವು ಹೆಚ್ಚಾದ ಹಿನ್ನೆಲೆಯಲ್ಲಿ ಹೊಗೇನಕಲ್ ಜಲಪಾತಕ್ಕೆ ಅಪಾರ ಪ್ರಮಾಣದ ನೀರು ಹರಿದುಬರುತ್ತಿದೆ. ಕಲ್ಲು ಬಂಡೆಗಳ ನಡುವೆ ಧುಮ್ಮಿಕ್ಕುತ್ತಾ, ನಯನ ಮನೋಹರ ದೃಶ್ಯಕ್ಕೆ ಸಾಕ್ಷಿಯಾಗಿದ್ದ ಹೊಗೇನಕಲ್ ಜಲಪಾತ ಇದೀಗ ಕಾಣದಂತಾಗಿದೆ. ಸದ್ಯ ನೀರು ಹೆಚ್ಚಿರುವ ಕಾರಣ ದೋಣಿವಿಹಾರಕ್ಕೂ ಬ್ರೇಕ್ ಹಾಕಲಾಗಿದೆ.

ಮುಂದುವರಿದ ಹಳಿ ತೆರವು

ಶಿರಾಡಿ ಘಾಡಿಯಲ್ಲಿ ರೈಲ್ವೆ ಹಳಿ ಮೇಲೆ ಕುಸಿದ ಗುಡ್ಡದ ಮಣ್ಣಿನರಾಶಿಯ ತೆರವು ಕಾರ್ಯಾಚರಣೆ ನಾಲ್ಕನೇ ದಿನವೂ ಮುಂದುವರಿದಿದೆ. ಭಾರಿ ಮಳೆಯ ನಡುವೆಯೂ ಕಾರ್ಯಾಚರಣೆ ನಡೆಯುತ್ತಿದ್ದು, 420ಕ್ಕೂ ಹೆಚ್ಚು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಇದರಿಂದಾಗಿ ಹದಿನೈದು ದಿನಗಳ ಕಾಲ ಸಕಲೇಶಪುರ-ಸುಬ್ರಹ್ಮಣ್ಯ ನಡುವೆ ರೈಲುಮಾರ್ಗ ಬಂದ್ ಆಗಿದೆ. ಕಾರ್ಯಾಚರಣೆಗೆ ಸತತ ಮಳೆ ಅಡ್ಡಿಯಾಗುತ್ತಿದೆ. ಸಕಲೇಶಪುರ ತಾಲೂಕಿನ ಕಡಗರವಳ್ಳಿ-ಎಡಕುಮೇರಿ ಬಳಿ ರೈಲ್ವೆ ಹಳಿ ಮೇಲೆ ಗುಡ್ಡ ಕುಸಿದಿತ್ತು. ರೈಲ್ವೆ ಇಲಾಖೆ ಅಧಿಕಾರಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿ ಕಾರ್ಯಾಚರಣೆ ಮೇಲ್ವಿಚಾರಣೆ ನಡೆಸಿದ್ದಾರೆ.

ಭದ್ರ ಜಲಾಶಯದಿಂದ ನದಿಗೆ ನೀರು

ಶಿವಮೊಗ್ಗ ಜಿಲ್ಲೆಯ ಭದ್ರ ಜಲಾಶಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಸಂಗ್ರಹವಾಗಿದ್ದು ಅದರಂತೆ ಜಲಾಶಯ ಬಹುತೇಕ ಭರ್ತಿಯಾದ ಕಾರಣ ಕ್ರಸ್ಟ್ ಗೇಟ್ ಮೂಲಕ ಭದ್ರಾ ನದಿಗೆ ನೀರು ಬಿಡಲಾಯಿತು.ಜಲಾಶಯ ಬಹುತೇಕ ಭರ್ತಿ ಹಿನ್ನೆಲೆಯಲ್ಲಿ ಮಂಗಳವಾರ ನಾಲ್ಕು ಗೇಟ್ ಗಳ ಮೂಲಕ ಅಧಿಕಾರಿಗಳು ಭದ್ರಾ ನದಿಗೆ ನೀರನ್ನು ಬಿಡಲಾಯಿತು. ಒಳಹರಿವು 20 ಸಾವಿರ ಕ್ಯುಸೆಕ್. ಹೀಗಾಗಿ 10 ರಿಂದ 12 ಕ್ಯುಸೆಕ್ ನೀರನ್ನು ನದಿಗೆ ಬಿಡಲಾಗುವುದು ಎಂದ ಜಲಾಶಯದ ಅಧಿಕಾರಿಗಳು ಹೇಳಿದ್ದರು.

ಪ್ರವಾಹ ಭೀತಿ ಪ್ರದೇಶ ವೀಕ್ಷಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ

ಮುಳುಗಡೆ ಗ್ರಾಮಗಳ ಶಾಶ್ವತ ಪರಿಹಾರಕ್ಕೆ ಚರ್ಚೆ

ಬಾಗಲಕೋಟೆ: ಅನೇಕ ವರ್ಷಗಳಿಂದ ಪ್ರವಾಹಕ್ಕೆ ನೂರಾರು ಗ್ರಾಮಗಳು ತುತ್ತಾಗುತ್ತಿವೆ. ಅವುಗಳಿಗೆ ಶಾಶ್ವತ ಪರಿಹಾರ ಕಲ್ಪಿಸಲು ಚರ್ಚೆ ನಡೆಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಘಟಪ್ರಭಾ ನದಿ ಪ್ರವಾಹದಿಂದ ಮುಳುಗಿದ ಜಿಲ್ಲೆಯ ಮುಧೋಳ ತಾಲೂಕಿನ ಯಾದವಾಡ ಸೇತುವೆ ವೀಕ್ಷಿಸಿ ಸುದ್ದಿಗಾ ರರೊಂದಿಗೆ ಮಾತನಾಡಿದ ಅವರು, ಪ್ರವಾಹಪೀಡಿತ ಗ್ರಾಮಗಳ ಶಾಶ್ವತ ಸ್ಥಳಾಂತರಕ್ಕೆ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ ಅವರೊಂದಿಗೆ ಚರ್ಚೆ ನಡೆಸಲಾಗುವುದು ಎಂದು ತಿಳಿಸಿದರು.

ಎಲ್ಲ ಗ್ರಾಮಗಳನ್ನು ಒಂದೇ ಸಾರಿ ಸ್ಥಳಾಂತರ ಸಾಧ್ಯವಿಲ್ಲ. ಹಂತ ಹಂತವಾಗಿ ಮಾಡಬೇಕಿದೆ. ಇದಕ್ಕೆ ರೈತರು ಭೂಮಿ ನೀಡಲು ಮುಂದಾಗಬೇಕು. ಸರಕಾರದ ನಿಯಮಾವಳಿ ಬಿಟ್ಟು ಭೂಮಿ ಖರೀದಿ ಮಾಡಲು ಸಾಧ್ಯವಿಲ್ಲ. ಮಾರುಕಟ್ಟೆ ದರದಲ್ಲಿ ಭೂಮಿ ಖರೀದಿಸಲು ಸಾಧ್ಯವಿಲ್ಲ. ಎಲ್ಲದಕ್ಕೂ ಅಂತಿಮ ಸ್ವರೂಪ ನೀಡಬೇಕಿದೆ ಎಂದರು.

ಮಹಾರಾಷ್ಟ್ರದಲ್ಲಿ ಸುರಿಯುತ್ತಿರುವ ಭಾರಿ ಮಳೆಗೆ ಬಾಗಲಕೋಟೆ, ಬೆಳಗಾವಿ ಭಾಗದಲ್ಲಿ ಪ್ರವಾಹ ಉಂಟಾಗಿದೆ. ಘಟಪ್ರಭಾ 80 ಸಾವಿರ ಕ್ಯುಸೆಕ್, ಕೃಷ್ಣಾ 3 ಲಕ್ಷ ಕ್ಯುಸೆಕ್ ಒಳಕಹರಿವು ಇದ್ದು, ಎರಡು ಮೂರು ದಿನಗಳಲ್ಲಿ ಪ್ರವಾಹ ತಗ್ಗಬ ಹುದು. ಮಳೆ ಮುಂದುವರಿದಲ್ಲಿ ಮತ್ತಷ್ಟು ಕಷ್ಟವಾಗಲಿದೆ. ಇದಕ್ಕೆ ಬೇಕಾದ ಅಗತ್ಯ ಸಿದ್ಧತೆಗಳನ್ನು ಸರಕಾರ ಹಾಗೂ ಜಿಲ್ಲಾಡಳಿತ ಮಾಡಿಕೊಂಡಿದೆ ಎಂದು ತಿಳಿಸಿದರು.

ಮುಧೋಳದ ಯಾದವಾಡ ಸೇತುವೆ ಮುಳುಗಡೆಯಾಗಿರುವುದನ್ನು ಸಚಿವರಾದ ಕೃಷ್ಣ ಬೈರೇಗೌಡ, ಆರ್.ಬಿ.ತಿಮ್ಮಾಪುರ, ಮಾಜಿ ಸಚಿವೆ ಉಮಾಶ್ರೀ ವೀಕ್ಷಿಸಿದರು.

832 ಮನೆಗಳಿಗೆ ಹಾನಿಯಾಗಿದ್ದು, ಸಿಡಿಲಿಗೆ 8, ಮರಗಳು ಬಿದ್ದು 6, ಮನೆ ಬಿದ್ದು 14, ನೀರಿನಲ್ಲಿ ಮುಳಗಿ 12 ಜನ ಸೇರಿದಂತೆ ಒಟ್ಟು 48 ಪ್ರಾಣ ಹಾನಿ ಸಂಭವಿಸಿದೆ. ಪ್ರವಾಹಕ್ಕೆ 2019 ರಲ್ಲಿ 272 ಜನ, 2022 ರಲ್ಲಿ 249 ಜನ ತೀರಿಕೊಂಡಿದ್ದರು. 2019 ರಲ್ಲಿ 9 ಲಕ್ಷ ಹೆಕ್ಟೇರ್, 2022 ರಲ್ಲಿ 12 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆ ಹಾನಿಯಾಗಿತ್ತು, ಪ್ರಸಕ್ತ ವರ್ಷ 44 ಸಾವಿರ ಹೆಕ್ಟೇರ್ ಪ್ರದೇಶ ಬೆಳೆಹಾನಿಯಾಗಿದೆ. ಪ್ರವಾಹ ಕಡಿಮೆಯಾದ ಬಳಿಕ ಬೆಳೆ ಹಾನಿ ಪ್ರಮಾಣದ ಮಾಹಿತಿ ಸಿಗಲಿದೆ.

-ಕೃಷ್ಣ ಬೈರೇಗೌಡ, ಸಚಿವ

10 ಸಾವಿರ ಜನರಿಗೆ ಕೇಂದ್ರದಲ್ಲಿ ಆಶ್ರಯ

ರಾಜ್ಯದಲ್ಲಿ 2,223 ಗ್ರಾಮಗಳು ಪ್ರವಾಹಕ್ಕೆ ತುತ್ತಾಗುವ ಸಾಧ್ಯತೆ ಇದೆ ಎಂದು ಗುರುತಿಸಲಾಗಿದೆ. ಇದಕ್ಕಾಗಿ ಟಾಸ್ಕ್ ಫೋರ್ಸ್ ಸಮಿತಿ ರಚಸಲಾಗಿದೆ. 64 ಆಶ್ರಯ ಕೇಂದ್ರ ಆರಂಭಿಸಲಾಗಿದ್ದು, ಈ ವರೆಗೆ 10 ಸಾವಿರ ಜನರಿಗೆ ಆಶ್ರಯ ಕೇಂದ್ರಗಳಲ್ಲಿ ಆಶ್ರಯ ಕಲ್ಪಿಸಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬರುವ ದಿನಗಳು ಅಷ್ಟು ಶುಭವಿಲ್ಲ: ಕೋಡಿಮಠ ಶ್ರೀಗಳ ಭವಿಷ್ಯ

ಜಗತ್ತಿನಲ್ಲಿ ರೋಗದ ದಿನಗಳು ಹೆಚ್ಚಾಗುವ ಸಾಧ್ಯತೆ

ಬೆಳಗಾವಿ: ಜಗತ್ತಿನಲ್ಲಿ ರೋಗದ ದಿನಗಳು ಹೆಚ್ಚಾಗುವ ಸಾಧ್ಯತೆ ಇದೆ. ಅಲ್ಪಾಯಸ್ಸು ಕಡಿಮೆಯಾಗುತ್ತಿದೆ. ಹೆಣ್ಣು, ಗಂಡು ಮಾನಸಿಕ ಸ್ಥೈರ್ಯ ಕಳೆದುಕೊಳ್ಳಲಿದ್ದಾರೆ. ಬರುವ ದಿನಗಳು ಅಷ್ಟು ಶುಭವಿಲ್ಲ ಎಂದು ಕೋಡಿಮಠದ ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ ಸ್ಫೋಟಕ ಭವಿಷ್ಯ ನುಡಿದಿದ್ದಾರೆ.

ಮಂಗಳವಾರ ರಾಮತೀರ್ಥನಗರದ ಭಕ್ತರ ಮನೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು. ಬರುವ ದಿನಗಳಲ್ಲಿ ಒಳ್ಳೆಯ ದಿನಗಳು ಸಹ ಇವೆ. ವಿಶೇಷವಾಗಿ ಕಪ್ಪು, ಬೆಳಕಿನಲ್ಲಿ ಕಪ್ಪು ಹೆಚ್ಚಾಗಿದೆ ಎಂದರು.

ರಾಜಕಾರಣದ ಬಗ್ಗೆ ಎಚ್ಚರಿಕೆ ಅಗತ್ಯ:
ಒಬ್ಬ ಸನ್ಯಾಸಿ ತಪಸ್ಸಿಗೆ ಕುಳಿತಾಗ ಒಬ್ಬ ಬೇಡ ಜಿಂಕೆ ಬೇಟೆಯಾಡಲು ಬಂದಾಗ ಸನ್ಯಾಸಿ ಮುಂದೆ ಜಿಂಕೆ ಓಡಿ ಹೋಯಿತು. ಆಗ ಬೇಡ ಸನ್ಯಾಸಿಗೆ ಕೇಳುತ್ತಾನೆ, ಸ್ವಾಮಿ ಜಿಂಕೆ ಓಡಿಹೋಯಿತೇ ಎಂದು. ಜಿಂಕೆ ಹೋಯಿತು ಎಂದರೆ ಅದನ್ನು ಕೊಂದುಬಿಡುತ್ತಾನೆ. ಆ ಪಾಪ ನನಗೆ ಬಂದು ಬಿಡುತ್ತದೆ. ಸುಳ್ಳು ಹೇಳಿದರೂ ಪಾಪ ಬರುತ್ತದೆ ಎಂದು ಕಣ್ಣು ನೋಡಿತು. ಕಣ್ಣು ಮಾತನಾಡಲ್ಲ. ನಾಲಿಗೆ ಮಾತನಾ ಡುತ್ತದೆ. ಆದರೆ ನೋಡುವುದಿಲ್ಲ. ರಾಜಕಾರಣದ ಬಗ್ಗೆ ಹೇಳಬೇಕಾದರೆ ಎಚ್ಚರಿಕೆಯಿಂದ ಹೇಳಬೇಕಾಗುತ್ತದೆ ಎಂದು ಕೋಡಿಮಠದ ಶ್ರೀಗಳು ಮಾರ್ಮಿಕವಾಗಿ ನುಡಿದರು.

ಭೀಕರ ಮಳೆ, ಸಾವು-ನೋವು

ರಾಜ್ಯದಲ್ಲಿ ಭೀಕರ ಮಳೆಯಾಗುತ್ತದೆ. ಗುಡ್ಡ ಕುಸಿತವಾಗುತ್ತದೆ. ಸಾವು, ನೋವು ಸಂಭವಿಸುತ್ತದೆ ಎಂದು ಹೇಳಿದ್ದೆ. ಅದು ಅಮವಾಸ್ಯೆಯವರೆಗೂ ಇರುತ್ತದೆ. ಪ್ರಕೃತಿಯಲ್ಲಿ ಒಳ್ಳೆಯದು ಕೆಟ್ಟದ್ದು ಇದೆ. ಅದು ಪ್ರಕೃತಿಯ ದೋಷ. ಒಳ್ಳೆಯದಕ್ಕಿಂತ ಕೆಟ್ಟದ್ದೇ ಹೆಚ್ಚಾಗುತ್ತದೆ. ಅಮವಾಸ್ಯೆ ನಂತರ ಈ ಸಮಸ್ಯೆ ಮುಂದಿನ ಭಾಗದಲ್ಲಿ ಆಗುತ್ತದೆ. ಅನಿಷ್ಟ ಜಾಸ್ತಿ ಇರುತ್ತದೆ ಎಂದು ಭವಿಷ್ಯ ನುಡಿದರು.

ಮಹಾಭಾರತದಲ್ಲಿ ಕೃಷ್ಣ ಇದ್ದಿದ್ದಕ್ಕೆ ಭೀಮ ಗೆದ್ದು ದುರ್ಯೋಧನ ಸೋತ. ರಾಷ್ಟ್ರ ರಾಜಕಾರಣದಲ್ಲಿ ಕೃಷ್ಣ ಇಲ್ಲ. ದುರ್ಯೋಧನ ಗೆಲ್ಲುತ್ತಾನೆ. ಭೀಮ ಸೋಲುತ್ತಾನೆ. ಕರ್ನಾಟಕ ರಾಜ್ಯ ರಾಜಕಾರಣದಲ್ಲಿ ಮಹಾಭಾರತದಲ್ಲಿ ಅಭಿಮನ್ಯುವನ್ನು ಮೋಸದಿಂದ ಕತ್ತರಿಸುತ್ತಾರೆ. ರಾಜ್ಯದಲ್ಲಿ ಸಿಎಂ ಬದಲಾವಣೆ ಸದ್ಯಕ್ಕೆ ತೊಂದರೆ ಇಲ್ಲ. ಪ್ರಜಾಪ್ರಭುತ್ವದಲ್ಲಿ ಮತದಾರರು ಮತವನ್ನು ದಾನಮಾಡುತ್ತಿಲ್ಲ. ಮಾರಿಕೊಳ್ಳುತ್ತಿದ್ದಾರೆ.

-ಶಿವಾನಂದ ಶಿವಯೋಗಿ ರಾಜೇಂದ್ರ ಸ್ವಾಮೀಜಿ, ಕೋಡಿಮಠ

ಸಂಪಾದಕೀಯ

ಪಶ್ಚಿಮಘಟ್ಟದ ಮೇಲೆ ಆಕ್ರಮಣ ನಿಲ್ಲಲಿ

ಕರ್ನಾಟಕ ಮತ್ತು ಕೇರಳದಲ್ಲಿ ಮಳೆ ಅಬ್ಬರ ಮುಂದುವರಿದಿದೆ. ಪಶ್ಚಿಮ ಘಟ್ಟ ಭಾಗದಲ್ಲಿ ಪ್ರಾಕೃತಿಕ ವಿಕೋಪಗಳು ಒಂದರ ಮೇಲೊಂದರಂತೆ ಸಂಭವಿಸುತ್ತಲೇ ಇದೆ. ಇದೀಗ ಕೇರಳದ ವಯನಾಡು ಜಿಲ್ಲೆಯಲ್ಲಿ ಸರಣಿ ಭೂಕುಸಿತಗಳು ಸಂಭವಿಸಿದ್ದು 200ಕ್ಕೂ ಹೆಚ್ಚು ಮನೆಗಳು,ಅಂಗಡಿ ಮುಂಗಟ್ಟುಗಳು ನಿರ್ನಾಮವಾಗಿವೆ. 100ಕ್ಕೂ ಹೆಚ್ಚು ಮಂದಿ ಮಣ್ಣಿನಡಿ ಸಿಲುಕಿ ಪ್ರಾಣ ಕಳೆದುಕೊಂಡಿದ್ದಾರೆ. ತನ್ನ ಪ್ರಾಕೃತಿಕ ಸೌಂದರ್ಯಕ್ಕೆ ಹೆಸರಾಗಿದ್ದ ಮೇಪ್ಪಾಡಿ ಬಳಿಯ ಚೂರಾಲ್‌ಮಾಲ ಪಟ್ಟಣವಿಡೀ ನಿರ್ನಾಮವಾಗಿದೆ. ಕರ್ನಾಟಕದ ನಾಗರಹೊಳೆಗೆ ಅರಣ್ಯ ಪ್ರದೇಶಕ್ಕೆ ಹೊಂದಿಕೊಂಡಿರುವ ವಯನಾಡು ಜಿಲ್ಲೆಯ ಮುಂಡಕ್ಕೈ, ವೈತಿರಿ, ವೆಳ್ಳರಿಮಲ ಮತ್ತು ಮೇಪ್ಪಾಡಿಯಲ್ಲಿ ಹೆಚ್ಚಿನ ಅನಾಹುತಗಳು ಸಂಭವಿಸಿವೆ. ಪ್ರಧಾನಿ ನರೇಂದ್ರ ಮೋದಿ ಕೇರಳ ಮುಖ್ಯಮಂತ್ರಿ ಪಿನರಾಯಿ ವಿಜಯನ್ ಅವರಿಗೆ ಕರೆ ಮಾಡಿ ಎಲ್ಲ ನೆರವಿನ ಭರವಸೆಯನ್ನು ನೀಡಿದ್ದಾರೆ. ಪರಿಹಾರ ಕಾರ್ಯಕ್ಕೆ ಭೂ ಸೇನೆ ಮತ್ತು ವಾಯು ಸೇನೆಯ ಸಹಾಯ ಪಡೆಯಲಾಗಿದ್ದು ಈಗಾಗಲೇ ಸೈನಿಕರು ಸ್ಥಳದಲ್ಲಿದ್ದು ಪರಿಹಾರ ಕಾರ್ಯ ಆರಂಭಿಸಿದ್ದಾರೆ. ಮಲಪ್ಪುರಂ, ಕೋಯಿಕ್ಕೋಡ್, ವಯನಾಡ್, ಕಾಸರಗೋಡು ಮತ್ತು ಕಣ್ಣೂರು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಿಸಲಾಗಿದೆ. ಇನ್ನೊಂದೆಡೆ ಹಾಸನ ಸಕಲೇಶಪುರದಲ್ಲಿ ಭಾರೀ ಮಳೆಯ ಪರಿಣಾಮ ಶಿರಾಡಿ ಘಾಟ್ ಮತ್ತೆ ಕುಸಿದಿದೆ. ಹೆದ್ದಾರಿ ಸಂಚಾರ ಮತ್ತೆ ಸಂಪೂರ್ಣ ಸ್ಥಗಿತಗೊಂಡಿದೆ. ಚಿಕ್ಕಮಗಳೂರಿನ ಚಾರ್ಮಾಡಿ ಘಾಟ್ ರಸ್ತೆಯಲ್ಲೂ ಭೂಕುಸಿತದ ಆತಂಕವಿದ್ದು ಕರಾವಳಿಯೊಂದಿಗಿನ ಸಂಪರ್ಕ ಸಂಪೂರ್ಣ ಕಡಿತಗೊಳ್ಳುವ ಭೀತಿ ಮೂಡಿದೆ. ಪ್ರತಿಯೊಂದು ದುರಂತ ಸಂಭವಿಸಿದಾಗಲೂ ಪಶ್ಚಿಮಘಟ್ಟದ ಸಂರಕ್ಷಣೆ ಕುರಿತಂತೆ ಡಾ. ಮಾಧವ ಗಾಡ್ಗೀಳ್ ವರದಿಯನ್ನು ಪ್ರಸ್ತಾಪಿಸಲಾಗುತ್ತದೆ. ಈ ವರದಿಯನ್ನು ಸರಳೀಕರಿಸಿ ಕಸ್ತೂರಿರಂಗನ್ ಸಮಿತಿ ನೀಡಿದ ವರದಿಯನ್ನು ಒಪ್ಪಿಕೊಳ್ಳಲು, ಜನರಾಗಲಿ, ಸರಕಾರವಾಗಲಿ ಸಿದ್ಧವಿಲ್ಲ. ಎತ್ತಿನ ಹೊಳೆಯಂತಹ ಸಾವಿರಾರು ಕೋಟಿ ರೂ. ವೆಚ್ಚದ ಯೋಜನೆಗಳ ಹೆಸರಿನಲ್ಲಿ ಪರಿಸರ ಸೂಕ್ಷ್ಮ ಪ್ರದೇಶವಾದ ಪಶ್ಚಿಮ ಘಟ್ಟವನ್ನು ಬಗೆಯಲಾಗಿದೆ. ಹೆದ್ದಾರಿ ಅಗಲೀಕರಣದ ಹೆಸರಿನಲ್ಲಿ ನಡೆಸಿದ ಕಾಮಗಾರಿಗಳು ದುರಂತಕ್ಕೆ ಸ್ವಯಂ ಆಹ್ವಾನ ನೀಡಿವೆ. ಕೇರಳದಲ್ಲಿ ದುರಂತ ನಡೆದ ಸ್ಥಳಗಳಲ್ಲಿ ಪ್ರವಾಸೋದ್ಯಮ ಹೆಸರಿನಲ್ಲಿ ವ್ಯಾಪಕ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲಾಗಿತ್ತು. ಇಂತಹ ದುರಂತಗಳ ಮೇಲಾದರೂ ಪ್ರಕೃತಿಯ ಮೇಲಿನ ಆಕ್ರಮಣಕ್ಕೆ ತಡೆ ಹಾಕಲೇಬೇಕು. ಯದ್ವಾತದ್ವಾ ಕಾಮಗಾರಿಗಳಿಗೆ ಅಂತ್ಯ ಹೇಳಲೇಬೇಕು.

ಸೊಂಪಾದಕೀಯ

ನಮ್ಮಲ್ಲಿ ಆದೇಶಗಳಿಗೆ ಬೆಲೆ ಇಲ್ಲ

'ತಮ್ಮಾ, ಗಾಡಿ ಸೈಡಿಗ್ ಹಾಕು' - ಇದು ಟ್ರಾಫಿಕ್ ಲೋಕದಲ್ಲಿ ತುಂಬಾ ಫೇಮಸ್ ಡೈಲಾಗು. ಗಾಡಿ ಇರೋ ಎಲ್ಲರೂ ಒಂದಲ್ಲ ಒಂದ್ಸಲ, ಈ ಮಾತನ್ನ ಕೇಳೇ ಕೇಳಿರ್ತಾರೆ. ಜೀವನ ಅಂದ್ಮೇಲೆ ತಿರುವುಗಳು ಇದ್ದೇ ಇರ್ತವೆ ಅಂತ ಫಿಲಾಸಫಿ ಹೇಳೋರ ಮಾತು ಎಷ್ಟು ಸತ್ಯನೋ, ಹಂಗೇ ಆ ತಿರುವುಗಳಲ್ಲಿ ಒಬ್ಬರು ಟ್ರಾಫಿಕ್ ಪೊಲೀಸ್ ಇರ್ತಾರೆ ಅನ್ನೋದು ಕೂಡಾ ಅಷ್ಟೇ ಸತ್ಯ. ರಸ್ತೆಗಳಲ್ಲಿ ಗಾಡಿಗಳು, ಅದರಲ್ಲೂ ಟೂ ವೀಲರ್‌ಗಳು ಹೋಗ್ತಾ ಇದ್ರೆ, ಒಂಟಿಕಾಲಲ್ಲಿ ಬಕಪಕ್ಷಿ ಥರ ಕಾಯ್ತಾ ಇರ್ತಾರೆ ಈ ಟ್ರಾಫಿಕ್ ಪೊಲೀಸ್ನೋರು ಅನ್ನೋದು ಸಾರ್ವಜನಿಕರ ದೂರು. ಇವರು ಹೇಳಿ ಕೇಳಿ ಪೊಲೀಸ್ನೋರು, ಆದರೆ ಇವರ ವರ್ತನೆ ಮಾತ್ರ ಕಳ್ಳರ ಥರ. ಸಂದಿಯಲ್ಲಿ, ಮರದ ಮರೆಯಲ್ಲಿ, ಹಂಪ್ ಬಳಿ, ಗಾಡಿ ಸ್ಲೋ ಮಾಡೋ ಜಾಗಗಳಲ್ಲಿ ಹೊಂಚು ಹಾಕಿ ನಿಲ್ಲೋ ಇವರು, ಗಾಡಿ ಬಂದ ಕೂಡಲೇ ದೇವರ ಥರ ಪ್ರತ್ಯಕ್ಷ ಆಗ್ತಾರೆ. ಆದ್ರೆ, ವರ ಕೊಡಲ್ಲ. ಚಲನ್ ಕೊಡ್ತಾರೆ. ಫೈನ್ ಕಟ್ಟಿ ಅಂತಾರೆ. ನಿಮ್ಮತ್ರ ಏನೇ ಡಾಕ್ಯುಮೆಂಟ್ಸ್ ಇದ್ರೂ, ಏನಾದ್ರೂ ಮಾಡಿ ಒಂದು ಸಣ್ಣ ಎಮಿಷನ್ ಟೆಸ್ಟ್‌ನಾದ್ರೂ ಹುಡುಕಿ, ನಿಮ್ಮ ಗಾಡಿ ಸರಿಯಾಗಿ ಹೊಗೆ ಬಿಡ್ತಾ ಇಲ್ಲ ಅಂತ ಸಬೂಬು ಹೇಳಿ, ನಿಮ್ಮ ಹತ್ರ ಇರೋ ಅಲ್ಪ ಸ್ವಲ್ಪ ಚಿಲ್ಲರೆ ಕಾಸನ್ನೂ ಹೊಗೆ ಹಾಕಿಸಿ ಎಮಿಷನ್ ಟೆಸ್ಟ್ ನೆಪದಲ್ಲಿ ತಮ್ಮ ಕಮಿಷನ್ ಪಡೆಯದಿದ್ದರೆ ಅವರಿಗೆ ಸಮಾಧಾನ ಇರಲ್ಲ. ಈ ಆಟಾಟೋಪಕ್ಕೆ ಬ್ರೇಕ್ ಹಾಕಿ ಅಂತ ಸರಕಾರ ಬೇಕಾದಷ್ಟು ಸಲ ರೂಲ್ ತಂದಿದೆ. ಆದ್ರೆ, ಅದು ಪಾಲನೆ ಆಗ್ತಾ ಇಲ್ಲ. ಹಾಗಾಗಿ ಸರಕಾರದ ಈ 'ರೂಲ್ ಮಾಡೆಲ್' ವರ್ಕ್ ಆಗ್ತಾ ಇಲ್ಲ. ಈಗ ಸರಕಾರ, ಪೊಲೀಸರಿಗೆ ಅದೆಷ್ಟು ಬಾರಿ ಸೈಲೆಂಟಾಗಿ ಸೈಡಲ್ಲಿದ್ಬಿಡಿ ಅಂತ ಹೇಳಿದ್ರೂ, ಈ ಹಗಲು ದರೋಡೆಗೆ ಎಷ್ಟೇ ಅಡ್ಡಗಾಲು ಹಾಕಿದ್ರೂ, ಟ್ರಾಫಿಕ್ ಪೊಲೀಸ್ನೋರು ಸೈಲೆಂಟಾಗಿ ಸೈಡಲ್ಲಿ ನಿಂತು ಗಾಡಿಗಳಿಗೆ ಅಡ್ಡ ಹಾಕೋದನ್ನ ಮಾತ್ರ ಬಿಡಲ್ಲ. ಈ ಟ್ರಾಫಿಕ್ ಪೊಲೀಸ್ನೋರು, ಸರಕಾರದ ಆದೇಶ ಗಳನ್ನ ಈ ಕಡೆಯಿಂದ ಕೇಳಿಸ್ಕೊಂಡು, ಆ ಕಡೆಯಿಂದ ಗಾಡಿಗಳನ್ನ ಹಿಡೀತಾನೇ ಇರ್ತಾರೆ. 'ಏನೂ ಮಾಡೋಕಾಗಲ್ಲ, ನಮ್ಮ ದೇಶದಲ್ಲಿ ಯಾವ ಆದೇಶ ಗಳಿಗೂ ಬೆಲೆ ಇಲ್ಲ' ಅಂತ ನಮ್ಮ ಜನ ಕೂಡಾ ಸುಮ್ಮನಾಗಿಬಿಟ್ಟಿದ್ದಾರೆ.

ಸಂಪಾದಕರ ಸದ್ಯಶೋಧನೆ

ನಿಗೂಢ ಶಂಬಾಲ

ಇತ್ತೀಚೆಗೆ ನಾನು ಗಿರೀಶ ಶ್ರೀಪಾದ ಮೇವುಂಡಿ ಬರೆದ 'ಹಿಮಾಲಯದ ಸ್ವರ್ಗಸದೃಶ ರಹಸ್ಯ ನಗರದ ಶೋಧ ಕಥನ : ಶಂಬಾಲ ದಂತಕಥೆ - ಸಂಘರ್ಷ, ಹಿಮಾಲಯ ಮತ್ತು ಆಧ್ಯಾತ್ಮ' ಎಂಬ ಕೃತಿಯನ್ನು ಓದುತ್ತಿದ್ದೆ. ಶಂಬಾಲದ ಬಗ್ಗೆ ನಾನು ಮೊದಲು ಕೇಳಿದ್ದು ಪತ್ರಕರ್ತ ವೈಎನ್ಕೆ ಅವರಿಂದ. ಅವರು ಶಂಬಾಲದ ಬಗ್ಗೆ ಹೇಳುತ್ತಿದ್ದರೆ, ರೋಮಾಂಚನವಾಗುತ್ತಿತ್ತು. ಅದು ನಿಜವೋ, ಕಲ್ಪಿತ ಕಥೆಯೋ ಎಂದು ಅನುಮಾನ ಬರುತ್ತಿತ್ತು. ಕರ್ನಾಟಕದವರೇ ಆದ ಅಂಬರೀಷ ವರ್ಮ (ಮಹರ್ಷಿ ಅಮರ) ಅವರು ಶಂಬಾಲಕ್ಕೆ ಹೋಗಿ ಬಂದಿದ್ದರು ಎಂದು ವೈಎನ್ಕೆ ಹೇಳುತ್ತಿದ್ದರು. ಈ ಕುರಿತು ವೈಎನ್ಕೆ ತಮ್ಮ ಅಂಕಣ ಬರಹಗಳಲ್ಲಿ ಹಲವೆಡೆ ಶಂಬಾಲದ ಬಗ್ಗೆ ಪ್ರಸ್ತಾಪಿಸಿದ್ದುಂಟು. ಈ ವಿಶ್ವದಲ್ಲಿ ನಮಗೆ ತಿಳಿದಿರುವುದಕ್ಕಿಂತ ತಿಳಿಯದಿರುವುದು, ನಿಗೂಢವಾಗಿರುವುದೇ ಹೆಚ್ಚು. ನಿಗೂಢ ವಿಶ್ವದಲ್ಲಿರುವ ಅತ್ಯದ್ಭುತ, ವಿಸ್ಮಯಕಾರಿ ಹಾಗೂ ದಿವ್ಯ ತಾಣವೇ ಶಂಬಾಳ ಎಂದು ಮೇವುಂಡಿ ಹೇಳುತ್ತಾರೆ. ಮಹಾವಿಷ್ಣುವಿನ ಹತ್ತನೇ ಅವತಾರವಾದ ಕಲ್ಕಿಯು ಶಂಬಾಲದಲ್ಲಿಯೇ ಆವಿರ್ಭವಿಸಿ ಕಲಿಯುಗವನ್ನು ಅಂತ್ಯಗೊಳಿಸಿ ಸತ್ಯಯುಗವನ್ನು ಸ್ಥಾಪಿಸಿದನೆಂದು ನಂಬಲಾಗಿದೆ. ವೇದ-ಪುರಾಣ, ಮಹಾಭಾರತದಲ್ಲೂ ಶಂಬಾಲದ ಬಗ್ಗೆ ಪ್ರಸ್ತಾಪಿಸಲಾಗಿದೆ. ಶಂಬಾಲದಲ್ಲಿ ಸ್ವರ್ಗಕ್ಕೂ ಮಿಗಿಲಾದ ಸೌಕರ್ಯ, ವೈಭವಗಳನ್ನು ಒಳಗೊಂಡಿದೆಯೆಂದು ಲೇಖಕರು ಹೇಳುತ್ತಾರೆ. ಈ ಬ್ರಹ್ಮಾಂಡದ ಐದನೇ ಆಯಾಮದಲ್ಲಿ ಶಂಬಾಲವು ವ್ಯಸ್ತವಾಗಿರುವುದರಿಂದ ಇದು ಸಾಮಾನ್ಯರ ಕಣ್ಣಿಗೆ ಹಾಗೂ ಅರಿವಿಗೆ ನಿಲುಕದ ಅದೃಶ್ಯ ತಾಣವಾಗಿದೆ. ಇದು ವಾಯು ಮತ್ತು ಭೂಹೀನತಾ ಪ್ರದೇಶವಾಗಿದ್ದು ಇದು ಕಾಲನ ಅಂದರೆ ಸಮಯದ ಪರಿವ್ಯಾಪ್ತಿಗೆ ಒಳಪಡುವುದಿಲ್ಲ. ಹೀಗಾಗಿ ಶಂಬಾಲದ ನಿವಾಸಿಗಳಿಗೆ ವಯಸ್ಸಾಗದೇ ಸದಾ ಯೌವನದಿಂದ, ಆರೋಗ್ಯದಿಂದ ಹಾಗೂ ದಣಿವರಿಯದ ಉತ್ಸಾಹದೊಂದಿಗೆ ಕ್ರಿಯಾಶೀಲರಾಗಿರುವವರಂತೆ! ಆಧುನಿಕ ಕಲ್ಪನೆಗಳಲ್ಲಿ ಶಂಬಾಲ ಒಂದು ಪ್ರೇರಣಾದಾಯಕ ತತ್ತ್ವವಾಗಿದ್ದು ಇದು ಸಂಶೋಧಕರ, ಯಾತ್ರಿಕರ ಹಾಗೂ ದಾರ್ಶನಿಕರ ಆಕರ್ಷಣೆಯ ಕೇಂದ್ರವಾಗಿದೆ. ಅನೇಕ ಪುಸ್ತಕಗಳು ಮತ್ತು ಸಿನಿಮಾ ಶಂಬಾಲದ ರಹಸ್ಯವನ್ನು ಆಧರಿಸಿವೆ, ಜತೆಗೆ ಈ ಸ್ಥಳದ ಪ್ರೇರಣೆ ಮೂಲಕ ಹಲವು ಅಧ್ಯಾತ್ಮಿಕ ಪಥಗಳು ರೂಪುಗೊಂಡಿವೆ. ಶಂಬಾಲದ ಬಗ್ಗೆ ಲೇಖಕರು ಹೀಗೆ ಹೇಳುತ್ತಾರೆ - ಭಾರತೀಯ ಯೋಗಿಗಳು ಹಾಗೂ ಬೌದ್ಧ ಪಂಥೀಯ ಬಿಕ್ಕುಗಳು ಈ ದಿವ್ಯ ತಾಣವು ಹಿಮಾಲಯದ ನಿಗೂಢ ಪ್ರದೇಶದಲ್ಲಿ ವ್ಯಸ್ತವಾಗಿದೆ ಎಂದು ನಂಬಿದ್ದಾರೆ. ತಮ್ಮ ಯೋಗ ಸಾಧನೆಗಳ ಮೂಲಕ ಶಂಬಾಲದ ರಹಸ್ಯಗಳನ್ನು ಗುಪ್ತವಾಗಿ ಹುಡುಕುತ್ತಿರುತ್ತಾರೆ ಎನ್ನಲಾಗಿದೆ. ಹಿಮಾಲಯದ ಮಹಾನ್ ಸಂತ ಹಾಗೂ ಆಧ್ಯಾತ್ಮಿಕ ಮಹಾನ್ ಗುರು ಮಹಾವತಾರ ಬಾಬಾ ಶಂಬಾಲದೊಂದಿಗೆ ನಿಕಟ ಸಂಪರ್ಕದಲ್ಲಿದ್ದಾರೆ ಎನ್ನಲಾಗಿದೆ. ಇನ್ನು ಭಾರತದ ಮಹಾನ್ ಯೋಗಿಗಳಾದ ಸ್ವಾಮಿ ವಿಶುದ್ಧಾನಂದ (ಗಂಧ ಬಾಬಾ), ಸ್ವಾಮಿ ಕೃಷ್ಣ ಚೈತನ್ಯ (ಸಾಯಿ ಕಾಕಾ) ಹಾಗೂ ಶಂಬಾಲಕ್ಕೆ ಹೋಗಿ ಬಂದು ಅಲ್ಲಿನ ನಿಗೂಢ ಸಂಗತಿಗಳ ಕುರಿತು ಮಾಹಿತಿ ನೀಡಿದ್ದಾರೆ. ಒಟ್ಟಾರೆಯಾಗಿ ಶಂಬಾಲವು ಯೋಗ ಅಥವಾ ಆಧ್ಯಾತ್ಮಿಕ ಸಾಧಕರು ಬಯಸುವ ಪರಮೋಚ್ಚ ತಾಣವಾಗಿದ್ದು ಇದನ್ನು ಪಡೆಯುವುದು ಸಾಮಾನ್ಯರಿಗೆ ದುರ್ಲಭವಾದ ಸಂಗತಿಯಾಗಿದೆ.ಟಿಬೇಟಿಯನ್ನರ ಐತಿಹ್ಯವಲ್ಲದೇ ಈ ಪ್ರದೇಶದ ಕುರಿತು ಖ್ಯಾತ ಲೇಖಕ ರುಡ್‌ಯಾರ್ಡ್ ಕಿಪ್ಲಿಂಗ್ 1905ರಲ್ಲಿ ತಮ್ಮ ಕಾದಂಬರಿಯಲ್ಲಿ ಹಿಮಾಲಯದ ಈ ಪ್ರದೇಶದ ಕುರಿತು ಹೇಳಿದ್ದಾರೆ. ಇನ್ನು ಬ್ರಿಟಿಷ್ ಲೇಖಕ ಜೇಮ್ಸ್ ಹಿಲ್ಟನ್ 'ಲಾಸ್ಟ್ ಹಾರಿಜನ್' ಎಂಬ ಕೃತಿಯಲ್ಲಿ ಈ ಶಂಬಾಲದ ಕುರಿತು 1933 ರಲ್ಲೇ ವಿವರಿಸಿದ್ದಾರೆ. ಅವರು ಈ ಪ್ರದೇಶವನ್ನು ತುಂಬಾ ಚೆನ್ನಾಗಿ ವಿವರಿಸುತ್ತಾ ಇದನ್ನು 'ಭೂಮಿಯ ಮೇಲಿನ ಸ್ವರ್ಗ' ವೆಂದು ಬಣ್ಣಿಸಿದ್ದಾರೆ. 'ಲಾಸ್ಟ್ ಹಾರಿಜನ್' ಓದಿದ ಅನೇಕ ಪಾಶ್ಚಾತ್ಯರೂ ಈ ಪ್ರದೇಶದ ಶೋಧಕ್ಕಾಗಿ ಬಂದು ಹೋಗಿದ್ದಾರೆ. ಜರ್ಮನಿಯ ನಾಜಿ ಪಕ್ಷದ ನಾಯಕ ಹಿಟ್ಲರ್ ಕೂಡಾ ತನ್ನ ತಂಡವನ್ನು ಈ ನಿಗೂಢ ಪ್ರದೇಶದ ಹುಡುಕಾಟಕ್ಕಾಗಿ1938 ರಲ್ಲಿ ಕಳುಹಿಸಿದ್ದನಂತೆ! ಆ ತಂಡವು ಜರ್ಮನಿಯ ಸಂಶೋಧಕ ಅರ್ನೆಸ್ಟ್ ಶೆಫೈರ್ ಎಂಬಾತನ ಮಾರ್ಗದರ್ಶನದಲ್ಲಿ ಮುನ್ನಡೆದಿದ್ದು ಅವರು ಈ ಪ್ರದೇಶದ ಕುರುಹು ಇರಬಹುದಾದ ಕಡೆಯಲ್ಲಿ ಅಲ್ಲಿನ ವಾತಾವರಣ, ಜೀವ ವೈವಿಧ್ಯ ಹಾಗೂ ಭೌಗೋಳಿಕತೆಯನ್ನು ಅಧ್ಯಯನ ಮಾಡಿ ತನ್ನ ದೇಶಕ್ಕೆ ವರದಿಯನ್ನು ತೆಗೆದುಕೊಂಡು ಹೋದನಾದರೂ ಅವರಿಗೆ ಈ ಅದೃಶ್ಯ ಸ್ಥಳವನ್ನು ಪತ್ತೆ ಮಾಡಲಾಗಲಿಲ್ಲ ಎಂದು ಲೇಖಕರು ಹೇಳುತ್ತಾರೆ.

ಕೂದಲೆಳೆ ಅಂತರದಲ್ಲಿ ಅಮೃತ ವಿಷವಾಯಿತು!

ಹಿಂದಿರುಗಿ ನೋಡಿದಾಗ

ಡಾ.ನಾ.ಸೋಮೇಶ್ವರ
vveditoped@gmail.com

ಮಧ್ಯಯುಗದ ಯೂರೋಪಿನ ಹಲವು ದೇಶಗಳ ಅರಸರು ಮತ್ತು ಸಾಹಸೀ ನಾವಿಕರು ಭಾರತಕ್ಕೆ ಸಮುದ್ರ ಮಾರ್ಗವನ್ನು ಕಂಡು ಹಿಡಿಯಬೇಕೆಂದು ಸ್ಪರ್ಧೆಗಿಳಿದರು. ಭಾರತಕ್ಕೆ ಮಾರ್ಗವನ್ನು ಕಂಡುಹಿಡಿಯುವುದರ ಜತೆಯಲ್ಲಿ ದಕ್ಷಿಣ ಅಮೆರಿಕ ಮತ್ತು ಮಧ್ಯ ಅಮೆರಿಕವನ್ನು ಕಂಡು ಹಿಡಿದರು. ಅಲ್ಲಿರುವ ಸಂಪತ್ತನ್ನು ದೋಚಿದರು. ಅವರು ದೋಚಿದ ಚಿನ್ನದ ಜತೆಯಲ್ಲಿ, ಚಿನ್ನಕ್ಕಿಂತ ಅಮೂಲ್ಯವಾಗಿದ್ದ ಹಲವು ಸಸ್ಯಗಳಿದ್ದವು. ಅವುಗಳಲ್ಲಿ ಆರು ಸಸ್ಯಗಳು ಮುಖ್ಯವಾದವು.

ಸಿಂಕೋನ ಮರದ ತೊಗಟೆಯಿಂದ ಕ್ವಿನೈನ್ ಔಷಧವನ್ನು ರೂಪಿಸಿ ಮಲೇರಿಯವನ್ನು ನಿಗ್ರಹಿಸಿದೆವು.

ಕಾಂಡ್ರೋಡೆಂಡ್ರಾನ್ ಸಸ್ಯದಿಂದ ಟ್ಯೂಬೋಕ್ಯುರಾರಿನ್ ದೊರೆಯುತ್ತದೆ. ಗಂಭೀರವಾದ ಶಸ್ತ್ರಚಿಕಿತ್ಸೆಗಳನ್ನು ನಡೆಸಬೇಕಾದರೆ ಒಡಲ ಸ್ನಾಯುಗಳು ಸಡಿಲವಾಗಿರಬೇಕು. ಟ್ಯೂಬೋಕ್ಯುರಾರಿನ್ ಉತ್ತಮ ಸ್ನಾಯು ಸಡಿಲಕ.

ನಿಕೋಟಿಯಾನ ಸಸ್ಯ ಅಥವಾ ತಂಬಾಕು ಗಿಡವು ಮನುಷ್ಯನ ಸಪ್ತವ್ಯಸನಗಳಲ್ಲಿ ಒಂದಾದ ಧೂಮಪಾನದ ಚಟವನ್ನು ಉಂಟು ಮಾಡಿತು.

ಎರಿಥ್ರೋಕ್ಸೈಲಾನ್ ಮರದಿಂದ ಕೊಕೇನ್ ತಯಾರಿಸಿದೆವು. ಕೊಕೇನ್ ಚಟವನ್ನು ಉಂಟು ಮಾಡುವ ಮನುಕುಲ ಮಾರಕ ರಾಸಾಯನಿಕ.

ಥಿಯೋಬ್ರೋಮೋ ಕಕೋವ ಅಬಾಲವೃದ್ಧರಾದಿಯಾಗಿ ಎಲ್ಲರೂ ಸವಿಯುವ ಚಾಕೊಲೇಟನ್ನು ನಮಗೆ ನೀಡಿದೆ.

ಇನ್ನು ಸೋಲಾನಮ್ ಟ್ಯೂಬರೋಸಮ್ ಎನ್ನುವ ಗಿಡವು ಆಲೂಗಡ್ಡೆ ಎಂಬ ಅದ್ಭುತ ತರಕಾರಿಯನ್ನು ನಮಗೆ ನೀಡಿದೆ.

ಈ ಉಪಯುಕ್ತ ಹಾಗೂ ಮಾರಕ ಸಸ್ಯಗಳ ನಡುವೆ ಇಪಿಕಾಕುವಾನ ಎಂಬ ಸಸ್ಯವೊಂದು ಒಂದಷ್ಟು ಅಮೃತವೆಂಬಂತೆ ಒಂದಷ್ಟು ಕಾಲ ಕೀರ್ತಿಯನ್ನು ಗಳಿಸಿ, ಕೊನೆಗೆ ಅದು ಹಠಾತ್ತನೇ ಸಾವನ್ನು ಮಾಡಬಲ್ಲ ಮಹಾವಿಷ ಎಂದು ಗೊತ್ತಾಗಿ ಕಾಲಗರ್ಭದಲ್ಲಿ ಅಡಗಿತು. ದಕ್ಷಿಣ ಅಮೆರಿಕದ ಬುಡಕಟ್ಟು ಜನರು ರಕ್ತಭೇದಿಯನ್ನು ಹಾಗೂ ಜ್ವರವನ್ನು ನಿಲ್ಲಿಸಲು ಬಳಸುತ್ತಿದ್ದ ಈ ಮೂಲಿಕೆಯ ಇತಿಹಾಸವು ಒಂದು ರೋಚಕ ಕಥೆಯಾಗಿದೆ.

ಇಪಿಕಾಕುವಾನವು ದಕ್ಷಿಣ ಅಮೆರಿಕದಲ್ಲಿ ಬೆಳೆಯುವ ಸಸ್ಯ. ಯೂರೋಪಿಯನ್ನರು ದಕ್ಷಿಣ ಅಮೆರಿಕಕ್ಕೆ ಬಂದು ತಮಗೆ ಬೇಕಾದುದನ್ನೆಲ್ಲ ಕೊಳ್ಳೆ ಹೊಡೆದುಕೊಂಡು ಹೋಗುವಾಗ, ಕೆಲವರ ಕಣ್ಣು ಗಿಡಮರಗಳ ಮೇಲೆ ಬಿತ್ತು. ಪೆರು ದೇಶದಲ್ಲಿ ಬೆಳೆಯುವ ಸಿಂಕೋನ ಮರದ ತೊಗಟೆಯ ಉಪಯುಕ್ತತೆಯನ್ನು ಮನಗಂಡ ಯೂರೋಪಿಯನ್ನರು ಅಂತಹುದೇ ಸಸ್ಯಗಳ ಅನ್ವೇಷಣೆಯಲ್ಲಿದ್ದರು. ಜಿಯೋರ್ಗ್ ಮಾರ್ಗ್ರಾಫ್ (1610-1644) ಎಂಬ ಜರ್ಮನ್ ನಿಸರ್ಗವಾದಿ ಹಾಗೂ ವಿಲ್ಲಮ್ ಪೈಸೋ (1611-1678) ಎಂಬ ವೈದ್ಯ ಮತ್ತು ನಿಸರ್ಗವಾದಿ 1638ರಲ್ಲಿ ಬ್ರೆಜಿಲ್ ದೇಶಕ್ಕೆ ಬಂದರು. 10 ವರ್ಷಗಳ ನಂತರ ಬ್ರೆಜಿಲಿನಲ್ಲಿ ತಾವು ಸಂಗ್ರಹಿಸಿದ ಗಿಡಮರಗಳ ಮಾಹಿತಿಯನ್ನೆಲ್ಲ ಸೇರಿಸಿ ಹಿಸ್ಟೋರಿಯ ನ್ಯಾಚುರಾಲಿಸ್ ಬ್ರೆಜಿಲಿಯೆ ಎನ್ನುವ ಗ್ರಂಥವನ್ನು ಪ್ರಕಟಿಸಿದರು. ಈ ಗ್ರಂಥವು ಆಧುನಿಕ ವಿಜ್ಞಾನದ ಸರ್ವತೋಮುಖ ಬೆಳವಣಿಗೆಗೆ ನೆರವಾಗಿದೆ. ಇದರಲ್ಲಿ ಮೊದಲ ಬಾರಿಗೆ ಇಪಿಕಾಕುವಾನದ ಪ್ರಸ್ತಾಪವಾಗಿದೆ. ಲೀ ಗ್ರಾಸ್ ಎಂಬ ವೈದ್ಯನು ದಕ್ಷಿಣ ಅಮೆರಿಕದಿಂದ ಪ್ಯಾರಿಸ್ಸಿಗೆ ಅಪಾರ ಪ್ರಮಾಣದ ಇಪಿಕಾಕುವಾನದ ಬೇರನ್ನು ಹೊತ್ತು ತಂದ. ಪ್ಯಾರಿಸ್ಸಿನ ವೈದ್ಯರು ಭೇದಿ ಮತ್ತು ಜ್ವರವನ್ನು ನಿಲ್ಲಿಸಲು ಇಪಿಕಾಕುವಾನ ಪುಡಿಯನ್ನು ಯಶಸ್ವಿಯಾಗಿ ಬಳಸಿದರು. ಇಪಿಕಾಕುವಾನಕ್ಕೆ ರಾಜದೃಷ್ಟಿಯನ್ನು ದೊರಕಿಸಿದ್ದು ಜೀನ್ ಆಡ್ರಿಯನ್ ಹೆವಲೇಟಿಕಸ್ (1661-1727) ಎಂಬ ವೈದ್ಯ. ಫ್ರಾನ್ಸ್ ಸಾಮ್ರಾಜ್ಯದ ರಾಜಕುಮಾರ ಡಾಫಿನ್‌ನನಿಗೆ ತುಂಬ ದಿನಗಳಿಂದ ವಿಪರೀತ ಭೇದಿಯಾಗುತ್ತಿತ್ತು. ಹೆವಲೇಟಿಕಸ್ ಇಪಿಕಾಕುವಾನದ ಬೇರಿನ ಪುಡಿಯನ್ನು ನೀಡಿದ. ಭೇದಿಯು ತಕ್ಷಣ ನಿಂತಿತು. ಆತ ಪೂರ್ಣ ರೂಪದಲ್ಲಿ ಚೇತರಿಸಿಕೊಂಡ. ಫ್ರಾನ್ಸಿನ ಅರಸ ಲೂಯಿ-14 (1638-1715) ನಿಗೆ ಬಹಳ ಸಂತೋಷವಾಯಿತು. ಕೂಡಲೇ ಅರಸನು, ಫ್ರಾನ್ಸ್ ದೇಶದಲ್ಲಿ ಇಪಿಕಾಕುವಾನದ ಬೇರು ಮತ್ತು ಪುಡಿಯನ್ನು ಮಾರುವ ಪರಿಪೂರ್ಣ ಅಧಿಕಾರವನ್ನು ಹೆವಲೇಟಿಕಸನಿಗೆ ನೀಡಿದ. ಇದರ ಪರಿಪೂರ್ಣ ಲಾಭವನ್ನು ಪಡೆದ ಹೆವಲೇಟಿಕಸ್ ಅತ್ಯಲ್ಪಕಾಲದಲ್ಲಿ ಶ್ರೀಮಂತನಾದ. ಇದನ್ನು ಕಂಡ ಫ್ರೆಂಚ್ ಸರಕಾರಕ್ಕೆ ಹೊಟ್ಟೆ ಉರಿ ಬಂತು. ಅರಸನು ತಪ್ಪು ತೀರ್ಮಾನವನ್ನು ತೆಗೆದುಕೊಂಡ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಕೂಡಲೇ 1000 ಚಿನ್ನದ ನಾಣ್ಯಗಳನ್ನು ನೀಡಿ, ಹೆವಲೇಟಿಕಸನಿಗೆ ನೀಡಿದ್ದ ಅನುಮತಿಯನ್ನು ಸರಕಾರವು ಹಿಂದಕ್ಕೆ ಪಡೆಯಿತು.

18ನೆಯ ಶತಮಾನದ ಯೂರೋಪಿನಲ್ಲಿ ಇಪಿಕಾಕುವಾನದ ಬೇರಿನ ಪುಡಿಯು ಅಪಾರ ಜನಪ್ರೀತಿಯನ್ನು ಗಳಿಸಿತು. ವೈದ್ಯರು ತಮ್ಮ ಅನುಭವದಿಂದ ಕೆಲವು ಸತ್ಯಗಳನ್ನು ಮನಗಂಡಿದ್ದರು. ಪುಡಿಯನ್ನು ಕಡಿಮೆ ಪ್ರಮಾಣದಲ್ಲಿ ನೀಡಿದರೆ ಅದು ಬೆವರನ್ನು ಹರಿಸುತ್ತಿತ್ತು. ಬೆವರು ಹರಿಯುವಾಗ, ಅದು ತನ್ನೊಡನೆ ಸಾಕಷ್ಟು ಶರೀರದ ಉಷ್ಣಾಂಶವನ್ನು ಪರಿಸರದೊಳಗೆ ಹರಿಸುತ್ತಿತ್ತು. ಹಾಗೆಯೇ ಅದು ಶ್ವಾಸಕೋಶಗಳಲ್ಲಿ ಗಟ್ಟಿಯಾಗಿರುವ ಕಫವನ್ನು ಕರಗಿಸಿ ಹೊರಬರಲು ನೆರವಾಗುತ್ತಿತ್ತು. ಇದೇ ಪುಡಿಯನ್ನು ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಬಳಸಿದರೆ, ಅದು ವಾಂತಿ ಮತ್ತು ಭೇದಿಯನ್ನು ಉಂಟು ಮಾಡುತ್ತಿತ್ತು. ಅಂದಿನ ದಿನಗಳಲ್ಲಿ ಹಿಪ್ಪೋಕ್ರೇಟ್ಸ್ ಮಂಡಿಸಿದ್ದ ರಸ ಸಿದ್ಧಾಂತವನ್ನು (ಹ್ಯೂಮರ ಥಿಯರಿ) ವೈದ್ಯರು ಪರಿಪಾಲಿಸುತ್ತಿದ್ದರು. ನಮ್ಮ ದೇಹದಲ್ಲಿ ರಕ್ತ, ಕಫ, ಹಳದಿ ಪಿತ್ತ ಮತ್ತು ಕಪ್ಪು ಪಿತ್ತ ಎಂಬ ರಸಗಳಿವೆ. ಈ ನಾಲ್ಕು ರಸಗಳು ಸಮವಾಗಿದ್ದಾಗ ಆರೋಗ್ಯ; ವಿಷಮವಾಗಿದ್ದಾಗ ಅನಾರೋಗ್ಯ ಉಂಟಾಗುತ್ತದೆ ಎನ್ನುವುದು ಈ ಸಿದ್ಧಾಂತದ ತಿರುಳು. ಹಾಗಾಗಿ ಸಮರಸವನ್ನು ಸಾಧಿಸಲು ರಕ್ತವಿಮೋಚನವನ್ನು ಮಾಡುತ್ತಿದ್ದರು. ವಾಂತಿ ಮತ್ತು ಭೇದಿಯನ್ನು ಮಾಡಿಸುತ್ತಿದ್ದರು. ಅದಕ್ಕಾಗಿ ಇಪಿಕಾಕುವಾನದ ಪುಡಿಯನ್ನು ಬಳಸುತ್ತಿದ್ದರು. 18ನೆಯ ಶತಮಾನದ ಪ್ಯಾರಿಸ್ ನಗರವು ವಿಷ ಪ್ರಾಶನಕ್ಕೆ ಪ್ರಸಿದ್ಧವಾಗಿತ್ತು. ಯಾರು ಯಾರಿಗೆ ಯಾವಾಗ ಯಾವ ರೀತಿಯ ವಿಷವನ್ನು ಹಾಕುತ್ತಾರೋ ಎನ್ನುವ ಭೀತಿಯು ಸದಾ ಕಾಡುತ್ತಿತ್ತು. ಅಂದಿನ ದಿನಗಳಲ್ಲಿ ಶಂಖಪಾಷಾಣ (ಅರ್ಸೆನಿಕ್) ಆಂಟಿಮನಿ, ಹೆನ್ಬೇನ್‌ಗಳನ್ನು ವಿಷವಸ್ತುಗಳನ್ನಾಗಿ ಬಳಸುತ್ತಿದ್ದರು. ಆಹಾರದ ಮೂಲಕ ಹಾಕಿದ ವಿಷವನ್ನು ಹೊರತೆಗೆಯಲು ವಮನವೇ ಪ್ರಧಾನ ಮಾರ್ಗವಾಗಿತ್ತು. ಹಾಗಾಗಿ ವಾಂತಿಯನ್ನು ಮಾಡಿಸಲು ಇಪಿಕಾಕುವಾನವನ್ನು ಧಾರಾಳವಾಗಿ ಬಳಸುತ್ತಿದ್ದರು.

ಥಾಮಸ್ ಡೋವರ್ (1660-1742) ಓರ್ವ ಇಂಗ್ಲಿಷ್ ವೈದ್ಯ. ಡೋವರ್ ಪಲ್ವಿಸ್ ಇಪಿಕಾಕುವನ ಅಥವ ಡೋವರ್ಸ್ ಪೌಡರ್ ತಯಾರಿಸಿದ. ಇದು ಸುಮಾರು 200 ವರ್ಷಗಳವರೆಗೆ ತನ್ನ ಖ್ಯಾತಿಯನ್ನು ಉಳಿಸಿಕೊಂಡಿತು. ಅಂದಿನ ಯೂರೋಪಿನಲ್ಲಿ, ಕಾಲ್ಚಿಸಿನ್ ಎಂಬ ಔಷಧವು ಬರುವವರಿಗೂ, ಕೀಲುವಾತಕಿ ಅಥವ ಗೌಟ್ ಗುಣಪಡಿಸಲು ಡೋವರ್ಸ್ ಪೌಡರ್ ಬಳಸುತ್ತಿದ್ದರು. ಡೋವರ್ಸ್ ಪೌಡರಿನಲ್ಲಿ ಇಪಿಕಾಕುವಾನ, ಅಫೀಮು, ಸಾಲ್ಟ್ ಪೀಟರ್ (ಪೊಟಾಷಿಯಂ ನೈಟ್ರೇಟ್) ಮತ್ತು ಕ್ರೀಮ್ ಆಫ್ ಟಾರ್ಟರ್ (ಪೊಟಾಷಿಯಂ ಬೈಟಾರ್ಟ್ರೇಟ್) ಗಳಿದ್ದವು. ಡೋವರ್, ಸಣ್ಣಪುಟ್ಟ ಜ್ವರಗಳನ್ನು ಗುಣಪಡಿಸಲು ಅಲ್ಪ ಪ್ರಮಾಣದ ಪುಡಿಯನ್ನು ನೀಡುತ್ತಿದ್ದ. ರಕ್ತಭೇದಿ (ಅಮೀಬಿಯಾಸಿಸ್) ಅಥವ ಕೀಲುವಾತಕಿಯಲ್ಲಿ ಅಧಿಕ ಪ್ರಮಾಣದ ಪೌಡರನ್ನು ನೀಡುತ್ತಿದ್ದ.

18ನೆಯ ಶತಮಾನವು ಮುಗಿದು, 19ನೆಯ ಶತಮಾನವು ಆರಂಭವಾಗುವ ವೇಳೆಗೆ ರಸಾಯನ ವಿಜ್ಞಾನ, ಸಸ್ಯ ವಿಜ್ಞಾನ ಹಾಗೂ ಔಷಧ ವಿಜ್ಞಾನ ಹೊಸ ಪರಿಕಲ್ಪನೆಗಳು ಉದಯಿಸಿದವು. ಅವುಗಳ ನೇರ ಪರಿಣಾಮವು ವೈದ್ಯಕೀಯ ಚಿಕಿತ್ಸೆಯ ಸ್ವರೂಪವನ್ನೇ ಬದಲಿಸಿದವು. ಈ ಬದಲಾವಣೆಗೆ ಮೂವರು ಕಾರಣರಾಗಿದ್ದರು. ಅಂಗಕ್ರಿಯಾ ವಿಜ್ಞಾನಿ ಫ್ರಾಂಕೋಯಿಸ್ ಮೆಗಂಡಿ (1783-1855), ಆಲ್ಕಲಾಯ್ಡ್‌ಗಳನ್ನು ಆವಿಷ್ಕರಿಸಿದ ಪಿಯರಿ ಜೋಸೆಫ್ ಪೆಲ್ಲೆಟಿಯರ್ (1788-1842) ಮತ್ತು ಔಷಧ ತಯಾರಿಕಾ ವಿಜ್ಞಾನಿಯಾಗಿದ್ದ ಜೋಸೆಫ್ ಬಿಯಾನಮಿ ಕೆವೆಂಟು (1795-1877). ಈ ತ್ರಿಮೂರ್ತಿಗಳ ತಂಡವು ಸಸ್ಯದಲ್ಲಿ ನಿಗದಿತ ಗುಣಲಕ್ಷಣಗಳಿಗೆ ಕಾರಣವಾಗುವ ಆಲ್ಕಲಾಯ್ಡ್‌ಗಳನ್ನು ಪತ್ತೆಹಚ್ಚಿದರು. ಅವರು ಪತ್ತೆ ಹಚ್ಚಿದ ಆಲ್ಕಲಾಯ್ಡ್‌ಗಳಲ್ಲಿ ಎಮೆಟಿನ್, ಬ್ರೂಸಿನ್, ಸ್ಟ್ರಿಕ್ನಿನ್ ಮತ್ತು ಕ್ವಿನೈನ್ ಮುಖ್ಯವಾದವು. ಇವರ ಜತೆಯಲ್ಲಿ ಮ್ಯಾಥ್ಯೂ ಜೋಸೆಫ್ ಬೊನಾವೆಂಚರ್ ಆರ್ಫಿಲ (1787-1853) ಸೇರಿಕೊಂಡ. ಈತನನ್ನು ಆಧುನಿಕ ವಿಷವಿಜ್ಞಾನದ ಪಿತಾಮಹ ಎಂದು ಕರೆಯುವುದುಂಟು. ಆಲ್ಕಲಾಯ್ಡ್‌ಗಳು ಯಾವ ರೀತಿಯ ವಿಷ ದುಷ್ಪರಿಣಾಮಗಳನ್ನು ಬೀರಬಹುದು ಎನ್ನುವ ಬಗ್ಗೆ ಪ್ರಾಣಿಗಳಲ್ಲಿ ಅಧ್ಯಯನವನ್ನು ಮಾಡಿ ಉಪಯುಕ್ತ ಆಲ್ಕಲಾಯ್ಡ್‌ಗಳು ಮನುಕುಲಕ್ಕೆ ದೊರೆಯುವಂತೆ ಮಾಡಿದ.

1850 ರಿಂದ 1900ರವರೆಗೆ ಐವತ್ತು ವರ್ಷಗಳು ಸೂಕ್ಷ್ಮಜೀವಿವಿಜ್ಞಾನ ಹಾಗೂ ರೋಗ ವಿಜ್ಞಾನಗಳ ಪಾಲಿಗೆ ಸುವರ್ಣಯುಗವೆನಿಸಿತು. ಈ ಅವಧಿಯು ವೈದ್ಯಕೀಯ ವಿಜ್ಞಾನವನ್ನು ಆಧುನಿಕತೆಯತ್ತ ಕರೆದೊಯ್ದಿತು. ಈ ವೇಳೆಗೆ ಸಂಯುಕ್ತ ಸೂಕ್ಷ್ಮದರ್ಶಕ (ಕಾಂಪೌಂಡ್ ಮೈಕ್ರೋಸ್ಕೋಪ್) ನಿರ್ಮಾಣವಾಗಿತ್ತು. ಸೂಕ್ಷ್ಮಜೀವಿಗಳನ್ನು ವರ್ಗೀಕರಿಸಲು ನೆರವಾಗುವ ಬಣ್ಣಗಟ್ಟುವಿಕೆಯ ತಂತ್ರಜ್ಞಾನವು (ಸ್ಟೇಯ್ನಿಂಗ್) ಅಸ್ತಿತ್ವಕ್ಕೆ ಬಂದಿತ್ತು. ಸೂಕ್ಷ್ಮಜೀವಿಗಳನ್ನು ಪ್ರಯೋಗಾಲದಲ್ಲಿ ಬೆಳೆಸುವ ಕೃಷಿಕೆಯ (ಕಲ್ಚರ್) ತಂತ್ರಜ್ಞಾನವು ಅಭಿವೃದ್ಧಿಗೊಂಡಿತು. 1975. ರಷ್ಯನ್ ರೋಗ ಶಾಸ್ತ್ರಜ್ಞ ಫ್ಯೋದೋರ್ ಅಲೆಗ್ಸಾಂಡ್ರೋವಿಚ್ ಲೆಶ್ (1840-1903)ಮಾರ್ಕೋಫ್‌ಎನ್ನುವರೋಗಿಯುರಕ್ತಭೇದಿಯಿಂದ ನರಳುತ್ತಿದ್ದ. ಅವನ ಮಲವನ್ನು ಪರೀಕ್ಷಿಸುತ್ತಿರುವಾಗ ಒಂದು ಅಮೀಬದಂತಹ ಜೀವಿಯು ಅದರಲ್ಲಿ ಕಂಡು ಬಂದಿತು. ಮುಂದೆ ಈ ಅಮೀಬ ರೀತಿಯ ಜೀವಿಗೆ ಎಂಟಮೀಬ ಹಿಸ್ಟೋಲೈಟಿಕ ಎಂದು ನಾಮಕರಣವನ್ನು ಮಾಡಿದರು. ಈ ಆದಿಜೀವಿಯು ಅಮೀಬಿಕ ಆಮಶಂಕೆ ಅಥವ ರಕ್ತಭೇದಿಗೆ ಕಾರಣವಾಗಿತ್ತು.

ಇಪಿಕಾಕುವಾನಕ್ಕೆ ಕ್ಯಾರಾಪೀಕಿಯ ಇಪಿಕಾಕುವಾನ ಎಂದು ವೈಜ್ಞಾನಿಕವಾಗಿ ನಾಮಕರಣವನ್ನು ಮಾಡಿದರು. ಇಪಿಕಾಕುವಾನದ ಬೇರಿನಲ್ಲಿ ಎಮೆಟಿನ್ ಮತ್ತು ಸೆಫಾಲಿನ್ ಎಂಬ ಎರಡು ಮುಖ್ಯ ಆಲ್ಕಲಾಯ್ಡ್‌ಗಳು ದೊರೆತವು. ಲಂಡನ್ನಿನ ವೈದ್ಯ ಲಿಯೋನಾರ್ಡ್ ರೋಗರ್ಸ್ (1868-1962) ಅಂದಿನ ಕೋಲ್ಕತಾದಲ್ಲಿ ಕೋಲ್ಕತಾ ಉಷ್ಣವಲಯದ ರೋಗಗಳ ವೈದ್ಯಕೀಯ ವಿದ್ಯಾಲಯವನ್ನು ಸ್ಥಾಪನೆಯಲ್ಲಿ ಪ್ರಧಾನ ಪಾತ್ರವಹಿಸಿದ್ದ. ಕಾಲ ಅಜ಼ರ್, ಹಾವಿನ ಕಡಿತ, ಕಾಲರ, ಕುಷ್ಠ ಮುಂತಾದ ರೋಗಗಳ ನಿಯಂತ್ರಣಕ್ಕೆ ಕ್ರಮಬದ್ಧ ಚಿಕಿತ್ಸೆಯನ್ನು ರೂಪಿಸಿದ್ದ. ಇವನು ಪರಿಶುದ್ಧ ಎಮಿಟಿನ್‌ನನ್ನು ಅಮೀಬಿಕ್ ಆಮಶಂಕೆಯ ರೋಗಿಗಳ ಮೇಲೆ ಪ್ರಯೋಗಿಸಿದ. ಎಮೆಟಿನ್‌ನನ್ನು ಇಂಜಕ್ಷನ್ ಮೂಲಕ ನೀಡಿದರೆ, ಅದು ರಕ್ತಭೇದಿಯನ್ನು ತಕ್ಷಣವೇ ನಿಲ್ಲಿಸುತ್ತದೆ ಎಂದ. ಆದರೆ ಎಮೆಟಿನ್ ಅಮೃತವಾಗುವ ಇಲ್ಲವೇ ವಿಷವಾಗುವ ಅಂತರವು ಕೂದಲೆಳೆಯಷ್ಟು ಸೂಕ್ಷ್ಮವಾಗಿದೆ ಎನ್ನುವುದನ್ನು ಗಮನಿಸಿದ. ಎಮೆಟಿನ್ ಹಲವರ ಹೃದಯದ ಮೇಲೆ ತೀವ್ರ ಪಾರ್ಶ್ವಪರಿಣಾಮವನ್ನು ಉಂಟು ಮಾಡಿ ಹಠಾತ್ ಸಾವಿಗೆ ಕಾರಣವಾಗುವುದನ್ನು ಮನಗಂಡ. ಹಾಗಾಗಿ ಎಮೆಟಿನ್ ಖ್ಯಾತಿಯು ಅತ್ಯಲ್ಪಕಾಲದಲ್ಲಿಯೇ ಧರೆಗಿಳಿಯಿತು. 1950ರ ದಶಕದಲ್ಲಿ ಡೈಲಾಕ್ಸನಾಯ್ಡ್ ಮತ್ತು ಮೆಟ್ರೋನಿಡಜ಼ೋಲ್ ಎಂಬ ಸುರಕ್ಷಿತ ಔಷಧಗಳು ಮಾರುಕಟ್ಟೆಗೆ ಬಂದವು. ಹಾಗಾಗಿ ರಕ್ತಭೇದಿಗೆ ಎಮೆಟಿನ್ ಕೊಡುವ ಪದ್ಧತಿಯು ಪೂರ್ಣವಾಗಿ ನಿಂತುಹೋಯಿತು.

ಇಪಿಕಾಕುವಾನವು ವಮನವನ್ನು ಉಂಟು ಮಾಡುವ ಪ್ರಬಲ ಔಷಧ. ವಮನಕ್ಕೆ ಕಾರಣ ಎಮೆಟಿನ್ ಮತ್ತು ಸೆಫಾಲಿನ್. ಸೆಫಾಲಿನ್ ಎಮೆಟಿನ್‌ಗಿಂತಲೂ ಶಕ್ತಿಶಾಲಿಯಾದದ್ದು. ಇದು ನೇರವಾಗಿ ಅನ್ನನಾಳ ಮತ್ತು ಜಠರವನ್ನು ಕೆರಳಿಸಿ ವಾಂತಿಯನ್ನು ಉಂಟು ಮಾಡುವುದರ ಜತೆಯಲ್ಲಿ, ಕರುಳಿನ ಮೂಲಕ ರಕ್ತಪ್ರವಾಹದಲ್ಲಿ ಬೆರೆತು ಮಿದುಳಿನ ಮೆಡುಲ್ಲಾ ಅಬ್ಲಾಂಗಟವನ್ನು ತಲುಪಿ ಅಲ್ಲಿರುವ ವಮನ ಕೇಂದ್ರವನ್ನು ಕೆರಳಿಸುತ್ತದೆ. ಹಾಗಾಗಿ ವಾಂತಿಯಾಗುತ್ತದೆ. ವಿಷಪ್ರಾಶನವಾದ ಪ್ರಕರಣಗಳಲ್ಲಿ ಇಪಿಕಾಕ್ ಸಿರಪ್ ಕೊಡುತ್ತಿದ್ದರು. ಔಷಧವನ್ನು ಸೇವಿಸಿದ 20 ನಿಮಿಷಗಳಲ್ಲಿ ವಾಂತಿಯಾಗುತ್ತಿತ್ತು. ಇದು ಶೇ.90ರಷ್ಟು ಪ್ರಕರಣಗಳಲ್ಲಿ ಸುರಕ್ಷಿತವಾಗಿ ಕೆಲಸ ಮಾಡುತ್ತಿತ್ತು. ಆದರೆ ಕೆಲವರಲ್ಲಿ ಮಾತ್ರ ಅನ್ನನಾಳ ಅಥವ ಜಠರವನ್ನು ಛಿದ್ರ ಛಿದ್ರಗೊಳಿಸುತ್ತಿತ್ತು. ಹಾಗಾಗಿ ಈಗ ಇಪಿಕಾಕುವಾನವನ್ನು ವಮನಕಾರಿಯಾಗಿ ಬಳಸುವ ಪದ್ಧತಿಯೂ ನಿಂತು ಹೋಗಿದೆ. ಆಕ್ಟಿವೇಟೆಡ್ ಚಾರ್ಕೋಲ್‌ನ್ನು ಬಳಸಲಾಗುತ್ತಿದೆ.

ಇಂದು ಇಪಿಕಾಕುವಾನದ ಬಳಕ್ಕೆ ಪೂರ್ಣ ನಿಂತಿದೆ. ಆದರೆ ಉಷ್ಣವಲಯದ ರೋಗಗಳ ಚಿಕಿತ್ಸಾ ಇತಿಹಾಸದಲ್ಲಿ ಇಪಿಕಾಕುವಾನಕ್ಕೆ ಅಚ್ಚಳಿಯದ ಸ್ಥಾನವು ಸ್ಥಿರವಾಗಿದೆ.

ರಾಜನೀತಿ ಬದಲು ಯುವನೀತಿ: ಮೋದಿ ಮಂತ್ರ

ಅಭಿಮತ

ಡಿ.ಎಸ್.ಅರುಣ್
vveditoped@gmail.com

ಸತತ ಮೂರನೇ ಬಾರಿಗೆ ಪ್ರಚಂಡ ಜನಾದೇಶದಿಂದ ದೇಶದ ಆಡಳಿತ ಚುಕ್ಕಾಣಿ ಹಿಡಿದಿರುವ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರವು ತನ್ನ ಮೊದಲ ಪೂರ್ಣ ಪ್ರಮಾಣದ ಆಯವ್ಯಯ ಪತ್ರವನ್ನು ಸಂಸತ್ತಿನ ಮುಂದೆ ಮಂಡಿಸಿದೆ. ಸರಕಾರಕ್ಕೆ ಬರುವ ಆದಾಯಗಳನ್ನು ಕ್ರೋಢೀಕರಿಸಿ, ಸರಕಾರದ ಆದ್ಯತಾ ವಲಯಗಳನ್ನು ನಿರ್ಧರಿಸಿ, ಅವುಗಳಿಗೆ ತಗಲುವ ವೆಚ್ಚಕ್ಕೆ ಅನುದಾನ ಹಂಚಿಕೆ ಮಾಡುವ ಆರ್ಥಿಕ ಸಾಧನವೇ ಬಜೆಟ್. ಪ್ರತಿಯೊಂದು ಸರಕಾರಕ್ಕೂ ತನ್ನದೇ ಆದ ಆದ್ಯತಾ ವಲಯಗಳಿರುತ್ತವೆ; ಸರಕಾರಕ್ಕೆ ಬರುವ ಒಟ್ಟು ಆದಾಯವನ್ನು ಪರಾಮರ್ಶಿಸಿ, ವೆಚ್ಚಗಳನ್ನು ಸರಿದೂಗಿಸಿ, ಉಳಿತಾಯದ ಹಣದಲ್ಲಿ ಘೋಷಿಸಬಹುದಾದ ಘೋಷಣೆಗಳನ್ನು ಕೇಂದ್ರ ಸರಕಾರದ ಬಜೆಟ್‌ನಲ್ಲಿ ಕಾಣಬಹುದು.

ಬದಲಾದ ರಾಜಕೀಯದಲ್ಲಿ ರಾಜ್ಯದ ಬಜೆಟ್‌ಗಳನ್ನು ಫ್ರೀಬೀಸ್‌ಗಳ ಮೂಲಕ ವೈಭವೀಕರಿಸಲಾಗುತ್ತಿದೆ. ಈ ಉಚಿತವೆಂಬ ಚಕ್ರವ್ಯೂಹದ ನಡುವೆ ಕೇಂದ್ರ ಸರಕಾರವೂ ಹೆಚ್ಚಿನ ಸಂಖ್ಯೆಯ ಫ್ರೀಬೀಸ್ ಘೋಷಿಸಬಹುದೆಂದು ಎಲ್ಲರೂ ಭಾವಿಸುತ್ತಿದ್ದರು ಮತ್ತು ಫ್ರೀಬೀಸ್ ಘೋಷಣೆ ಇಂದಿನ ರಾಜನೀತಿಯ ಅತ್ಯವಶ್ಯಕ ಭಾಗವಾಗಿದೆ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ಆದರೆ ರಾಜನೀತಿಯನ್ನು; ಫ್ರೀಬೀಸ್‌ಗಳ ಚಕ್ರವ್ಯೂಹವನ್ನು; ಬಾಹ್ಯ ಮತ್ತು ಆಂತರಿಕ ಒತ್ತಡವನ್ನು; ಪ್ರತಿ ವರ್ಗದ ಒತ್ತಾಸೆಗಳನ್ನು ಗಮನದಲ್ಲಿಟ್ಟುಕೊಂಡು ಭವಿಷ್ಯದ ದೃಷ್ಟಿಯಿಂದ ದೇಶದ ಯುವಕರಿಗಾಗಿ ರಾಜನೀತಿಯ ಬದಲಾಗಿ ಮೋದಿಯವರು ಯುವನೀತಿಯನ್ನು ಒಪ್ಪಿಕೊಂಡಿದ್ದಾರೆ ಎನ್ನುವುದು ಈ ಬಾರಿಯ ಬಜೆಟ್‌ನಿಂದ ಸ್ಪಷ್ಟವಾಗುತ್ತದೆ.

ಒಂಬತ್ತು ಆದ್ಯತೆಯ ವಲಯವನ್ನು ಗುರುತಿಸಿರುವ ಕೇಂದ್ರದ ಬಜೆಟ್‌ನಲ್ಲಿ ಎರಡನೇ ಆದ್ಯತಾ ವಲಯವೇ ಕೌಶಲ್ಯ ಅಭಿವೃದ್ಧಿ.

-ಒಬ್ಬ ಕೈಗಾರಿಕೋದ್ಯಮಿಯಾಗಿ ಹಾಗೂ ಶಿವಮೊಗ್ಗ ಜಿಲ್ಲೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯ ನಿರ್ದೇಶಕನಾಗಿ ನಾನು ಹಲವಾರು ವೇದಿಕೆಗಳಲ್ಲಿ ಈಗಾಗಲೇ ಪ್ರಸ್ತಾಪಿಸಿರುವ ವಿಷಯವೇನೆಂದರೆ. ವಿದ್ಯಾರ್ಥಿಗಳು ಕೇವಲ ಪದವಿಯನ್ನು ಪಡೆಯದೇ, ಉದ್ಯೋಗ ಕ್ಷೇತ್ರದಲ್ಲಿ ಬೇಕಾದ ಕೌಶಲ್ಯಗಳನ್ನು ಪಡೆದುಕೊಂಡರೆ ಯುವಕರಿಗೆ ತಮ್ಮ ಓದಿಗೆ ತಕ್ಕುದಾದ ಕೆಲಸ ದೊರೆಯುವುದು ಹಾಗೂ ದೇಶದ ನಿರುದ್ಯೋಗ ಸಮಸ್ಯೆಗೆ ಉತ್ತರ ದೊರಕುವುದು.

ಸಾಮಾನ್ಯವಾಗಿ ಒಬ್ಬ ಉತ್ತಮ ಕೆಲಸಗಾರನಿಗೆ ಯಾವಾಗಲೂ ಕೆಲಸದ ಅವಕಾಶಗಳು ಸಿದ್ಧವಾಗಿರುತ್ತವೆ ಆದರೆ ಕೆಲಸ ಕೇಳಿಕೊಂಡು ಬರುವಂತಹ ಹಲವು ಯುವಕರು ಪ್ರಾಮಾಣಿಕರಾಗಿದ್ದರೂ, ನೀತಿವಂತರಾಗಿದ್ದರೂ, ಉತ್ತಮ ಅಂಕ ಹೊಂದಿದ್ದರೂ ಕೌಶಲ್ಯದ ಕ್ಷಮತೆಯಿರದ ಕಾರಣ ಕೆಲಸ ದೊರೆಯುವುದಿಲ್ಲ. ಈ ತೊಂದರೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ನಮ್ಮ ಶಿವಮೊಗ್ಗದಲ್ಲಿ ನಾವೆಲ್ಲರೂ ಸೇರಿ ಶಿವಮೊಗ್ಗ ಚೇಂಬರ್ ಆಫ್ ಕಾಮರ್ಸ್ ವತಿಯಿಂದ ಸ್ಕಿಲ್ ಟ್ರೈನಿಂಗ್ ಸೆಂಟರ್ ಸ್ಥಾಪಿಸಿರುವ ಪ್ರಮುಖ ಉದ್ದೇಶವೇ ವಿದ್ಯಾರ್ಥಿಗಳಲ್ಲಿರುವ 'ಸ್ಕಿಲ್ ಗ್ಯಾಪ್' ಅನ್ನು ಕಡಿಮೆ ಮಾಡಬೇಕೆಂಬುದು. ಈ ನಿಟ್ಟಿನಲ್ಲಿ ಅತ್ಯಂತ ಸ್ವಾಗತಾರ್ಹವಾದ ಮತ್ತು ಅತ್ಯಂತ ಅವಶ್ಯಕವಾದ ಕೌಶಲ್ಯ ಅಭಿವೃದ್ಧಿಗೆ ಪೂರಕವಾದ ವಿಷಯಗಳನ್ನು ಕೇಂದ್ರದ ಬಜೆಟ್ನಲ್ಲಿ ಪ್ರಸ್ತಾಪಿಸಿರುವುದು. ಮುಂದಿನ ಐದು ವರ್ಷದ ಅವಧಿಗೆ ಮೋದಿ ಸರಕಾರವು ನಿರುದ್ಯೋಗ ಸಮಸ್ಯೆಗೆ ಶಾಶ್ವತ ಪರಿಹಾರ ನೀಡುವ ದಿಸೆಯಲ್ಲಿ ದಿಟ್ಟ ಹೆಜ್ಜೆ ಇಟ್ಟಿದೆ ಎಂದು ಹೇಳಬಹುದಾಗಿದೆ.

ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳು 5000 ರು. ನೀಡುವ ಮತ್ತು ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ 'ಇಂಟರ್ನ್‌ಶಿಪ್ ಆಪರ್ಚುನಿಟಿ' ನೀಡುವಂತಹ ಯೋಜನೆ, ವಿದ್ಯಾರ್ಥಿಗಳಲ್ಲಿರುವ ಸ್ಕಿಲ್‌ಗ್ಯಾಪ್ ಸಮಸ್ಯೆಯನ್ನು ಅತ್ಯಂತ ಪರಿಣಾಮಕಾರಿಯಾಗಿ ಕಡಿಮೆ ಮಾಡುವುದರಲ್ಲಿ ಅನುಮಾನವಿಲ್ಲ. ಈ ಯೋಜನೆ ದೇಶದ ಒಂದು ಕೋಟಿ ಯುವಕರನ್ನು ತಲುಪುವ ಮಹತ್ವಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲಕ ಉದ್ಯಮಶೀಲ ಕ್ಷೇತ್ರದಲ್ಲಿ ದೊಡ್ಡ ಕ್ರಾಂತಿಯಾಗುವುದರಲ್ಲಿ ಅನುಮಾನವಿಲ್ಲ. ಈಗಾಗಲೇ ದೊಡ್ಡ ದೊಡ್ಡ ಕಂಪನಿಗಳು ಮತ್ತು ವಿದ್ಯಾರ್ಥಿ ಸಮೂಹ ಈ ಯೋಜನೆಯನ್ನು ಮುಕ್ತ ಕಂಠದಿಂದ ಸ್ವಾಗತಿಸಿದ್ದಾರೆ.

ಯೋಜನಾನಾಂ ಸಹಸ್ರಂ ತು ಶನೈರ್ಗಚ್ಛೇತ್ ಪಿಪಿಲಿಕಾ।
ಆಗಚ್ಛನ್ ವೈನತೆಯೋಪಿ ಪದಮೇಕಂ ನ ಗಚ್ಛತಿ॥

ಇರುವೆಯಂತಹ ಪುಟ್ಟ ಜೀವಿಯೂ ಸತತವಾಗಿ ನಡೆಯುತ್ತಿದ್ದರೆ ಸಾವಿರಾರು ಕಿಲೋಮೀಟರ್‌ಗಳಷ್ಟು ಮುಂದೆ ಚಲಿಸಬಹುದು. ಆದರೆ ಒಂದು ಹದ್ದು ತನ್ನ ಸ್ಥಳದಿಂದ ಕದಲದಿದ್ದರೆ ಅದು ಒಂದು ಅಡಿ ಕೂಡ ಮುಂದೆ ಚಲಿಸಲಾರದು ಎಂಬ ಉಕ್ತಿಯಂತೆ ನಮ್ಮ ದೇಶದ ಯುವ ಸಮೂಹ ಭಾರತ ಸರಕಾರದ ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಆಶಿಸುತ್ತೇನೆ.

ಹಸಿದ ಹೊಟ್ಟೆಗೆ ಊಟವನ್ನು ನೀಡುವ ಬದಲು ಅನ್ನ ಸಂಪಾದನೆಯ ವಿಧಾನವನ್ನು ಹೇಳಿಕೊಡುವುದೇ ಅತಿ ಶ್ರೇಷ್ಠವಾದದ್ದು. If someone is hungry, don't give him fish, teach him fishing ಎಂಬ ಮಾತಿನಂತೆ ಸುಮ್ಮನೆ ಕುಳಿತವರಿಗೆ ಭತ್ಯೆ ಕೊಡುವ ಬದಲು ದೇಶದ ಪ್ರತಿಷ್ಠಿತ ಕಂಪನಿಗಳಲ್ಲಿ ಓದಿನ ಜೊತೆಗೆ ಇಂಟರ್ನ್‌ಶಿಪ್ ಮಾಡುವಾಗ 5,000ರು. ಕೊಡುವ ಯೋಜನೆ, ಯುವ ಭಾರತದ ನಿರ್ಮಾಣಕ್ಕೆ ಅತ್ಯಂತ ಪೂರಕವಾದ ಯೋಜನೆ ಎಂದು ಹೇಳಬಹುದು.

ಯುವಕರ ಸಬಲೀಕರಣಕ್ಕೆ ಬಜೆಟ್‌ನಲ್ಲಿ ಇನ್ನೂ ಹತ್ತು ಹಲವು ಯೋಜನೆಗಳಿದ್ದು ಹೊಸ ಉದ್ಯೋಗವನ್ನು ಸ್ಥಾಪನೆ ಮಾಡುವ ಯುವಕರಿಗೆ ಸಹಾಯ ಮಾಡುವ ಧನಿಕರಿಗೆ ವಿಧಿಸುತ್ತಿದ್ದ 'ಏಂಜಲ್ ಟ್ಯಾಕ್ಸ್' ಅನ್ನು ಸರಕಾರವು ತೆಗೆದುಹಾಕಿದ್ದು, ಉನ್ನತ ವಿದ್ಯಾಭ್ಯಾಸಕ್ಕೆ ಪಡೆದುಕೊಳ್ಳುವ ಸಾಲದ ಮರುಪಾವತಿಗಾಗಿ 'ಇ-ವೋಚರ್' ವ್ಯವಸ್ಥೆ ಜಾರಿಗೆ ತಂದಿದ್ದು ಯುವ ರಾಷ್ಟ್ರ ನಿರ್ಮಾಣದ ಪರಿಕಲ್ಪನೆಯೆಡೆಗಿನ ಮಹಾಸಂಕಲ್ಪವಾಗಿದೆ.

(ಲೇಖಕರು: ವಿಧಾನ ಪರಿಷತ್ ಶಾಸಕರು ಹಾಗೂ ರಾಜ್ಯ ಬಿಜೆಪಿ ಕಾರ್ಯದರ್ಶಿ)

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಉಜ್ವಲಾ ಗ್ಯಾಸ್ ವಿತರಿಸಿ

ಗ್ರಾಮೀಣ ಪ್ರದೇಶದಲ್ಲಿ ಸೌದೆ ಒಲೆ ಬಳಸಿ ಆಗುತ್ತಿದ್ದ ವಾಯು ಮಾಲಿನ್ಯ ಹಾಗೂ ಮಹಿಳೆಯರ ಆರೋಗ್ಯ ಸಮಸ್ಯೆಯಿಂದ ಪಾರು ಮಾಡುವ ಸಲುವಾಗಿ ಕೇಂದ್ರ ಸರಕಾರ ಸಬ್ಸಿಡಿ ದರದಲ್ಲಿ ಉಚಿತ ಅನಿಲ ಸಂಪರ್ಕ ಕಲ್ಪಿಸುವ ನಿಟ್ಟಿನಲ್ಲಿ ಉಜ್ವಲಾ ಎಂಬ ಯೋಜನೆಯನ್ನು ಜಾರಿಗೆ ತಂದಿತು. ಇದರಿಂದ ಅನೇಕ ಕುಟುಂಬಗಳು ಪ್ರಯೋಜನ ಪಡೆದವು. ಇದಕ್ಕೆ ಬೇಕಾದ ರೇಷನ್ ಕಾರ್ಡ್ ಮತ್ತು ಅದರಲ್ಲಿ ಇರುವ ಸದಸ್ಯರ ಫೋಟೋಗಳು ಜತೆಗೆ ಆಧಾರ್ ಕಾರ್ಡ್ ಕಡ್ಡಾಯ ಎಂದು ದಾಖಲೆಗಳ ವಿವರ ಪಡೆದು ಅವರ ಪಡಿತರ ಚೀಟಿಯಲ್ಲಿ ನಮೂದಾಗಿರುವ ವಿಳಾಸದ ಗ್ರಾಮೀಣ ಪ್ರದೇಶದಲ್ಲಿ ಅನಿಲ ಸಂಪರ್ಕ ಕಲ್ಪಿಸುವ ಜವಾಬ್ದಾರಿಯನ್ನು ಆ ಪ್ರದೇಶದ ಗ್ರಾಮೀಣ್ ವಿತರಕ್ ಕೇಂದ್ರಗಳಿಗೆ ವಹಿಸಲಾಗಿದೆ. ಆದರೆ ಕೆಲವು ಗ್ರಾಮೀಣ್ ವಿತರಕ್ ಕೇಂದ್ರಗಳು ಸರಿಯಾಗಿ ಈ ಉಚಿತ ಅನಿಲ ಸಂಪರ್ಕದ ವಿಷಯವಾಗಿ ಕಾರ್ಯ ನಿರ್ವಹಿಸುತ್ತಿಲ್ಲ, ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಲು ಆ ಏರಿಯಾದ ಸೇಲ್ಸ್ ಆಫೀಸರ್ ಭೇಟಿ ನೀಡಿ ಪರಿಶೀಲನೆ ಮಾಡುತ್ತಿಲ್ಲ. ರಾಜ್ಯದ ಹಲವಾರು ಇಂಡೇನ್ ಗ್ರಾಮೀಣ್ ವಿತರಕ್ ಕೇಂದ್ರದಲ್ಲಿ ಇನ್ನೂ ವಿತರಣೆ ಮಾಡದೇ ಇರುವ ಉಜ್ವಲಾ ಗ್ಯಾಸ್‌ನ ಬಗ್ಗೆ ಅಲ್ಲಿನ ಸಮಸ್ಯೆ ಬಗೆಹರಿಯದೇ ಹಾಗೆ ಉಳಿದಿದೆ. ಈ ಹಿಂದೆ ಕೇಳಿದರೆ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಭೀತಿ ಎಂದು ಜಾರಿಕೊಂಡಿದ್ದರು. ಆದರೆ, ಈಗಾಗಲೇ ಕೇಂದ್ರದಲ್ಲಿ ಸರಕಾರವೇ ರಚನೆ ಆಗಿದೆ, ಇನ್ನೂ ಸೇಲ್ಸ್ ಆಫೀಸರ್ ಕಡೆಯಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ ಎಂಬುದು ಅಲ್ಲಿಯವರ ಉಡಾಫೆಯ ಉತ್ತರ. ಈ ಸಂಬಂಧ ಇನ್ನೂ ಅದರ ಮಾಲೀಕರನ್ನು ಕೇಳಿದರೆ ಮುಗಿದೇ ಹೋಯಿತು. ಮುಖ್ಯ ವಿಷಯ ಏನೆಂದರೆ ಆ ಸೇಲ್ಸ್ ಆಫೀಸರ್‌ನ ಮೊಬೈಲ್ ಸಂಖ್ಯೆಯನ್ನು ಸಹ ನೋಟೀಸ್ ಬೋರ್ಡ್ ಮೇಲೆ ಅಸ್ಪಷ್ಟ ರೀತಿ ಕಾಣುವಂತೆ ಮಾಡಿದ್ದಾರೆ.

ಇದರಿಂದ ಹಲವರು ರೋಸಿಹೋಗಿ ಜನರಲ್ ಸಿಲಿಂಡರ್ ಅನ್ನೇ ಕೊಡಿ ಎಂದು ಸುಮ್ಮನಾಗಿದ್ದಾರೆ. ಹೀಗಾಗಿ ಕೆಲವರು ತುರ್ತಾಗಿ ಬೇಕಾದರೆ ಏಜೆನ್ಸಿಗಳು ಇದೇ ರೀತಿ ಕಾರ್ಯ ನಿರ್ವಹಿಸಲು ಮುಂದಾಗಿದ್ದಾರೆ. ಕೇಂದ್ರ ಸರಕಾರದ ಈ ಯೋಜನೆ ಗ್ರಾಮೀಣ ಪ್ರದೇಶದ ಜನರಿಗೆ ಮಹದುಪಕಾರ ಮಾಡಿದೆ. ಆದರೆ ಕೆಲ ಏಜೆನ್ಸಿಗಳು ಇದನ್ನು ಹಾಳು ಮಾಡುತ್ತಿವೆ. ಇನ್ನೂ ಮುಂದಾದರೂ ಪರಿಶೀಲನೆ ಮಾಡಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಉಜ್ವಲಾ ಅನಿಲ ಸಂಪರ್ಕದ ಫಲಾನುಭವಿಗಳು ಮನವಿ ಮಾಡಿದ್ದಾರೆ.

-**ಗೋವಿಂದೇಗೌಡ ಎ ಎಸ್** ಪಿರಿಯಾಪಟ್ಟಣ

ಇನ್ನೂ ಸಮನಾಗಿ ಗುರುತಿಸಿಲ್ಲ

ಇತ್ತೀಚೆಗೆ ಹಲವು ಸ್ತ್ರೀಪರವಾದ ಹೇಳಿಕೆಗಳು ಬಿಟ್ಟೂಬಿಡದೆ ಭಾಷಣ, ಬರಹ, ಮಾಧ್ಯಮಗಳಲ್ಲಿ ಕಾಣ ಬರುತ್ತವೆ. ಕೆಲ ಉದಾಹರಣೆಗಳು ಹೀಗಿವೆ; ಹೆಣ್ಣು ಮನಸ್ಸು ಮಾಡಿದರೆ ಏನೂ ಮಾಡಿಯಾಳು, ಹೆಣ್ಣು ಇಂದು ಗಂಡಿಗೆ ಸಮಾನವಾದ ಅರ್ಹತೆ ಉಳ್ಳವಳು, ಹೆಣ್ಣು ರಿಕ್ಷಾ ಚಲಾಯಿಸುತ್ತಾಳೆ, ಒಬ್ಬ ಹೆಣ್ಣುಮಗಳು ಟ್ರಕ್ ಚಲಾಯಿಸಿದಳು, ರಕ್ಷಣಾಖಾತೆಯನ್ನು ಹೆಣ್ಣೊಬ್ಬಳು ನಿಭಾಯಿಸಿದಳು, ಆಕೆ ತಂತ್ರಜ್ಞಾನದಲ್ಲಿ ಹಿಂದೆ ಬಿದ್ದಿಲ್ಲ, ಆಕೆ ಚಂದ್ರಯಾನದ ರೂವಾರಿ ಹೆಣ್ಣೊಬ್ಬಳು ಕಲಿತರೆ ಒಂದು ಶಾಲೆ ತೆರೆದಂತೆ ಹೀಗೆ ತರಹೇವಾರಿಯಾಗಿ ಕೇಳಿಬರುವ ಸಂಗತಿಗಳು. ಇವನ್ನು ಗಮನಿಸುವಾಗ ನನಗೆ ಹುಟ್ಟಿಕೊಂಡ ಅರಿವು ಏನೆಂದರೆ ಖಂಡಿತವಾಗಿಯೂ ಹೆಣ್ಣನ್ನು ಗಂಡಿನ ಸರಿಸಮ ಅಂತ ಇನ್ನೂ ತಿಳಿದೇ ಇಲ್ಲ ಅಂಬುದು. ಒಮ್ಮೆ ಹೆಣ್ಣನ್ನು ಸಮರ್ಥಳು, ಗಂಡಿಗೆ ಸಮಾನಳು ಅಂತ ಜನಮಾನಸದಲ್ಲಿ ನೆಲೆ ನಿಂತುದಾದರೆ ಈ ಮೇಲಿನ ಹೇಳಿಕೆಯೇ ಹುಟ್ಟುತ್ತಿರಲಿಲ್ಲ. ಇವೆಲ್ಲ ಹೇಳಿಕೆಗಳಲ್ಲಿ ಹೆಣ್ಣು ಇನ್ನೂ ಸಮಾನಳಾಗಿಲ್ಲ ಅವಳನ್ನು ಪುಶ್ ಅಪ್ ಮಾಡಬೇಕು ಅಂಬ ಪ್ರಯತ್ನವಿರುವ ಅರ್ಥಬರುತ್ತದಲ್ಲದೇ ಮತ್ತೇನೂ ಅಲ್ಲ. ಆಕೆ ಸರಿಸಮಾನಳು ಅಂದಮೇಲೆ ಆಕೆ ಯಕ್ಷಗಾನ ಕುಣಿಯಲಿ, ಆಕೆ ಆಟೋಟ ಗೆಲ್ಲಲಿ, ಆಕೆ ಲಾರಿ ಹೊಡೆಯಲಿ ಬಸ್ಸು ಓಡಿಸಲಿ ಕಂಡಕ್ಟರ್ ಕೆಲಸ ಮಾಡಲಿ ಹಮಾಲಿ ಮಾಡಲಿ, ಊಬರ್ ಓಲಾ ಚಲಾಯಿಸಲಿ ಅದನ್ನು ಬೇರೆ ಕೋನಗಳಿಂದ ನೋಡಬೇಕೇಕೆ? ಸಮಾನರಾದುದನ್ನು ಗುರುತಿಸ ಹೊರಟು ಇನ್ನೂ ಸಮಾನಳಾಗಿಲ್ಲ ಅಂಬುದಕ್ಕೆ ಉದಾಹರಣೆ ನೀಡಿದಂತಲ್ಲವೇ ಇವೆಲ್ಲ.ಒಂದು ಸೂಕ್ಷ್ಮ ಸಂವೇದನೆಯಾಗಿ ನನಗೆ ಕಾಡುವ ಪ್ರಶ್ನೆಗಳೇನೆಂದರೆ ಅವಳನ್ನು ಪದೇ ಪದೇ ಪುರುಷ ಸಮಾನಳೆಂಬುವುದು ಇನ್ನೂ ಸಮಾನಳಾಗಿಲ್ಲದ ಅದಾವುದೋ ಭಾವನೆ ಪುರುಷ ವರ್ಗದಲ್ಲಿರುವುದರ ಸಂಕೇತವಲ್ಲವೇ?

-**ನಿತ್ಯಾನಂದ ಹೆಗಡೆ** ಮೂರೂರು.

ವಿಸ್ಮೃತಿಯತ್ತ ಕನ್ನಡಿಗರು

ಕಾರ್ಗಿಲ್ ವಿಜಯದ ಇಪ್ಪತ್ತೈದನೇ ವಾರ್ಷಿಕೋತ್ಸವ ಪ್ರತಿ ಭಾರತೀಯರು ಹೆಮ್ಮೆ ಹಾಗೂ ಗೌರವಗಳಿಂದ ಕೃತಜ್ಞತೆಗಳನ್ನು ಸಲ್ಲಿಸುವ ದಿನ. ದೇಶದ ಪ್ರಧಾನಿ ಲಡಾಕ್ ಹೈವೇಯಲ್ಲಿನ ದ್ರಾಸ್ ವಾರ್ ಮೆಮೋರಿಯಲ್‌ನಲ್ಲಿ ಹುತಾತ್ಮರಾದ 527 ವೀರ ಸೈನಿಕರಿಗೆ ಗೌರವವನ್ನು ಸಮರ್ಪಿಸಿ, ಸೈನಿಕರನ್ನು ಹಾಗೂ ದೇಶವನ್ನು ಉದ್ದೇಶಿಸಿ ಮಾತನಾಡಿದರು. ಈ ಕಾರ್ಯಕ್ರಮವನ್ನು ನೋಡಲು ಬೆಳಿಗ್ಗೆ ಬಹಳ ಕಾತುರದಿಂದ ಕನ್ನಡ ನ್ಯೂಸ್ ಚಾನಲ್ ಹಾಕಿದ ನನಗೆ ತೀವ್ರವಾದ ನಿರಾಶೆ ಹಾಗೂ ಬೇಸರವಾಯಿತು! ಈಗ ನಮ್ಮ ಕನ್ನಡ ನ್ಯೂಸ್ ಚಾನಲ್‌ಗಳಿಗೆ ಜೈಲು ಸೇರಿರುವ ನಟನಿಗೆ ಮನೆ ಊಟ ಸಿಗುತ್ತದೆಯೋ ಇಲ್ಲವೋ, ಅವರ ಮನೆಯವರು ತೀರ್ಥಕ್ಷೇತ್ರಗಳಲ್ಲಿ ಹೋಮ ಮಾಡಿಸಿದಾಗ ಎಷ್ಟು ಕಣ್ಣೀರು ಹಾಕುತ್ತಿದ್ದರು... ಇವುಗಳನ್ನು ಬಿಟ್ಟರೆ ಬೇರೇನೂ ಬೇಕಿಲ್ಲ! ಯಾವ ಸುದ್ದಿ ಮುಖ್ಯ, ಯಾವುದಲ್ಲ ಎನ್ನುವ ವಿವೇಚನೆಯನ್ನೂ ಇಂದು ದೃಶ್ಯ ಮಾಧ್ಯಮಗಳು ಕಳೆದುಕೊಂಡು ಬಿಟ್ಟಿವೆ. ಯುವ ಜನಾಂಗಕ್ಕೆ ಯಾವ ರೀತಿಯ ಸ್ಫೂರ್ತಿ ನೀಡಲು ಈಗ ಈ ಮಾಧ್ಯಮಗಳಿಗೆ ಸಾಧ್ಯ? ಈಗಂತೂ ಸಂಸ್ಕೃತಿ, ಸಂಸ್ಕಾರಗಳ ಬಗ್ಗೆ ವಿಸ್ಮೃತಿಗೆ ಕನ್ನಡ ನಾಡು ಸರಿದಿದೆ ಎಂಬ ಅನುಮಾನ ಕಾಡುತ್ತಿದೆ! ಇಂಗ್ಲಿಷ್ ನ್ಯೂಸ್ ಚಾನಲ್ ಹಾಕಿಕೊಂಡು ಕಾರ್ಗಿಲ್ ವಿಜಯೋತ್ಸವದ ಕಾರ್ಯಕ್ರಮ ನೋಡುವಾಗ ನೆನಪಾಗಿದ್ದು 'ಕನ್ನಡ ಭಾಷಾಭಿಮಾನವಿಲ್ಲದೆ ಇಂಗ್ಲಿಷ್ ಹಾಗೂ ಹಿಂದಿ ಭಾಷೆಯನ್ನು ಮೆರೆಸುತ್ತಾರೆ' ಎಂದು ಕೂಗಾಡುವ ಉಟ್ಟು ಹೋರಾಟಗಾರರು!

-**ಡಾ. ಸುಮಾ ರಮೇಶ್** ಬೆಂಗಳೂರು

ಪ್ರಸ್ತಾವ ತಿರಸ್ಕರಿಸಿ

ಐಟಿ ಕ್ಷೇತ್ರದ ಉದ್ಯೋಗದ ಅವಧಿಯನ್ನು 14 ಗಂಟೆಗಳವರೆಗೆ ವಿಸ್ತರಿಸುವ ಪ್ರಸ್ತಾವನೆ ಸರಕಾರದ ಮುಂದೆ ಬಂದಿರುವ ಸುದ್ದಿ ಮಾಧ್ಯಮಗಳಿಂದ ಗೊತ್ತಾಯಿತು. ಕೆಲಸದ ಅವಧಿ ವಿಸ್ತರಿಸಿ ಉದ್ಯೋಗಿಗಳಿಂದ ಕೌಶಲ ಸಾಮರ್ಥ್ಯ ನಿರೀಕ್ಷಿಸುವುದು ಈ ದಿಶೆಯಲ್ಲಿ ತಪ್ಪಾಗುತ್ತದೆ, ಮುಖ್ಯವಾಗಿ ಐಟಿ ಉದ್ಯೋಗಿಗಳ ದೈಹಿಕ, ಮಾನಸಿಕ ಸ್ವಾಸ್ಥ್ಯವೂ ಇಲ್ಲಿ ಪ್ರಮುಖ ಅಂಶ. ಸಮಯ ವಿಸ್ತರಣೆಯಿಂದ ಕುಟುಂಬ ಸದಸ್ಯರ ಜತೆ ಒಳ್ಳೆಯ ಸಮಯ ಕಳೆಯುವ ಅವಕಾಶದಿಂದ ಉದ್ಯೋಗಿಗಳು ವಂಚಿತರಾಗಬೇಕಾಗುತ್ತದೆ. ಈ ವಿಧೇಯಕದಿಂದ ಆಗುವ ಸಾಧಕಗಳಿಗಿಂತ ಬಾಧಕ ಅಂಶಗಳೇ ಹೆಚ್ಚು, ಆದ್ದರಿಂದ ಈ ಪ್ರಸ್ತಾವನೆಯನ್ನು ಸರಕಾರ ತಿರಸ್ಕರಿಸಿದರೆ ಒಳ್ಳೆಯದು.

-**ಎಂ.ಜಿ.ಅಭಿಷೇಕ್** ಬೆಂಗಳೂರು

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು vveditoped@gmail.comಗೆ ಮೇಲ್ ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ರಾಮನಗರ ಹೆಸರಿನ ಬದಲಾವಣೆಯ ಅವಶ್ಯಕತೆ ಇದೆಯಾ?
- ಕೆಸವಿಲ್ಲದ ಬಡಗಿ ಅದೇನೋ ಮಾಡಿದ ಅಂತಾರಲ್ಲ..!

● **ಗುರುನಾರಾಯಣ ಪಾತಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಆತ್ಮಪ್ರಶಂಸೆ ಮಾಡಿಕೊಳ್ಳುವುದು ತಪ್ಪಾ?
- 'ಆತ್ಮಪ್ರಶಂಸೆ ಮಾಡಿಕೊಳ್ಳುವುದು ತಪ್ಪಾ' ಅಂತ ಸಾರಿದವನು ನಾನೇ ಎಂದು ಹೇಳದಿದ್ದರೆ ಸಾಕು!

● **ಎಲ್.ವಿ.ಸತೀಶ, ಮೈಸೂರು**
ಭಟ್ರೇ, ಅತಿ ಬುದ್ಧಿವಂತರು ಅಂದ್ರೆ ಯಾರು?
- ತಮ್ಮ ಮೂಗನ್ನು ಮುಖದಲ್ಲಿಟ್ಟುಕೊಳ್ಳದೇ ಬೇರೆಡೆ ತೋರಿಸುವವರು!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಸಾರ್, ಲೋಕಾಯುಕ್ತ ದಾಳಿಗೆ ಹೆದರಿ ಪಕ್ಕದ ಮನೆಗೆ ಬ್ಯಾಗ್ ಒಗೆದಿದ್ದೇಕೆ?
- ಪಕ್ಕದ ಮನೆ ಆಂಟಿ ಮೇಲೆ ಅಂಥ ವಿಶ್ವಾಸ!

● **ರಘು ಶೆಟ್ಟಿ, ಬ್ರಹ್ಮಾವರ**
ಭಟ್ರೇ, ಬ್ರಾಹ್ಮಣರನ್ನು ಯಾರೂ ಏಕೆ ತುಳಿಯುವುದಿಲ್ಲ?
- ಎಷ್ಟೇ ತುಳಿದರೂ ಸ್ನಾನ - ಸಂಧ್ಯಾವಂದನೆ ಮಾಡಿ ಸುಮ್ಮನಾಗುತ್ತಾರೆ ಎಂಬುದು ಎಲ್ಲರಿಗೂ ಗೊತ್ತು!

● **ಗಣಪತಿ ನಾಯಕ, ಹೊನ್ನಾವರ**
ಭಟ್ರೇ, ಪ್ರತಾಪ ಸಿಂಹಗೆ ನಿಮ್ಮ ಕಂಡ್ರೆ ಬಹಳ ಪ್ರೀತಿಯಂತೆ?
- ಇದು ಪ್ರಶ್ನೆಯಲ್ಲ, ಉತ್ತರ!

● **ರಾಮು ಮಲ್ಲಿಕಟ್ಟೆ, ಕೋಣಂದೂರು**
ಭಟ್ರೇ, ಕೆಲವರು ನಿಂತೋಗಿರೋ ವಾಚನ್ನು ಕಟ್ಕೊಂಡು ಶೋಕಿ ಮಾಡ್ತಾರಲ್ಲ?
- ಅದೂ ಅವರದ್ದೇ ಸ್ವಂತದ್ದಾಗಿದ್ದರೆ ಪರವಾಗಿರಲಿಲ್ಲ!

● **ಮಹಾನಂದ ಪಾಟೀಲ, (ಇಮೇಲ್ ಮೂಲಕ)**
ಭಟ್ರೇ, ಮೊಯಿಲಿ ಮಹಾಕಾವ್ಯವನ್ನು ಇಂಗ್ಲಿಷಿಗೆ ಅನುವಾದಿಸಬೇಕೆಂದಿದ್ದೇನೆ, ನಿಮ್ಮ ಸಲಹೆ?
- ನೀನು ಹೇಗೆ ಬೇಕಾದರೂ ಅನುವಾದಿಸು, ಯಾರೂ ತಕರಾರು ತೆಗೆಯುವುದಿಲ್ಲ!

● **ರತ್ನಾಕರ ಕಿರಣ್, (ಇಮೇಲ್ ಮೂಲಕ)**
ಭಟ್ರೇ, ಬಾರ್ ಬಾರ್ ದೇಖೋ ಎಂದು ಹೇಳುವವರಿಗೆ ನೀವು ಏನಂತೀರಿ?
- ಕುಡಿಯೋಣು ಬಾರಾ!

● **ವೇಣುಗೋಪಾಲ ಕಂಚಿತೋಟ, ಕಡೂರು**
ಭಟ್ರೇ, ಜಗತ್ತಿನ ಮಹಾನ್ ಗುರು ಗೂಗಲ್ ಅಂದ್ರೆ ತಪ್ಪಾ?
- ಬದುಕಿನ ಎಲ್ಲ ಪಾಠ ಹೇಳಿಕೊಟ್ಟೂ ತನ್ನನ್ನು ಗುರು ಎಂದು ಅಂದುಕೊಳ್ಳದ ಹೆಂಡತಿಯೇ ಮಹಾಗುರು ಅನ್ನೋದು ಸರಿ!

ರಾಜಕಾರಣಕ್ಕೆ ಬಿಟ್ಟಿರಲಾರದ ಹಗರಣದ ನಂಟು

ವಿದ್ಯಮಾನ
ಆದರ್ಶ್ ಶೆಟ್ಟಿ ಉಪ್ಪಿನಂಗಡಿ
adarsh.shetty207@gmail.com

ರಾಜಕೀಯ ಕ್ಷೇತ್ರವೆಂಬುವುದು ಅದು ವರ್ಣರಂಜಿತ ಬದುಕಿನಿಂದ ಕೂಡಿರುವಂತದ್ದು. ಇಲ್ಲಿ ಸಮಯ, ಸಂದರ್ಭಕ್ಕೆ ತಕ್ಕಂತೆ ಚೆನ್ನಾಗಿ ಆಟ ಆಡುವವನಿಗೆ ಉತ್ತಮ ಭವಿಷ್ಯವಿದೆ. ಇಲ್ಲಿ ಮುಖಕ್ಕೆ ತಕ್ಕಂತೆ ಮಾತನಾಡುವವರೇ ಹೆಚ್ಚು. ಜತೆಗೆ ಈ ಕ್ಷೇತ್ರದಲ್ಲಿ ಗೆದ್ದೆತ್ತಿನ ಬಾಲ ಹಿಡಿಯುವ ಪ್ರವೃತ್ತಿಯು ಬಲು ಜೋರಾಗಿದೆ. ರಾಜಕಾರಣದಲ್ಲಿ ಸಿದ್ಧಾಂತ, ಮೌಲ್ಯ ಎಂಬುವುದು ಯಾವತ್ತೋ ಮಣ್ಣು ಪಾಲಾಗಿ ಪ್ರಸ್ತುತ ಪುಸ್ತಕದ ಬದನೆಕಾಯಿಯಂತಾಗಿರುವುದು ಅಷ್ಟೇ ಸತ್ಯ. ರಾಜಕಾರಣದಲ್ಲಿ ಪ್ರಸ್ತುತ ಹಣಬಲ, ಸಮುದಾಯ ಬಲ ಇಲ್ಲವೇ ಜಾತಿಬಲ, ಅದಿಲ್ಲದಿದ್ದರೆ ಪಕ್ಷದ ಪ್ರಬಲ ನಾಯಕನ ಹಿಂಬಾಲಕನಾಗಿ ಆತನ ಬೇಕು ಬೇಡಗಳನ್ನು ಪೂರೈಸುವಂತಹ ಚಾಕಚಕ್ಯತೆಯಿರಬೇಕು. ಜತೆಗೆ ಒಂದು ಕ್ಷೇತ್ರದಲ್ಲಿ ತನಗೆ ಸರಿಸಮಾನಾದ ಅಥವಾ ತನ್ನ ಸಮುದಾಯದ ಪ್ರಬಲ ನಾಯಕನನ್ನು ಬೆಳೆಯದಂತೆ ನೋಡಿಕೊಳ್ಳುವುದು ಹೀಗೆ ನಾನಾ ಬಗೆಯ ಒಳಹೊರ ಆಟಗಳನ್ನು ಇಲ್ಲಿ ಕಾಣಬಹುದು. ಮುಖ್ಯವಾಗಿ ತಾನು ರಾಜಕೀಯದಲ್ಲಿ ಇದೇ ಮಾದರಿಯಲ್ಲಿ ಸಾಗುತ್ತೇನೆ, ಇದೇ ರೀತಿಯಲ್ಲಿ ಆಡಳಿತ ನಡೆಸುತ್ತೇನೆ, ತಪ್ಪನ್ನು ತಪ್ಪೇ ಎಂದು ಖಂಡಿಸಿ ರಾಜಕಾರಣದಲ್ಲಿ ಮುನ್ನಡೆಯುತ್ತೇನೆ, ತನ್ನ ಪಕ್ಷದ ಸಿದ್ಧಾಂತವನ್ನು ಉಳಿಸಿಕೊಂಡು ಸ್ಥಾನಮಾನವನ್ನು ಪಡೆಯುತ್ತೇನೆ ಅಂದುಕೊಂಡವರು ಮೂಲೆಗುಂಪಾದ ನಿದರ್ಶನಗಳು ಸಾಕಷ್ಟು ಕರ್ನಾಟಕ ರಾಜಕಾರಣದಲ್ಲಿದೆ. ರಾಜಕೀಯವೆಂದರೆ ದುಡ್ಡು ಮಾಡಲು ಇರುವ ಸುಲಭದ ಹಾದಿ ಎಂದು ತಿಳಿಯುವವರೂ ಇದ್ದಾರೆ.

ರಾಜಕಾರಣ ಎಂಬುವುದು ನಿಂತ ನೀರಲ್ಲ. ಅದು ಸದಾ ಹರಿಯುವ ಪ್ರಕ್ರಿಯೆ, ರಾಜಕಾರಣದಲ್ಲಿ ಏನು ಬೇಕಾದರೂ ಆಗಬಹುದು. ಇಂದು ಶತ್ರುವಾಗಿದ್ದವರು ನಾಳೆ ಮಿತ್ರರಾಗಬಹುದು. ಇಂದು ಪರಸ್ಪರ ವಾಚಾಮಗೋಚರ ನಿಂದಿಸಿಕೊಂಡು ದ್ವೇಷದ ರಾಜಕಾರಣ ನಡೆಸಿಕೊಂಡವರು, ನಾಳೆ ಒಂದೇ ಪಕ್ಷದಲ್ಲಿರಬಹುದು. ಇಲ್ಲಿ ಏರಿಳಿತ ಸ್ವಾಭಾವಿಕ. ಇಂದು ಒಂದು ಪಕ್ಷ ಆಡಳಿತದಲ್ಲಿದ್ದರೆ ನಾಳೆ ಮತ್ತೊಂದು ಪಕ್ಷ ಅಧಿಕಾರ ನಡೆಸಬಹುದು. ರಾಜಕಾರಣದಲ್ಲಿ ಯಾರೂ ಶಾಶ್ವತ ಗೂಟ ಹೊಡೆದುಕೊಂಡು ಕೂರಲು ಅಸಾಧ್ಯ. ಅಧಿಕಾರದಲ್ಲಿದ್ದ ರಾಜಕಾರಣಿಯೊಬ್ಬರಿಗೆ ತನ್ನ ಆಡಳಿತಾವಧಿಯಲ್ಲಿ ಸಿಗುವ ಗೌರವ, ಮರ್ಯಾದೆ, ಸುತ್ತಮುತ್ತಲಿನ ಹಿಂಬಾಲಕರ ವರ್ಗ ಆತ ಮಾಜಿಯಾದೊಡನೆ ದೂರ ಸರಿದು ಮತ್ತೊಂದು ಬಣದೊಡನೆ ಗುರುತಿಸಲ್ಪಡುವುದು, ಅಂತರ ಕಾಯ್ದುಕೊಳ್ಳುವ ಪ್ರಕ್ರಿಯೆಗಳು ಜೋರಾಗಿ ನಡೆಯುತ್ತದೆ. ಆಡಳಿತದಲ್ಲಿದ್ದ ರಾಜಕಾರಣಿಯೊಬ್ಬರು ಮಾಜಿಯಾದಾಗ ತನ್ನ ಸ್ಥಾನಮಾನ ಏನು? ತಾನು ಮಾಡಬೇಕಾದ ಕರ್ತವ್ಯಗಳು ಯಾವುದು? ತನ್ನವರು ಯಾರು? ತಾನು ಅಧಿಕಾರದಲ್ಲಿದ್ದಾಗ ಮಾಡಿದ ತಪ್ಪುಗಳೇನು? ಇವೆಲ್ಲವೂ ಸ್ಪಷ್ಟವಾಗಿ ಅರಿವಿಗೆ ಬರುತ್ತದೆ. ಒಟ್ಟಿನಲ್ಲಿ ಒಬ್ಬ ಜನಪ್ರತಿನಿಧಿ ಅಧಿಕಾರ ಕಳೆದುಕೊಂಡನೆಂದರೆ ಆತ ನೀರಿನಿಂದ ಹೊರತೆಗೆದ ಮೀನಿನಂತೆಯೇ ಸರಿ. ರಾಜಕಾರಣದಲ್ಲಿ ಒಬ್ಬ ಜನಪ್ರತಿನಿಧಿಗಿಂತ ಆತನ ಸುತ್ತ ಸದಾ ಗಿರಕಿ ಹೊಡೆಯುವ, ಕಚೇರಿಯಲ್ಲೇ ದಿನದ 24 ಗಂಟೆ ಠಿಕಾಣಿ ಹೂಡುವ, ದಳ್ಳಾಳಿಗಳ ಮಾದರಿ ವರ್ತಿಸುವ ಹಿಂಬಾಲಕರೇ ಆತನಿಗೆ ಬಹಳ ಅಪಾಯಕಾರಿಯಾಗಿ ಪರಿಣಮಿಸುವ, ಪಕ್ಷದ ನಿಷ್ಠಾವಂತ ಕಾರ್ಯಕರ್ತರೇ ಇಂತಹ ಚೇಲಾಗಳ ವರ್ತನೆಯಿಂದ ಬೇಸತ್ತು ಆ ಜನಪ್ರತಿನಿಧಿಯಿಂದ ದೂರ ಉಳಿಯುವ ಅದೆಷ್ಟೋ ಘಟನೆಗಳು ನಡೆದಿವೆ.

ಕರ್ನಾಟಕದಲ್ಲಿ ಇತ್ತೀಚಿನ ಎರಡು ಮೂರು ತಿಂಗಳಿನಿಂದ ರಾಜಕೀಯ ಮತ್ತು ಸಿನಿಮಾ ಕ್ಷೇತ್ರದಲ್ಲಿ ಬಿರುಗಾಳಿ ಎಬ್ಬಿಸಿದ ಎರಡು ಮೂರು ಘಟನೆಗಳು ನಡೆದವು. ಒಂದು ಸಿನಿಮಾ ನಟ ದರ್ಶನ್ ಪ್ರಕರಣ. ಎರಡನೆಯದು ಕರ್ನಾಟಕ ಪ್ರಭಾವಿ ರಾಜಕಾರಣಿ ಎಚ್.ಡಿ ರೇವಣ್ಣರ ಪುತ್ರರಾದ ಪ್ರಜ್ವಲ್ ಹಾಗೂ ಸೂರಜ್ ಪ್ರಕರಣ. ಮೂರನೇಯದು ಸಾವಿರಾರು ಕೋಟಿ ರುಪಾಯಿಗಳ ಮೈಸೂರು ಮೂಡಾ ಹಗರಣ ಹಾಗೂ ಪರಿಶಿಷ್ಟ ಜಾತಿ, ಪಂಗಡವನ್ನೊಳಗೊಂಡ ವಾಲ್ಮೀಕಿ ನಿಗಮದಲ್ಲಿನ ಕೋಟ್ಯಾಂತರ ರುಪಾಯಿ ಹಗರಣ ಪ್ರಕರಣ. ಮೂಡಾ ಸೈಟ್ ಹಂಚಿಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬದ ವಿರುದ್ಧವೇ ಆರೋಪಗಳು ಕೇಳಿ ಬಂದಿದ್ದು, ಮೂಡಾ ಅಕ್ರಮ ನಿವೇಶನ ಹಂಚಿಕೆ ಪ್ರಕರಣ ಭಾರಿ ಸದ್ದು ಮಾಡುತ್ತಿದೆ. ಈ ಪ್ರಕರಣವು ಮಂತ್ರಿಮಂಡಲದ ಹಲವರ ಸುತ್ತ ಸುತ್ತಿಕೊಂಡಿರುವುದಲ್ಲದೆ ಈ ಪ್ರಕರಣದಲ್ಲಿ ಬಿಜೆಪಿಯ ಕೆಲ ನಾಯಕರಿಗೂ ನಡುಕ ಹುಟ್ಟಿಸಿದೆ. ರಾಜ್ಯದಲ್ಲಿ ಪ್ರಸ್ತುತ ಕಾಂಗ್ರೆಸ್ ಸರಕಾರ ಆಡಳಿತ ನಡೆಸುತ್ತಿದೆ. ಪ್ರತಿಪಕ್ಷದಲ್ಲಿ ಬಿಜೆಪಿ ಕುಳಿತಿದೆ. ಆಡಳಿತಾರೂಢ ಸರಕಾರ ಜನತೆಗೆ ಉತ್ತಮ ಆಡಳಿತವನ್ನು ನೀಡಬೇಕಾದುದು ಹಾಗೂ ಪ್ರತಿಪಕ್ಷ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಾಂವಿಧಾನಿಕ ಹುದ್ದೆಯನ್ನು ಹೊಂದಿ ಸರಕಾರದ ಲೋಪದೋಷ, ಹುಳುಕುಗಳನ್ನು ಎತ್ತಿ ತೋರಿಸುವುದು ಜನರ ಪರ ಧ್ವನಿಯಾಗಬೇಕಾದದ್ದು ಆದ್ಯ ಕರ್ತವ್ಯ. ರಾಜ್ಯದಲ್ಲಿ ಇಷ್ಟು ದೊಡ್ಡ ಹಗರಣಗಳು ನಡೆದರೂ ಆರಂಭಿಕ ಹಂತದಲ್ಲಿ ಮೌನಕ್ಕೆ ಶರಣಾಗಿದ್ದ ರಾಜ್ಯ ಬಿಜೆಪಿ, ಕೇಂದ್ರ ವರಿಷ್ಠರ ಮಂಡಳಿಯ ಖಡಕ್ ಆದೇಶದ ಬಳಿಕ ಎಚ್ಚೆತ್ತು ಬೀದಿಗಿಳಿದು ಹೋರಾಟ, ಅಹೋರಾತ್ರಿ ಧರಣಿ, ಪಾದಯಾತ್ರೆಗೆ ಮುಂದಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್-ಬಿಜೆಪಿ ಮಧ್ಯೆ ಹೊಂದಾಣಿಕೆ ರಾಜಕಾರಣ ನಡೆಯುತ್ತಿದೆ ಎಂಬ ಆರೋಪವನ್ನು ಹಿರಿಯ ಬಿಜೆಪಿ ನಾಯಕ ಬಸನಗೌಡ ಪಾಟೀಲ್ ಯತ್ನಾಳ್ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ ವಿಜಯೇಂದ್ರ ಹಾಗೂ ವಿಧಾನಸಭಾ ಪ್ರತಿಪಕ್ಷ ನಾಯಕ ಆರ್.ಅಶೋಕ್ ಮೇಲೆ ಹೊರಿಸಿದ್ದಾರೆ. ಇದಕ್ಕೆ ಪುಷ್ಟೀಕರಿಸುವಂತೆ ಪ್ರತಿಪಕ್ಷ ನಾಯಕನ ಸ್ಥಾನದಲ್ಲಿ ನಿಂತು ಗಟ್ಟಿ ಧ್ವನಿಯಲ್ಲಿ ಮಾತನಾಡಬೇಕಾದ ಆರ್.ಅಶೋಕ್‌ಗಿಂತ ಸರಕಾರದ ವಿರುದ್ಧ ನೇರ ವಾಗ್ದಾಳಿ, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವುದು, ಹೋರಾಟಗಳನ್ನು ಒಂದು ಹೆಜ್ಜೆ ಮುಂದೆ ನಿಂತು ನಡೆಸುತ್ತಿರುವುದು ಕೂಡ ಇದೇ ಬಸನಗೌಡ ಪಾಟೀಲ್ ಯತ್ನಾಳ್.

ವಿಧಾನಸಭೆಯ ಕಲಾಪದಲ್ಲಿ ಬಸನಗೌಡ ಪಾಟೀಲ್ ಯತ್ನಾಳ್ ವಾಲ್ಮೀಕಿ ಹಾಗೂ ಮೂಡಾದಲ್ಲಿನ ಹಗರಣ ಕುರಿತು ಆಡಿದ ಮಾತುಗಳು ಸಾಕಷ್ಟು ಸಾಮಾಜಿಕ ಜಾಲತಾಣಗಳಲ್ಲಿ ಸದ್ದು ಮಾಡುತ್ತಿದೆ. 'ಒಬ್ಬ ರಾಜಕಾರಣಿಗೆ ಎಷ್ಟು ಹಣ ಬೇಕು ರೀ.. ಪರಿಶಿಷ್ಟ ಪಂಗಡದ ಜನರ ಹಣ ಲೂಟಿ ಹೊಡೆದ್ರೆ, ರಾಜಕಾರಣಿಗಳು ಉದ್ಧಾರ ಆಗ್ತಾರ? ಎಷ್ಟು ರಾಜಕಾರಣಿಗಳ ಮಕ್ಕಳು ಹಾದಿ ತಪ್ಪಿದ್ದಾರೆ? ಎಷ್ಟು ರಾಜಕಾರಣಿಗಳ ಮಕ್ಕಳು ಅಪಘಾತದಲ್ಲಿ ಸತ್ತಿದ್ದಾರೆ? ಎಷ್ಟು ರಾಜಕಾರಣಿಗಳ ಮಕ್ಕಳು ದುಶ್ಚಟಕ್ಕೆ ಬಲಿ ಬಿದ್ದಿದ್ದಾರೆ? ವಾಲ್ಮೀಕಿ ನಿಗಮದಲ್ಲಿನ ಹಗರಣದ ಹಣವನ್ನೇನಾದರೂ ಬಡವರಿಗೆ ಒಂದು ಲಕ್ಷ ರುಪಾಯಿಯಂತೆ ಹಂಚಿದ್ದರೆ ಅದೆಷ್ಟೋ ಶೋಷಿತ ಕುಟುಂಬಗಳು ತಕ್ಕ ಮಟ್ಟಿಗೆ ಜೀವನ ಸಾಗಿಸುತ್ತಿದ್ದವು' ಎಂದು ಎಲ್ಲ ರಾಜಕಾರಣಿಗಳಿಗೆ ಆತ್ಮಸಾಕ್ಷಿಯಾಗಿ ಯೋಚಿಸುವಂತೆ ತಿಳಿಸಿರುವುದು ರಾಜಕಾರಣದ ಪ್ರಬುದ್ಧತೆಗೆ ಸಾಕ್ಷಿ. ಯತ್ನಾಳ್ ಈ ಹಿಂದೆ ಬಿಜೆಪಿ ಸರಕಾರ ಇದ್ದಾಗಲೂ ತನ್ನ ಸ್ವಪಕ್ಷದ ಕೆಲ ನಾಯಕರ ಭ್ರಷ್ಟಾಚಾರದ ವಿರುದ್ಧವೂ ತಿವಿದಿರುವುದು ಉಲ್ಲೇಖನೀಯ. ಇದೀಗ ವಾಲ್ಮೀಕಿ ನಿಗಮದಲ್ಲಿನ ಭ್ರಷ್ಟಾಚಾರದ ಬಗ್ಗೆ ತಮ್ಮ ಪಕ್ಷದ ನಾಯಕರ ದಿವ್ಯ ಮೌನದ ಬಗ್ಗೆ ಧ್ವನಿಯೇರಿಸುತ್ತಲೇ ಬಂದಿದ್ದಾರೆ. ಹೊಂದಾಣಿಕೆ ರಾಜಕಾರಣದ ಬಗ್ಗೆಯೂ ಪ್ರಶ್ನಿಸಿದ್ದಾರೆ. ರಾಜಕಾರಣದಲ್ಲಿ ಯಾವುದೇ ವ್ಯಕ್ತಿಯ ಮುಲಾಜು ಹಂಗಿನಲ್ಲಿ ಜೀವಿಸುವಂತಹ ಪರಿಸ್ಥಿತಿ ಜನಪ್ರತಿನಿಧಿಗಳಿಗೆ ಉದ್ಭವಿಸದಿದ್ದರೆ, ಆತ್ಮಸಾಕ್ಷಿಗೆ ಅನುಗುಣವಾಗಿ ರಾಜಕಾರಣದಲ್ಲಿ ಹೆಜ್ಜೆ ಇಟ್ಟಿದ್ದರೆ ಸರಕಾರದ ಯಾವುದೇ ಹುಳುಕು ಲೋಪಗಳನ್ನು ಪ್ರಶ್ನಿಸುವ ನೈತಿಕತೆ ಪ್ರತಿಪಕ್ಷದ ಜನಪ್ರತಿನಿಧಿಗಳಿಗಿರುತ್ತದೆ. ಒಬ್ಬ ರಾಜಕಾರಣದಲ್ಲಿ ಚುನಾವಣೆಗೆ ಸ್ಪರ್ಧಿಸುವ ಸಂದರ್ಭ 25 ರಿಂದ 50 ಕೋಟಿ ಖರ್ಚು ಮಾಡಿದರೆ ಅದರ ಹತ್ತು-ಹದಿನೈದು ಪಟ್ಟು 400 ರಿಂದ 500 ಕೋಟಿ ಸಂಪಾದಿಸುವ ಗುರಿಯನ್ನು ಆತ ಹೊಂದಿರುತ್ತಾನೆ. ರಾಜಕಾರಣವೆಂದರೆ ದುಡ್ಡು ಸುರಿದು ದುಡ್ಡು ಸಂಪಾದಿಸುವ ದಂಧೆ, ವ್ಯಾಪಾರವಾಗಿರುವುದರಿಂದಲೇ ಟಿಕೆಟ್‌ಗಾಗಿ ಹಗಲು ರಾತ್ರಿ ಲಾಬಿ ಕಸರತ್ತು ನಡೆಯುವುದು. ರಾಜಕೀಯ ಪಕ್ಷಗಳ ನಾಯಕರು ಯಾವ ಸಿದ್ಧಾಂತ, ನೈತಿಕತೆಯನ್ನು ಕಾರ್ಯಕರ್ತರಿಗೆ ಉಪದೇಶ ಮಾಡುತ್ತಾರೆಯೋ ವಾಸ್ತವವಾಗಿ ಅದರ ತದ್ವಿರುದ್ಧವಾಗಿ ಅಂದರೆ ಅಧಿಕಾರ, ಸ್ಥಾನಮಾನಕ್ಕಾಗಿ ಅನೈತಿಕ ಹಾದಿಯನ್ನು, ಕುತಂತ್ರದ ನೀತಿಯನ್ನು ಅನುಸರಿಸುವವರೇ ಹೆಚ್ಚು.

ವಾಲ್ಮೀಕಿ ನಿಗಮದಲ್ಲಿನ ಅವ್ಯವಹಾರ ಅಕ್ರಮಕ್ಕೆ ಅಧಿಕಾರಿಯೊಬ್ಬರ ಜೀವ ಬಲಿಯಾಗಿದೆ. ಪ್ರಮುಖ ಸಚಿವ ಬಿ.ನಾಗೇಂದ್ರ ತಲೆದಂಡವಾಗಿ ಪರಪ್ಪನ ಅಗ್ರಹಾರ ಜೈಲಿನಲ್ಲಿ ಮುದ್ದೆ ಮುರಿಯುವಂತಾಗಿದೆ. ಇತ್ತ ಸರಕಾರ ಈ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆಯಾಗಿದೆ ಮತ್ತು ಮೂಡಾ ಹಗರಣದಲ್ಲಿ ಸಿ.ಎಂ ಮತ್ತು ಅವರ ಕುಟುಂಬದ ಪಾತ್ರವಿಲ್ಲ ಎಂದು ಸಮರ್ಥಿಸಿಕೊಂಡು, ಬಿಜೆಪಿ ಅಧಿಕಾರವಧಿಯಲ್ಲೇ ಅತಿ ಹೆಚ್ಚು ಅಕ್ರಮ ಸೈಟ್ ಹಂಚಿಕೆಯಾಗಿದೆ ಎಂದು ಪ್ರತ್ಯಾರೋಪದಲ್ಲಿ ತೊಡಗಿದೆ. ಒಟ್ಟಿನಲ್ಲಿ ಈ ಅಕ್ರಮ, ಅವ್ಯವಹಾರ, ಹಗರಣ ಎಂದೆಲ್ಲ ಮುನ್ನಲೆಗೆ ಬಂದಾಗ ಆಡಳಿತ ಮತ್ತು ಪ್ರತಿಪಕ್ಷಗಳ ವಾದ ಯಾವ ಮಟ್ಟದಲ್ಲಿದೆಯೆಂದರೆ ನೀವು ಮಾಡಿಲ್ವಾ ಹಗರಣ? ನೀವು ಮಾತ್ರ ಮಾಡಬಹುದಾ? ನಿಮ್ಮ ಕಾಲಾವಧಿಯಲ್ಲಿ ಅಕ್ರಮ ಅವ್ಯವಹಾರಗಳೇ ನಡೆದಿಲ್ವಾ? ನೀವೇನು ಶ್ರೀರಾಮಚಂದ್ರರಾ? ನೀವು ಮಾಡಿದ್ದೀರಿ ಅದಕ್ಕೆ ನಾವು ಮಾಡ್ತಾ ಇದ್ದೀವಿ ಅನ್ನೋ ದಾಟಿಯಲ್ಲಿದೆ. ರಾಜ್ಯದ ಹಿತಕಾಯಬೇಕಾದ, ಪ್ರಮುಖ ನಿರ್ಧಾರಗಳನ್ನು ಕೈಗೊಂಡು, ಪ್ರಮುಖ ವಿಷಯದಲ್ಲಿನ ಚರ್ಚೆಗೆ ವೇದಿಕೆಯಾಗಬೇಕಾದ ಕೋಟ್ಯಾಂತರ ರುಪಾಯಿ ಖರ್ಚು ಮಾಡಿ ನಡೆಯುವ ವಿಧಾನಸಭಾ ಅಧಿವೇಶನ ಎಂಬುವುದು ಸರಕಾರದ ಪ್ರತಿನಿಧಿಗಳು ನಡೆಸುವ ಬ್ರಹ್ಮಾಂಡ ಭ್ರಷ್ಟಾಚಾರದ ಚರ್ಚೆಗೆ ಮಾತ್ರ ಸೀಮಿತವಾಗಿದೆ. ಒಬ್ಬ ಚುನಾಯಿತ ಜನಪ್ರತಿನಿಧಿಗೆ ಆತನ ಮತ್ತು ಆತನ ಕುಟುಂಬದ ಜೀವನ ನಡೆಯುವಷ್ಟರ ಮಟ್ಟಿಗೆ ಸರಕಾರದಿಂದ ಸವಲತ್ತುಗಳು, ವೇತನ, ದಿನಭತ್ಯೆ, ವಾಹನ ಭತ್ಯೆ, ವಾಸಕ್ಕೆ ಮನೆ ಎಲ್ಲವೂ ಲಭ್ಯವಿದೆ. ಇದನ್ನು ಮೀರಿ ತನಗೆ ತನ್ನ ಮಗನಿಗೆ, ತನ್ನ ಮೊಮ್ಮಗನಿಗೆ ಎಂದೆಲ್ಲ ಹತ್ತಾರು ತಲೆಮಾರಿನ ದೂರದೃಷ್ಟಿಯಿಂದ ಲೂಟಿ ಹೊಡೆಯುವುದು ಇದೆಯಲ್ಲ ಅದಕ್ಕೆ ಮೂಡಾ, ವಾಲ್ಮೀಕಿ ನಿಗಮದಂತಹ ಕೋಟ್ಯಂತರ ರುಪಾಯಿ ಅವ್ಯವಹಾರಗಳು ಸಾಕ್ಷಿಯಾಗುತ್ತವೆ. ಸರಕಾರ ಮಟ್ಟದಲ್ಲಿ ನಡೆಯುವ ನೂರಾರು ಹಗರಣಗಳಲ್ಲಿ ಎರಡು ಮೂರು ಗೋಲುಮಾಲುಗಳಷ್ಟೇ ಹೊರಪ್ರಪಂಚಕ್ಕೆ ತಿಳಿದುಬರುತ್ತದೆ. ನಾಲ್ಕು ಗೋಡೆಗಳ ಮಧ್ಯೆ ಆಡಳಿತ, ಪ್ರತಿಪಕ್ಷಗಳ ನಡುವಿನ ಹೊಂದಾಣಿಕೆಯ ಪರಿಣಾಮ ಇವೆಲ್ಲವೂ ಮುನ್ನಲೆಗೆ ಬರುವುದಿಲ್ಲ. ಇಂದು ಬೆರಳೆಣಿಕೆಯ ಜನಪ್ರತಿನಿಧಿಗಳನ್ನು ಹೊರತುಪಡಿಸಿದರೆ ಶಾಸಕ, ಸಚಿವ, ಮಾಜಿ ಶಾಸಕ, ಮಾಜಿ ಸಚಿವ, ಸಂಸದ, ಕೇಂದ್ರ ಮಂತ್ರಿ, ಮಾಜಿ ಮುಖ್ಯಮಂತ್ರಿ ಪ್ರತಿಯೊಬ್ಬ ರಾಜಕಾರಣಿಯೂ ಸಾವಿರಾರು ಕೋಟಿ ರುಪಾಯಿಗಳ ಬೇನಾಮಿ ಆಸ್ತಿಗಳ ಒಡೆಯರೇ ಆಗಿದ್ದಾರೆ.

ಅಂಗನವಾಡಿ ಮಕ್ಕಳಿಗೆ ನೀಡುವ ಮೊಟ್ಟೆಯ ಹಣದಿಂದ ಹಿಡಿದು ಸಾರ್ವಜನಿಕ ಶೌಚಾಲಯ, ದನಗಳ ಮೇವು, ಕ್ರೀಡಾ ಪರಿಕರ, ಬಡವರ ವಸತಿ ಯೋಜನೆ, ಕುಡಿಯುವ ನೀರು, ರಸ್ತೆ, ಸೇತುವೆ, ಇಂಧನ ಯಾವ ಯಾವ ಇಲಾಖೆ ನಿಗಮ, ಮಂಡಳಿ, ಪ್ರಾಧಿಕಾರಗಳಿವೆ ಎಲ್ಲ ಇಲಾಖೆಯಲ್ಲಿ ಈ ಹಿಂದಿನಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಅಕ್ರಮದ ಘಾಟು ಸಮಾಜಕ್ಕೆ ಬಡಿದಿದೆ. ಸಮಾಜದ ಹಾಗೂ ಜನರ ಹಿತವನ್ನು ಕಾಪಾಡುವ ಇಚ್ಛಾಶಕ್ತಿ ಕೇವಲ ಬೆರಳೆಣಿಕೆಯ ರಾಜಕಾರಣಿಗಳಲ್ಲಿ ಕಾಣಬಹುದಷ್ಟೇ. ಇನ್ನು ವಿವಿಧ ಇಲಾಖೆಗಳ ನೇಮಕಾತಿ ಪ್ರಕ್ರಿಯೆ, ಗೆಜೆಟೆಡ್ ಹುದ್ದೆಗಳ ನೇಮಕಾತಿ, ವಿವಿಧ ಇಲಾಖೆಗಳ ಕೀ ಪೋಸ್ಟ್‌ಗಳಲ್ಲಿ ತನ್ನದೇ ಜಾತಿ, ತನ್ನದೇ ಸಮುದಾಯದ ವ್ಯಕ್ತಿ ಕೆಪಿಎಸ್‌ಸಿ ಅಧ್ಯಕ್ಷ, ವಿವಿಧ ಇಲಾಖೆಗಳ ಎಂ.ಡಿ, ಸಿಇಓ, ಕೆಎಎಸ್, ತಹಶಿಲ್ದಾರ್ ಹುದ್ದೆಗಳನ್ನು ಅಲಂಕರಿಸಬೇಕೆಂಬ ಲಾಬಿ ಆ ಮೂಲಕ ತಮ್ಮ ಜಾತಿಯ ಬೇಳೆ ಬೇಯಿಸಿಕೊಳ್ಳುವ ಇರಾದೆ ರಾಜಕಾರಣಿಗಳದ್ದು. ಈವರೆಗೆ ಕರ್ನಾಟಕದಲ್ಲಿ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದ ವಿವಿಧ ಸಮುದಾಯದ ಪ್ರಮುಖರು ಇದಕ್ಕೆ ಅಡಿಗಲ್ಲು ಹಾಕಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ರಾಜಕೀಯ ಕ್ಷೇತ್ರವೆಂದರೆ ಸಮಗ್ರ ಹಾಗೂ ಸಾಮೂಹಿಕ ವ್ಯವಸ್ಥೆ. ಈ ರಾಜಕಾರಣದ ಕೀಲಿ ಕೈ ಇರುವುದು ಪ್ರಜೆಗಳ ಬಳಿ. ಪ್ರಜೆಗಳು ಅಥವಾ ಮತದಾರರು ಒಂದು ಗಟ್ಟಿ ತೀರ್ಮಾನ ಮಾಡಿದರೆ ಆ ರಾಜಕಾರಣಿಯ ಮುಂದಿನ ಭವಿಷ್ಯ ಸವೆದ ಸೀಸದ ನಾಣ್ಯದಂತಾಗುತ್ತದೆ. ಈ ಹಿಂದೆ ಭ್ರಷ್ಟಾಚಾರದ ವಿರುದ್ಧ ತೊಡೆ ತಟ್ಟಿ ಬಳ್ಳಾರಿ ಗಣಿಧಣಿಗಳ ವಿರುದ್ಧ ರಾಜಧಾನಿಯಿಂದ ಬಳ್ಳಾರಿಗೆ ಪಾದಯಾತ್ರೆ ಕೈಗೊಂಡು ಸಾಕಷ್ಟು ಸುದ್ದಿ ಮಾಡಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಆಡಳಿತಾವಧಿಯಲ್ಲಿ ಅವರ ಸರಕಾರದ ಸುತ್ತವೇ ಅಕ್ರಮ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಿರುವುದು ದುರ್ದೈವದ ಸಂಗತಿ. ಒಟ್ಟಿನಲ್ಲಿ ರಾಜಕಾರಣಕ್ಕೆ ಹಗರಣವನ್ನು ಬಿಟ್ಟಿರಲಾರದ ನಂಟಿರುವುದಕ್ಕೆ ಇತ್ತೀಚಿನ ಹಲವಾರು ಬೆಳವಣಿಗೆಗಳೇ ಸಾಕ್ಷಿ.

(ಲೇಖಕರು: ಹವ್ಯಾಸಿ ಬರಹಗಾರರು)

ಪ್ರಸ್ತುತ
ಕೆ.ವಿ.ವಾಸು

ತ್ರಿವೇಣಿಯವರ ನೆನಪಿನಲ್ಲಿ

ಮನೋವೈಜ್ಞಾನಿಕ ಕಾದಂಬರಿಗಳಿಗೆ ಮತ್ತೊಂದು ಹೆಸರಾದ ಕನ್ನಡದ ಪ್ರಖ್ಯಾತ ಲೇಖಕಿಯರಲ್ಲಿ ಒಬ್ಬರಾಗಿದ್ದ ದಿವಂಗತ ತ್ರಿವೇಣಿಯವರ ಮೈಸೂರು ನಗರದ ಚಾಮರಾಜಪುರದಲ್ಲಿರುವ 120 ವರ್ಷಗಳ ಸುದೀರ್ಘ ಇತಿಹಾಸ ಹೊಂದಿರುವ ನಿವಾಸವನ್ನು ಅವರ ಪುತ್ರಿ ಮೀರಾ ಶಂಕರ್‌ರವರು ಬೆಳ್ಳಿ ಮೋಡ ಹೆಸರಿನಲ್ಲಿ ವಸ್ತು ಸಂಗ್ರಹಾಲಯವನ್ನಾಗಿ ರೂಪಿಸುತ್ತಿರುವ ವಿಚಾರ ಸ್ವಾಗತಾರ್ಹವಾಗಿದೆ. ಕೇವಲ 34 ವರ್ಷಗಳ ಕಾಲ ಜೀವಿಸಿದ್ದ ತ್ರಿವೇಣಿ ಅಲ್ಪ ಕಾಲದಲ್ಲೇ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಚಲನ ಮೂಡಿಸಿದ್ದರು. ಆಗಿನ ಕಾಲದಲ್ಲೇ ಅವರು ತಮ್ಮ ಕಾದಂಬರಿಗಳಲ್ಲಿ ಸ್ತ್ರೀಪರ ದನಿ ಎತ್ತಿ ಮಹಿಳೆಯರ ಸಬಲೀಕರಣಕ್ಕೆ ಸಾಥ್ ನೀಡಿದ್ದರು. ಅವರ ಕಾದಂಬರಿಗಳ ಪೈಕಿ ಬೆಳ್ಳಿ ಮೋಡ ಅತ್ಯಂತ ಯಶಸ್ಸು ಗಳಿಸಿತ್ತು. ಈ ಚಿತ್ರದ ಗುಂಗಿನಿಂದ ಹೊರಬರಲು ಅಂದಿನ ಚಿತ್ರ ಪ್ರೇಮಿಗಳಿಗೆ ಬಹಳಷ್ಟು ದಿನಗಳೇ ಬೇಕಾದವು. ಆ ಚಿತ್ರದಲ್ಲಿ ಕಲ್ಪನಾ ಧರಿಸಿದ್ದ ಸೀರೆಗಳು ಬೆಳ್ಳಿ ಮೋಡ ಸೀರೆ ಎಂದೇ ಖ್ಯಾತವಾಯಿತು. ಈ ಕಾದಂಬರಿಯ ಕಥಾವಸ್ತುವಿಗೆ ಹೇಳಿ ಮಾಡಿಸಿದ ನಟಿ ಎಂದು ಹೇಳಬಹುದಾದ ಕಲ್ಪನಾರವರ ಮನೋಜ್ಞ ಅಭಿನಯವನ್ನು ಎಷ್ಟೇ ಕೊಂಡಾಡಿದರೂ ಸಾಲದು. ಕೃತಿಯ ಲೇಖಕಿ ತ್ರಿವೇಣಿಯವರ ಕಲ್ಪನೆಯಲ್ಲಿ ಮೂಡಿ ಬಂದ ಪಾತ್ರಕ್ಕೆ ಜೀವ ತುಂಬಿದವರು ಕಲ್ಪನಾ. ಅಷ್ಟೇ ಅಥವಾ ಅದಕ್ಕಿಂತ ಹೆಚ್ಚಿನ ಯಶಸ್ಸನ್ನು ಅವರ ಮತ್ತೊಂದು ಕಾದಂಬರಿ ಶರ ಪಂಜರ ಗಳಿಸಿತು. ಕನ್ನಡದ ಚಿತ್ರಬ್ರಹ್ಮ ದಿವಂಗತ ಪುಟ್ಟಣ್ಣ ಕಣಗಾಲ್ ಈ ಎರಡು ಕಾದಂಬರಿಗಳನ್ನು ಅತ್ಯಂತ ಮನೋಜ್ಞವಾಗಿ ಬೆಳ್ಳಿತೆರೆಗೆ ಅಳವಡಿಸಿ ಯಶಸ್ವಿಯಾದ್ದರು. ಪುಟ್ಟಣ್ಣನವರ ಮೊದಲ ನಿರ್ದೇಶನದ ಚಿತ್ರವೂ ಸಹ ಬೆಳ್ಳಿ ಮೋಡವೇ ಆಗಿತ್ತು ಎಂಬುದು ಇಲ್ಲಿ ಉಲ್ಲೇಖನಾರ್ಹ.

ಈ ಚಿತ್ರಗಳ ಹಾಡುಗಳು ಇಂದಿಗೂ ಸಹ ಜನರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಆರ್.ಎನ್.ಜಯಗೋಪಾಲ್ ಈ ಚಿತ್ರದ ಎಲ್ಲಾ ಮಧುರ ಗೀತೆಗಳ ಸೃಷ್ಟಿಕರ್ತ. ಪಿ.ಬಿ.ಶ್ರೀನಿವಾಸ್, ಎಸ್ ಜಾನಕಿ ಮತ್ತು ಪಿ. ಸುಶೀಲಾರವರ ದನಿಗಳಲ್ಲಿ ಮೂಡಿ ಬಂದಿರುವ ಗೀತೆಗಳು ಕೇಳಿದಷ್ಟೂ ಮತ್ತಷ್ಟು ಮಗದಷ್ಟು ಕೇಳಬೇಕೆಂಬ ಉತ್ಕಟತೆಯನ್ನು ಹುಟ್ಟಿಸುತ್ತದೆ. ದ.ರಾ ಬೇಂದ್ರೆಯವರ ಮೂಡಲ ಮನೆಯಾ ಮುತ್ತಿನ ನೀರಿನ ಎರಕ ಹೊಯ್ದ ಎಂಬ ಗೀತೆಯಂತೂ ಇಂದಿಗೂ ಸಹ ಅಂದಿನ ಜನಪ್ರಿಯತೆಯನ್ನೇ ಉಳಿಸಿಕೊಂಡಿದೆ. ಈ ಚಿತ್ರದ ಸಂಗೀತ ನಿರ್ದೇಶಕ ವಿಜಯಭಾಸ್ಕರ್‌ರವರಿಗೆ ಈ ಚಿತ್ರ ದೊಡ್ಡ ಹೆಸರು ತಂದು ಕೊಟ್ಟಿತು.

ಕಾದಂಬರಿಗಳನ್ನು ಅತ್ಯಂತ ಪರಿಣಾಮಕಾರಿಯಾಗಿ ಬೆಳ್ಳಿತೆರೆಗೆ ಅಳವಡಿಸುವುದರಲ್ಲಿ ಸಿದ್ಧಹಸ್ತರಾಗಿದ್ದ ಪುಟ್ಟಣ್ಣ ಕಣಗಾಲ್, ತ್ರಿವೇಣಿಯವರ ಬೆಳ್ಳಿಮೋಡ ಕಾದಂಬರಿಯನ್ನು ಓದಿ ಭಾವ ಪರವಶರಾಗಿ, ತಾವು ನಿರ್ದೇಶಿಸುವ ಮೊದಲ ಚಿತ್ರ ಇದೇ ಆಗಬೇಕು ಎಂದು ಪಣ ತೊಟ್ಟ, ಈ ಚಿತ್ರಕ್ಕೆ ತಮ್ಮ ಸರ್ವಸ್ವವನ್ನೂ ಸಮರ್ಪಿಸಿ, ಬೆಳ್ಳಿಮೋಡ ಎಂಬ ಶ್ರೇಷ್ಠ ಚಿತ್ರ ಮೂಡಿ ಬರಲು ಕಾರಣಕರ್ತರಾದದ್ದು ಈಗ ಗತ ಇತಿಹಾಸ.

ಅವರ ಮತ್ತೊಂದು ಕಾದಂಬರಿ ವೇಶ್ಯಾ ಸಮಸ್ಯೆಯಾಧಾರಿತ ಹೂವು ಹಣ್ಣು ಕಾದಂಬರಿಯನ್ನು ರಾಜೇಂದ್ರ ಸಿಂಗ್ (ಬಾಬು) ನಿರ್ದೇಶಿಸಿದ್ದರು. ತ್ರಿವೇಣಿಯವರು 21 ಕ್ಕೂ ಹೆಚ್ಚು ಕಾದಂಬರಿಗಳನ್ನು ಹಾಗೂ 03 ಸಣ್ಣ ಕಥೆಗಳ ಸಂಕಲನಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಗಮನಾರ್ಹ ಕೊಡುಗೆ ನೀಡಿದ್ದಾರೆ. ಅವುಗಳ ಪೈಕಿ ಹಣ್ಣಲೆ ಚಿಗುರಿದಾಗ, ದೂರದ ಬೆಟ್ಟ, ಸಮಸ್ಯೆಯ ಮಗು, ಅವಳ ಮನೆ ಮುಂತಾದವುಗಳನ್ನು ಹೆಸರಿಸಬಹುದು.

ತ್ರಿವೇಣಿಯವರು ಜೀವಿಸಿದ್ದ ಕಾಲ ಘಟ್ಟದಲ್ಲಿ ಸ್ತ್ರೀಯರಿಗೆ ಹೆಚ್ಚಿನ ರೀತಿಯ ಸ್ವಾತಂತ್ರ್ಯ ಇರಲಿಲ್ಲ. ಅವರು ಮನೆಯಿಂದ ಹೊರಗೆ ಹೋಗುವುದೇ ಅಪರೂಪವಾಗಿತ್ತು ಆದರೂ ತ್ರಿವೇಣಿಯವರು ದಿಟ್ಟತನದಿಂದ ಬೇಲಿಯನ್ನು ದಾಟಿ, ಸ್ತ್ರೀಯರು ಸಹ ಪುರುಷರಷ್ಟೇ ಅಥವಾ ಅವರಿಗಿಂತ ಹೆಚ್ಚಿನ ಸಾಧನೆ ಮಾಡಬಲ್ಲರು ಎಂಬುದನ್ನು ತಮ್ಮ ಕಾದಂಬರಿಗಳ ಮೂಲಕ ತೋರಿಸಿಕೊಟ್ಟ ಸ್ವಾಭಿಮಾನಿ ಹೆಣ್ಣಾದರು.

ದಿವಂಗತ ಬಿ.ಎಂ.ಕೃಷ್ಣಸ್ವಾಮಿ ಹಾಗೂ ತಂಗಮ್ಮದಂಪತಿಗಳ ಪುತ್ರಿಯಾಗಿ ಸೆಪ್ಟೆಂಬರ್ 1, 1928 ರಲ್ಲಿ ಜನಿಸಿದ ತ್ರಿವೇಣಿಯವರ ಮೂಲ ಹೆಸರು ಅನಸೂಯ. ಮುಂದೆ ತ್ರಿವೇಣಿ ಎಂಬ ಕಾವ್ಯನಾಮದಲ್ಲಿ ಅವರು ಹಲವಾರು ಶ್ರೇಷ್ಠ ಕಾದಂಬರಿಗಳನ್ನು ಬರೆದರು. ತ್ರಿವೇಣಿಯವರ ಹಲವಾರು ಕೃತಿಗಳನ್ನು ಇಂಗ್ಲಿಷ್, ತೆಲುಗು ಮತ್ತು ಮಲೆಯಾಳಂ ಭಾಷೆಗಳಿಗೆ ಅನುವಾದಿಸಲಾಗಿದೆ. ಅವರ ಅವಳ ಮನೆ ಎಂಬ ಕಾದಂಬರಿಗೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ನೀಡಲಾಗಿದೆ. ಇದೇ ರೀತಿ ಇನ್ನೂ ಹತ್ತು ಹಲವು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ತ್ರಿವೇಣಿಯವರು ಜುಲೈ 29, 1963 ರಂದು ಕೇವಲ 34 ನೇ ವಯಸ್ಸಿನಲ್ಲೇ ನಮ್ಮನ್ನಗಲಿದ್ದು ಅತ್ಯಂತ ದುಃಖಕರ ವಿಚಾರ. ತಮ್ಮ ಅಲ್ಪ ಜೀವಿತ ಕಾಲದಲ್ಲೇ ಹಲವಾರು ಮಹತ್ವಪೂರ್ಣ ಕಾದಂಬರಿಗಳನ್ನು ರಚಿಸಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ತ್ರಿವೇಣಿಯವರ ನೆನಪನ್ನು ಚಿರಸ್ಥಾಯಿಯಾಗಿಸುವ ಕೆಲಸವನ್ನು ರಾಜ್ಯ ಸರಕಾರವೇ ಮಾಡಬೇಕಿತ್ತು. ಆದರೆ ಅದು ಸಾದ್ಯವಾಗಿಲ್ಲ. ಈಗ ಅವರ ಪುತ್ರಿ ಮೀರಾ ಶಂಕರ್‌ರವರೇ ಈ ಕೆಲಸಕ್ಕೆ ಕೈ ಹಾಕುವ ಮೂಲಕ ಮಾತೃಋಣ ತೀರಿಸಲು ಹೊರಟಿದ್ದಾರೆ. ಅವರಿಗೆ ಶುಭಾಶಯಗಳು.

(ಲೇಖಕರು: ಹವ್ಯಾಸಿ ಬರಹಗಾರರು ಮತ್ತು ವಕೀಲರು ಮತ್ತು ನೋಟರಿ)

ದಿನಾ 14 ತಾಸುಗಳ ದುಡಿತ, ಟೆಕ್ಕಿಗಳ ಜೀವನ ಸವೆತ!

ಒಂದು ಉದ್ಯಮವು ತನ್ನ ಸಿಬ್ಬಂದಿಗಳ ಕೆಲಸದ ಅವಧಿಯನ್ನು ಹೆಚ್ಚಿಸಲು ಇರುವ ಮುಖ್ಯಕಾರಣ ಕೆಲಸದ ಒತ್ತಡ, ಉದ್ಯಮ ಲಾಭಗಳಿಸದಿರುವುದು, ನಿರ್ವಹಣಾ ವೆಚ್ಚವನ್ನು ನಿಯಂತ್ರಣಗೊಳಿಸುವ ಅನಿವಾರ್ಯತೆ ಎನ್ನಬಹುದು. ಐಟಿ ಉದ್ಯಮವು ನಷ್ಟದಲ್ಲಿಲ್ಲ. ಬೇರೆ ಎಲ್ಲ ಉದ್ಯಮಗಳಿಗಿಂತ ಹೆಚ್ಚು ಲಾಭವನ್ನು ತೋರಿಸುತ್ತದೆ. ಸಿಬ್ಬಂದಿಗಳ productivityಯನ್ನು ಹೆಚ್ಚಿಸುವ ಅನಿವಾರ್ಯತೆಯಲ್ಲೂ ಇರುವುದಿಲ್ಲ. ಪ್ರಸ್ತುತ ಇರುವ ಸಿಬ್ಬಂದಿಗಳು ನಿಭಾಯಿಸಲಾಗದಷ್ಟು ಹೊಸ ಕೆಲಸಗಳು ಬಂದಿರುವ ಮಾಹಿತಿ ಕೂಡಾ ಇರುವುದಿಲ್ಲ.

ಅಭಿಮತ
ರಮಾನಂದ ಶರ್ಮಾ
vveditoped@gmail.com

ವರ್ಷಗಳ ಹಿಂದಿನ ಘಟನೆ. ಟೆಕ್ಕಿಯೊಬ್ಬ ತನ್ನ ಗೃಹ ಸಾಲಕ್ಕೆ ಸಂಬಂಧಪಟ್ಟಂತೆ ಮುಂಜಾನೆ ಹತ್ತು ಘಂಟೆಗೆ ಬ್ಯಾಂಕಿಗೆ ಬಂದಿದ್ದ. ಅಂದು ಬ್ಯಾಂಕ್‌ನ ಸಿಬ್ಬಂದಿಗಳು ಮುಷ್ಕರದಲ್ಲಿದ್ದು. ಬ್ಯಾಂಕ್‌ನ ಗೇಟ್ ಲಾಕ್ ಆಗಿತ್ತು. ಕೆಂಪು ಬಾವುಟದ ಅಡಿಯಲ್ಲಿ ಸಿಬ್ಬಂದಿಗಳು ಕೈಯಲ್ಲಿ ಫಲಕಗಳನ್ನು ಹಿಡಿದು ಬ್ಯಾಂಕ್ ಆಡಳಿತವರ್ಗ ಮತ್ತು ಸರಕಾರದ ವಿರುದ್ಧ ಮುಷ್ಟಿ ಏರಿಸಿ ಮುಗಿಲು ಮುಟ್ಟುವಂತೆ ಘೋಷಣೆಗಳನ್ನು ಕೂಗುತ್ತಿದ್ದರು. ಮುಷ್ಕರದಿಂದಾಗಿ ಬ್ಯಾಂಕ್ ತೆರೆಯುವುದಿಲ್ಲವೆಂದು ಖಚಿತ ಪಡಿಸಿಕೊಂಡ ಆ ಟೆಕ್ಕಿಯು ಈ ಬ್ಯಾಂಕ್ ಸಿಬ್ಬಂದಿಗಳದ್ದು ಯಾವಾಗಲೂ ಇದೇ ಆಗಿ ಹೋಯಿತು, ವರ್ಷಾವಧಿ ಮುಷ್ಕರದಲ್ಲಿಯೇ ಇರುತ್ತಾರೆ, ಇವರಿಗೆ ನೀಡುವ ಸಂಬಳ ಮತ್ತು ಸೌಲಭ್ಯ ಕ್ರಿಮಿನಲ್ ವೇಸ್ಟ್. ಇವರು ದಂಡ ಪಿಂಡಗಳು, ಬ್ಯಾಂಕುಗಳನ್ನೆಲ್ಲ ಖಾಸಗೀಕರಣಗೊಳಿಸಬೇಕು ಎಂದು ಬ್ಯಾಂಕ್ ಸಿಬ್ಬಂದಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಾನೆ. ಇದನ್ನೆಲ್ಲ ಶಾಂತವಾಗಿ ಆಲಿಸಿದ ಬ್ಯಾಂಕ್ ಕಾರ್ಮಿಕ ಧುರೀಣನು ಟೆಕ್ಕಿಯನ್ನು ಕರೆದು ಅತ್ತೆಗೊಂದು ಕಾಲ, ಸೊಸೆಗೊಂದು ಒಂದು ಕಾಲ ಅಥವಾ every dog has its own dayಗಾದೆ ಗೊತ್ತಾ? ಎಂದು ಕೇಳುತ್ತಾನೆ. ಈ ದೃಶ್ಯಾವಳಿ ನಿಮ್ಮ ಕಚೇರಿಯ ಎದುರುಗಡೆಯೂ ಕಾಣುವ ದಿನ ದೂರವಿಲ್ಲ ಎನ್ನುತ್ತಾನೆ. ಇನ್ನು ಕೆಲವೇ ದಿನಗಳಲ್ಲಿ ನೀವೂ ಇದೇ ತರಾಟೆಯನ್ನು ಅನುಭವಿಸುತ್ತೀರಿ ಮತ್ತು ನಮಗಿಂತ ದೊಡ್ಡದಾಗಿ ಕೂಗುತ್ತೀರಿ ಎನ್ನಲು ಆ ಟೆಕ್ಕಿ ಉತ್ತರಿಸದೆ ಹೊರಟು ಹೋಗುತ್ತಾನೆ.

ಐಟಿ ವಲಯದಲ್ಲಿನ ಇತ್ತೀಚಿನ ಕೆಲವು ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದರೆ ಐಟಿ ಕಚೇರಿಗಳ ಎದುರಿಗೆ ಇಂಥಹ ದೃಶ್ಯಾವಳಿಗಳು ಕಾಣುವ ದಿನಗಳು ದೂರ ಇದ್ದಂತೆ ಅನಿಸುವುದಿಲ್ಲ. ಮನೆಯಿಂದಲೇ ಕೆಲಸ. ವರ್ಗಾವರ್ಗಿ, ನಿರೀಕ್ಷೆಯಷ್ಟು ಏರದ ವಾರ್ಷಿಕ ಸಂಬಳ ಏರಿಕೆ, ಹೊಸಬರಿಗೆ, ಕೆಳದರ್ಜೆ ಸಿಬ್ಬಂದಿಗಳಿಗೆ ಆಕರ್ಷಕವಲ್ಲದ ಸಂಬಳ, ಮನೆಯಿಂದಲೇ ಕೆಲಸಕ್ಕೆ ಕೊಕ್ ಸಂಭವ, ಉನ್ನತ ಅಧಿಕಾರಿಗಳಿಗೆ ಕೋಟ್ಯಾಂತರ ಸಂಬಳ ಹೀಗೆ ಹಲವಾರು ವಿಷಯಗಳಲ್ಲಿ ಸಿಬ್ಬಂದಿಗಳು ಸಂತುಷ್ಟರಿಲ್ಲ ಎನ್ನುವ ಗುಸು ಗುಸು ಕೇಳಿಬರುತ್ತಿದೆ. ವರ್ಗಾವರ್ಗಿ ವಿಚಾರದಲ್ಲಿ ಕೆಲವರು ನ್ಯಾಯಾಲಯದ ಮೆಟ್ಟಿಲನ್ನೂ ಏರಿದ್ದಾರಂತೆ. ಈಗ ಅವರ ಅತೃಪ್ತಿಯ ಲಿಸ್ಟ್‌ಗೆ ಟೆಕ್ಕಿಗಳು ದಿನಾಲೂ 12 ತಾಸುಗಳ ಬದಲು 14 ತಾಸು ಅಥವಾ ವಾರಕ್ಕೆ 70 ತಾಸು ಕೆಲಸ ಮಾಡಬೇಕು ಎನ್ನುವ ಪ್ರಸ್ತಾವ. ಕರ್ನಾಟಕದ ಐಟಿ ಉದ್ಯಮವು ಈ ನಿಟ್ಟಿನಲ್ಲಿ ಕರ್ನಾಟಕ ಸರಕಾರದ ಅನುಮತಿ ಕೇಳಿದ್ದು, ಸರಕಾರ ಇನ್ನೂ ನಿರ್ಣಯವನ್ನು ತೆಗೆದುಕೊಳ್ಳಬೇಕಾಗಿದೆ. ವದಂತಿಗಳನ್ನು ನಂಬುವುದಾದರೆ 14 ತಾಸುಗಳ ಕೆಲಸದ ಸಾಧ್ಯತೆ ಹೆಚ್ಚು ಕಾಣುತ್ತಿದೆ. ಈ ಪ್ರಸ್ತಾವವನ್ನು ರಾಜ್ಯ ಸರಕಾರವು ನೇರವಾಗಿ ತಿರಸ್ಕರಿಸದೆ ಮೀನ ಮೇಷ ಎಣಿಸುತ್ತಿದ್ದು, ಈ ನಿಯಮಾವಳಿ ಎಲ್ಲಾ ಐಟಿ ಉದ್ಯಮಗಳಿಗೆ ಅಲ್ಲ ಎಂದು ಸುತ್ತು ಬಳಸಿ ಮಾತನಾಡುತ್ತಿದೆ.

ವರ್ಷಗಳ ಹಿಂದೆ ಕಾರ್ಮಿಕ ನಾಯಕರೊಬ್ಬರು ಐಟಿ ಉದ್ಯಮವು ತನ್ನ ಸಿಬ್ಬಂದಿಗಳನ್ನು ಕಬ್ಬಿನ ರಸ ಮಾರುವವರು ಕಬ್ಬನ್ನು ಹಿಂಡಿ ಹಿಪ್ಪೆಮಾಡುವಂತೆ ದುಡಿಸುತ್ತಾರೆ ಎಂದು ಟೀಕೆ ಮಾಡಿದ್ದರು. ಈ 14 ತಾಸುಗಳ ಪ್ರಸ್ತಾವವು ಈ ಕಾರ್ಮಿಕ ನಾಯಕರ ಟೀಕೆಯನ್ನು ನೆನಪಿಸುತ್ತದೆ. ಈಗ ದುಡಿಸುವ 10-12 ತಾಸುಗಳ ಅವಧಿಯೇ ಅವರನ್ನು ಬರ್ನ್ ಔಟ್ ಮಾಡುತ್ತಿದ್ದು, ವೈದ್ಯರು ಹೇಳುವ ಸುದೀರ್ಘ ಕೆಲಸದ ಅವಧಿ ಹಲವಾರು ರೋಗಗಳಿಗೆ ಕಾರಣವಾಗುತ್ತದೆ ಮತ್ತು ಅವಧಿ ಪೂರ್ವ ಸಾವಿಗೆ ಕಾರಣವಾಗುತ್ತದೆ ಎಂಬುದನ್ನು ನೆನಪಿಸುತ್ತದೆ. 14 ತಾಸುಗಳ ಕೆಲಸವನ್ನು ಅವರು ತಾಳಿಯಾರೇ? ಕರ್ನಾಟಕ ಶಾಪ್ ಮತ್ತು ಎಸ್ಟಾಬ್ಲಿಶ್‌ಮೆಂಟ್ ಆಕ್ಟ್‌ನ ಪ್ರಕಾರ ದಿನಕ್ಕೆ ಗರಿಷ್ಠ 10 ತಾಸು ಕೆಲಸ ಮತ್ತು 2 ತಾಸುಗಳ ಓವರ್ ಟೈಮ್ ನಿಗದಿಪಡಿಸಿದ್ದು, ಈ ಪ್ರಸ್ತಾವ ಇದರ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ ಎಂದು ಕರ್ನಾಟಕ ರಾಜ್ಯ ಐಟಿ ಉದ್ಯೋಗಿಗಳ ಸಂಘ ಪ್ರತಿಭಟಿಸಿದೆ. ಇದು ಜಾರಿಯಾದರೆ ಇದು ಈಗಿರುವ ಮೂರು ಪಾಳಿಯ (Shift)ವ್ಯವಸ್ಥೆಯನ್ನು ಎರಡು ಪಾಳಿಗೆ ಇಳಿಸಿ ಅಂತಿಮವಾಗಿ ಮೂರನೆ ಒಂದು ಭಾಗ ಸಿಬ್ಬಂದಿಗಳಿಗೆ ಕೆಂಪು ಚೀಟಿಯನ್ನು ನೀಡ ಬಹುದು ಎಂದು ಅವರು ಚಿಂತಿತರಾಗಿದ್ದಾರೆ. ಕೆಲಸದ ಅವಧಿಯನ್ನು ಎರಡು ತಾಸು ಹೆಚ್ಚಿಸುವ ಐಟಿ ಉದ್ಯಮವು ಅದೇ ಪ್ರಮಾಣದಲ್ಲಿ ಸಿಬ್ಬಂದಿಗಳ ಸಂಬಳವನ್ನು ಹೆಚ್ಚಿಸುವುದರ ಬಗೆಗೆ ಯಾವುದೇ ಸ್ಪಷ್ಟತೆ ಇರುವುದಿಲ್ಲ. ಅಕಸ್ಮಾತ್ ಕೆಲಸದ ಅವಧಿಯ ಹೆಚ್ಚಳವನ್ನು ಸಂಬಳ ಸೌಲಭ್ಯದ ಹೆಚ್ಚುಗಾರಿಕೆಯೊಂದಿಗೆ ನೀಡಿದರೂ ಯಾವ ಟೆಕ್ಕಿಯೂ ಅದನ್ನು ಸ್ವೀಕರಿಸಲಾರ ಎಂದು ಹೇಳಲಾಗುತದೆ. ಇದು ಒಂದು ರೀತಿಯಲ್ಲಿ ಗುಲಾಮಗಿರಿಯತ್ತ ಮತ್ತು ದಶಕಗಳ ಮೊದಲೇ ಸಿಬ್ಬಂದಿಗಳಿಗೆ ಸ್ವರ್ಗ ಸೇರಿಸಲಿರುವ ಪ್ರಹಸನ ಎಂದು ಅವರು ಆಕ್ರೋಶ ವ್ಯಕ್ತ ಮಾಡುತ್ತಿದ್ದಾರೆ. ತಿಂಗಳುಗಳ ಹಿಂದೆ ಐಟಿ ದಿಗ್ಗಜ ನಾರಾಯಣ ಮೂರ್ತಿಯವರು ಇಂತಹ ಒಂದು ಪ್ರಸ್ತಾವವನ್ನು ಮಾಡಿದಾಗ, ಇದರ ಹಿಂದೆ ಐಟಿ ಉದ್ಯಮದಲ್ಲಿ ಈ ನಿಟ್ಟಿನಲ್ಲಿ ಒಳಗೊಳಗೇ ಏನೋ ಮಸಲತ್ತು ನಡೆಯುತ್ತಿದೆ ಎನ್ನುವ ಸಂದೇಹವನ್ನು ಕೆಲವರು ವ್ಯಕ್ತ ಮಾಡಿದ್ದು, ಅದು ಈಗ ನಿಜವಾಗಿದೆ. ಅವರ ಪ್ರಸ್ತಾವ, ಸೂಚನೆ ಮತ್ತು ಸಲಹೆಯ ಪರ ಮತ್ತು ವಿರುದ್ಧ ಸಾಕಷ್ಟು ಅಭಿಪ್ರಾಯಗಳು ಮೂಡಿದೆ. ಆದರೆ, ಅದು ಅಷ್ಟು ಬೇಗ ಅನಾವರಣಗೊಳ್ಳುವನಿಟ್ಟಿನಲ್ಲಿ ಮುಂದೆ ಸಾಗಬಹುದು ಮತ್ತು ಗಂಭೀರತೆಯನ್ನು ಪಡೆಯಬಹುದಂದು ಎಂದು ಯಾರೂ ಎಣಿಸಿರಲಿಲ್ಲ.

ಒಂದು ಉದ್ಯಮವು ತನ್ನ ಸಿಬ್ಬಂದಿಗಳ ಕೆಲಸದ ಅವಧಿಯನ್ನು ಹೆಚ್ಚಿಸಲು ಇರುವ ಮುಖ್ಯಕಾರಣ ಕೆಲಸದ ಒತ್ತಡ, ಉದ್ಯಮ ಲಾಭಗಳಿಸದಿರುವುದು, ನಿರ್ವಹಣಾ ವೆಚ್ಚವನ್ನು ನಿಯಂತ್ರಣಗೊಳಿಸುವ ಅನಿವಾರ್ಯತೆ ಎನ್ನಬಹುದು. ಐಟಿ ಉದ್ಯಮವು ನಷ್ಟದಲ್ಲಿಲ್ಲ. ಬೇರೆ ಎಲ್ಲ ಉದ್ಯಮಗಳಿಗಿಂತ ಹೆಚ್ಚು ಲಾಭವನ್ನು ತೋರಿಸುತ್ತದೆ. ಸಿಬ್ಬಂದಿಗಳ productivityಯನ್ನು ಹೆಚ್ಚಿಸುವ ಅನಿವಾರ್ಯತೆಯಲ್ಲೂ ಇರುವುದಿಲ್ಲ. ಪ್ರಸ್ತುತ ಇರುವ ಸಿಬ್ಬಂದಿಗಳು ನಿಭಾಯಿಸಲಾಗದಷ್ಟು ಹೊಸ ಕೆಲಸಗಳು ಬಂದಿರುವ ಮಾಹಿತಿ ಕೂಡಾ ಇರುವುದಿಲ್ಲ. ಈ ಪ್ರಹಸನದಲ್ಲಿ ಸಿಬ್ಬಂದಿಗಳ productivity ಯನ್ನು ಹೆಚ್ಚಿಸಿ ತನ್ಮೂಲಕ ತಮ್ಮ ಲಾಭವನ್ನು ಹೆಚ್ಚಿಸಿಕೊಳ್ಳುವ ಅಗೋಚರ ಅಜೆಂಡಾ ಇದ್ದಂತೆ ಕಾಣುತ್ತದೆ. ಅಂತೆಯೇ ಸಿಬ್ಬಂದಿಗಳ ಕೆಲಸದ ಅವಧಿಯನ್ನು ಹೆಚ್ಚಿಸಿ ಅವರನ್ನು ಕಬ್ಬಿನಂತೆ ಹಿಂಡುವ ಬದಲು ಇನ್ನೂ ಹೆಚ್ಚು ಜನರಿಗೆ ಉದ್ಯೋಗ ಅವಕಾಶವನ್ನು ನೀಡಬಹುದಲ್ಲ. ಎನ್ನುವ ಈ ಪ್ರಸ್ತಾವವನ್ನು ವಿರೋಧಿಸುವವರ ವಾದದಲ್ಲಿ ಅರ್ಥವಿದೆ.

ಈ ದೇಶದಲ್ಲಿ ಉದ್ಯೋಗಿಗಳ ಕೆಲಸದ ಅವಧಿ ಮತ್ತು ಅವರ ಪ್ರೊಡಕ್ಟಿವಿಟಿ ಬಗೆಗೆ ಬಹುತೇಕ ಉದ್ಯೋಗದಾತರು ಸಂತುಷ್ಟರಿಲ್ಲ ಎನ್ನುವ ಕಾರ್ಮಿಕ ಧುರೀಣರ ಟೀಕೆಯಲ್ಲಿ ಅರ್ಥವಿಲ್ಲ ಎನ್ನುವಂತಿಲ್ಲ. ಪ್ರತಿ ವೇತನ ಪರಿಷ್ಕರಣೆಯಲ್ಲಿ ಇದು ಮೇಲ್ಮೆಗೆ ಬರುತ್ತದೆ. ಮುಂಜಾನೆಯಿಂದ ಮಧ್ಯರಾತ್ರಿವರೆಗೆ ದುಡಿದರೂ, ಇನ್ನು ಸಾಕು, ಮನೆಗೆ ತೆರಳಿ ಕುಟುಂಬದೊಂದಿಗೆ ಕಾಲ ಕಳೆಯಿರಿ ಎಂದು ಉದ್ಯೋಗಧಾತರು ಹೇಳುವುದಿಲ್ಲ ಎಂದು ದುಡಿಯುವ ವರ್ಗ ಆಕ್ರೋಶ ವ್ಯಕ್ತ ಮಾಡುತ್ತದೆ. ಈ ಪರಿಸ್ಥಿತಿ ಐಟಿ ಉದ್ಯಮಕ್ಕೂ ಕಾಲಿರಿಸಿತೇ ಎಂದು ಆಶ್ಚರ್ಯವಾಗುತ್ತದೆ.

ಸಾಮಾನ್ಯ ಉದ್ಯಮಗಳಲ್ಲಿ ಸಿಬ್ಬಂದಿಗಳ ಕೆಲಸದ ಅವಧಿಯನ್ನು ಹೆಚ್ಚಿಸುವ ಪ್ರಸ್ತಾವ ಆಗೊಮ್ಮೆ ಈಗೊಮ್ಮೆ ಮೇಲಕ್ಕೆ ಬರುತ್ತ ದೆ. ಕಾರ್ಮಿಕರ ದೃಢ ವಿರೋಧದಿಂದ ಅದು ಬಹುತೇಕ ಸಂದರ್ಭಗಳಲ್ಲಿ ಕಾರ್ಯಗತವಾಗುವುದಿಲ್ಲ. ಅಂತಾರಾಷ್ಟ್ರೀಯ ಕಾರ್ಮಿಕ ಸಂಘ (International Labour Orgnisation -ILO)ಕಾರ್ಮಿಕರ ವಾರದ ಕೆಲಸದ ಅವಧಿ 40 ತಾಸುಗಳನ್ನು ಮೀರಬಾರದು ಎನ್ನುವ ಕಟ್ಟಳೆ ವಿಧಿಸಿದ್ದು, ಕೆಲಸದ ಅವಧಿಯನ್ನು ಕಡಿಮೆಗೊಳಿಸಲು ಪ್ರಯತ್ನಿಸಬೇಕು ಎಂದೂ ಹೇಳಿದೆ. ಅಮೆರಿಕದಲ್ಲಿ ವಾರಕ್ಕೆ ಐದು ದಿವಸಗಳ ಕೆಲಸದದಿನ ವಿದ್ದು, ದಿನಕ್ಕೆ 8 ತಾಸಿನಂತೆ ವಾರಕ್ಕೆ 40 ತಾಸುಗಳ ಕೆಲಸದ ಅವಧಿ ಇರುತ್ತದೆ. ಬಹುತೇಕ ರಾಷ್ಟ್ರಗಳಲ್ಲಿ ಇದೇ ಸಾಮಾನ್ಯ. ಕೆಲವು ರಾಷ್ಟ್ರಗಳಂತೂ ಉದ್ಯೋಗಿಗಳನ್ನು ಖುಷಿಯಾಗಿರಿಸಲು ಮತ್ತು ಆರೋಗ್ಯದಾಯಕವಾಗಿರಿಸಲು ನಾಲ್ಕು ದಿನಗಳ ವಾರವನ್ನು ಅಳವಡಿಸಿಕೊಂಡಿವೆ. ಊರಿಗೆ ಒಂದು ದಾರಿಯಾದರೆ ಪೋರನಿಗೆ ಇನ್ನೊಂದು ದಾರಿ ಎನ್ನುವಂತೆ ಕರ್ನಾಟಕದಲ್ಲಿನ ಐಟಿ ಉದ್ಯಮವು ದಿನಕ್ಕೆ 14 ತಾಸುಗಳ ಕೆಲಸವನ್ನು ಜಾರಿಗೊಳಿಸಲು ಸನ್ನದ್ಧವಾಗಿದೆ. ಮೇಲುನೋಟಕ್ಕೆ ಇದು 14 ತಾಸುಗಳ ಕೆಲಸ. ಆದರೆ ವಾಸ್ತವದಲ್ಲಿ ಐಟಿ ಕಚೇರಿಗಳು ಇರುವ ನಗರಗಳಲ್ಲಿನ ಟ್ರಾಫಿಕ್ ದಟ್ಟನೆಯನ್ನು ಮತ್ತು ಕಚೇರಿಗೆ ಹೋಗಿ ಬರುವ ಸಮಯವನ್ನು ಗಣನೆಗೆ ತೆಗೆದುಕೊಂಡರೆ ಇದು 18 ತಾಸುಗಳ ದಿನವಾಗುತ್ತದೆ. ಇನ್ನುಳಿದ 6 ತಾಸುಗಳಲ್ಲಿ ಕುಟುಂಬವನ್ನು ನಿಭಾಯಿಸಬೇಕು. ಇಂದಿನ ದಿನಗಳಲ್ಲಿ ಬಹುತೇಕ ಎಲ್ಲವೂ ವಿಭಕ್ತ ಕುಟುಂಬಗಳಾಗಿದ್ದು ಅವರ ಮನೆಯನ್ನು ಅವರೆ ನಿಭಾಯಿಸಬೇಕು. ಉದ್ಯಮಿ ಟೈಕೂನ್‌ಗಳಿಗೆ ಇರುವಂತೆ ಕಾಲಿಗೊಬ್ಬ-ಕೈಗೆ ಒಬ್ಬ ಸಹಾಯಕರು ಇರುವುದಿಲ್ಲ. ಪತಿ ಪತ್ನಿಯರಿಬ್ಬರೂ ದುಡಿಯಲು ಹೊರ ಹೋದರೆ ಅವರಿಗೆ ಜೊಮೆಟೋ-ಸ್ವಿಗ್ಗಿಯೇ ಗತಿ. ಈಗಾಗಲೇ ಬಹುತೇಕ ಐಟಿ ಉದ್ಯೋಗಿಗಳು work-life balanceಮಾಡಲಾಗದೆ ಚಡಪಡಿಸುತ್ತಿದ್ದಾರೆ. ಐಟಿ ಉದ್ಯೋಗದ ವಿಶಿಷ್ಟತೆ ಎಂದರೆ ಇನ್ನಿತರ ಉದ್ಯೋಗಳಂತೆ 10 ರಿಂದ 5 ರ ವರೆಗೆ ಕೆಲಸಮಾಡಿ ಮನೆಗೆ ತೆರಳುವುದಲ್ಲ. ಬಹುತೇಕ ಉದ್ಯೋಗಿಗಳು ವಿದೇಶಿ ಗ್ರಾಹಕರೊಡನೆ ವ್ಯವಹರಿಸುವ ಅನಿವಾರ್ಯತೆ ಇರುವುದರಿಂದ ವಿದೇಶಿ ಗಡಿಯಾರದಂತೆ ಇವರು ಕೆಲಸ ಮಾಡಬೇಕಾಗುತ್ತದೆ.

ಇನ್ನಿತರ ಕೆಲವು ವಲಯಗಳಿಗೆ ಹೋಲಿಸಿದರೆ ಟೆಕ್ಕಿಗಳ ಸಂಬಳ-ಸೌಲಭ್ಯ, ಕೆಲಸದ ವಾತಾವರಣ, ವಿಶೇಷ ವರ್ಗಾವರ್ಗಿ ಇಲ್ಲದ ಉದ್ಯೋಗ, ಬಹುತೇಕ ದೊಡ್ಡ ಪಟ್ಟಣ ಮತ್ತು ನಗರಗಳಲ್ಲಿ ಕೆಲಸ, ಕೈತುಂಬಾ ಸಂಬಳವೆಂದು ಹೇಳಲಾಗದಿದ್ದರೂ ತಿಂಗಳ ಕೊನೆಯನ್ನು ನಿರಾತಂಕವಾಗಿ ಕಳೆಯುವಷ್ಟು ಸಂಬಳ ಮತ್ತು ಮನೆಯಿಂದಲೇ ಕೆಲಸ ಮಾಡುವ ಅವಕಾಶಗಳನ್ನು ನೋಡುವಾಗ, ಹಲವರು ಹುಬ್ಬೇರಿಸುವುದಂಟು. ಆದರೆ, ಅವರ ಉದ್ಯೋಗ ಉಳಿದವಂತೆ 10 ರಿಂದ 5 ರ ವರೆಗೆ ಖುರ್ಚಿ ಬಿಸಿ ಮಾಡಿ ಮನೆಗೆ ಮರಳಿ ಕುಟುಂಬದವರೊಡನೆ ಕಳೆಯುವುದಲ್ಲ. ಕುಟುಂಬ ಜೀವನ ನೆಮ್ಮದಿಯ ಹಳಿ ತಪ್ಪಿ ಅಸ್ತವ್ಯಸ್ತವಾಗಿರುವುದೇ ಹೆಚ್ಚು. ಈ ಪರಿಪಾಟಲನ್ನು ನೋಡಿ ಈ ಲ್ಯಾಪ್ ಟಾಪ್ ಉದ್ಯೋಗಕ್ಕಿಂತ ಶಾಲಾ ಟೀಚರ್ ಆಗಿ, ಸರಕಾರಿ ಕಚೇರಿ ಉದ್ಯೋಗಿಯಾಗಿ ಸಂಜೆ 6-7 ಘಂಟೆಗೆ ಮನೆಗೆ ಮರಳುವುದೇ ವಾಸಿ ಎನ್ನುವಂತಾಗಿದೆಯಂತೆ.

ಈ ಹೊಸ ಪ್ರಸ್ತಾವ ಮಹಿಳಾ ಉದ್ಯೋಗಿಗಳಿಗೆ ಭಾರೀ ಅನನುಕೂಲವಾಗಿದ್ದು, ಇದು ಜಾರಿಯಾದರೆ ಮುಂದಿನ ದಿನಗಳಲ್ಲಿ ಮಹಿಳಾ ಟೆಕ್ಕಿಗಳ ಸಂಖ್ಯೆ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಬಹುದು. ಹಾಗೆಯೇ ದಿನದ ಬದುಕಿನ ಬಹುಭಾಗವನ್ನು ಲ್ಯಾಪ್ ಟಾಪ್ ನುಂಗುವುದನ್ನು ನೋಡಿ ಯುವಜನತೆ ಉದ್ಯೋಗಕ್ಕಾಗಿ ಬೇರೆ ವಲಯದತ್ತ ತಿರುಗಬಹುದು. ಬ್ಯಾಂಕುಗಳಲ್ಲಿ ದೇಶಾದ್ಯಂತ ವರ್ಗಾವರ್ಗಿ ಮತ್ತು ದಿನನಿತ್ಯದ ಕೆಲಸದಲ್ಲಿ ದಿನ ದಿನದಿನವೂ ಹೆಚ್ಚುತ್ತಿರುವ ರಿಸ್ಕ್‌ನಿಂದಾಗಿ ಒಂದು ಕಾಲಕ್ಕೆ ಭಾರೀ ಬೇಡಿಕೆಯಲ್ಲಿದ್ದ ಬ್ಯಾಂಕ್ ಉದ್ಯೋಗಗಳು ಇತ್ತೀಚೆಗೆ ಮೆರಗು ಕಳೆದುಕೊಂಡಿವೆಯಂತೆ. ಅದೇ ರೀತಿ ಹೆಚ್ಚುತ್ತಿರುವ ಕೆಲಸದ ಅವಧಿ ಉದ್ಯೋಗಾಂಕ್ಷಿಗಳು ಐಟಿ ವಲಯದಿಂದ ವಿಮುಖರಾಗ ಬಹುದೇನೋ? ಬದುಕು ಕೇವಲ ದುಡಿತ ಒಂದೇ ಅಲ್ಲ. ಈ ಪ್ರಸ್ತಾವ ಅಕಸ್ಮಾತ್ ಜಾರಿಗೆ ಬಂದರೆ ಟೆಕ್ಕಿಗಳು ಮದುವೆ ಮತ್ತು ಸಂಸಾರ ಜೀವನವನ್ನು ಮರೆಯಬೇಕಾಗಬಹುದೇನೋ?

(ಲೇಖಕರು: ಆರ್ಥಿಕ ಮತ್ತು ರಾಜಕೀಯ ವಿಶ್ಲೇಷಕರು)

ಅಚ್ಚುಕಟ್ಟು ಪ್ರದೇಶ
RNI : KARKAN/2016/67914

VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 219

ಸಮಾಚಾರ ಸಣ್ಣದಲ್ಲ

ಜೋಧ್‌ಪುರ ರೈಲಿಗೆ ಬಾಂಬ್ ಹುಸಿ ಕರೆ

ಪಂಜಾಬ್: ಜಮ್ಮುವಿನಿಂದ ರಾಜಸ್ಥಾನದ ಜೋಧ್‌ಪುರಕ್ಕೆ ಮಂಗಳವಾರ ಬೆಳಗ್ಗೆ ಸಾಗುತ್ತಿದ್ದ ಎಕ್ಸ್‌ಪ್ರೆಸ್‌ನಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಬೆದರಿಕೆ ಸಂದೇಶ

ಪೊಲೀಸರಿಗೆ ಬಂದಿದ್ದರಿಂದ ರೈಲನ್ನು ಮಾರ್ಗ ಮಧ್ಯೆ ಪಂಜಾಬ್‌ನ ಕಾಸುಬೆಗು ನಿಲ್ದಾಣದಲ್ಲಿ 5 ಗಂಟೆ ಕಾಲ ನಿಲುಗಡೆ ಮಾಡಿ ತಪಾಸಣೆ ನಡೆಸಲಾಯಿತು. ಬಳಿಕ ಅದೊಂದು ಹುಸಿ ಕರೆ ಎಂದು ತಿಳಿಯಿತು. ಹುಸಿ ಬಾಂಬ್ ಬೆದರಿಕೆ ಒಡ್ಡಿ ತೊಂದರೆ ನೀಡಿದ ಪಶ್ಚಿಮ ಬಂಗಾಳದ 28 ವರ್ಷದ ಯುವಕನನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಲಾಗಿದೆ. ಬೆದರಿಕೆ ಸಂದೇಶ ಬರುತ್ತಿದ್ದಂತೆ ಪಂಜಾಬ್ ರಾಜ್ಯ ಪೊಲೀಸ್, ರೈಲ್ವೆ ಪೊಲೀಸ್, ಶ್ವಾನ ದಳ, ಅಗ್ನಿಶಾಮಕ ದಳ ಸಿಬ್ಬಂದಿ ಧಾವಿಸಿ ಪರಿಶೀಲನೆ ನಡೆಸಿದರು.

ದೇಶದ ಶೇ.4.3ರಷ್ಟು ಭಾಗ ಭೂಕುಸಿತ ಭೀತಿ

ದೆಹಲಿ: ಪ್ರತಿಕೂಲ ವಾತಾವರಣ, ಅವೈಜ್ಞಾನಿಕ ಕಾಮಗಾರಿ, ಧಾರಾಕಾರ ಮಳೆಯ ಕಾರಣ ದೇಶದಲ್ಲಿ ಶೇ.4.3ರಷ್ಟು ಭಾಗದಲ್ಲಿ ಭೂಕುಸಿತ ಭೀತಿ ಎದುರಾಗಿದೆ. ಕಳೆದ 20 ವರ್ಷಗಳಲ್ಲಿನ ಭೂಕುಸಿತದ ಅಂಕಿ-ಅಂಶ ಗಮನಿಸಿದರೆ ದಕ್ಷಿಣ ಭಾರತ ಹೆಚ್ಚು ಅಪಾಯದಲ್ಲಿದೆ. ಕರ್ನಾಟಕದಲ್ಲಿ 31 ಸಾವಿರ ಚದರ ಕಿ.ಮೀ ಪ್ರದೇಶದಲ್ಲಿ ಭೂಕುಸಿತ ಆತಂಕ ಹೆಚ್ಚಾಗಿದೆ. 2015-22ರ ಅವಧಿಯ ಮಾಹಿತಿ ಪ್ರಕಾರ 3782 ಬಾರಿ ದೇಶದಲ್ಲಿ ಭೂಕುಸಿತವಾಗಿವೆ. ಕೇರಳದಲ್ಲಿ 2,239 ಬಾರಿ ಭೂಕುಸಿತವಾಗಿದ್ದರೆ, ಪಶ್ಚಿಮ ಬಂಗಾಳ 376, ತಮಿಳುನಾಡು 196, ಕರ್ನಾಟಕ 196 ಮತ್ತು ಜಮ್ಮು-ಕಾಶ್ಮೀರದಲ್ಲಿ 184 ಬಾರಿ ಭೂಕುಸಿತವಾಗಿದೆ. ಭೂಕುಸಿತದಿಂದ ಅರುಣಾಚಲ ಪ್ರದೇಶದಲ್ಲಿ 257 ಚ.ಕಿ.ಮೀ. ಭೂಮಿ ನಷ್ಟವಾಗಿದ್ದರೆ, ಮಣಿಪುರ 249, ನಾಗಾಲ್ಯಾಂಡ್ 235, ಮಿಜೊರಾಂ 186 ಮತ್ತು ಮೇಘಾಲಯದಲ್ಲಿ 73 ಚ.ಕಿ.ಮೀ ಭೂಮಿ ಹಾನಿಗೀಡಾಗಿದೆ ಎಂಬ ಮಾಹಿತಿ ಜಿಯಾಲಾಜಿಕಲ್ ಸರ್ವೆ ಆಫ್ ಇಂಡಿಯದಿಂದ ಲಭ್ಯವಾಗಿದೆ.

ಪಡಿತರ ಹಗರಣ; ಟಿಎಂಸಿಗೆ ಇ.ಡಿ ಬಿಸಿ

ಕೋಲ್ಕತ್ತ: ಪಡಿತರ ವಿತರಣಾ ವ್ಯವಸ್ಥೆಯಲ್ಲಿನ ಬಹುಕೋಟಿ ಹಗರಣದ ತನಿಖೆಯ ಭಾಗವಾಗಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ ಪಕ್ಷ(ಟಿಎಂಸಿ)ದ

ಇಬ್ಬರು ನಾಯಕರು ಸೇರಿದಂತೆ ರಾಜ್ಯ ಸರಕಾರದ ಹಲವು ಅಧಿಕಾರಿಗಳ ಮನೆ-ಕಚೇರಿ ಮೇಲೆ ಜಾರಿ ನಿರ್ದೇಶನಾಲಯ(ಇ.ಡಿ) ಅಧಿಕಾರಿಗಳ ತಂಡ ಮಂಗಳವಾರ ದಾಳಿ ನಡೆಸಿದೆ. ಪಶ್ಚಿಮ ಬಂಗಾಳದ 24 ಪರಗಣ ಜಿಲ್ಲೆಯ ರಾಜರ್‌ಹಾಟ್, ಬಾರಾಸಾತ್, ಬಶೀರ್‌ಹಾಟ್, ಭಂಗರ್ ಸೇರಿ ಹತ್ತು ಸ್ಥಳಗಳಲ್ಲಿ ಕೇಂದ್ರೀಯ ಭದ್ರತಾ ಪಡೆಗಳ ಭದ್ರತೆಯಲ್ಲಿ ಇ.ಡಿ ತಂಡ ಶೋಧ ನಡೆಸಿದೆ. ಬಹುಕೋಟಿ ಪ್ರಕರಣದಲ್ಲಿ ಭಾಗಿಯಾದ ಉದ್ಯಮಿಗಳ ಮನೆ-ಕಚೇರಿ ಹಾಗೂ ಅಕ್ಕಿ ಗಿರಣಿ, ಹಿಟ್ಟಿನ ಗಿರಣಿ ಮೇಲೂ ಇ.ಡಿ ದಾಳಿ ನಡೆಸಿದೆ. ಪಶ್ಚಿಮ ಬಂಗಾಳದ ಅರಣ್ಯ ಸಚಿವ ಜ್ಯೋತಿ ಪ್ರಿಯೊ ಮಲ್ಲಿಕ್ ಇದೇ ಪ್ರಕರಣದಲ್ಲಿ ಈಗಾಗಲೇ ಇ.ಡಿ ವಶದಲ್ಲಿದ್ದಾರೆ. ಅವರು ಆಹಾರ ಸಚಿವರಾಗಿದ್ದಾಗಲೇ ಪಡಿತರ ಬಹುಕೋಟಿ ಹಗರಣ ನಡೆದಿತ್ತು.

ಅಮಿತಾಬ್ ಹೆಸರು ಸೇರಿಸಬೇಡಿ: ಜಯಾ

ದೆಹಲಿ: ರಾಜ್ಯಸಭೆಯಲ್ಲಿ ಮಂಗಳವಾರದ ಕಲಾಪದ ವೇಳೆ ಸಮಾಜವಾದಿ ಪಕ್ಷದ ಹಿರಿಯ ಸಂಸದೆ ಜಯಾ ಬಚ್ಚನ್ ಅವರನ್ನು ಉಪ ಸಭಾಧ್ಯಕ್ಷ ಹರಿವಂಶ

ನಾರಾಯಣ ಸಿಂಗ್ 'ಜಯಾ ಅಮಿತಾಬ್ ಬಚ್ಚನ್' ಎಂದು ಸಂಬೋಧಿಸಿದ್ದಕ್ಕೆ ಸಂಸದೆ ಸಿಟ್ಟಾದರು. ತಮ್ಮ ಹೆಸರಿಗೆ ಪತಿ ಹೆಸರು ಸೇರಿಸಿ ಕರೆದಿದ್ದಕ್ಕೆ ತಕರಾರು ವ್ಯಕ್ತಪಡಿಸಿದ ಜಯಾ ಬಚ್ಚನ್, ಹೀಗೇಕೆ ಮಾಡುವಿರಿ. ನನ್ನ ಹೆಸರಿನ ಜತೆ ಅಮಿತಾಬ್ ಹೆಸರೇಕೆ ಸೇರಿಸಬೇಕಿತ್ತು? ಎಂದು ಪ್ರಶ್ನಿಸಿದರು. ಅದಕ್ಕೆ ಹರಿವಂಶ ಸಿಂಗ್ ಅವರು, ಸದನದ ದಾಖಲೆಯಲ್ಲಿ ಹೇಗಿದೆಯೋ ಹಾಗೇ ಕರೆದಿದ್ದೇನೆ ಎಂದು ಹೇಳಿದರು. ಈ ವೇಳೆ ಸಿಟ್ಟಿನಿಂದಲೇ ಮಾತು ಮುಂದುವರಿಸಿದ ಜಯಾ, ಮೊದಲಿನಿಂದಲೂ ಮಹಿಳೆ ಹೆಸರಿಗೆ ಪತಿ ಹೆಸರು ಜೋಡಿಸಲಾಗುತ್ತದೆ. ಮಹಿಳೆಯರಿಗೂ ಅವರದ್ದೇ ಆದ ಸ್ವಂತ ವ್ಯಕ್ತಿತ್ವ, ಗುರುತು ಇರುತ್ತದೆ. ನನ್ನ ಹೆಸರನ್ನು 'ಜಯಾ ಬಚ್ಚನ್' ಎಂದಷ್ಟೇ ಕರೆದರೆ ಸಾಕು ಎಂದು ಉಪ ಸಭಾಧ್ಯಕ್ಷರ ಗಮನ ಸೆಳೆದರು. ಈ ಜುಗುಲ್ ಬಂದಿ ಸಂದರ್ಭದ ವಿಡಿಯೋ ವೈರಲ್ ಆಗಿದೆ. ನೆಟ್ಟಿಗರಲ್ಲಿ ಕೆಲವರು 'ಇದೊಂದು ಸಣ್ಣ ವಿಚಾರ. ಅಷ್ಟಕ್ಕೇ ಸಿಟ್ಟಾಗಿದ್ದೇಕೆ?' ಎಂದು ಪ್ರಶ್ನಿಸಿದ್ದಾರೆ.

{ ಎಚ್.ಡಿ.ಕುಮಾರಸ್ವಾಮಿ } ಕೇಂದ್ರ ಸಚಿವ

ಕೇರಳದಂತೆ ಕರ್ನಾಟಕದ ಹಲವು ಜಿಲ್ಲೆಗಳಲ್ಲಿಯೂ ಭೂಕುಸಿತ, ಪ್ರವಾಹದ ಭೀತಿ ಇದೆ. ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಅಪಾಯ ಹೆಚ್ಚಿರುವ ಸ್ಥಳಗಳಲ್ಲಿ ರಾಜ್ಯ ಸರಕಾರ 24 ಗಂಟೆ ರಕ್ಷಣಾ ಸಿಬ್ಬಂದಿಯನ್ನು ಸನ್ನದ್ಧವಾಗಿರಿಸಬೇಕು. ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಬೇಕು. ಕರ್ನಾಟಕದಲ್ಲೂ ಕಟ್ಟೆಚ್ಚರ ವಹಿಸಬೇಕಾದ ಅಗತ್ಯವಿದೆ. ಅಪಾಯದ ಸ್ಥಳಗಳಿಂದ ಜನರ ಸ್ಥಳಾಂತರಕ್ಕೆ ಅಗತ್ಯ ಕ್ರಮ ಕೈಗೊಳ್ಳಬೇಕು.

2 ಗುಡ್ಡಗಳ ಕಥೆ-ವ್ಯಥೆ

ಕೇರಳದ ವಯನಾಡು ಪ್ರದೇಶದ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳ ಪಕ್ಕದಲ್ಲಿಯೇ ಇದ್ದ ಎರಡೂ ಗುಡ್ಡಗಳು ಮಂಗಳವಾರ ನಡುಕಿನ 1.30ರ ಸಮಯದಲ್ಲಿ ದೊಡ್ಡ ಶಬ್ದದೊಂದಿಗೆ ಕುಸಿಯುವುದಕ್ಕೆ ಆರಂಭಿಸಿವೆ. ಮುಂಜಾನೆಯ 4 ಗಂಟೆವರೆಗೂ ಎರಡು ಬಾರಿ ಗುಡ್ಡಗಳಲ್ಲಿ ಕುಸಿತವಾಗಿದೆ. ಪರಿಣಾಮ, ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳೆರಡೂ ಗುರುತೇ ಸಿಗದಂತೆ ನಾಶವಾಗಿವೆ. ಎರಡೂ ಗ್ರಾಮಗಳಲ್ಲಿನ ಮನೆಗಳಲ್ಲಿ ನಿದ್ರೆಯಲ್ಲಿದ್ದ ಜನರಲ್ಲಿ 106 ಮಂದಿ ಕೊಚ್ಚಿಕೊಂಡು ಬಂದ ಮಣ್ಣು-ಬಂಡೆಗಳಡಿ ಸಿಲುಕಿಕೊಂಡು ಜೀವಂತ ಸಮಾದಿಯಾಗಿದ್ದಾರೆ.

ಕೇರಳದಲ್ಲಿ 2 ದಿನ ಶೋಕಾಚರಣೆ

ಪ್ರಾಕೃತಿಕ ವಿಕೋಪಕ್ಕೆ 123 ಜೀವಬಲಿ | 2 ಗ್ರಾಮಗಳೇ ನಾಶ, ಮತ್ತೆರಡಕ್ಕೆ ಹಾನಿ
ನೂರಾರು ಜನ ಭೂಕುಸಿತದಲ್ಲಿ ಕಣ್ಮರೆ | ಸಿಎಂ ವಿಜಯನ್ ತುರ್ತು ಸುದ್ದಿಗೋಷ್ಠಿ

ಮಳೆ-ಪ್ರವಾಹ ಸಂತ್ರಸ್ತರಿಗೆ ಆಶ್ರಯ

ಭಾರಿ ಮಳೆ ಹಿನ್ನೆಲೆ ವಯನಾಡಿನಲ್ಲಿ 3,069 ಜನರನ್ನು 45 ಆಶ್ರಯ ಕೇಂದ್ರಗಳಿಗೆ ಸ್ಥಳಾಂತರ ಮಾಡಲಾಗಿದೆ. ರಾಜ್ಯಾದ್ಯಂತ 118 ಆಶ್ರಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. 5,531 ಜನರು ಆಶ್ರಯ ಕೇಂದ್ರಗಳಲ್ಲಿ ಆಸರೆ ಪಡೆದಿದ್ದಾರೆ.

ರಕ್ಷಣಾ ಕಾರ್ಯಾಚರಣೆ

ವಯನಾಡಲ್ಲಿ ರಕ್ಷಣಾ ಕಾರ್ಯಾಚರಣೆಗೆ 321 ಅಗ್ನಿಶಾಮಕ ದಳ ಸಿಬ್ಬಂದಿ ನಿಯೋಜಿಸಲಾಗಿದೆ. 60 ಜನರ ಎನ್‌ಡಿಆರ್‌ಎಫ್ ತಂಡ ಘಟನಾ ಸ್ಥಳದಲ್ಲಿ ರಕ್ಷಣಾ ಕಾರ್ಯನಿರತವಾಗಿದೆ. ಬೆಂಗಳೂರಿನಿಂದ 89 ಜನರ ರಕ್ಷಣಾ ತಂಡ ಆಗಮಿಸಿದೆ ಎಂದು ಸಿಎಂ ಮಾಹಿತಿ ನೀಡಿದ್ದಾರೆ.

ತಿರುವನಂತಪುರಂ: ರಾಜ್ಯದ ವಯನಾಡಿನಲ್ಲಿ ಮಂಗಳವಾರ ನಸುಕಿನಲ್ಲಿ ಭೀಕರ ಭೂಕುಸಿತ ಸಂಭವಿಸಿದ ಹಿನ್ನೆಲೆ ರಾಜ್ಯದಲ್ಲಿ 2 ದಿನ (ಮಂಗಳವಾರ, ಬುಧವಾರ) ಶೋಕಾಚರಣೆ ಘೋಷಿಸಲಾಗಿದೆ. ಎಲ್ಲಾ ಸರಕಾರಿ ಕಾರ್ಯಕ್ರಮಗಳನ್ನು ಮುಂದೂಡಲಾಗಿದೆ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಿಳಿಸಿದ್ದಾರೆ.

ಮಂಗಳವಾರ ಸಂಜೆ ಸುದ್ದಿಘೋಷ್ಠಿ ನಡೆಸಿದ ಸಿಎಂ, ವಯನಾಡು ಭಾಗದ ನಾಲ್ಕು ಗ್ರಾಮಗಳು ಭೂಕುಸಿತದಿಂದ ಹಾನಿಗೀಡಾಗಿವೆ. ಈವರೆಗೆ 93 ಮೃತದೇಹಗಳು ಪತ್ತೆಯಾಗಿವೆ. ಮೃತರ ಸಂಖ್ಯೆ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಇದು ದೊಡ್ಡ ದುರಂತ. ಪ್ರವಾಹ, ಭೂಕುಸಿತದಿಂದಾಗಿ ಒಂದಿಡೀ ಪ್ರದೇಶವೇ ಸಂಪೂರ್ಣ ಕೊಚ್ಚಿಕೊಂಡು ಹೋಗಿದೆ ಎಂದು ನೋವು ವ್ಯಕ್ತಪಡಿಸಿದರು.

ಭೂಕುಸಿತ ಸ್ಥಳದಲ್ಲಿ ಸಾಕಷ್ಟು ಜನ ಮಣ್ಣು, ಅವಶೇಷಗಳಡಿ ಸಿಲುಕಿದ್ದಾರೆ. ರಕ್ಷಣಾ ಕಾರ್ಯಾಚರಣೆ ಮುಂದುವರೆದಿದೆ. ಸದ್ಯ ಮೃತರ ನಿಖರ ಸಂಖ್ಯೆ ತಿಳಿಸುವುದು ಕಷ್ಟ ಎಂದು ಮುಖ್ಯಮಂತ್ರಿ, ವಯನಾಡಿನಲ್ಲಿನ ಪ್ರಾಕೃತಿಕ ವಿಕೋಪದ ಅವಘಡಗಳಲ್ಲಿ ಗಾಯಗೊಂಡ 128 ಜನರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಗಾಯಾಳುಗಳಿಗೆ ಉತ್ತಮ ವೈದ್ಯಕೀಯ ಚಿಕಿತ್ಸೆ ಸಿಗುವಂತೆ ನೋಡಿಕೊಳ್ಳಲಾಗುವುದು ಎಂದರು.

ಮೊದಲ ಭೂಕುಸಿತ ಬೆಳಗಿನ ಜಾವ 1.50ರಲ್ಲಿ ನಡೆದಿದೆ. ಮತ್ತೊಂದು ಕುಸಿತ 4.10ರ ಸಮಯದಲ್ಲಿ ನಡೆದಿದೆ. ಈವರೆಗೆ 34 ಮೃತದೇಹಗಳ ಗುರುತು ಪತ್ತೆಯಾಗಿವೆ. ಮರಣೋತ್ತರ ಪರೀಕ್ಷೆ ಬಳಿಕ 18 ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರಧಾನಿ ನರೇಂದ್ರ ಮೋದಿ, ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಸೇರಿದಂತೆ ಹಲವರು ಕೇರಳದ ನೋವಿಗೆ ಸ್ಪಂದಿಸಿದ್ದಾರೆ.

ಲೋಕಸಭೆ: ರಾಹುಲ್ ಪ್ರಸ್ತಾಪ

ದೆಹಲಿ: ವಯನಾಡು ಲೋಕಸಭಾ ಕ್ಷೇತ್ರದ ಮಾಜಿ ಸಂಸದ ರಾಹುಲ್ ಗಾಂಧಿ, ಕೇರಳ ಭೂಕುಸಿತ ವಿಷಯವನ್ನು ಮಂಗಳವಾರ ಲೋಕಸಭೆ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದರು. ಕೇಂದ್ರ ಸರಕಾರ ಸಾಧ್ಯವಾದ ಎಲ್ಲ ನೆರವನ್ನು ಕೇರಳಕ್ಕೆ ನೀಡಬೇಕು ಎಂದು ಆಗ್ರಹಿಸಿದರು.

ಪ್ರಾಕೃತಿಕ ವಿಕೋಪದಲ್ಲಿ ಮಡಿದವರ ಕುಟುಂಬದವರಿಗೆ ನೀಡುವ ಪರಿಹಾರ ಮೊತ್ತ ಹೆಚ್ಚಿಸಬೇಕು. ತ್ವರಿತವಾಗಿ ಆಶ್ರಯ ಕೇಂದ್ರ ಸ್ಥಾಪಿಸಬೇಕು, ಪುನರ್ವಸತಿ ವ್ಯವಸ್ಥೆ ಮಾಡಬೇಕು ಎಂದು ಒತ್ತಾಯಿಸಿದರು.

ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಪ್ರತಿಕ್ರಿಯಿಸಿ, ಪ್ರಧಾನಿ ಮೋದಿ ಈಗಾಗಲೇ ಕೇರಳ ಸಿಎಂ ಪಿಣರಾಯಿ ವಿಜಯನ್ ಜತೆ ಮಾತನಾಡಿದ್ದಾರೆ. ನೈಸರ್ಗಿಕ ವಿಪತ್ತು ಕೇರಳಕ್ಕೆ ಮಾತ್ರವಲ್ಲ ಎಲ್ಲ ರಾಜ್ಯಗಳಿಗೂ ಸಮಸ್ಯೆಯೇ. ವಯನಾಡಿನಲ್ಲಿ ರಕ್ಷಣೆ ಹಾಗೂ ಪುನರ್ವಸತಿ ಕಾರ್ಯ ಜಾರಿಯಲ್ಲಿದೆ ಎಂದರು.

ರಕ್ಷಣಾ ಕಾರ್ಯಾಚರಣೆಯಲ್ಲಿ ಹಲವು ತಂಡ

ಕೇರಳದ ವಯನಾಡಲ್ಲಿ ಗುಡ್ಡ ಕುಸಿತವಾದ ಮುಂಡಕ್ಕೈ ಹಾಗೂ ಚೂರಲ್‌ಮಲ ಪ್ರದೇಶಕ್ಕೆ ಹೆಚ್ಚುವರಿಯಾಗಿ ಕರ್ನಾಟಕ ಮತ್ತು ತಮಿಳುನಾಡಿನಿಂದ 4ಎನ್‌ಡಿಆರ್‌ಎಫ್ ತಂಡ, ಅಗ್ನಿಶಾಮಕದಳ, ಸ್ಥಳೀಯ ರಕ್ಷಣಾ ಪಡೆ, ಎಸ್‌ಡಿಆರ್‌ಎಫ್ ಕಾರ್ಯಾಚರಣೆ ನಡೆಸುತ್ತಿದೆ. ಮದ್ರಾಸ್ ರೆಜಿಮೆಂಟ್ ತಂಡ ಕನ್ನೂರ್‌ನಿಂದ ಆಗಮಿಸಿದೆ. ಸೇನಾ ಎಂಜಿನೀಯರ್‌ಗಳ ತಂಡವೂ ರಕ್ಷಣಾ ಕಾರ್ಯದಲ್ಲಿ ತೊಡಗಿದೆ. ಒಟ್ಟು 225 ಸೇನಾ ಸಿಬ್ಬಂದಿ ಸ್ಥಳದಲ್ಲಿ ಬೀಡುಬಿಟ್ಟಿದ್ದಾರೆ. ವಾಯುಪಡೆಯ ಹೆಲಿಕಾಪ್ಟರ್ ಎಂಐ -17 ಮತ್ತು ಎಎಲ್‌ಎಚ್ ಧ್ರುವ್ ರಕ್ಷಣಾ ಕಾರ್ಯಾಚರಣೆಗಿಳಿದಿವೆ. ಆದರೆ, ಧಾರಾಕಾರ ಮಳೆಯಾಗುತ್ತಿರುವುದರಿಂದ ಹೆಲಿಕಾಪ್ಟರ್ ಕಾರ್ಯಾಚರಣೆ ಕಷ್ಟವಾಗಿದೆ. ನೀರಿನ ಸೆಳೆತ ಹೆಚ್ಚಾಗಿರುವುದರಿಂದ ರಕ್ಷಣಾ ಕಾರ್ಯಾಚರಣೆಯಲ್ಲಿ ವೇಗ ಸಾಧಿಸುವುದು ಅಸಾಧ್ಯ ಎಂದು ತಿಳಿದುಬಂದಿದೆ. ಕೇರಳಾ ಸಶಸ್ತ್ರ ಪೊಲೀಸ್ ಪಡೆಯ 5 ತಂಡ, ಮಲಬಾರ್ ವಿಶೇಷ್ ಪೊಲೀಸ್ ತುಕಡಿ ಕೂಡ ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿವೆ. ರಾಜ್ಯ ಸಚಿವರು ಈ ರಕ್ಷಣಾ ಕಾರ್ಯಾಚರಣೆಯ ಉಸ್ತುವಾರಿ ವಹಿಸಿಕೊಂಡಿದ್ದಾರೆ. ತಿರುವನಂತಪುರಂನ ಪೊಲೀಸ್ ಪ್ರಧಾನ ಕೇಂದ್ರದಲ್ಲಿ ನಿಯಂತ್ರಣ ಕೊಠಡಿ ಸ್ಥಾಪಿಸಲಾಗಿದೆ. ಅಲ್ಲಿಂದ ರಕ್ಷಣಾ ಕಾರ್ಯಾಚರಣೆಯನ್ನು ಸಂಘಟಿಸಲಾಗುತ್ತಿದೆ. ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ಚೂರಲ್‌ಮಾಲ ಬಳಿಯ ಸೇತುವೆ ಕುಸಿದು ಬಿದ್ದಿದೆ. ಪೂರ್ಣ ಪ್ರದೇಶ ಜಲಾವೃತವಾಗಿದೆ.

ನದಿಯಲ್ಲಿ ತೇಲಿ ಬಂದ ಮೃತದೇಹ!

ವಯನಾಡಿನ ಮುಂಡಕ್ಕೈ ಮತ್ತು ಚೂರಲ್‌ಮಲ ಗ್ರಾಮಗಳ ಸಮೀಪ ತುಂಬಿ ಹರಿಯುತ್ತಿದ್ದ ನದಿ ನೀರು ಕೂಡ ಪ್ರವಾಹದಂತೆ ನುಗ್ಗಿದ್ದು, ಕುಸಿದ ಗುಡ್ಡಗಳ ಮಣ್ಣಿರಾಶಿಯಡಿ ಸಿಲುಕಿ ಸಾವಿಗೀಡಾಗಿದ್ದವರ ಮೃತದೇಹಗಳನ್ನು ನೂಕಿಕೊಂಡು ಸಾಗಿದೆ. ಮಲಪ್ಪುರಂನ ಚಲಿಯಾರ್ ನದಿಯಲ್ಲಿ 9 ಮೃತದೇಹಗಳು ತೇಲಿಬಂದಿವೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಮೊದಲಿಗೆ ಮಗುವಿನ ಮೃತದೇಹ ತೇಲಿಬಂದಿದ್ದು ಗೋಚರಿಸಿದೆ. ಬಳಿಕ ಉಳಿದ 8 ದೇಹ ಪತ್ತೆಯಾಗಿವೆ. ಜತೆಗೆ ಕಾರು, ಬೈಕ್ ಸೇರಿ ವಾಹನಗಳು ಕೂಡ ನದಿಯಲ್ಲಿ ತೇಲಿ ಬಂದಿವೆ.

ಆಶ್ರಯ ಕೇಂದ್ರ: ಮುಂಡಕ್ಕೈ ಬಳಿಯ ರೆಸಾರ್ಟ್ ಅನ್ನೇ ಆಶ್ರಯ ಕೇಂದ್ರವಾಗಿ ಬದಲಿಸಲಾಗಿದೆ. 200 ಮಂದಿ ಆಸರೆ ಪಡೆದಿದ್ದಾರೆ. ಆದರೆ ನಿರಂತರ ಮಳೆ, ವಿದ್ಯುತ್ ಕಡಿತದಿಂದ ಕತ್ತಲಲ್ಲಿ ಪರಿತಪಿಸುವಂತಾಗಿದೆ. ಆಹಾರ ವ್ಯವಸ್ಥೆಯಿಲ್ಲದೇ ಪರದಾಡುತ್ತಿದ್ದಾರೆ ಎನ್ನಲಾಗಿದೆ.

ಕೇರಳ ಭೂಕುಸಿತ-5 ಕೋಟಿ ನೆರವು: ಸ್ಟಾಲಿನ್

ಚೆನ್ನೈ: ಕೇರಳದ ವಯನಾಡಿನ ಮೇಪ್ಪಾಡಿ ಬಳಿ ಮಂಗಳವಾರ ನಸುಕಿನಲ್ಲಿ ಸಂಭವಿಸಿದ ಭಾರೀ ಭೂಕುಸಿತದಲ್ಲಿ

ದೇವರ ಸ್ವಂತ ನಾಡು ನಲುಗಿಹೋಗಿದೆ. 106 ಜನ ಮಡಿದಿದ್ದಾರೆ. ಹಲವರು ಗಾಯಗೊಂಡಿದ್ದಾರೆ. ಸಾವಿರಾರು ಮಂದಿ ಮನೆ-ಆಸ್ತಿ ಕಳೆದುಕೊಂಡಿದ್ದಾರೆ. ನೊಂದ ರಾಜ್ಯದಲ್ಲಿನ ರಕ್ಷಣಾ ಕಾರ್ಯಚರಣೆಗೆ ತಮಿಳುನಾಡು ಸರಕಾರ 5 ಕೋಟಿ ರು. ಆರ್ಥಿಕ ನೆರವು ಘೋಷಿಸಿದೆ.

ಭೂಕುಸಿತ ಸುದ್ದಿ ತಿಳಿಯುತ್ತಿದ್ದಂತೆ ಕೇರಳ ಸಿಎಂ ಪಿಣರಾಯಿ ವಿಜಯನ್‌ಗೆ ಕರೆ ಮಾಡಿದ ಸಿಎಂ ಎಂ.ಕೆ.ಸ್ಟಾಲಿನ್, ರಕ್ಷಣಾ ಹಾಗೂ ಪುನರ್ವಸತಿ ಕಾರ್ಯದಲ್ಲಿ ಸಕಲ ನೆರವು ನೀಡುವುದಾಗಿ ತಿಳಿಸಿದ್ದಾರೆ. ತಮಿಳುನಾಡು ಸರಕಾರ ಇಬ್ಬರು ಐಎಎಸ್ ಅಧಿಕಾರಿಗಳಾದ ಜಿ ಸಮೀರನ್ ಹಾಗೂ ಜಾನಿ ಟಾಮ್ ವರ್ಗಿಸ್ ಅವರನ್ನು ರಕ್ಷಣಾ ಕಾರ್ಯಾಚರಣೆಗೆ ನೆರವಾಗಲು ನಿಯೋಜಿಸಿದೆ. ರಕ್ಷಣಾ ಕಾರ್ಯಾಚರಣೆಗಾಗಿ ರಾಜ್ಯದಿಂದ ಅಗ್ನಿಶಾಮಕ ಮತ್ತು ಎಸ್‌ಡಿಆರ್‌ಎಫ್‌ನ ತಲಾ 20 ಸಿಬ್ಬಂದಿಗಳು, 10 ಜನರ ವೈದ್ಯಕೀಯ ತಂಡ ವಯನಾಡಿಗೆ ತೆರಳಿದೆ.

ನೈಸರ್ಗಿಕ ವಿಪತ್ತಿಗೂ ಹೆಚ್ಚು ಗುರಿಯಾದ ಕೇರಳ

ತಿರುವನಂತಪುರ: ಕೇರಳ ನೈಸರ್ಗಿಕ ಸೌಂದರ್ಯದ ಗಣಿ. ಹಾಗೆಯೇ ನೈಸರ್ಗಿಕ ವಿಪತ್ತಿಗೂ ಹೆಚ್ಚು ಗುರಿಯಾದ ರಾಜ್ಯ.

2018ರ ಪ್ರವಾಹ 480 ಜನರನ್ನು ಬಲಿ ಪಡೆದಿತ್ತು. 2022ರ ವರದಿ ಪ್ರಕಾರ 1961ರಿಂದ 2016ರವರೆಗೆ ಕೇರಳ ರಾಜ್ಯವೊಂದರಲ್ಲೇ 295 ಜನರು ಭೂಕುಸಿತಕ್ಕೆ ಬಲಿಯಾಗಿದ್ದಾರೆ. ಈ ಸಂಖ್ಯೆ 2018ರ ಬಳಿಕ ಮತ್ತಷ್ಟು ಹೆಚ್ಚಿದೆ. 2019 ಮತ್ತು 2020ರಲ್ಲಿಯೂ 100 ಮಂದಿ ಕೇರಳದಲ್ಲಿ ನೈಸರ್ಗಿಕ ವಿಕೋಪಕ್ಕೆ ಬಲಿಯಾದರು. ಕಳೆದ 7 ವರ್ಷಗಳಲ್ಲಿ ಕೇರಳ ಅತಿ ಹೆಚ್ಚು ಭೂಕುಸಿತಕ್ಕೆ ಸಾಕ್ಷಿಯಾಗಿದೆ.

2015ರಿಂದ 22ರವರೆಗೆ ದೇಶದಲ್ಲಿ ವರದಿಯಾದ ಭೂಕುಸಿತಗಳಲ್ಲಿ ಶೇ.59ರಷ್ಟು ಅಂದರೆ 2,239 ಪ್ರಾಕೃತಿಕ ವಿಕೋಪ ಘಟನೆಗಳು ಕೇರಳದಲ್ಲೇ ವರದಿಯಾಗಿವೆ. ತಜ್ಞರ ಪ್ರಕಾರ ಕೇರಳದ 13 ಜಿಲ್ಲೆಗಳು ಭೂಕುಸಿತ ಸೂಕ್ಷ್ಮ ಪ್ರದೇಶಗಳಾಗಿವೆ. ರಾಜ್ಯದ ಒಟ್ಟು ಭೂ ವಿಸ್ತೀರ್ಣದ ಶೇ.4.75ರಷ್ಟು ಭೂ ಭಾಗ ಹೆಚ್ಚಿನ ಭೂಕುಸಿತ ಅಪಾಯ ವಲಯ ಎಂದು ಸೂಚಿಸಿದೆ.

ಇತ್ತೀಚಿನ ವರ್ಷಗಳಲ್ಲಿ ಮಳೆ ಸುರಿವ ಪ್ರಮಾಣದಲ್ಲಾದ ಬದಲಾವಣೆಯೇ ಭೂಕುಸಿತ ಹೆಚ್ಚಲು ಕಾರಣ ಎಂದು ವಿಶ್ಲೇಷಿಸಲಾಗಿದೆ. ಧಾರಾಕಾರ ಮಳೆ ಭೂಸವಕಳಿಗೆ ಕಾರಣವಾಗುತ್ತಿದೆ. ಕೆಲವೇ ದಿನಗಳಿಗೇ ಆದರೂ ತೀವ್ರ ಪ್ರಮಾಣದ ಮಳೆ ಸುರಿಯುವುದೇ ಗುಡ್ಡ ಕುಸಿತಕ್ಕೆ, ಪ್ರವಾಹಕ್ಕೆ ಕಾರಣ ಎಂಬುದು ತಜ್ಞರ ವಿಶ್ಲೇಷಣೆ.

ಮುಂಬೈನಲ್ಲಿ ಯುವತಿ ಕೊಲೆ ಕಲಬುರಗಿಯಲ್ಲಿ ಆರೋಪಿ ಸೆರೆ

ಲವ್ ಜಿಹಾದ್ ಶಂಕೆ: ಮಹಾರಾಷ್ಟ್ರ ಬಿಜೆಪಿ ಆರೋಪ

ನವಿಮುಂಬೈ: ಮಹಾರಾಷ್ಟ್ರ ರಾಜ್ಯದ ನವಿ ಮುಂಬೈನ ಉರಾನ್‌ನಲ್ಲಿ 20 ವರ್ಷದ ಹಿಂದೂ ಯುವತಿಯನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿ ದಾವೂದ್ ಎಂ.ಶೇಖ್‌ನನ್ನು ಮುಂಬೈ ಪೊಲೀಸರು ಕರ್ನಾಟಕದ ಕಲಬುರಗಿಯಲ್ಲಿ ಬಂಧಿಸಿದ್ದಾರೆ.

ಕಲಬುರಗಿಯಲ್ಲಿದ್ದ ಸಂಬಂಧಿಕರ ನೆರವು ಪಡೆದು ಆರೋಪಿ ದಾವೂದ್ ತಲೆಮರೆಸಿಕೊಂಡಿದ್ದ. ಶಹಾಪುರ ಬೆಟ್ಟ ಪ್ರದೇಶದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿ ಅಪರಾಧ ಮಾಡಿದ್ದನ್ನು ಒಪ್ಪಿಕೊಂಡಿದ್ದಾನೆ ಎಂದು ನವಿ ಮುಂಬೈ ಅಪರಾಧ ವಿಭಾಗದ ಡಿಸಿಪಿ ಅಮಿತ್ ಕಾಳೆ ಹೇಳಿದ್ದಾರೆ.

ಉರಾನ್ ರೈಲು ನಿಲ್ದಾಣ ಬಳಿ ಪೊದೆಯಲ್ಲಿ ಯುವತಿ ಯಶಶ್ರೀ 27ರಂದು ಪತ್ತೆಯಾಗಿತ್ತು. ಜು.25ರಂದು ಯಶಶ್ರೀ ತನ್ನ ಸ್ನೇಹಿತನನ್ನು ಭೇಟಿಯಾಗಲು ಬೇಲಾಪುರದಿಂದ ಉರಾನ್‌ಗೆ ರೈಲಿನಲ್ಲಿ ಬಂದಿದ್ದಳು. ರಾತ್ರಿಯಾದರೂ ಮಗಳು ಮನೆಗೆ ಬರಲಿಲ್ಲವಾದ ಕಾರಣ ಪೋಷಕರು ಪೊಲೀಸ್ ಠಾಣೆಗೆ ದೂರು ನೀಡಿದ್ದರು.

2019ರಲ್ಲೇ ಯಶಶ್ರೀ(ಆಗ 15 ವರ್ಷ) ಬೆನ್ನುಬಿದ್ದಿದ್ದ ದಾವೂದ್ ಶೇಖ್, ಸ್ನೇಹ ಬೆಳೆಸುವಂತೆ ಪೀಡಿಸುತ್ತಿದ್ದ ಎಂದು ಪೋಷಕರು ದೂರಿದ್ದರು. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಿಸಿ ಬಂಧಿಸಲಾಗಿತ್ತು. 6 ತಿಂಗಳು ಜೈಲಿನಲ್ಲಿದ್ದ ಶೇಖ್ ಜಾಮೀನು ಮೇಲೆ ಬಿಡುಗಡೆಯಾಗಿ, ಬಳಿಕ ಕರ್ನಾಟಕಕ್ಕೆ ಬಂದು ಚಾಲಕನಾಗಿದ್ದ. ದಾವೂದ್ ಶೇಖ್ ಜು.22ರಂದು ಉರಾನ್‌ಗೆ ಬಂದಿದ್ದ. ಯಶಶ್ರೀ ಆಕೆಯ ಸ್ನೇಹಿತನನ್ನು ಭೇಟಿಯಾಗಲು ಬರುತ್ತಿರುವ ವಿಚಾರ ತಿಳಿದು ಕೊಲೆ ಮಾಡಿರಬಹುದು ಎನ್ನಲಾಗಿದೆ. ಲವ್ ಜಿಹಾದ್ ಶಂಕೆ ವ್ಯಕ್ತಪಡಿಸಿರುವ ಬಿಜೆಪಿ, ಸಮಗ್ರ ತನಿಖೆಗೆ ಆಗ್ರಹಿಸಿದೆ.

ರಾಜಸ್ಥಾನ: ನಿರ್ಮಾಣ ಹಂತದ ಕಟ್ಟಡ ಕುಸಿದು 4 ಸಾವು

ಜೈಪುರ: ರಾಜಸ್ಥಾನದ ರಾಜಸಮಂದ್ ಜಿಲ್ಲೆಯ ಖಮ್ನೋರ್ ಪ್ರದೇಶದಲ್ಲಿ ನಿರ್ಮಾಣವಾಗುತ್ತಿದ್ದ ಸಮುದಾಯ ಭವನದ ತಾರಸಿ ದಿಢೀರ್ ಕುಸಿದಿದ್ದರಿಂದ ನಿರ್ಮಾಣ ಕಾರ್ಯದಲ್ಲಿ ನಿರತರಾಗಿದ್ದ ನಾಲ್ವರು ಕಾರ್ಮಿಕರು ಜೀವತೆತ್ತಿದ್ದಾರೆ. ಮೃತರನ್ನು ಕಲು ಲಾಲ್, ಶಾಂತಿ ಲಾಲ್, ಭಗವತಿ ಲಾಲ್ ಮತ್ತು ಭರ್ವ್ವ ಲಾಲ್ ಎಂದು ಗುರುತಿಸಲಾಗಿದೆ.

ಸೋಮವಾರ ರಾತ್ರಿ ಕಾಮಗಾರಿ ನಡೆಯುತ್ತಿರುವಾಗ ಅವಘಡ ಸಂಭವಿಸಿದೆ. 13 ಕಾರ್ಮಿಕರು ಕೆಲಸ ಮಾಡುತ್ತಿದ್ದರು. 10 ಮಂದಿ ಅವಶೇಷಗಳಡಿ ಸಿಲುಕಿದ್ದರು. ಇಬ್ಬರು ಸ್ಥಳದಲ್ಲೇ ಮೃತಪಟ್ಟರೆ, ಇನ್ನಿಬ್ಬರು ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಸಾವಿಗೀಡಾದರು. ಐವರು ಗಾಯಗೊಂಡಿದ್ದು, ಸದ್ಯ ರಾಜಸಮಂದ್ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಒಬ್ಬ ಕಾರ್ಮಿಕನನ್ನು ಉದಯಪುರ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ ಎಂದು ರಾಜಸಮಂದ್ ಜಿಲ್ಲಾಧಿಕಾರಿ ಭನ್ವರ್‌ಲಾಲ್ ಹೇಳಿದ್ದಾರೆ.

ಮುಂಬೈ-ಹೌರಾ ಎಕ್ಸ್‌ಪ್ರೆಸ್ ರೈಲು ಹಳಿ ತಪ್ಪಿ ಇಬ್ಬರ ಸಾವು

18 ಬೋಗಿ ಹಳಿತಪ್ಪಿ 20 ಪ್ರಯಾಣಿಕರಿಗೆ ಗಾಯ

ಚಕ್ರಧರಪುರ: ಜಾರ್ಖಂಡ್ ರಾಜ್ಯದ ಚಕ್ರಧರಪುರ ಜಿಲ್ಲೆಯ ರಾಜಖರಸ್ವಾನ್ ಮತ್ತು ಬಡಬಾಂಬೋ ರೈಲು ನಿಲ್ದಾಣಗಳ ನಡುವೆ ಮುಂಬೈ-ಹೌರಾ ಎಕ್ಸ್‌ಪ್ರೆಸ್(ಸಂಖ್ಯೆ 12810) ರೈಲಿನ 18 ಬೋಗಿಗಳು ಹಳಿತಪ್ಪಿದ್ದು, ಇಬ್ಬರು ಪ್ರಯಾಣಿಕರು ಮೃತಪಟ್ಟಿದ್ದಾರೆ. 20 ಪ್ರಯಾಣಿಕರು ಗಾಯಗೊಂಡಿದ್ದಾರೆ. ಗಾಯಾಳುಗಳನ್ನು ಚಕ್ರಧರಪುರ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಆಗ್ನೇಯ ರೈಲ್ವೆಯ ಚಕ್ರಧರಪುರ ವಿಭಾಗದಲ್ಲಿ ಜಮ್ಷೆಡ್‌ಪುರದಿಂದ 80 ಕಿಮೀ ದೂರದಲ್ಲಿ ಇರುವ ಬಡಬಾಂಬೋ ಬಳಿ ಮಂಗಳವಾರ ನಸುಕಿನ 3.45ರಲ್ಲಿ ಅಪಘಾತವಾಗಿದೆ. ರಾಷ್ಟ್ರೀಯ ವಿಪತ್ತು ಪರಿಹಾರ ಕಾರ್ಯಾಚರಣೆಯ(ಎನ್‌ಡಿಆರ್‌ಎಫ್) ತಂಡ ರಕ್ಷಣಾ ಕಾಯದಲ್ಲಿ ನಿರತವಾಗಿದೆ.

ಎದುರಿನಿಂದ ಬರುತ್ತಿದ್ದ ಗೂಡ್ಸ್ ರೈಲು ಹಳಿ ತಪ್ಪಿದ್ದರಿಂದ ಅದೇ ಮಾರ್ಗದಲ್ಲಿ ಸಾಗುತ್ತಿದ್ದ ಮುಂಬೈ-ಹೌರಾ ಎಕ್ಸ್‌ಪ್ರೆಸ್ ರೈಲು ಕೂಡಾ ಹಳಿ ತಪ್ಪಿದೆ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಹಳಿ ತಪ್ಪಿದ ಬೋಗಿಗಳಲ್ಲಿ 16

ಪ್ರಯಾಣಿಕರ ಬೋಗಿಗಳಾಗಿದ್ದರೆ, ಒಂದು ಯಂತ್ರದ ಬೋಗಿ, ಮತ್ತೊಂದು ಪ್ಯಾಂಟ್ರಿ ಕಾರ್(ಅಡುಗೆ ಬೋಗಿ) ಆಗಿವೆ.

ರೈಲ್ವೆ ಇಲಾಖೆ ಪ್ರಯಾಣಿಕರ ನೆರವಿಗೆ ಸಹಾಯವಾಣಿ ತೆರೆಯಲಾಗಿದೆ. ಮಂಗಳವಾರ ಸಂಚರಿಸಿಬೇಕಿದ್ದ ಹೌರಾ-ಕಾಂತಾಬಾಜಿ ಇಸ್ಪಾಟ್ ಎಕ್ಸ್‌ಪ್ರೆಸ್, ಖರಗ್‌ಪುರ್-ಧನ್‌ಬಾದ್ ಎಕ್ಸ್‌ಪ್ರೆಸ್ ಮತ್ತು ಹೌರಾ-ಬಾರ್ಬಿಲ್ ಎಕ್ಸ್‌ಪ್ರೆಸ್ ರೈಲುಗಳನ್ನು ರದ್ದುಗೊಳಿಸಲಾಗಿದೆ.

ಯಾವ ರಾಜ್ಯಕ್ಕೂ ವಿಶೇಷ ಸ್ಥಾನಮಾನವಿಲ್ಲ: ನಿರ್ಮಲಾ

ಶಿಕ್ಷಣ-ಉದ್ಯೋಗಕ್ಕೆ ಶೇ.23 ಹೆಚ್ಚು ಹಣ; ವಿತ್ತೀಯ ಕೊರತೆ 2025-26ರಲ್ಲಿ ಶೇ.4.5ಕ್ಕೆ ಇಳಿಕೆ ಗುರಿ

ದೆಹಲಿ: 2024ರ ಬಜೆಟ್‌ನಲ್ಲಿ ರಾಜ್ಯಗಳನ್ನು ಕಡೆಗಣಿಸಲಾಗಿದೆ ಎಂಬ ಪ್ರತಿಪಕ್ಷಗಳ ಆರೋಪಕ್ಕೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಮಂಗಳವಾರ ಸದನದಲ್ಲೇ ತೀಕ್ಷ್ಣ ಪ್ರತಿಕ್ರಿಯೆ ನೀಡಿದ್ದಾರೆ.

ಲೋಕಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆಗೆ ಪ್ರತಿಕ್ರಿಯಿಸಿದ ಅವರು, ಹಣಕಾಸು ನೆರವು ನೀಡುವ ವಿಚಾರದಲ್ಲಿ ಯಾವ ರಾಜ್ಯಕ್ಕೂ ತಾರತಮ್ಯ ಮಾಡಿಲ್ಲ. ಹಾಗೆಯೇ ಯಾವ ರಾಜ್ಯಕ್ಕೂ ವಿಶೇಷ ಸ್ಥಾನಮಾನ ನೀಡಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಕಳೆದ ವರ್ಷದ ಬಜೆಟ್‌ಗೆ ಹೋಲಿಸಿದರೆ ಈ ಬಾರಿ ಎಲ್ಲಾ ಕ್ಷೇತ್ರದಲ್ಲಿಯೂ ರಾಜ್ಯಗಳಿಗೆ ಹೆಚ್ಚಿನ ಅನುದಾನವನ್ನೇ ನೀಡಲಾಗಿದೆ ಎಂದಿದ್ದಾರೆ.

ಯುಪಿಎ ಸರಕಾರದ 2009ರ ಬಜೆಟ್‌ನಲ್ಲಿಯೂ 26 ರಾಜ್ಯಗಳ ಹೆಸರು ಪ್ರಸ್ತಾಪವಾಗಿರಲಿಲ್ಲ. ಹಾಗೆಂದರೆ ಆಗಲೂ ಈ 26 ರಾಜ್ಯಗಳಿಗೆ ಯಾವುದೇ ಅನುದಾನ ನೀಡಿರಲಿಲ್ಲವೇ? ಎಂದು ಪ್ರಶ್ನಿಸುವ ಮೂಲಕ ಕಾಂಗ್ರೆಸ್ ನಾಯಕರ ನಡೆಯನ್ನು ಖಂಡಿಸಿದ್ದಾರೆ. ಬಜೆಟ್‌ನಲ್ಲಿ ರಾಜ್ಯಗಳ ಹೆಸರು ಉಲ್ಲೇಖಿಸಿಲ್ಲ



ಎಂದ ಮಾತ್ರಕ್ಕೆ ಆ ರಾಜ್ಯಗಳಿಗೆ ಅನುದಾನವನ್ನೇ ನೀಡಿಲ್ಲ ಎಂದರ್ಥವಲ್ಲ ಎಂದರು.

ಯುಪಿಎ ಸರಕಾರದ ಅವಧಿಯ ಬಜೆಟ್‌ಗಳಲ್ಲಿ 2004-05ರಲ್ಲಿ 17 ರಾಜ್ಯಗಳ ಹೆಸರು ಪ್ರಸ್ತಾಪವಿಲ್ಲ. 2005-06ರಲ್ಲಿ 18 ರಾಜ್ಯ, 2007-08ರಲ್ಲಿ 16 ಹಾಗೂ 2009-10ರಲ್ಲಿ 26 ರಾಜ್ಯಗಳ ಹೆಸರೇ ಇರಲಿಲ್ಲ ಎಂದು ತಿರುಗೇಟು ನೀಡಿದರು.

2013-14ಕ್ಕೆ ಹೋಲಿಸಿದರೆ ಕೃಷಿ, ರೈತರಿಗೆ ನೀಡಿದ ಅನುದಾನ ಪ್ರಮಾಣ ಐದು ಪಟ್ಟು ಹೆಚ್ಚಾಗಿದೆ. 1.52 ಲಕ್ಷ ಕೋಟಿ ಅನುದಾನ ನೀಡಲಾಗಿದೆ. 2023-24ಕ್ಕೆ ಹೋಲಿಸಿದರೆ 8 ಸಾವಿರ ಕೋಟಿ ಹೆಚ್ಚಿಗೆ ನೀಡಲಾಗಿದೆ.

ಶಿಕ್ಷಣ ಮತ್ತು ಉದ್ಯೋಗ ವಲಯಕ್ಕೆ 2013-14ರಲ್ಲಿ 0.85 ಲಕ್ಷ ಕೋಟಿ ಮಿಸಲಿಡಲಾಗಿತ್ತು ಆದರೆ ಈ ಬಾರಿ 1.48 ಲಕ್ಷ ಕೋಟಿ ಅಂದರೆ ಶೇ.23ರಷ್ಟು ಅಧಿಕ ಅನುದಾನ ಮೀಸಲಿಡಲಾಗಿದೆ ಎಂದು ಮಾಹಿತಿ ನೀಡಿದರು.

ವಿತ್ತೀಯ ಕೊರತೆ ಗುರಿ: ದೇಶದ ವಿತ್ತೀಯ ಕೊರತೆ ಪ್ರಮಾಣವನ್ನು ಪ್ರಸಕ್ತ ಹಣಕಾಸು ವರ್ಷದಲ್ಲಿ ಶೇ.4.9ಕ್ಕೆ ತಗ್ಗಿಸಲಾಗುವುದು. 2025-26ರಲ್ಲಿ ಶೇ.4.5ಕ್ಕೆ ತಗ್ಗಿಸಲು ಸರಕಾರ ಬದ್ಧವಾಗಿದೆ ಎಂದು ಸಚಿವೆ ಭರವಸೆ ನೀಡಿದರು.

ರಾಹುಲ್ ನಡೆಗೆ ಟೀಕೆ: ಬಜೆಟ್ ಪೂರ್ವ ಹಲ್ವಾ ಕಾರ್ಯಕ್ರಮದ ಫೋಟೋವನ್ನು ಲೋಕಸಭೆಯಲ್ಲಿ ಪ್ರದರ್ಶಿಸಿ ಒಬಿಸಿ, ದಲಿತ, ಬುಡಕಟ್ಟು ಅಧಿಕಾರಿಗಳ್ಯಾರೂ ಈ ಫೋಟೊದಲ್ಲಿಲ್ಲ ಎಂದು ಟೀಕಿಸಿದ್ದ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ನಡೆಯನ್ನು ಖಂಡಿಸಿದ ಸಚಿವೆ ನಿರ್ಮಲಾ, ಹಲ್ವಾ ಕಾರ್ಯಕ್ರಮ ಫೋಟೊ ಶೂಟ್ ಸಂದರ್ಭವಲ್ಲ. ಬಜೆಟ್ ತಯಾರಿಗೆ ವಾರಗಟ್ಟಲೆ ಮನೆಯಿಂದ ದೂರವಾಗಿ ಶ್ರಮಿಸುವ ಅಧಿಕಾರಿಗಳ ಶ್ರಮ-ಬದ್ಧತೆ ಗೌರವಿಸುವ ಸಂದರ್ಭ. ಅದನ್ನು ಟೀಕಿಸುವುದು ಸರಿಯಲ್ಲ ಎಂದರು.

ಜಮ್ಮು-ಕಾಶ್ಮೀರಕ್ಕೆ 17 ಸಾವಿರ ಕೋಟಿ

ಕೇಂದ್ರಾಡಳಿತ ಪ್ರದೇಶ ಜಮ್ಮು-ಕಾಶ್ಮೀರಕ್ಕೆ ಏನು ಕೊಟ್ಟಿದ್ದೀರಿ? ಎಂಬ ಪ್ರತಿಪಕ್ಷಗಳ ಪ್ರಶ್ನೆಗೆ, ಈ ಬಾರಿಯ ಬಜೆಟ್‌ನಲ್ಲಿ 17 ಸಾವಿರ ಕೋಟಿ ರು.ಗಳಷ್ಟು ದೊಡ್ಡ ಮೊತ್ತವನ್ನೇ ಜಮ್ಮು-ಕಾಶ್ಮೀರಕ್ಕೆ ನೀಡಲಾಗಿದೆ. ಇದರಲ್ಲಿ 12 ಸಾವಿರ ಕೋಟಿ ರು. ಜಮ್ಮು-ಕಾಶ್ಮೀರ ಪೊಲೀಸ್‌ಗೆ ಮೀಸಲಿಡಲಾಗಿದೆ. ಹೆಚ್ಚುವರಿಯಾಗಿ 5 ಸಾವಿರ ಕೋಟಿ ರು. ಕೇಂದ್ರದ ನೆರವು ನೀಡಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಮಾಹಿತಿ ನೀಡಿದರು.

ಲವ್ ಜಿಹಾದ್‌ಗೆ ಇನ್ನು ಜೀವಾವಧಿ ಶಿಕ್ಷೆ ಖಚಿತ

ಲಖನೌ: ಬಲವಂತ ಮತಾಂತರ, ಲವ್ ಜಿಹಾದ್ ವಿರುದ್ಧ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಉತ್ತರ ಪ್ರದೇಶ ರಾಜ್ಯ ಸರಕಾರ ಕಠಿಣ ನಿಲುವು ತಳೆದಿದೆ. ಕಾನೂನು ಬಾಹಿರ ಧಾರ್ಮಿಕ ಮತಾಂತರ(ತಿದ್ದುಪಡಿ) ವಿಧೇಯಕಕ್ಕೆ ವಿಧಾನಸಭೆಯಲ್ಲಿ ಮಂಗಳವಾರ ಅಂಗೀಕಾರ ದೊರೆತಿದೆ. ಕಾಯ್ದೆ ಜಾರಿಯಾದಲ್ಲಿ ಬಲವಂತ ಮತಾಂತರದಲ್ಲಿ ತೊಡಗಿಸಿಕೊಂಡವರಿಗೆ ಗರಿಷ್ಠ ಜೀವಾವಧಿ ಶಿಕ್ಷೆ ಹಾಗೂ 5 ಲಕ್ಷ ರು.ವರೆಗೆ ದಂಡ ವಿಧಿಸಲಾಗುತ್ತದೆ.

ಕಾನೂನು ಸಚಿವ ಸುರೇಶ್ ಖನ್ನಾ ಸೋಮವಾರ ಈ ತಿದ್ದುಪಡಿ ವಿಧೇಯಕ ಸದನದಲ್ಲಿ ಮಂಡಿಸಿದ್ದರು. ಈ ಮೊದಲು ಮತಾಂತರ ವಿರೋಧಿ ಕಾಯ್ದೆಯಡಿ 10 ವರ್ಷದವರೆಗೆ ಜೈಲುಶಿಕ್ಷೆ ಹಾಗೂ 50 ಸಾವಿರ ರು. ದಂಡ ವಿಧಿಸಲಾಗುತ್ತಿತ್ತು. ತಿದ್ದುಪಡಿ ವಿಧೇಯಕ ಕಾಯ್ದೆಯಾಗಿ ಜಾರಿಯಾದರೆ ಶಿಕ್ಷೆ ಮತ್ತಷ್ಟು ಕಠಿಣವಾಗಲಿದೆ. ಮತಾಂತರ ಉದ್ದೇಶದಿಂದ ಬೆದರಿಕೆ, ಹಲ್ಲೆ, ಮದುವೆಗಾಗಿ ಸುಳ್ಳು, ಮದುವೆಯಾಗುವುದಾಗಿ ನಂಬಿಸಿ ವಂಚನೆ, ಮಾನವ ಕಳ್ಳ ಸಾಗಣೆ ಕೃತ್ಯಗಳನ್ನು ಗಂಭೀರ ಅಪರಾಧ ಪ್ರಕರಣ ಎಂದು ಪರಿಗಣಿಸಿ ಜೀವಾವಧಿ ಶಿಕ್ಷೆ ವಿಧಿಸಲು ಅವಕಾಶವಿದೆ.

ಈವರೆಗೆ ಸಂತ್ರಸ್ತೆ, ಪೋಷಕರಷ್ಟೇ ದೂರು ದಾಖಲಿಸಲು ಅವಕಾಶವಿತ್ತು. ಹೊಸ ಮಸೂದೆ ಪ್ರಕಾರ ಯಾರು ಬೇಕಾದರೂ ಬಲವಂತ ಮತಾಂತರ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಬಹುದು, ಪ್ರಕರಣ ಸೆಶನ್ಸ್ ನ್ಯಾಯಾಲಯದಲ್ಲಿ ವಿಚಾರಣೆಗೆ ಒಳಪಡುವಂತೆ ಮಾಡಬಹುದು.

ಸಮಾಚಾರ ಸಣ್ಣದಲ್ಲ

ರಿಯಾಯಿತಿ ದರದಲ್ಲಿ ಪುಸ್ತಕ ಮಾರಾಟ

ಬೆಂಗಳೂರು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಎಲ್ಲಾ ಪ್ರಕಟಣೆಗಳನ್ನು ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಆಗಸ್ಟ್ 1 ರಿಂದ 31ರ ವರೆಗೆ ವರೆಗೆ ಶೇ. 50 ರಷ್ಟು ರಿಯಾಯಿತಿಯ ದರದಲ್ಲಿ ಪುಸ್ತಕಗಳನ್ನು ಮಾರಾಟ ಮಾಡಲಾಗುತ್ತದೆ. ಆನ್‌ಲೈನ್ ಮೂಲಕವೂ ಶೇ. 50 ರಷ್ಟು ರಿಯಾಯಿತಿ ದರದಲ್ಲಿ ಪುಸ್ತಕಗಳನ್ನು ಖರೀದಿಸಬಹುದಾಗಿದ್ದು, ಓದುಗರು www.kuvempubhashabharathi.karnataka.gov.in ಭೇಟಿನೀಡಿ ಪುಸ್ತಕಗಳನ್ನು ಖರೀದಿಸಬಹುದಾಗಿದ್ದು, ಆಸಕ್ತರು ಇದರ ಸದುಪಯೋಗ ಪಡೆದುಕೊಳ್ಳಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಾಳೆ ನೀರಿನ ಅದಾಲತ್

ಬೆಂಗಳೂರು: ಬೆಂಗಳೂರು ಜಲಮಂಡಳಿಯ ವಿವಿಧ ಉಪವಿಭಾಗಗಳಾದ ಪೂರ್ವ-1-1, ಪೂರ್ವ-2-1, ಆಗ್ನೇಯ -1, ಆಗ್ನೇಯ -4, ಪಶ್ಚಿಮ -1-1, ಪಶ್ಚಿಮ -2-1, ವಾಯುವ್ಯ - 1, ವಾಯುವ್ಯ - 3, ಕೇಂದ್ರ-1-1 ಈಶಾನ್ಯ - 1 ಮತ್ತು ಉತ್ತರ-1-1, ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದು-ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆ ಪರಿಹರಿಸಲು ಆ. 1 ರಂದು ಬೆಳಗ್ಗೆ 9.30 ಗಂಟೆಯಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ. ಎಇಸಿಎಸ್ - 1 ಮತ್ತು 2, ಹೂಡಿ, ಎಚ್.ಬಿಆರ್. ಲೇಔಟ್, ಕಾಚರಕನಹಳ್ಳಿ, ಕಲ್ಯಾಣನಗರ, ಜೀವನ್ ಭೀಮಾನಗರ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ, ಬೈಯ್ಯಪ್ಪನಹಳ್ಳಿ, ಸಿ.ವಿ.ರಾಮನಗರ, ಸದಾನಂದನಗರ, ಮಾಗಡಿ ರಸ್ತೆ - 1,2, ಹೊಸಹಳ್ಳಿ ಪಂಪ್‌ಹೌಸ್, ಮೈಸೂರು ರಸ್ತೆ, ಕೆಂಗೇರಿ, ಐಡಿಯಲ್ ಹೋಮ್ಸ್, ಬಿ.ಜಿ.ಎಂ.ಎಲ್ ಲೇಔಟ್, ಆರ್.ಆರ್.ನಗರ, ಕೇತಮಾರನಹಳ್ಳಿ, ಮಹಾಲಕ್ಷ್ಮಿ ಲೇಔಟ್ ಹಾಗೂ ಕೆಂಪಾಪುರ (ಕಾಫಿಬೋರ್ಡ್ ಲೇಔಟ್) ಸೇವಾ ಠಾಣೆಗಳಲ್ಲಿ ಅದಾಲತ್ ನಡೆಯಲಿದೆ. ಸಾರ್ವಜನಿಕರು ಕುಂದು-ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ 24/7 ದೂರು ನಿರ್ವಹಣಾ ಕೇಂದ್ರದ ಸಹಾಯವಾಣಿ 1916ಗೆ ಕರೆಮಾಡಿ ದೂರು ದಾಖಲಿಸಬಹುದು. ಹಾಗೂ ವಾಟ್ಸಾಪ್ ಸಂಖ್ಯೆ 8762228888 ಸಂದೇಶದ ಮೂಲಕ ದೂರನ್ನು ಸಲ್ಲಿಸಬಹುದಾಗಿದೆ ಎಂದು ಬೆಂಗಳೂರು ಜಲಮಂಡಳಿಯ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಪ್ರಸಕ್ತ 2024-25ನೇ ಜುಲೈ ಆವೃತ್ತಿ ಶೈಕ್ಷಣಿಕ ಸಾಲಿಗೆ ಪ್ರಥಮ ವರ್ಷದ ಸ್ನಾತಕ/ಸ್ನಾತಕೋತ್ತರ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಜು. 22ರಿಂದ ಪ್ರವೇಶಾತಿ ಮಾಡಿಕೊಳ್ಳಲಾಗುತ್ತಿದ್ದು, ಮುಕ್ತ ವಿಶ್ವವಿದ್ಯಾನಿಲಯದ ಮಹಿಳಾ ಮತ್ತು ಪುರುಷ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅವಕಾಶ ಕಲ್ಪಿಸಿದೆ. ಆಸಕ್ತ ವಿದ್ಯಾರ್ಥಿಗಳು ಮತ್ತು ಪೋಷಕರು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧಿಕೃತ ವೆಬ್‌ಸೈಟ್ www.ksoumysuru.ac.in ನಲ್ಲಿ ಕೆಎಸ್‌ಒಯು ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಭರ್ತಿಮಾಡಿ ನಂತರ ಪ್ರಾದೇಶಿಕ ಕೇಂದ್ರಕ್ಕೆ ಖುದ್ದಾಗಿ ಭೇಟಿನೀಡಿ ಆನ್‌ಲೈನ್ ಮುಖಾಂತರ ಶುಲ್ಕ ಪಾವತಿಸಿ ಪ್ರವೇಶ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ, 080 23448811, 9741197921, 9483517160, 7760848564. 9620395584 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ ನಾಟಕ

ಬೆಂಗಳೂರು: ಬಾಬ್ ಮಾರ್ಲಿ ಫ್ರಂ ಕೋಡಿಹಳ್ಳಿ ಎನ್ನುವ ನಾಟಕ ಆ.3ರಂದು ರವೀಂದ್ರ ಕಲಾಕ್ಷೇತ್ರದಲ್ಲಿ ಆಯೋಜನೆಗೊಂಡಿದೆ. ಗುರುತು ಅನ್ನುವುದು ಕೆಲವರಿಗೆ ಹೆಮ್ಮೆಯಾದರೆ, ಕೆಲವರಿಗದು ಅಸಹ್ಯ, ಹಿಂಸೆ, ಜೀವನದುದ್ದಕ್ಕೂ ಹೊತ್ತು ತಿರುಗಬೇಕಾದ ಹೆಣಭಾರದ ಚಾಕರಿ. ಹಲವು ಬಾರಿ ಉಳಿವಿಗಾಗಿ ಗುರುತುಗಳನ್ನು ಮುಚ್ಚಿಡುತ್ತಾ ಸಾಗುವುದೇ 'ಬದುಕು' ಅನ್ನಿಸಿಕೊಂಡು ಹರಿಯುತ್ತಾ ಹಗುರಾಗುವುದು ಸಾಗದ ದಾರಿಯಾಗಿ ಕಂಡು ದಣಿವಾಗುತ್ತದೆ. ದಣಿವಾಗುತ್ತದೆ ಎಂಬ ಕಾರಣಕ್ಕೆ ಹಾರಾಡುವ ಬಯಕೆಯನ್ನು ಬಿಡುವಂತೆಯೂ ಇರುವುದಿಲ್ಲ. ಕತ್ತಲದಾರಿಯಲ್ಲಿ ಮಿಂಚುಹುಳುಗಳಿಗಾಗಿ ಜೀವ ಆತುಕೊಳ್ಳಬೇಕಾಗುತ್ತದೆ. ಆಗ ಕತ್ತಲೊಂದು ಸಂಭ್ರಮ ಬೆಳಕೊಂದು ಸಂಭ್ರಮ. ಹೀಗೆ ಗುರುತಿನ ಸುತ್ತ ಇರುವ ಹಲವು ಸಂಕೀರ್ಣ ವಿರೋಧಾ ಭಾಸಗಳನ್ನು ಎದುರುಗೊಳ್ಳುವ ಕಥನಗಳ ಗೊಂಚಲು' ಬಾಬ್ ಮಾರ್ಲಿ ಫ್ರಮ್ ಕೋಡಿಹಳ್ಳಿ. ಇಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರ ವೇಟಿಂಗ್ ಫಾರ್ ವೀಸಾ ಎನ್ನುವುದು ರೂಪಕವಾಗಿ ಕಂಡು ಅವರು ನಿಜಕ್ಕೂ ಪ್ರವೇಶ ಕೇಳುತ್ತಿರುವುದು ಎಲ್ಲಿಗೆ ಅನ್ನುವ ಪ್ರಶ್ನೆ ಮುಖ್ಯವಾಗುತ್ತದೆ.
ಪಠ್ಯ ಆಕರ: ಎನ್.ಕೆ ಹನುಮಂತಯ್ಯ, ಚಂದ್ರಶೇಖರ್ ಕೆ
ರಚನೆ, ವಿನ್ಯಾಸ, ನಿರ್ದೇಶನ: ಲಕ್ಷ್ಮಣ್ ಕೆ ಪಿ
ಡ್ರಮಟರ್ಗ್: ವಿ. ಎಲ್. ನರಸಿಂಹಮೂರ್ತಿ

{ಜಿ.ಟಿ ದೇವೇಗೌಡ } ಜೆಡಿಎಸ್ ನಾಯಕ

ರಾಜ್ಯದ ಹಲವೆಡೆ ಮಳೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿಕೆ ಪ್ರಾರಂಭವಾಗಿದೆ. ಹಲವೆಡೆ ತೀವ್ರ ಮಳೆಯಿಂದಾಗಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಕಾಂಗ್ರೆಸ್ ಸರಕಾರದ ವಿರುದ್ಧ ಬಿಜೆಪಿ-ಜೆಡಿಎಸ್ ಹಮ್ಮಿಕೊಂಡಿರುವ ಪಾದಯಾತ್ರೆಯನ್ನು ಮುಂದೂಡಲು ಜೆಡಿಎಸ್ ಕೋರ್ ಸಮಿತಿ ನಿರ್ಧರಿಸಿದೆ.



ರಾಜ್ಯದಲ್ಲಿ 180 ಮಿಲಿಯನ್ ಯೂನಿಟ್ ವಿದ್ಯುತ್ ಬಳಕೆ: ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿಕೆ

1,403 ಕೋಟಿ ಮೌಲ್ಯದ ವಿದ್ಯುತ್ ಮಾರಾಟ

ಬೆಂಗಳೂರು: ವಿದ್ಯುತ್ ವಲಯದಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಹೆಜ್ಜೆ ಹಾಕಿರುವ ಇಂಧನ ಇಲಾಖೆ, ಕಳೆದ ಬೇಸಿಗೆ (ಏಪ್ರಿಲ್ 1) ನಂತರ ರಾಜ್ಯದಲ್ಲಿ 1,403 ಕೋಟಿ ರು. ಮೌಲ್ಯದ ವಿದ್ಯುತ್ ಮಾರಾಟ ಮಾಡಿದೆ.

ಬೆಸ್ಕಾಂ ಕಚೇರಿಯಲ್ಲಿ ಮಂಗಳವಾರ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಇಂಧನ ಸಚಿವ ಕೆ.ಜೆ.ಜಾರ್ಜ್, 2024ರ ಏಪ್ರಿಲ್ 1ರಿಂದ ಜುಲೈ ಅಂತ್ಯದವರೆಗೆ 1,403 ಕೋಟಿ ಮೊತ್ತದ ವಿದ್ಯುತ್ ಮಾರಾಟ ಮಾಡಲಾಗಿದೆ. ಮೇ 18ರವರೆಗೆ ವಿದ್ಯುತ್ ಖರೀದಿ ಹೆಚ್ಚಾಗಿದ್ದರೆ, ನಂತರದಲ್ಲಿ ಮಾರಾಟ ಹೆಚ್ಚಾಗಿದೆ. ಪ್ರತಿನಿತ್ಯ 30ರಿಂದ 40 ಕೋಟಿ ಮೊತ್ತದ ವಿದ್ಯುತ್ ಮಾರಾಟ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಪ್ರಸ್ತುತ ರಾಜ್ಯದಲ್ಲಿ ನಿತ್ಯ ಸರಾಸರಿ 250 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಈ ಪೈಕಿ 20 ಮಿಲಿಯನ್ ಯುನಿಟ್ ಬೇಸಿಗೆಯಲ್ಲಿ ವಿನಿಮಯ ಆಧಾರದ ಮೇಲೆ ವಿದ್ಯುತ್ ಪಡೆದುಕೊಂಡಿರುವ ಪಂಜಾಬ್ ಮತ್ತು ಉತ್ತರ ಪ್ರದೇಶ ರಾಜ್ಯಗಳಿಗೆ ಪೂರೈಸಲಾಗುತ್ತಿದೆ. 40ರಿಂದ 50 ಮಿಲಿಯನ್ ಯೂನಿಟ್ ಮಾರಾಟ ಮಾಡಲಾಗುತ್ತಿದೆ. 180 ಮಿಲಿಯನ್ ಯೂನಿಟ್ ವಿದ್ಯುತ್ ರಾಜ್ಯದಲ್ಲಿ ಬಳಕೆಯಾಗುತ್ತಿದೆ ಎಂದು ಹೇಳಿದರು.

ಪ್ರಸ್ತುತ ರಾಯಚೂರು ಉಷ್ಣ ವಿದ್ಯುತ್ ಸ್ಥಾವರದಲ್ಲಿ 1,006, ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರದಲ್ಲಿ 1,049, ಯರಮರಸ್ ಉಷ್ಣ ವಿದ್ಯುತ್ ಸ್ಥಾವರದಲ್ಲಿ 898 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಮಳೆ ಹೆಚ್ಚಾಗಿದ್ದರಿಂದ ಜಲ ವಿದ್ಯುತ್ ಉತ್ಪಾದನಾ ಪ್ರಮಾಣ 34.96 ಮಿಲಿಯನ್ ಯುನಿಟ್‌ವರೆಗೆ ಹೆಚ್ಚಾಗಿದೆ. ಸೌರ ಶಕ್ತಿಯಿಂದ 34.64 ಹಾಗೂ ಪವನದಿಂದ 60.05 ಮಿಲಿಯನ್ ಯೂನಿಟ್ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ ಎಂದು ವಿವರಿಸಿದರು.

ಸಭೆಯಲ್ಲಿ ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತಾ, ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಕ್ರೆಡಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ರುದ್ರಪ್ಪಯ್ಯ ಸೇರಿದಂತೆ ಹಿರಿಯ ಅಧಿಕಾರಿಗಳು ಇದ್ದರು.

ವಿದ್ಯುತ್ ಉತ್ಪಾದನೆ, ಆದಾಯದಲ್ಲಿ ದಾಖಲೆ

ಕಳೆದ ಸಾಲಿನಲ್ಲಿ ಕೆಪಿಸಿಎಲ್‌ನಿಂದ ನಿರ್ವಹಣೆ ಮಾಡುತ್ತಿರುವ ರಾಜ್ಯದ ಮೂರು ಉಷ್ಣ ವಿದ್ಯುತ್ ಸ್ಥಾವರಗಳಲ್ಲಿ ದಾಖಲೆಯ ವಿದ್ಯುತ್ ಉತ್ಪಾದನೆ ಜತೆಗೆ ದಾಖಲೆಯ ಆದಾಯವನ್ನೂ ಗಳಿಸಲಾಗಿದೆ. 2022-23ನೇ ಸಾಲಿನಲ್ಲಿ 18,419 ಮಿಲಿಯನ್ ಯುನಿಟ್ ವಿದ್ಯುತ್ ಉತ್ಪಾದನೆಯಾಗಿ 9,326 ಕೋಟಿ ರು. ಆದಾಯ ಬಂದಿದ್ದರೆ, 2023-24ನೇ ಸಾಲಿನಲ್ಲಿ 22,313 ಮಿಲಿಯನ್ ಯುನಿಟ್ ಉತ್ಪಾದನೆ ಮಾಡಿ 10,916 ಕೋಟಿ ರು. ಆದಾಯ ಗಳಿಸಲಾಗಿದೆ. ಇದು ಈವರೆಗಿನ ದಾಖಲೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದರು.

ಸಮೀಪ ಸ್ಥಾಪನೆಯಾಗಿರುವ ರಾಜ್ಯದಲ್ಲಿಯೇ ಪ್ರಪ್ರಥಮ ಅನಿಲ ಆಧಾರಿತ 370 ಮೆಗಾ ವಾಟ್ ಸಾಮರ್ಥ್ಯದ ಯಲಹಂಕ ಸಂಯೋಜಿತ ಆವರ್ತ ವಿದ್ಯುತ್ ಸ್ಥಾವರ, ಕೆಪಿಸಿಎಲ್ ಮತ್ತು ಬಿಬಿಎಂಪಿ ವತಿಯಿಂದ 260 ಕೋಟಿ ವೆಚ್ಚದಲ್ಲಿ ಬಿಡದಿಯಲ್ಲಿ ಸ್ಥಾಪಿಸಲಾಗುತ್ತಿರುವ ತ್ಯಾಜ್ಯದಿಂದ 11.5 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದಿಸುವ ಘಟಕವು ಮುಂದಿನ ತಿಂಗಳು ಉದ್ಘಾಟನೆಗೊಳ್ಳಲಿದೆ.
- ಕೆ.ಜೆ.ಜಾರ್ಜ್, ಇಂಧನ ಸಚಿವ

ಮಳೆ: ಎಸ್ಕಾಂಗೆ 96 ಕೋಟಿ ನಷ್ಟ

ಮಳೆ, ಗಾಳಿಗೆ 53 ಸಾವಿರ ಕಂಬಗಳಿಗೆ ಹಾನಿ 1,403 ಕೋಟಿ ಮೌಲ್ಯದ ವಿದ್ಯುತ್ ಮಾರಾಟ

ಬೆಂಗಳೂರು: ಕಳೆದ ಕೆಲ ದಿನಗಳಿಂದ ಸುರಿಯುತ್ತಿರುವ ಭಾರಿ ಮಳೆಯಿಂದಾಗಿ ರಾಜ್ಯದ ವಿವಿಧ ಹೆಸ್ಕಾಂಗಳಿಗೆ ಒಟ್ಟು 96.66 ಕೋಟಿ ರು. ನಷ್ಟವಾಗಿದ್ದು, ಹಾನಿಗೊಳಗಾಗಿರುವ ಸಾವಿರಾರು ವಿದ್ಯುತ್ ಕಂಬ, ಟಿಸಿ, ಹಾಗೂ ಲೈನ್‌ಗಳ ದುರಸ್ತಿಗೊಳಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದೆ ಎಂದು ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಎಸ್ಕಾಂನ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಳೆ ಮತ್ತು ಗಾಳಿಯಿಂದ 53,816 ಕಂಬ, 3,924 ಟಿಸಿಗಳು, 1,120 ಕಿ.ಮೀ. ವಿದ್ಯುತ್ ತಂತಿಗಳು ಹಾನಿಗೊಳಗಾಗಿದ್ದು, ಈ ಪೈಕಿ 51,119 ಕಂಬ, 3,918 ಟಿಸಿ, 1,063 ಕಿ.ಮೀ. ವಿದ್ಯುತ್ ತಂತಿಗಳನ್ನು ದುರಸ್ತಿಗೊಳಿಸುವ ಕಾರ್ಯ ಪೂರ್ಣಗೊಂಡಿದೆ. ಬಾಕಿ ಉಳಿದ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ ಸಮರ್ಪಕ ವಿದ್ಯುತ್ ಪೂರೈಕೆಗೆ ಎಸ್ಕಾಂ ಸಿಬ್ಬಂದಿ ಸತತವಾಗಿ ಶ್ರಮಿಸುತ್ತಿದ್ದಾರೆ ಎಂದರು. ದುರಸ್ತಿಗೆ ಮೆಸ್ಕಾಂ ಸಿಬ್ಬಂದಿ ಹಗಲಿರುಳು ಶ್ರಮಿಸುತ್ತಿ ದ್ದಾರೆ. ಭಾರಿ ಮಳೆ ಬೀಳುತ್ತಿರುವ ಮಲೆನಾಡು, ಕರಾವಳಿ ಮತ್ತು ಬೆಳಗಾವಿ ಭಾಗಗಳಲ್ಲಿ ನೀರಿನ ಮಧ್ಯೆಯೂ ಕೆಲಸ ಮಾಡುತ್ತಿದ್ದಾರೆ. ಹೆಚ್ಚು ಹಾನಿ ಸಂಭವಿಸಿರುವ ಪ್ರದೇಶಗಳಿಗೆ ಹೆಚ್ಚುವರಿ ಗ್ಯಾಂಗ್‌ಮೆನ್ ಮತ್ತು ಲೈನ್‌ಮ್ಯಾನ್‌ಗಳನ್ನು ನೇಮಿಸುವುದರ ಜತೆಗೆ ಗುತ್ತಿಗೆದಾರರ ನೆರವಿನೊಂದಿಗೆ ತಂಡಗಳನ್ನು ಮಾಡಿ ಪರಿಹಾರ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ. ವಿದ್ಯುತ್ ಮರು ಸಂಪರ್ಕಕ್ಕೆ ಕಂಬಗಳು, ಕಂಡಕ್ಟರ್‌ಗಳು, ತಂತಿಗಳ ಕೊರತೆಯಾಗದಂತೆ ಮೊದಲೇ ಸಂಗ್ರಹಿ ಸಿಟ್ಟುಕೊಳ್ಳಲಾಗಿತ್ತು. ಇದರಿಂದ ಮಳೆಯಿಂದ ಆಗಿರುವ ಸಮಸ್ಯೆಗಳನ್ನು ತ್ವರಿತವಾಗಿ ಇತ್ಯರ್ಥಗೊಳಿಸಲಾಗುತ್ತಿದೆ ಎಂದು ತಿಳಿಸಿದರು.

ತುರ್ತು ಪರಿಸ್ಥಿತಿಗೆ ಸ್ಪಂದಿಸಲು ಅನುಕೂಲವಾಗುವಂತೆ ಸ್ಥಳೀಯ ಜನಪ್ರತಿನಿಧಿಗಳೊಂದಿಗೆ ನಿರಂತರ ಸಂಪರ್ಕದಲ್ಲಿದ್ದು ಪರಿಹಾರ ಕಾರ್ಯ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ. ಮಳೆ ಮತ್ತು ಗಾಳಿಯಿಂದ ಸದ್ಯಕ್ಕೆ ಸಾಕಷ್ಟು ಸಮಸ್ಯೆಯಾಗಿದ್ದರೂ ಜಲಾಶಯಗಳು ತುಂಬುತ್ತಿರುವುದರಿಂದ ಮುಂದಿನ ದಿನಗಳಲ್ಲಿ ಗರಿಷ್ಠ ಪ್ರಮಾಣದಲ್ಲಿ ಜಲ ವಿದ್ಯುತ್ ಉತ್ಪಾದನೆಗೆ ಅನುಕೂಲವಾಗುತ್ತದೆ.
-ಕೆ.ಜೆ.ಜಾರ್ಜ್ ಇಂಧನ ಸಚಿವ

ಮಳೆಯಿಂದ ಹಾನಿಗೊಳಗಾಗಿರುವ ವಿದ್ಯುತ್ ತಂತಿ, ಕಂಬ ಮತ್ತು ಟಿಸಿಗಳನ್ನು ಮರುಸ್ಥಾಪನೆ ಮಾಡಿ ವಿದ್ಯುತ್ ಪೂರೈಸಲು ಸ್ಥಳೀಯ ಮಟ್ಟದಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಈ ಕೆಲಸಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ತುರ್ತು ಪರಿಹಾರ ವ್ಯಾಪ್ತಿಯಲ್ಲಿ ಸ್ಥಳೀಯವಾಗಿಯೇ ಅಗತ್ಯ ಗ್ಯಾಂಗ್ ಮೆನ್, ಲೈನ್‌ಮೆನ್‌ಗಳನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಆಯಾ ಎಸ್ಕಾಂಗಳಿಗೆ ನಿರ್ದೇಶನ ನೀಡಲಾಗಿದೆ.
- ಗೌರವ್ ಗುಪ್ತಾ, ಇಂಧನ ಇಲಾಖೆ ಸರಕಾರದ ಅಪರ ಮುಖ್ಯ ಕಾರ್ಯದರ್ಶಿ

ನಾಳೆಯಿಂದ 130 ಕಿ.ಮೀ. ವೇಗಮಿತಿ ನಿಯಮ ಜಾರಿ

ಬೆಂಗಳೂರು: ರಾಜ್ಯದಲ್ಲಿ ಇತ್ತೀಚಿನ ದಿನಗಳಲ್ಲಿ ಸಂಭವಿಸುತ್ತಿರುವ ಕೆಲ ರಸ್ತೆ ಅಪಘಾತ ಪ್ರಕರಣಗಳಿಗೆ ಅತಿವೇಗದ ಚಾಲನೆ ಕಾರಣವಾಗುತ್ತಿದೆ. ಆದರಿಂದ ಇನ್ನು ಮುಂದೆ ವೇಗದ ಚಾಲನೆಗೆ ಎಫ್‌ಐಆರ್ ದಾಖಲಿಸಿಕೊಳ್ಳಲು ನಿರ್ಧರಿಸಲಾಗಿದೆ.

ಆಗಸ್ಟ್ 1ರಿಂದ ಈ ನಿಯಮ ಜಾರಿಗೆ ಬರಲಿದ್ದು, ರಾಜ್ಯಾದ್ಯಂತ ಗಂಟೆಗೆ 130 ಕಿ.ಮೀ.ಗಿಂತಲೂ ವೇಗವಾಗಿ ಸಂಚರಿಸುವ ಎಲ್ಲ ವಿಧದ ವಾಹನ ಚಾಲಕರ ವಿರುದ್ಧವೂ ಎಫ್‌ಐಆರ್ ದಾಖಲಿಸಿಕೊಳ್ಳಲಾಗುವುದು ಎಂದು ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಕುಮಾರ್ ಎಚ್ಚರಿಕೆ ನೀಡಿದ್ದಾರೆ. 2022ರಲ್ಲಿ ರಾಜ್ಯದಲ್ಲಿ ಸಂಭವಿಸಿದ್ದ ಶೇ.90ರಷ್ಟು ಗಂಭೀರ ಅಪಘಾತ ಪ್ರಕರಣಗಳಿಗೆ ಅತಿವೇಗದ ವಾಹನ ಚಾಲನೆ ಕಾರಣ ಎಂಬ ಅಂಶ ಬಯಲಾಗಿತ್ತು. ಅಲ್ಲದೆ ಇತ್ತೀಚೆಗೆ ಬೆಂಗಳೂರಿನ ನೈಸ್ ರಸ್ತೆಯಲ್ಲಿ ಸಂಭವಿಸಿದ್ದ ಅಪಘಾತದಲ್ಲಿ ಕಾರಿನಲ್ಲಿದ್ದ ಚಾಲಕ ಸಹಿತ ಮೂವರು ಸಾವನ್ನಪ್ಪಿದ್ದರು. ಚಾಲಕ ಗಂಟೆಗೆ 160 ಕಿ.ಮೀ ವೇಗದಲ್ಲಿ ಕಾರು ಚಲಾಯಿಸಿರುವುದರಿಂದ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿರುವುದು ಕಂಡು ಬಂದಿತ್ತು. ನೂತನ ನಿಯಮದ ಅನುಸಾರ ರಾಜ್ಯಾದ್ಯಂತ ಆಗಸ್ಟ್ 1ರಿಂದ ಗಂಟೆಗೆ 130 ಕಿ.ಮೀ ವೇಗದಲ್ಲಿ ವಾಹನ ಚಲಾಯಿಸುವ ವಾಹನ ಚಾಲಕರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ - 281 (ಅತಿವೇಗ ಹಾಗೂ ನಿರ್ಲಕ್ಷ್ಯತನದಿಂದ ವಾಹನ ಚಾಲನೆ) ಆರೋಪದಡಿ ಎಫ್‌ಐಆರ್ ದಾಖಲಿಸಿಕೊಳ್ಳಲು ಪೊಲೀಸರು ಸಜ್ಜಾಗಿದ್ದಾರೆ. ನಿಯಮ ಉಲ್ಲಂಘಿಸುವವರಿಗೆ 1 ಸಾವಿರ ರು. ದಂಡ ಅಥವಾ 6 ತಿಂಗಳವರೆಗೆ ಸಜೆ ಅಥವಾ ಎರಡನ್ನೂ ವಿಧಿಸಬಹುದಾಗಿದೆ.

ನೂತನ ಮುಖ್ಯ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಳ್ಳಲಿರುವ ಶಾಲಿನಿ ರಜನೀಶ್ ಅವರನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಭೇಟಿ ಮಾಡಿ ಚರ್ಚಿಸಿದರು. ಈ ವೇಳೆ ಕೃಷಿ ಇಲಾಖೆ, ಮಂಡ್ಯ ಜಿಲ್ಲೆ ಹಾಗೂ ನಾಗಮಂಗಲ ತಾಲೂಕಿನ ಅಭಿವೃದ್ಧಿ ಕಾರ್ಯಗಳ ಬಗ್ಗೆ ಚರ್ಚಿಸಿದರು.

ಗ್ರಾಮಸಭೆಗೆ ಅಧಿಕಾರಿಗಳ ಗೈರು ಶಾಸಕ ವಿಶ್ವನಾಥ್ ಅಸಮಾಧಾನ

ಯಲಹಂಕ: ಪ್ರಥಮ ಗ್ರಾಮಸಭೆಗೆ ಗೈರು ಹಾಜರಾದ ತಹಶಿಲ್ದಾರ್ ಮತ್ತು ತಾಲೂಕು ಪಂಚಾಯಿತಿ ಇಒ ವಿರುದ್ಧ ಶಾಸಕ ಎಸ್. ಆರ್. ವಿಶ್ವನಾಥ್ ಅಸಮಾಧಾನ ಹೊರಹಾಕಿದ ಘಟನೆ ರಾಜಾನುಕುಂಟೆ ಗ್ರಾಮಸಭೆಯಲ್ಲಿ ನಡೆಯಿತು.

ರಾಜಾನುಕುಂಟೆ ಗ್ರಾ.ಪಂ. ವತಿಯಿಂದ ಮಂಗಳವಾರ ಆಯೋಜಿಸಿದ್ದ 2024-25ನೇ ಸಾಲಿನ ಮೊದಲ ಸುತ್ತಿನ ಗ್ರಾಮಸಭೆ ಉದ್ಘಾಟಿಸಿ ಮಾತನಾಡಿದ ಶಾಸಕ ವಿಶ್ವನಾಥ್, 'ಕಂದಾಯ ಇಲಾಖೆ ಎಲ್ಲಾ ಇಲಾಖೆಗಳ ಮಾತೃ ಇಲಾಖೆಯಾಗಿದ್ದು, ಕಂದಾಯ ಇಲಾಖೆಯಲ್ಲಿ ರೈತರಿಗೆ ಸಂಬಂಧಿ ಸಿದ ಹಲವು ಸಮಸ್ಯೆಗಳಿರುತ್ತವೆ. ಅವುಗಳಿಗೆ ಸೂಕ್ತ ಪರಿಹಾರೋಪಾಯ ಕಂಡುಹಿಡಿಯಲು ಕಂದಾಯ ಇಲಾಖೆಯ ಹಿರಿಯ ಅಧಿಕಾರಿಗಳ ಉಪಸ್ಥಿತಿ ಅತ್ಯವಶ್ಯ. ಆದರೆ ತಾಲೂಕು ಕಂದಾಯ ಇಲಾಖೆಯ ಮುಖ್ಯಸ್ಥರು, ತಾಲೂಕು ದಂಡಾಧಿಕಾರಿ ಎನಿಸಿರುವವರು ಬಾರದೇ ಪ್ರತಿನಿಧಿಯೊಬ್ಬರನ್ನು ಗ್ರಾಮಸಭೆಗೆ ಕಳುಹಿಸಿದ್ದಾರೆ. ಇದು ಬೇಜವಾಬ್ದಾರಿಯ ನಡೆಯಲ್ಲದೆ ಬೇರಿನ್ನೇನೂ ಅಲ್ಲ ಎಂದು ಟೀಕಿಸಿದರು.

ಹಿರಿಯ ಅಧಿಕಾರಿಗಳೊಂದಿಗೆ ಸಭೆ, ಜಿಲ್ಲಾಧಿಕಾರಿಗಳ ಸಭೆಯೆಂಬ ಕುಂಟುನೆಪ ಹೇಳಿಕೊಂಡು ವಿವಿಧ ಇಲಾಖೆಗಳ ಹಿರಿಯ ಅಧಿಕಾರಿಗಳು ಗ್ರಾಮಸಭೆಗಳಿಗೆ ಗೈರು ಹಾಜರಾಗುತ್ತಿರುವುದು ನಿಜಕ್ಕೂ ವಿಷಾದದ ಸಂಗತಿ. ಸಾರ್ವಜನಿಕ ಹಿತಾಸಕ್ತಿ ಇಲ್ಲದ ಅಧಿಕಾರಿಗಳಿಂದ ಗ್ರಾಮೀಣ ಜನರ, ರೈತರ ಸಮಸ್ಯೆಗಳು ಬಗೆಹರಿಯುವುದು ಕನಸಿನ ಮಾತು. ಇದು ಪ್ರಥಮ ಗ್ರಾಮಸಭೆಯಾಗಿದ್ದು, ಸೌಜನ್ಯಕ್ಕಾದರೂ ಗ್ರಾಮಸಭೆಗೆ ತಹಶೀಲ್ದಾರ್, ಇಒ ಮುಂತಾದ ಇಲಾಖೆಯ ಹಿರಿಯ ಅಧಿಕಾರಿಗಳು ಬಂದು ಜನರ ಸಂಕಷ್ಟ ಆಲಿಸುವ ಕನಿಷ್ಟ ಪ್ರಯತ್ನ ಮಾಡದೆ ಗೈರುಹಾಜರಾಗಿರು ವುದು ಬೇಸರದ ಸಂಗತಿ ಎಂದರು. ಈ ವೇಳೆ, ರಾಜಾನುಕುಂಟೆ ಗ್ರಾ.ಪಂ. ಅಧ್ಯಕ್ಷೆ ಚನ್ನಮ್ಮ, ಮಾಜಿ ಅಧ್ಯಕ್ಷ ಎಸ್.ಜಿ.ನರಸಿಂಹಮೂರ್ತಿ, ಅಂಬಿಕಾ ರಾಜೇಂದ್ರಕುಮಾರ್, ಕೆ.ವೀರಣ್ಣ ರಿಗ್ಲೆ, ಉಪಾಧ್ಯಕ್ಷ ವೆಂಕಟೇಶ್, ಪಿಡಿಒ ನಾಗರಾಜ್, ಕಾರ್ಯದರ್ಶಿ ರಾಕೇಶ್, ಸದಸ್ಯ ಸಾದೇನಹಳ್ಳಿ ಚಿಕ್ಕಣ್ಣ ಸೇರಿ ಹಲವರಿದ್ದರು.

ವರಿಷ್ಠರಿಗೆ ವಿವರಣೆ ನೀಡಿದ ಸಿಎಂ, ಡಿಸಿಎಂ

ಬಿಜೆಪಿಯ ಹೋರಾಟಕ್ಕೆ ಪ್ರತಿತಂತ್ರ ಸಂಬಂಧಿಸಿದಂತೆ ಚರ್ಚೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ಕೆಲ ದಿನಗಳಿಂದ ತೀವ್ರ ವಿವಾದಕ್ಕೆ ಕಾರಣವಾಗಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿನ ಹಗರಣ ಹಾಗೂ ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ವರಿಷ್ಠರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿವರಣೆ ನೀಡಿದ್ದಾರೆ.

ರಣತಂತ್ರದ ಬಗ್ಗೆ ಚರ್ಚೆ

ಬಿಜೆಪಿ-ಜೆಡಿಎಸ್ ಆರಂಭಿಸಲಿರುವ ಪಾದಯಾತ್ರೆಗೆ ಸಂಬಂಧಿಸಿದಂತೆ ಕಾಂಗ್ರೆಸ್ ರೂಪಿಸಿರುವ ಪ್ರತಿತಂತ್ರಕ್ಕೆ ಸಂಬಂಧಿಸಿದಂತೆ ವರಿಷ್ಠರಿಗೆ ಮಾಹಿತಿ ನೀಡಿದ್ದಾರೆ. ಮುಂದೆ ಎದುರಾಗಲಿರುವ ಉಪಚುನಾವಣೆಯಲ್ಲಿ ಲಾಭ ಪಡೆಯುವ ಉದ್ದೇಶದಿಂದ ಈ ಪಾದಯಾತ್ರೆ ನಡೆಯುತ್ತಿದೆ. ಇದಕ್ಕೆ ಪ್ರತಿಯಾಗಿ ಈಗಾಗಲೇ ರಣತಂತ್ರವನ್ನು ರೂಪಿಸಿದ್ದು, ಪಕ್ಷಕ್ಕೆ ಡ್ಯಾಮೇಜ್ ಆಗದ ರೀತಿಯಲ್ಲಿ ಕ್ರಮವಹಿಸುವುದಾಗಿ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

ಪ್ರಯಾಣಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚರ್ಚಿಸಿದರು.

ದೆಹಲಿಗೆ ಪ್ರಯಾಣಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಲೋಕಸಭಾ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿಯಾಗಿ ಚರ್ಚಿಸಿದರು. ಈ ವೇಳೆ ಖರ್ಗೆ ಅವರ ನಿವಾಸದಲ್ಲಿ ತಡರಾತ್ರಿವರೆಗೆ ಸಭೆ ನಡೆಸಿದ ನಾಯಕರು, ಬಿಜೆಪಿ ಹೋರಿಸುತ್ತಿರುವ ಆರೋಪಗಳಿಗೆ ಪಕ್ಷದ ವರಿಷ್ಠರಿಗೆ ಸ್ಪಷ್ಟನೆ ನೀಡಿದ್ದಾರೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳ ಹೆಸರು ಕೇಳಿಬರುತ್ತಿದೆ. ಆದರೆ ಈ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ. ಈ ಸಂಬಂಧ ಈಗಾಗಲೇ ದಾಖಲೆಗಳನ್ನು ಬಿಡುಗಡೆಗೊಳಿಸಲಾಗಿದೆ. ಇದರೊಂದಿಗೆ ನನ್ನ ಪತ್ನಿ ಕಳೆದುಕೊಂಡಿರುವ ಭೂಮಿ ಪ್ರತಿಯಾಗಿ ಮುಡಾ ನಿವೇಶನ ನೀಡಿದೆ ಎಂದು ಸ್ಪಷ್ಟನೆ ನೀಡಿದ್ದಾರೆ ಎಂದು ತಿಳಿದುಬಂದಿದೆ.

ಕರ್ನಾಟಕದ ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕಿಡಿ

ಕೇಜ್ರಿವಾಲ್‌ರನ್ನು ಜೈಲಲ್ಲೇ ಮುಗಿಸಲು ಸಂಚು

ಬೆಂಗಳೂರು: ಅರವಿಂದ್ ಕೇಜ್ರಿವಾಲ್ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಛೀಮಾರಿ ಹಾಕಿ ಜಾಮೀನು ನೀಡಬಹುದು ಎಂದು ಹೇಳಿದರೂ, ದುರುದ್ದೇಶ ಪೂರ್ವಕವಾಗಿ ಜೈಲಿನಲ್ಲಿರಿಸಲು ಕೇಂದ್ರ ಸರಕಾರ ಸಂಚು ಮಾಡಿದೆ ಎಂದು ಕರ್ನಾಟಕದ ಎಎಪಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಕಿಡಿ ಕಾರಿದ್ದಾರೆ.

ಅರವಿಂದ್ ಕೇಜ್ರಿವಾಲ್ ಅವರ ಬಂಧನ ಮತ್ತು ಪ್ರಾಣಕ್ಕೆ ಸಂಚಕಾರ ಮಾಡುತ್ತಿರುವುದಾಗಿ ಆರೋಪಿಸಿ ಕೇಂದ್ರ ಸರಕಾರದ ವಿರುದ್ಧ ಹಮ್ಮಿಕೊಂಡಿದ್ದ ಪ್ರತಿಭಟನೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕೇಜ್ರಿವಾಲ್ ಅವರನ್ನು ಜೈಲಿನಲ್ಲೇ ಕೊಲೆ ಮಾಡಲು ಕೂಡ ಕೇಂದ್ರ ಸರಕಾರ ಸಂಚು ರೂಪಿಸಿದ್ದು, ಸರ್ವಾಧಿಕಾರಿಯಂತೆ ವರ್ತಿಸುತ್ತಿದೆ. ಜನ ಬುದ್ಧಿ ಕಲಿಸುವ ದಿನ ದೂರವಿಲ್ಲ ಎಂದರು. ಎಎಪಿ ರಾಷ್ಟ್ರೀಯ ಜಂಟಿ ಕಾರ್ಯದರ್ಶಿ ಪೃಥ್ವಿರೆಡ್ಡಿ ಮಾತನಾಡಿ, ಕೇಜ್ರಿವಾಲ್ ಅವರ ಆರೋಗ್ಯ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ಸಕ್ಕರೆ ಕಾಯಿಲೆಯಿಂದ ಬಳಲು ತ್ತಿದ್ದು, ಶುಗರ್ ಲೆವೆಲ್ ಕಡಿಮೆಯಾಗುತ್ತಿದೆ. ಶುಗರ್ ಪ್ರಮಾಣ 60ಕ್ಕಿಂತ ಕಡಿಮೆಯಾದರೆ ಅದರಿಂದ ಆಘಾತ ಆಗುತ್ತದೆ, ಅದು ಪ್ರಾಣಕ್ಕೆ ಮಾರಕವಾಗುವ ಸಾಧ್ಯತೆ ಕೂಡ ಇದೆ. ವೈದ್ಯರ ಪ್ರಕಾರ, ಒಂದೇ ದಿನ ಕೇಜ್ರಿವಾಲ್ ಶುಗರ್ ಲೆವೆಲ್ 60ಕ್ಕಿಂತ ಕಡಿಮೆಯಾಗಿದೆಂದು ಆತಂಕ ವ್ಯಕ್ತಪಡಿಸಿದರು.

ಎಎಪಿಯಿಂದ ಅರವಿಂದ್ ಕೇಜ್ರಿವಾಲ್ ಬಂಧನ ವಿರೋಧಿಸಿ ಫ್ರೀಡಂ ಪಾರ್ಕ್‌ನಲ್ಲಿ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಮುಖ್ಯಮಂತ್ರಿ ಚಂದ್ರು ಭಾಗವಹಿಸಿದ್ದರು. ಈ ವೇಳೆ ಹಿರಿಯ ರಂಗಕರ್ಮಿ ಶ್ರೀನಿವಾಸ್ ಕಪ್ಪಣ್ಣ , ಸಿಪಿಐಂ ಮುಖಂಡ ಬಸವರಾಜು, ಸಿಪಿಐ ಸಹ ಕಾರ್ಯದರ್ಶಿ ಅಮ್ಜದ್ ಖಾನ್ ಸೇರಿ ಹಲವರಿದ್ದರು.

ಭೂಕುಸಿತ ಚಾ.ನಗರ ಕುಟುಂಬ ಪಾರು

ಐವರ ಕುಟುಂಬ ರಕ್ಷಿಸಿದ ಗೋಮಾತೆ

ಚಾಮರಾಜನಗರ: ಕೇರಳದ ಭೀಕರ ಭೂ ಕುಸಿತದಲ್ಲಿ ಚಾಮ ರಾಜನಗರದ ಕುಟುಂಬ ಅಪಾಯಯದಿಂದ ಪಾರಾಗಿ ಬಂದ ಘಟನೆ ವಯಡಿನ ಚೂರಲ್ ಮಲೆಯಲ್ಲಿ ನಡೆದಿದೆ. ತಮ್ಮ ಮನೆಯಲ್ಲಿದ್ದ ಹಸುವಿನಿಂದ ಕುಟುಂಬ ಬಚಾವಾಗಿದೆ. ಚೂರಲ್ ಮಲೆಯಲ್ಲಿದ್ದ ಚಾಮರಾಜ ನಗರದ ವಿನೋದ್, ಜಯಶ್ರೀ, ಸಿದ್ದರಾಜು, ಮಹೇಶ್ ಹಾಗೂ ಗೌರಮ್ಮ ಪಾರಾಗಿದ್ದು ಮೆಪಾಡಿಯಲ್ಲಿದ್ದ ಪ್ರವಿದಾ, ಲಕ್ಷ್ಮಿ, ಪುಟ್ಟಸಿದ್ದಮ್ಮ ಮತ್ತು 2 ತಿಂಗಳ ಮಗು ಚಾಮರಾಜನಗರಕ್ಕೆ ಸುರಕ್ಷಿತವಾಗಿ ಬಂದಿದ್ದಾರೆ. ವಿನೋದ್ ಪತ್ನಿ ಬಾಣಂತಿಯಾದ ಕಾರಣ ಪ್ರವೀದಾ, ಅತ್ತೆ ಲಕ್ಷ್ಮೀ ಹಾಗೂ ಪುಟ್ಟಸಿದ್ದಮ್ಮ ಮೆಪಾಡಿಯಲ್ಲಿದ್ದರು. ವಿನೋದ್ ಮತ್ತು ನಾಲ್ವರು ಚೂರಲ್ ಮಲೆಯಲ್ಲಿದ್ದರು. ಮಲೆಗೂ ಮೆಪಾಡಿಗೂ 6 ಕಿಮೀ ದೂರ ದಲ್ಲಿದ್ದು ಭೂಕುಸಿತ ಉಂಟಾಗುವ ಕೆಲವೇ ಸಮಯಕ್ಕೂ ಮುನ್ನ ಸುರಕ್ಷಿತ ಸ್ಥಳಕ್ಕೆ ಬಂದಿದ್ದಾರೆ.

ಹಸು ಚೀರಾಡಿದ್ದಕ್ಕೆ ಬಚಾವ್

ಚೂರಲ್ ಮಲೆಯಲ್ಲಿ ವಿನೋದ್ ಕುಟುಂಬ ನಿದ್ರಿಸುತ್ತಿದ್ದಾಗ ಕೊಟ್ಟಿಗೆಯಲ್ಲಿದ್ದ ಹಸು ಚೀರಾಡಿ, ಅಳುವ ಸದ್ದು ಮಾಡಿದೆ. ಕೂಡಲೇ ಎಚ್ಚೆತ್ತ ವಿನೋದ್ ಕೊಟ್ಟಿಗೆಯಲ್ಲಿ ನೀರು ತುಂಬಿಕೊಂಡಿದ್ದನ್ನು ಕಂಡು ಕೂಡಲೇ ಮನೆಯಲ್ಲಿದ್ದವರನ್ನು ಎಬ್ಬಿಸಿ ಎಲ್ಲರೊಂದಿಗೆ ಗುಡ್ಡದ ಮೇಲಕ್ಕೆ ತೆರಳಿದ್ದಾರೆ. ಬಳಿಕ ನೋಡ ನೋಡುತ್ತಿದ್ದಂತೆ ತಾವಿದ್ದ ಮನೆ, ವಾಹನ ಎಲ್ಲವೂ ಮಾಯವಾದಂತೆ ಭೂಮಿಯಡಿ ಹುದುಗಿಹೋಗಿದೆ. ಮನೆಯ ಸಮೀಪವೇ ಇದ್ದ ಸೇತುವೆ ಕೂಡ ಎರಡು ಭಾಗವಾಗಿ ಹೋಳಾಗಿದೆ. ಕೂಡಲೇ ಮೆಪಾಡಿಯಲ್ಲಿದ್ದ ಪತ್ನಿಗೂ ವಿಚಾರ ತಿಳಿಸಿ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ವಿನೋದ್ ಸೂಚಿಸಿದ್ದರಿಂದ ಪ್ರವೀದಾ, ಶ್ರೀಲಕ್ಷ್ಮಿ ಹಾಗೂ ಪುಟ್ಟಸಿದ್ದಮ್ಮ ಸುರಕ್ಷಿತ ಸ್ಥಳಕ್ಕೆ ಬಂದಿದ್ದಾರೆ. ಗುಡ್ಡದ ಮೇಲೆ ಆಶ್ರಯ ಪಡೆದಿದ್ದ ವಿನೋದ್ ಹಾಗೂ ಮತ್ತಿತ್ತರನ್ನು ರಕ್ಷಣಾಪಡೆ ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಿದೆ. ಸಾಕಿದ್ದ ಹಸು ದೇವರಂತೆ ಕುಟುಂಬಕ್ಕೆ ಅಪಾಯದ ಬಗ್ಗೆ ಎಚ್ಚರಿಸಿ ಇಡೀ ಕುಟುಂಬವನ್ನು ಪಾರು ಮಾಡಿದೆ. ಅಲ್ಲಿಂದ ಮಂಗಳವಾರ ಸಂಜೆ ಚಾಮರಾಜನಗರ ತಲುಪಿದ್ದಾರೆ.

ಹಾದಿತಪ್ಪಿದ ಯಾತ್ರೆ: ಮಂಜುನಾಥ ಭಂಡಾರಿ

ಬೆಂಗಳೂರು: ಪ್ರಜಾಪ್ರಭುತ್ವದ ಕಾವಲು ನಾಯಿ ಯಾಗಬೇಕಿದ್ದ ಬಿಜೆಪಿ ಸಾಮರಸ್ಯವಿಲ್ಲದೇ ಕವಲು ದಾರಿಯಲ್ಲಿ ಹೋಗುತ್ತಿದ್ದು, ಕಚ್ಚಾಡುತ್ತಾ ಯಾತ್ರೆಯ ಹಾದಿ ತಪ್ಪಿದ್ದು, ರಾಜ್ಯದ ಜನರಿಗೆ ಸೌಲಭ್ಯ ಕಲ್ಪಿಸಲು ದೆಹಲಿಗೆ ಯಾತ್ರೆ ಮಾಡುವುದನ್ನು ಬಿಟ್ಟು ತಮ್ಮ ತಪ್ಪು ಮುಚ್ಚಿಕೊಳ್ಳಲು ಕಾಂಗ್ರೆಸ್ ವಿರುದ್ಧ ಪಾದಯಾತ್ರೆ ಮಾಡಲು ಹೊರಟಿದ್ದಾರೆ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಮಂಜುನಾಥ ಭಂಡಾರಿ ಟೀಕಿಸಿದ್ದಾರೆ.

ನೀವೂ ಬರೆಯಬಹುದು

ನಮ್ಮ ವಿಳಾಸ: ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098, ಇ-ಮೇಲ್: vishwavanimagazine@gmail.com

ಸದ್ದಿಲ್ಲದೇ ಆವರಿಸಬಲ್ಲ ಅಪಾಯ!

ಇತ್ತೀಚೆಗೆ ಶ್ವಾಸಕೋಶದ ಕ್ಯಾನ್ಸರ್ ಸಮಸ್ಯೆಯಿಂದ ಬಳಲುವವರ ಸಂಖ್ಯೆ ಜಾಸ್ತಿಯಾಗಿದೆ. ಈ ಸಮಸ್ಯೆಯ ಕುರಿತು ಜನಸಾಮಾನ್ಯರಲ್ಲಿ ಅರಿವು ಮೂಡಿಸಲು, ಇಂದು ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನವನ್ನು ಆಚರಿಸಲಾಗುತ್ತಿದೆ. ಶುದ್ಧ ಗಾಳಿಯ ಸೇವನೆಯಿಂದ ಈ ಸಮಸ್ಯೆಯನ್ನು ದೂರ ಮಾಡಬಹುದು.

• **ಡಾ. ಮೈತ್ರಿ ಭಟ್** ವಿಟ್ಲ

ಕ್ಯಾನ್ಸರ್ ಎಂಬುದು ಈಚಿನ ವರ್ಷಗಳಲ್ಲಿ ಹೆಚ್ಚು ಹೆಚ್ಚು ಕೇಳಿಬರುತ್ತಿರುವ ಒಂದು ಪದ. ಸದ್ದಿಲ್ಲದೇ ದೇಹವನ್ನು ಆವರಿಸಿ, ಆರೋಗ್ಯವನ್ನು ಕೆಡಿಸುವ ಈ ಪದದ ಹೆಸರನ್ನು ಕೇಳಿದರೇ ಸಾಕು, ಇಡೀ ಜಗತ್ತೇ ಬೆಚ್ಚಿ ಬೀಳುತ್ತದೆ. ಇದೊಂದು ಆರೋಗ್ಯ ಸಮಸ್ಯೆ ಆವರಿಸಿದರೆ, ಆ ವ್ಯಕ್ತಿಯ ಆತ್ಮಶಕ್ತಿ ಕುಸಿದು ಹೋಗುತ್ತದೆ. ದೇಹದ ಬೇರೆ ಬೇರೆ ಅಂಗಾಂಗಗಳಿಗೆ ತಗಲುವ ಈ ಕ್ಯಾನ್ಸರ್ ಎಂಬ ಹೆಮ್ಮಾರಿ ವ್ಯಕ್ತಿಯ ಸಾವಿಗೂ ಕಾರಣವಾಗಬಹುದು. ಆದರೆ ಸಾವಿಗಿಂತಲೂ ಹೆಚ್ಚಿನ ಕಾಡುವಿಕೆ ಯಾತನೆಯದೇ ಆಗಿದೆ. ಹೀಗೆ ಕಾಡುವ ಕ್ಯಾನ್ಸರ್ ಪೈಕಿ ಶ್ವಾಸಕೋಶದ ಕ್ಯಾನ್ಸರ್ ಕೂಡಾ ಒಂದು. ಧೂಮಪಾನದಂತಹ ದುಶ್ಚಟಗಳು ಈ ಕ್ಯಾನ್ಸರಿಗೆ ಕಾರಣವಾಗಬಹುದಾದರೂ, ಇಂದಿನ ನಮ್ಮ ಜೀವನಶೈಲಿ ಹಾಗೂ ಆಹಾರಕ್ರಮ ಅನೇಕರನ್ನು ಈ ಕಾಯಿಲೆಗೆ ಬಲಿಯಾಗಿಸುತ್ತಿದೆ. ಪ್ರತೀ ವರ್ಷ ಅದೆಷ್ಟೋ ಜನ ಈ ಕಾಯಿಲೆಗೆ ಬಲಿಯಾಗುತ್ತಿದ್ದಾರೆ.

ಮಾರಣಾಂತಿಕ: ಜಗತ್ತಿನಲ್ಲೇ ಮಾರಣಾಂತಿಕ ಕಾಯಿಲೆಗಳಲ್ಲಿ ಒಂದು ಎನಿಸಿಕೊಂಡಿರುವ ಶ್ವಾಸಕೋಶದ ಕ್ಯಾನ್ಸರ್ ಬಗ್ಗೆ ಜಾಗೃತಿಯನ್ನು ಮೂಡಿಸುವ ಉದ್ದೇಶದಿಂದ 2012ರಿಂದ ಪ್ರತೀ ವರ್ಷ ಆಗಸ್ಟ್ 1 ರಂದು 'ವಿಶ್ವ ಶ್ವಾಸಕೋಶದ ಕ್ಯಾನ್ಸರ್ ದಿನ'ವನ್ನು ಆಚರಿಸಲಾಗುತ್ತಿದೆ. 2012ರಲ್ಲಿ ಇಂಟರ್‌ನ್ಯಾಷನಲ್ ಅಸೋಸಿಯೇಷನ್ ಮತ್ತು ಅಮೆರಿಕನ್ ಕಾಲೇಜ್ ಆಫ್ ಚೆಸ್ಟ್ ಫಿಸಿಶಿಯನ್ಸ್ ಸಹಯೋಗದೊಂದಿಗೆ ಫೋರಮ್ ಆಫ್ ಇಂಟರ್‌ನ್ಯಾಷನಲ್ ರೆಸ್ಪರೇಟರಿ ಸೊಸೈಟೀಸ್ ಈ ಅಭಿಯಾನವನ್ನು ಆಯೋಜಿಸಿತು. ಈ ಕಾಯಿಲೆಗೆ ಸಂಬಂಧಿಸಿದಂತೆ ಒಂದಿಷ್ಟು ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸುವುದರೊಂದಿಗೆ, ಇದರ ಕುರಿತು ಜನರಲ್ಲಿರುವ ಭಯ, ಗೊಂದಲಗಳನ್ನು ಹೋಗಲಾಡಿಸಬೇಕು ಎನ್ನುವುದೂ ಇದರ ಉದ್ದೇಶವಾಗಿದೆ. ಮಾತ್ರವಲ್ಲ, ಶ್ವಾಸಕೋಶದ ಕ್ಯಾನ್ಸರ್‌ನ ಇತರ ರೋಗಲಕ್ಷಣಗಳ ಜೊತೆಗೆ, ಮೂರು ವಾರಗಳಿಗಿಂತ ಹೆಚ್ಚು ಕಾಲ ಇರುವ ಕೆಮ್ಮಿನ ಬಗ್ಗೆ ಹೆಚ್ಚಿನ ಅರಿವನ್ನು ನೀಡುವ ಪ್ರಯತ್ನವನ್ನೂ ಮಾಡಲಾಗುತ್ತಿದೆ.

ಭಾರತದಲ್ಲಿ ಕ್ಯಾನ್ಸರ್ ಪ್ರಮಾಣವು 2022ರಲ್ಲಿ 1.46 ಮಿಲಿಯನ್ ದಾಖಲಾಗಿದ್ದು, 2025ರ ಹೊತ್ತಿಗೆ 1.57 ಮಿಲಿಯನ್‌ನಷ್ಟು ಹೆಚ್ಚಾಗಬಹುದು ಎಂದು ಅಂದಾಜಿಸಲಾಗಿದೆ. ಪುರುಷರಲ್ಲಿ ಶ್ವಾಸಕೋಶದ ಕ್ಯಾನ್ಸರ್ ಹಾಗೂ ಮಹಿಳೆಯರಲ್ಲಿ ಸ್ತನ ಕ್ಯಾನ್ಸರ್ ಹೆಚ್ಚು ಕಾಡುತ್ತಿರುವ ಕ್ಯಾನ್ಸರಿನ ವಿಧ ಎಂದು ಪರಿಗಣಿಸಲಾಗಿದೆ.

2023ರಲ್ಲಿ ಭಾರತದಲ್ಲಿ ದಾಖಲಾದ ಕ್ಯಾನ್ಸರ್ ಪ್ರಕರಣಗಳ ಪೈಕಿ ಮುಂಚೂಣಿಯಲ್ಲಿರುವುದು ಶ್ವಾಸಕೋಶದ ಕ್ಯಾನ್ಸರ್. ಭಾರತದಲ್ಲಿ, ಹೆಚ್ಚಿನ ಸಂಖ್ಯೆಯ ಮಾರಣಾಂತಿಕ ಕ್ಯಾನ್ಸರ್ ಪ್ರಕರಣಗಳು ಸಾಮಾನ್ಯ ಜನರಲ್ಲಿ ಅರಿವಿನ ಕೊರತೆ ಮತ್ತು ತಡವಾದ ರೋಗನಿರ್ಣಯದ ಕಾರಣ ದಿಂದಾಗಿವೆ. ಜನರು ತಮ್ಮ ದೈನಂದಿನ ಜೀವನದಲ್ಲಿ ಗಮನಿಸಬಹುದಾದ ಅಂಶಗಳು ಮತ್ತು ಕ್ಯಾನ್ಸರ್ ಬರುವ ಸಾಧ್ಯತೆ ಯನ್ನು ಹೆಚ್ಚಿಸುವ ಅಭ್ಯಾಸಗಳ ಬಗ್ಗೆ ಜಾಗೃತಿ ಮೂಡಿಸುವುದು ಮುಖ್ಯವಾಗಿದೆ. ಅದರೊಂದಿಗೆ, ನಿಯಮಿತ ಆರೋಗ್ಯ ತಪಾಸಣೆ ಮತ್ತು ಅಗತ್ಯವಿದ್ದಾಗ ವೈದ್ಯಕೀಯ ಸಹಾಯವನ್ನು ಪಡೆಯುವುದು ಈ ರೋಗದ ವಿರುದ್ಧ ಗೆಲ್ಲುವ ಸಾಧ್ಯತೆಗಳನ್ನು ಹೆಚ್ಚಿಸುತ್ತದೆ. 2022ರಲ್ಲಿ ಸುಮಾರು 1,03,371 ಶ್ವಾಸಕೋಶದ ಕ್ಯಾನ್ಸರ್‌ನ ಪ್ರಕರಣ ಗಳು ದಾಖಲಾಗಿವೆ ಎಂದು ಅಂದಾಜಿಸಲಾಗಿದೆ. ಈ ಸಮಸ್ಯೆಯು ಪುರುಷ ಹಾಗೂ ಮಹಿಳೆ ಇಬ್ಬರಲ್ಲಿಯೂ ಕಾಣಿಸಿಕೊಳ್ಳುತ್ತದೆ. ಆದರೆ ಪುರುಷರಲ್ಲಿ ಇದು ಹೆಚ್ಚು ಕಾಣಿಸುತ್ತಿದೆ.

ಧೂಮಪಾನದವೇ ಪ್ರಮುಖ ಕಾರಣ: ಶ್ವಾಸಕೋಶದ ಕ್ಯಾನರ್‌ಗೆ ಒಳಗಾಗುವ ಶೇಕಡಾ 80ರಷ್ಟು ಮಂದಿ ಧೂಮಪಾನ ಮಾಡುತ್ತಾರೆ ಎಂಬುದನ್ನು ಅಧ್ಯಯನಗಳು ತಿಳಿಸಿವೆ. ಇದರೊಂದಿಗೆ ಧೂಮಪಾನದ ಹೊಗೆಗೆ ತೆರೆದುಕೊಳ್ಳುವುದು, ವಾಯುಮಾಲಿನ್ಯ, ಕೌಟುಂಬಿಕ ಇತಿಹಾಸವು ಇದಕ್ಕೆ ಕಾರಣವಾಗುವ ಇತರ ಅಪಾಯಕಾರಿ ಅಂಶಗಳಾಗಿವೆ. ಮನೆಯಲ್ಲಿ ಒಬ್ಬರು ಧೂಮಪಾನ ಮಾಡುವ ಅಭ್ಯಾಸ ಉಳ್ಳವರಾಗಿದ್ದರೆ, ಅವರ ಸಂಗಾತಿಗಳು ಪರೋಕ್ಷ ಧೂಮಪಾನ ಮಾಡುವ ಅಪಾಯಕ್ಕೆ ಸಿಲುಕಿ, ಅವರಿಗೂ ಇಂತಹ ಸಮಸ್ಯೆಗಳು ಆವರಿಸುವ ಸಾಧ್ಯತೆ ಇದೆ.

ಶ್ವಾಸಕೋಶದ ಕ್ಯಾನ್ಸರ್ ಸಾಮಾನ್ಯವಾಗಿ ಆರಂಭಿಕ ಹಂತಗಳಲ್ಲಿ ಪತ್ತೆಯಾಗುವುದಿಲ್ಲ. ಹಾಗಾಗಿ ಕಾಡುವ ದೀರ್ಘಕಾಲದ ಕೆಮ್ಮು, ಕೆಮ್ಮಿದಾಗ ರಕ್ತ ಬರುವುದು, ಉಸಿರಾಟದ ತೊಂದರೆ, ಎದೆನೋವು ಮುಂತಾದ ರೋಗಲಕ್ಷಣಗಳು ಕಂಡುಬಂದರೆ ತಕ್ಷಣಕ್ಕೆ ವೈದ್ಯರ ಬಳಿ ಚಿಕಿತ್ಸೆ ಪಡೆಯುವುದು ಅವಶ್ಯಕವಾಗಿದೆ.

ಸೂಕ್ಷ್ಮದರ್ಶಕದಲ್ಲಿ ಕ್ಯಾನ್ಸರ್ ಕೋಶಗಳ ಗೋಚರಿಸುವಿಕೆಯ ಆಧಾರದ ಮೇಲೆ ಶ್ವಾಸಕೋಶದ ಕ್ಯಾನ್ಸರನ್ನು ಸ್ಮಾಲ್ ಸೆಲ್ ಲಂಗ್ ಕ್ಯಾನ್ಸರ್ ಮತ್ತು ನಾನ್ ಸ್ಮಾಲ್ ಸೆಲ್ ಲಂಗ್ ಕ್ಯಾನ್ಸರ್ ಎಂದು ವರ್ಗೀಕರಿಸಲಾಗಿದೆ. ನಾನ್ ಸ್ಮಾಲ್ ಸೆಲ್ ಲಂಗ್ ಕ್ಯಾನ್ಸರಿಗಿಂತ ಸ್ಮಾಲ್ ಸೆಲ್ ಲಂಗ್ ಕ್ಯಾನ್ಸರ್ ಬೇಗನೆ ಹರಡುತ್ತದೆ ಎಂದು ಹೇಳಲಾಗಿದೆ.

ಆದಷ್ಟು ಬೇಗ ಪತ್ತೆ ಹಚ್ಚಿದಾಗ ಕ್ಯಾನ್ಸರ್ ವಿರುದ್ಧ ಹೋರಾಡುವುದು ಸುಲಭವೆನಿಸುತ್ತದೆ. ಮೊದಲ ಹಂತಗಳಲ್ಲೇ ತಿಳಿಯಬೇಕಾದರೆ ನಮಗೆ ರೋಗದ ಬಗ್ಗೆ ಅರಿವು ಅಗತ್ಯ. ನಮ್ಮ ಬದುಕಿನ ಶೈಲಿ ಬದಲಾವಣೆ ಮತ್ತು ಸೂಕ್ತ ಆಹಾರ ಪದ್ಧತಿಯ ಮೂಲಕ ಸಾಧ್ಯವಾದಷ್ಟು ಇಂತಹ ಮಾರಕ ಕಾಯಿಲೆಗಳಿಂದ ದೂರ ಉಳಿಯಬಹುದು. ಜೊತೆಗೆ, ಎಲ್ಲಾದರೂ ಕಾಯಿಲೆಗೆ ಗುರಿಯಾದಲ್ಲಿ ರೋಗಿಗೆ ಚಿಕಿತ್ಸೆಯ ಜೊತೆಗೆ ಮಾನಸಿಕ ಸ್ಥೈರ್ಯ ತುಂಬುವ ಪ್ರೀತಿ, ಕಾಳಜಿ ಕೊಟ್ಟು ಅವರ ಬದುಕನ್ನು ಸಹನೀಯವಾಗಿಸುವ ಜವಾಬ್ದಾರಿ ಎಲ್ಲರದೂ ಆಗಿದೆ.

ಕಾರಣವೇನು?

ಶ್ವಾಸಕೋಶದ ಕ್ಯಾನ್ಸರ್‌ಗೆ ಪ್ರಮುಖ ಕಾರಣ ಧೂಮಪಾನ ಎಂದು ಅಧ್ಯಯನಗಳು ತಿಳಿಸಿವೆ. ಶೇ.90ರಷ್ಟು ಸಂದರ್ಭಗಳಲ್ಲಿ ಧೂಮಪಾನವೇ ಕಾರಣ ಎಂದು ಪತ್ತೆಯಾಗಿದೆ. ಮನೆಯಲ್ಲಿರುವ ಒಬ್ಬರು ಧೂಮಪಾನ ಮಾಡಿದರೆ, ಮನೆಯ ಇತರ ಸದಸ್ಯರು ಪರೋಕ್ಷ ಧೂಮಪಾನಕ್ಕೆ ಗುರಿಯಾಗುವರು. ಮನೆಯ ವಾತಾವರಣದಲ್ಲಿರುವ ಅಪಾಯಕಾರಿ ರಾಸಾಯನಿಕಗಳ ನಿರಂತರ ಸೇವನೆಯು ಸಹ ಶ್ವಾಸಕೋಶದ ಕ್ಯಾನ್ಸರ್‌ಗೆ ಕಾರಣ ಎನಿಸಬಲ್ಲದು. ಹೆಚ್ಚು ಗಾಳಿಯಾಡದ ಕೊಠಡಿಯಲ್ಲಿರಬಹುದಾದ ಹೊಗೆ (ಉದಾ: ಎಕ್ಸಾಸ್ಟ್ ಪೈಪ್ ಹೊಗೆ, ಊದುಬತ್ತಿಯ ಹೊಗೆ) ಸಹಾ ಇಂತಹ ಸಮಸ್ಯೆಗೆ ಕಾರಣವಾಗುವ ಸಾಧ್ಯತೆ ಇದೆ. ಕೆಲವು ಸಂದರ್ಭಗಳಲ್ಲಿ, ನೆಲದಿಂದ ಹೊರಬಂದು ಮನೆಯೊಳಗೆ ನುಸುಳಬಹುದಾದ ರೇಡಾನ್ (ಅನಿಲ ಸ್ವರೂಪ) ಸಹ ಶ್ವಾಸಕೋಶದ ಕ್ಯಾನ್ಸರ್ ತರಬಲ್ಲದು. ಅಮೆರಿಕದಲ್ಲಿ ಮನೆಯೊಳಗೆ ನುಸುಳುವ ರೇಡಾನ್ ಎಂಬುದು, ಈ ಆರೋಗ್ಯ ಸಮಸ್ಯೆ ಎರಡನೆಯ ಅತಿ ದೊಡ್ಡ ಕಾರಣ ಎನಿಸಿದೆ. ಕಟ್ಟಡಗಳ ತಳಪಾಯದ ಬಿರುಕು, ಗೋಡೆಗಳ ಬಿರುಕು, ಪೈಪ್‌ಗಳ ಸಂದಿಯ ಮೂಲಕ, ನೆಲದಲ್ಲಿರುವ ರೇಡಾನ್ ಮನೆಯೊಳಗೆ ನುಸುಳಬಲ್ಲದು!

ಯುವ ಕಾವ್ಯ

ಪ್ರವಾಹ

ಅಬ್ಬರದಿ ಸುರಿಯುತ್ತಿದೆ ಎಲ್ಲೆಡೆ ಮಳೆಯು
ವರ್ಷಧಾರೆಯರ್ಭಟಕ್ಕೆ ತತ್ತರಿಸಿ ಭುವಿಯು
ತುಂಬಿದೆ ನದಿನದಗಳು ಹಳ್ಳಕೊಳ್ಳ ತೊರೆಯು,
ಕೊಚ್ಚಿಹೋಗಿವೆ ಪ್ರವಾಹಕ್ಕೆ ಸಿಲುಕಿದ ಜೀವಿಯು||

ಪ್ರವಾಹದಿ ಮುಳುಗಡೆಯಾಗಿದೆ ಮನೆಮಠಗಳು,
ರಸ್ತೆಸೇತುವೆಗಳೆಲ್ಲ ಮುಳುಗಿಹೋಗಿದೆ ನೀರಿನೊಳು,
ಸುರಿಯುವ ವರುಣನರ್ಭಟದ ಮಳೆಗಾಲದೊಳು,
ಎಚ್ಚೆತ್ತುಕೊಳ್ಳಬೇಕಿದೆ ಮನುಷ್ಯನು ಈಗಲಾದರೂ||

ಮೆತ್ತ ಬೇಡಿರಿ ಎಲ್ಲೆಡೆ ಕಾಂಕ್ರೀಟ್ ಸಿಮೆಂಟು,
ಕಡಿಯಬೇಡಿರಿ ಮರ-ಗಿಡ ಬಳ್ಳಿಗಳ ಕರುಣೆ ಬಿಟ್ಟು
ಕೊರೆಯಬೇಡಿರಿ ಭೂಮಿಯನ್ನು ಯಂತ್ರಗಳ ಇಟ್ಟು
ಬದಲಾಗಿರಿ ಇನ್ನು ಸ್ವಲ್ಪ ಭವಿಷ್ಯದಿ ಗಮನಕೊಟ್ಟು||

ಆಧುನಿಕತೆ ಸುಖ ಸೌಲಭ್ಯಗಳ ಹಿಂದೆ ಬೀಳುತ್ತಾ,
ಸರಳ ಪರಿಸರ ಸ್ನೇಹಿ ಜೀವನವ ತೊರೆಯುತ್ತಾ,
ಹೋದಷ್ಟು ಹತ್ತಿರವಾಗುವೆವು ಅಳಿವಿನಂಚಿನತ್ತ,
ಇನ್ನಾದರೂ ಅರಿತು ಸಾಗೋಣ ನಾವು ಹಸಿರಿನತ್ತ.

ಬದುಕಿನಲಿ ಇರಲಿ ಸರಳತೆಯ ತಳಹದಿ
ಅತಿ ಆಸೆಯ ಏಣಿಗೆ ಇರಲಿ ಸ್ವಲ್ಪ ಮಿತಿ
ಹಣವನು ಬಾಚುವುದೇ ಜೀವನದ ಗುರಿಯಲ್ಲ
ಇರಲಿ ನೆಮ್ಮದಿ ದಿನಚರಿಯಲಿ ಅತಿ ಮೋಹ ಸಲ್ಲ

• **ಮಮತಾ ಶೃಂಗೇರಿ**

ಹೆಲ್ತ್ ಕಾರ್ನರ್

ಹೊಟ್ಟೆಯಲ್ಲಿ ಉರಿಯುಂಟಾಗುವುದನ್ನು ಆ್ಯಸಿಡಿಟಿ ಎಂದು ಕರೆಯುವುದುಂಟು. ಇದು ಹಲವು ಕಾರಣಗಳಿಗೆ ಬರಬಹುದಾದರೂ, ಇದರ ಕಾಟದಿಂದ ದೂರಾಗಲು ಕೆಲವು ಮನೆ ಮದ್ದುಗಳಿವೆ.

- ಜೀರಿಗೆ ಮತ್ತು ಸೋಂಪು ಸೇವನೆಯಿಂದ ಹೊಟ್ಟೆಯ ಉರಿಯನ್ನು ಕಡಿಮೆ ಮಾಡಬಹುದು. ಇವನ್ನು ಕುಟ್ಟಿ ಪುಡಿಮಾಡಿ, ನೀರಿನಲ್ಲಿ ಕುದಿಸಿ ಸೇವಿಸಿ.
- ಹೆಚ್ಚು ನೀರನ್ನು ಸೇವಿಸಿ.
- ಸಕ್ಕರೆ ಬೆರೆಸದೇ ಇರುವ ಕಲ್ಲಂಗಡಿ ಜ್ಯೂಸ್ ಮತ್ತು ಬೂದುಗುಂಬಳ ಜ್ಯೂಸ್ ಸೇವಿಸಿ.
- ದಿನಕ್ಕೆ ಒಂದು ಏಲಕ್ಕಿ ಸೇವಿಸಿದರೆ, ಜೀರ್ಣ ಶಕ್ತಿ ಉತ್ತಮಗೊಂಡು, ಆ್ಯಸಿಡಿಟಿ ಕಡಿಮೆಯಾಗಬಹುದು.
- ಒಂದು ಚಮಚದಷ್ಟು, ಗುಣಮಟ್ಟದ ಬೆಲ್ಲದ ಸೇವನೆ ಹಿತಕಾರಿ.
- ಕಡೆದು ಮಾಡಿದ ಮಜ್ಜಿಗೆಯ ಸೇವನೆಯು ಹೊಟ್ಟೆಯ ಆರೋಗ್ಯಕ್ಕೆ ಉತ್ತಮ ಮತ್ತು ಹೊಟ್ಟೆಯ ಉರಿಯನ್ನು ತಣಿಸುತ್ತದೆ.

ಮಾನವ ನಿರ್ಮಿತ ಪ್ರಾಕೃತಿಕ ದುರಂತ?

ಮನುಷ್ಯ ಪ್ರಕೃತಿಯನ್ನು ನಾಶಮಾಡುತ್ತಾ, ಸ್ವಾರ್ಥ ಸಾಧನೆ ಮಾಡಿಕೊಂಡರೆ ಏನಾದೀತು ಎಂಬುದಕ್ಕೆ ನಿನ್ನೆ ನಮ್ಮ ರಾಜ್ಯದಲ್ಲಿ ಒಂದು ಎಚ್ಚರಿಕೆಯ ಗಂಟೆ ಸದ್ದು ಮಾಡಿದೆ. ಸಕಲೇಶಪುರ ತಾಲೂಕಿನ ಕಾಡಿನ ನಡುವೆ, ಕಳೆದ ಕೆಲವು ವರ್ಷಗಳಿಂದ ಪೈಪು ಹೂಳಲು ಅವೈಜ್ಞಾನಿಕವಾಗಿ ಕಾಮಗಾರಿ ನಡೆಸಿದ್ದರಿಂದಾಗಿ, ಈ ವರ್ಷದ ಮಳೆಗೆ ಅಲ್ಲಿನ ರಸ್ತೆಯ ಭಾಗಗಳು ಕುಸಿದು ಹೋಗಿವೆ!

• **ಶಶಾಂಕ್ ಮುದೂರಿ**

ನಿನ್ನೆ ಅಂದರೆ 30.7.2024ರಂದು, ಎರಡು ಭಾರೀ ಭೂಕುಸಿತಗಳು ಮಾಧ್ಯಮಗಳಲ್ಲಿ ವರದಿಯಾದವು. ಕೇರಳದಲ್ಲಿ ಭೂಕುಸಿತವಾಗಿ ನೂರಕ್ಕೂ ಹೆಚ್ಚು ಜನರು ಮೃತಪಟ್ಟದ್ದು, ಮೂರು ಹಳ್ಳಿಗಳು ಹಾನಿಗೊಳಗಾಗಿದ್ದು ನಿಜಕ್ಕೂ ಒಂದು ದುರಂತ. ಇತ್ತ, ನಮ್ಮ ರಾಜ್ಯದ ಸಕಲೇಶಪುರದ ಶಿರಾಡಿ ಘಾಟ್ ರಸ್ತೆ ಮತ್ತು ಆ ಸರಹದ್ದಿನಲ್ಲಿ ರಸ್ತೆ ಕುಸಿದು, ಆರೆಂಟು ವಾಹನಗಳು, ಕೆಸರಿನಲ್ಲಿ ಸಿಕ್ಕಿಹಾಕಿಕೊಂಡವು, ಸಂಪರ್ಕ ಕಡಿತಗೊಂಡಿತು, ಕಾಫಿ ತೋಟವು ಹಾನಿಗೊಳಗಾಯಿತು.

ದುರಂತವೆಂದರೆ, ಸಕಲೇಶಪುರದ ಸನಿಹದ ಪ್ರಮುಖ ರಸ್ತೆಯ ಪಕ್ಕದಲ್ಲಿ ನಿರಂತರವಾಗಿ ಕಳೆದ ಕೆಲವು ವರ್ಷಗಳಿಂದ ನಡೆಯುತ್ತಿರುವ ಅವೈಜ್ಞಾನಿಕ ಕಾಮಗಾರಿಯಿಂದಾಗಿ, ರಸ್ತೆಯ ಭಾಗ ಕುಸಿದುಬಿದ್ದಿದೆ! ಮೇಲ್ನೋಟಕ್ಕೆ ಇದು ಒಂದು ಪ್ರಾಕೃತಿಕ ಅವಘಡ ಎನ್ನಬಹುದು; ಆದರೆ, ಸಹ್ಯಾದ್ರಿಯ ಕಾಡುಪ್ರದೇಶದ ಸೂಕ್ಷ್ಮ ವಲಯದಲ್ಲಿ ನಡೆಸಿದ ಒಂದು ಅವೈಜ್ಞಾನಿಕ ಕಾಮಗಾರಿಯಿಂದಾಗಿ, ಹೆದ್ದಾರಿಯು ಕುಸಿಯಿತು ಎಂಬುದು ನಿಜಕ್ಕೂ ದುರಂತ.

ಸಕಲೇಶಪುರ ತಾಲೂಕಿನಲ್ಲಿ ಹಾದು ಹೋಗುವ ಶಿರಾಡಿ ಘಾಟಿಯ ಹೆದ್ದಾರಿಯುದ್ದಕ್ಕೂ ಇಂತಹದೊಂದು ದುರಂತ ನಡೆಯಲು ನಮ್ಮ ಜನರೇ ಮುನ್ನುಡಿಯನ್ನು ಬರೆದಿದ್ದಾರೆ, ವೇದಿಕೆಯನ್ನು ಸಿದ್ಧಪಡಿಸಿದ್ದಾರೆ. ನದಿ ತಿರುವು ಮೂಲಕ, ಪಶ್ಚಿಮಕ್ಕೆ ಸಾಗುವ ನೀರನ್ನು ಪೂರ್ವದಿಕ್ಕಿಗೆ ತರಲು ನಡೆಸಿರುವ 'ಎತ್ತಿನ ಹೊಳೆ' ಕಾಮಗಾರಿಯೇ ಈ ದುರಂತಕ್ಕೆ ಕಾರಣ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗುತ್ತದೆ. ಶಿರಾಡಿ ಘಾಟ್ ಪರಿಸರದ ಇನ್ನಷ್ಟು ಭಾಗದಲ್ಲಿ ಭೂಕುಸಿತ ಮತ್ತು ರಸ್ತೆ ಹಾನಿ ಸಂಭವಿಸಬಹುದೇ ಎಂಬ ಅನುಮಾನ ಕೆಲವೆಡೆ ವ್ಯಕ್ತವಾಗಿದೆ.

ತಜ್ಞರು ನೀಡಿದ ಎಚ್ಚರಿಕೆ

ನದಿ ತಿರುವು ಯೋಜನೆಗಳು ದೀರ್ಘ ಅವಧಿಯಲ್ಲಿ ಪ್ರಾಕೃತಿಕ ದುರಂತಕ್ಕೆ ಕಾರಣವಾಗುತ್ತವೆ ಎಂದು ವಿಶ್ವದ ಪರಿಸರ ತಜ್ಞರು ಪದೇ ಪದೇ ಎಚ್ಚರಿಕೆ ನೀಡುತ್ತಲೇ ಬರುತ್ತಿದ್ದಾರೆ. ರಷ್ಯಾ ದೇಶದಲ್ಲಿ ಎರಡು ನದಿಗಳಿಗೆ ಅಡ್ಡಲಾಗಿ 30ಕ್ಕೂ ಹೆಚ್ಚು ಸಣ್ಣ-ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಿ, ನದಿಯ ನೀರನ್ನು ಬೇರೆ ದಿಕ್ಕಿಗೆ ತಿರುಗಿಸಿ, ಹತ್ತಿ ಬೆಳೆದದ್ದರಿಂದಾಗಿ, ಅರಾಲ್ ಸಮುದ್ರವು (ವಿಶ್ವದ ನಾಲ್ಕನೇ ಅತಿ ದೊಡ್ಡ ಸರೋವರ) ಕೇವಲ 40 ವರ್ಷಗಳಲ್ಲಿ ಮರುಭೂಮಿಯಾಗಿ ಪರಿವರ್ತನೆ ಗೊಂಡಿತು! ಇದು ನಡೆದದ್ದು ಇಪ್ಪತ್ತನೆಯ ಶತಮಾನದ ಕೊನೆಯ ಮೂರು - ನಾಲ್ಕು ದಶಕಗಳಲ್ಲಿ (1970-2010 ಅವಧಿ). ಅರಾಲ್ ಸರೋವರ ಬತ್ತಿ ಹೋಗಿದ್ದನ್ನು ವಿಶ್ವದ ಅತಿ ದೊಡ್ಡ ಪ್ರಾಕೃತಿಕ ದುರಂತ ಎಂದು ಗುರುತಿಸಲಾಗಿದೆ. ಇದಕ್ಕೆ ಹೋಲಿಸಬಹುದಾದ ಒಂದು ಪ್ರಾಕೃತಿಕ ದುರಂತಕ್ಕೆ 'ಎತ್ತಿನ ಹೊಳೆ' ಯೋಜನೆಯು ಈಗಾಗಲೇ ಅಡಿಪಾಯವನ್ನು ಹಾಕಿದೆ ಎಂಬ ಅನುಮಾನ ವ್ಯಕ್ತವಾಗಿದೆ.

ಪಶ್ಚಿಮ ದಿಕ್ಕಿಗೆ ವ್ಯರ್ಥವಾಗಿ ಹರಿದುಹೋಗುತ್ತಿರುವ ನೀರನ್ನು ಪೂರ್ವ ದಿಕ್ಕಿಗೆ ತಂದು, ತುಮಕೂರು, ಕೋಲಾರ, ಬೆಂಗಳೂರು ಮೊದಲಾದ ಪ್ರದೇಶಗಳಿಗೆ ನೀರುಣಿಸುವ ಉದ್ದೇಶದಿಂದ ಈ ಯೋಜನೆಯನ್ನು ನಡೆಸಲಾಗುತ್ತಿದೆ ಎಂಬುದು ಅಧಿಕೃತ ಮಾಹಿತಿ. ಆದರೆ, ಪ್ರಕೃತಿಯಲ್ಲಿ 'ವ್ಯರ್ಥವಾಗಿ' ಹರಿದು ಹೋಗುವ ನೀರು ಎಂಬುದೇ ಇಲ್ಲ ಎಂದು ವಿಜ್ಞಾನಿಗಳು ಸಾರಿ ಸಾರಿ ಹೇಳಿದ್ದಾರೆ. ಈ ರೀತಿ ವಿರುದ್ಧ ದಿಕ್ಕಿಗೆ ನದಿ ನೀರನ್ನು ತಿರುಗಿಸುವುದು ವೈಜ್ಞಾನಿಕವಲ್ಲ, ಅದರಿಂದ ಉದ್ದೇಶಿತ ಗುರಿ ಸಾಧನೆಯಾಗದು, ಬದಲಿಗೆ ಮನುಷ್ಯ ನಿರ್ಮಿತ ಪ್ರಾಕೃತಿಕ ಸಮಸ್ಯೆಗಳು ಎದುರಾಗುತ್ತವೆ ಎಂದು ಪರಿಸರ ತಜ್ಞರು ಹೇಳಿದ್ದಾರೆ. ಪಶ್ಚಿಮಕ್ಕೆ ಸಾಗುವ ನದಿಗಳ ನೀರನ್ನು ಪೂರ್ವಕ್ಕೆ ತಿರುಗಿಸಿದರೆ, ಆ ನದಿ ನೀರನ್ನು ಇಷ್ಟು ಶತಮಾನಗಳ ಕಾಲ ಅವಲಂಬಿಸಿದ್ದ ಕಾಡು, ಪರಿಸರ, ಹಳ್ಳಿಗಳು, ಜನರು ತೀವ್ರ ಸಂಕಷ್ಟಕ್ಕೆ ಗುರಿಯಾಗುವ ದಿನಗಳೂ ದೂರವಿಲ್ಲ ಎಂದು ಪರಿಸರ ತಜ್ಞರು ಗುರುತಿಸಿದ್ದಾರೆ. ಮೂಲ ವೆಚ್ಚಕ್ಕಿಂತ ಮೂರು ಪಟ್ಟು ಅಧಿಕ ವೆಚ್ಚದೊಂದಿಗೆ ಮುಂದುವರಿಯುತ್ತಿರುವ (ಪ್ರಸ್ತುತ ರು.23,000 ಕೋಟಿಗೂ ಅಧಿಕ ಯೋಜನಾ ವೆಚ್ಚ) ಈ ನದಿ ತಿರುವು ಯೋಜನೆಯು, ಈಗಾಗಲೇ ಪಶ್ಚಿಮ ಘಟ್ಟಗಳ ಹಲವು ಕಡೆ, ಸಾಕಷ್ಟು ಕಾಡನ್ನು ನಾಶ ಮಾಡಿದೆ.



ಶಿರಾಡಿ ಘಾಟಿಯ ಕೆಲವು ಭಾಗಗಳಲ್ಲಿ, ರಸ್ತೆಯ ಸನಿಹವೇ ಎತ್ತಿನ ಹೊಳೆ ಯೋಜನೆಯ ಕಾಮಗಾರಿ ನಡೆದಿದ್ದು, ಅಲ್ಲೆಲ್ಲಾ ನೆಲವನ್ನು ಅಗೆದು, ದಟ್ಟ ಕಾಡನ್ನು, ಮರಗಳನ್ನು ಕಡಿದು ಹಾಕಲಾಗಿದೆ. ಸೂಕ್ತ ಭದ್ರತೆ ಒದಗಿಸದೇ, ನೆಲದಡಿ ಪೈಪುಗಳನ್ನು ಹೂಳಲಾಗಿದೆ; ಅಲ್ಲಿನ ಮಣ್ಣು ಸಡಿಲಗೊಂಡಿದೆ. ಈ ವರ್ಷದ ಮಳೆ ಯಿಂದಾಗಿ, ಪೈಪು ಹೂಳಿದ ಭಾಗದಲ್ಲಿ ಈಗ ರಸ್ತೆಯು ಕುಸಿದು, ವಾಹನಗಳನ್ನೇ ಮಣ್ಣಿನ ಅಡಿ ಹುದುಗಿಸಿದೆ. ಜತೆಗೆ, ಕಾಫಿ ತೋಟದ ನಾಶವೂ ಸೇರಿದಂತೆ, ಅಲ್ಲೆಲ್ಲಾ ನಾನಾ ರೀತಿಯ ವಿನಾಶವನ್ನು ತಂದಿದೆ. ನದಿ ತಿರುವು ಯೋಜನೆ ಅವೈಜ್ಞಾನಿಕ, ಜತೆಗೆ, ಪಶ್ಚಿಮ ಘಟ್ಟಗಳ ಪರಿಸರವನ್ನು ನಾಶ ಮಾಡಿ ಮುಂದುವರಿಯುವ ಈ ಯೋಜನೆ ಅವೈಜ್ಞಾನಿಕ, ಅಪಾಯಕಾರಿ ಎಂದು ತಜ್ಞರು ಸಾರಿ ಸಾರಿ ಎಚ್ಚರಿಸಿದ್ದರು; ಅದೀಗ ಭಾಗಶಃ ನಿಜವಾಗಿದೆ.

ಶಿರಾಡಿ ಘಾಟ್ ಸುತ್ತಮುತ್ತ ನಡೆದ ಗುಡ್ಡ ಕುಸಿತ ಮತ್ತು ರಸ್ತೆಯ ಹಾನಿಯು ಮಾನವ ನಿರ್ಮಿತ ದುರಂತ. ಗೊತ್ತಿದ್ದೂ ಗೊತ್ತಿದ್ದೂ ಅಲ್ಲಿನ ಗುಡ್ಡಗಳನ್ನು ತರಿದು, ಪೈಪುಗಳನ್ನು ಹೂಳಲಾಗುತ್ತಿರುವುದು ಮತ್ತು ಅದರಿಂದಾಗಿ ಈಗ ರಸ್ತೆ ಕುಸಿದಿರುವುದು ಗಮನಿಸಿದರೆ, ಮುಂದಿನ ದಿನಗಳಲ್ಲಿ ಇನ್ನಷ್ಟು ಇಂತಹ ದುರಂತಗಳು ನಮ್ಮ ನಾಡನ್ನು ಎರಗಲು ಕಾದಿವೆಯೆ ಎಂಬ ಅನುಮಾನ ಮೂಡಿಸುತ್ತದೆ.

ಹಳ್ಳಿಯಲ್ಲೊಂದು ಕಾರ್ಗಿಲ್ ವನ!

ಪರಿಸರವನ್ನು ಉಳಿಸಲು, ಮರ ಬೆಳೆಸಲು 'ಕಾರ್ಗಿಲ್ ವನ'ವನ್ನೇ ರೂಪಿಸುವ ಮೂಲಕ, ಹಸುರನ್ನೂ ಬೆಳೆಸುತ್ತಿದ್ದಾರೆ, ಜತೆಗೆ ದೇಶಪ್ರೇಮವನ್ನೂ ತೋರುತ್ತಿದ್ದಾರೆ! ಇದು ಮುಂಡಾಜೆಯಲ್ಲಿರುವ ಕಾರ್ಗಿಲ್ ವನದಲ್ಲಿ ನಿತ್ಯ ನಡೆಯುತ್ತಿರುವ ಹಸುರು ಸೇವೆ.

• **ರಶ್ಮಿ ಗೋಖಲೆ**

ಈಚಿನ ದಿನಗಳಲ್ಲಿ, ಗಿಡ ನೆಡುವುದು ಫ್ಯಾಷನ್ ಸಹ ಆಗುತ್ತಿದೆ! ಸೆಲ್ಫಿ ಫೋಟೋಗೋಸ್ಕರ ಎಲ್ಲೋ ಒಂದು ಗಿಡ ನೆಟ್ಟು ಆಮೇಲೆ ಅದರ ಬಗ್ಗೆ ಮರೆತುಬಿಡುವಂತಹವರ ಸಂಖ್ಯೆ ಇತ್ತೀಚಿನ ವರ್ಷಗಳಲ್ಲಿ ಹೆಚ್ಚಾಗಿದೆ. ಆದರೆ ತ್ರಿಕರಣ ಪೂರ್ವಕ ಒಂದು ದೀಕ್ಷೆ ತರಹದ ನಿಲುವನ್ನು ತಾಳಿ ಪರಿಸರ ಸಂರಕ್ಷಣೆಯಲ್ಲಿ ತೊಡಗಿರುವವರ ಸಂಖ್ಯೆ ಕೂಡ ಹೆಚ್ಚುತ್ತಿರುವುದು ಒಂದು ಆರೋಗ್ಯಕರ ಬೆಳವಣಿಗೆಯಾಗಿದೆ. ಅಂತಹ ಒಬ್ಬ ಪರಿಸರಮಿತ್ರ ಸಚಿನ್ ಭಿಡೆ.

ಕಾರ್ಗಿಲ್ ಯೋಧರ ನೆನಪಿನಲ್ಲಿ ತನ್ನ ಸ್ವಂತ 5 ಎಕರೆಗಳಷ್ಟು ಫಲವತ್ತಾದ ಜಾಗದಲ್ಲಿ ಸುಮಾರು 800 ಗಿಡಗಳನ್ನು ನೆಟ್ಟು ಪೋಷಿಸುತ್ತಿದ್ದಾರೆ. ಎಳವೆಯಿಂದಲೇ ಪ್ರಕೃತಿ ಪ್ರೀತಿಯನ್ನು ಮೈಗೂಡಿಸಿಕೊಂಡಿದ್ದ ಸಚಿನ್ ಕಾರ್ಗಿಲ್ ಯುದ್ಧದ ಸಮಯದಲ್ಲಿ ತನ್ನ ತಂದೆಯವರು ಕಾರ್ಗಿಲ್ ಯೋಧರ ನಿಧಿಗೆ ಒಂದಷ್ಟು ಹಣವನ್ನು ಕೊಟ್ಟಿದ್ದು ಮುಂದೆ ಕಾರ್ಗಿಲ್ ವನ ನಿರ್ಮಾಣಕ್ಕೆ ಪ್ರೇರಣೆ ಎಂದು ಸಚಿನ್ ಹೇಳುತ್ತಾರೆ.

2020 ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನ ಮುಂಡಾಜೆ ಗ್ರಾಮದಲ್ಲಿ ನಿರ್ಮಾಣವಾದ ಕಾರ್ಗಿಲ್ ವನ ಇಂದು ನಾಲ್ಕು ವರ್ಷಗಳಲ್ಲಿ ಸಾಕಷ್ಟು ಬೆಳವಣಿಗೆ ಗಿಡಗಳಲ್ಲಿ ಕಂಡಿದೆ. ಗಿಡಗಳು ಮರಗಳಾಗಿವೆ. ಪ್ರತೀ ವರ್ಷ ಒಂದಷ್ಟು ಗಿಡಗಳನ್ನು ನೆಟ್ಟು ಪರಿಸರ ದಿನವನ್ನು ಹಾಗೂ ಕಾರ್ಗಿಲ್ ವಿಜಯ ದಿನವನ್ನು ನೆನಪಿಸಿಕೊಳ್ಳುತ್ತಾರೆ. ಯಾರೇ ಯೋಧರು ಬಂದರೂ ಕಾರ್ಗಿಲ್ ವನದಲ್ಲಿ ಓಡಾಡಿ ತಮ್ಮ ನೆನಪುಗಳನ್ನು ಹಸುರಾಗಿಸಿಕೊಳ್ಳಬಹುದು ಎಂದು ಅವರ ಉದ್ದೇಶವಾಗಿದೆ. ಪ್ರತಿ ವರ್ಷ ಕೆಲವು ಗಿಡಗಳನ್ನು ನೆಡುವುದರ ಮೂಲಕ ಹಂತ ಹಂತವಾಗಿ 'ಕಾರ್ಗಿಲ್ ವನ'ವನ್ನು ಅಭಿವೃದ್ಧಿಪಡಿಸಲು ಪ್ರಯತ್ನ ನಡೆಸಿದ್ದಾರೆ. ಈ ಪ್ರಯತ್ನದಲ್ಲಿ ಶಾಲಾ ಮಕ್ಕಳನ್ನು ಒಳಗೊಳ್ಳುವ ಮೂಲಕ, ಮಕ್ಕಳಲ್ಲಿ ಪರಿಸರ ಪ್ರೇಮವನ್ನು ಬೆಳೆಸಲು ಅವರು ನಡೆಸುತ್ತಿರುವ ಪ್ರಯತ್ನ ನಿಜಕ್ಕೂ ಅನುಕರಣೀಯ.

'ಕಾಡಿನ ನಾಶವೇ ನಮ್ಮ ನಾಶವು, ಕಾಡು ಕಡಿಯಲು ಬೇಡಿರೋ' ಎನ್ನುವ ಸಾಲುಗಳನ್ನು ಅಕ್ಷರಶಃ ಪಾಲಿಸುವವರಲ್ಲಿ ಸಚಿನ್ ಭಿಡೆಯವರು ಎದ್ದು ಕಾಣುತ್ತಾರೆ. ಸದಾ ಕಾಡಿನ ಕಾಳಜಿ ಹಾಗೂ ಕಾಡಿನ ಮೇಲಿನ ಕಕ್ಕುಲಾತಿಯೇ ಅವರ ಉಸಿರಾಗಿದೆ. ಯೋಧರು ಮತ್ತು ನಮ್ಮ ದೇಶ ಈ ಎರಡೂ ವಿಷಯಗಳು ಅವರ ಹೃದಯಕ್ಕೆ ಹತ್ತಿರವಾದಂತಹ ವಿಷಯಗಳು.

ಜುಲೈ 26 ಎಲ್ಲೆಡೆ ಕಾರ್ಗಿಲ್ ವಿಜಯ ದಿವಸದ ಸಂದರ್ಭದಲ್ಲಿ ತನ್ನ ಕಾರ್ಗಿಲ್ ವನದಲ್ಲಿ ಶಾಲಾ ಮಕ್ಕಳನ್ನು, ಊರಿನಹಿರಿಯರನ್ನು ಆಹ್ವಾನಿಸಿ ಗಿಡಗಳನ್ನು ನೆಡುವುದರೊಂದಿಗೆ ಈ ದಿನವನ್ನು ಸುಂದರವಾಗಿಸುತ್ತಾರೆ. ಇತ್ತೀಚೆಗೆ ಪ್ರಕೃತಿ ವಿಕೋಪದ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಶೌರ್ಯ ತಂಡದೊಂದಿಗೆ ಹಗಲು ರಾತ್ರಿ ಕೆಲಸ ಮಾಡುತ್ತಿದ್ದಾರೆ. ಇಂತಹ ಪರಿಸರ ಪ್ರಜ್ಞೆ, ದೇಶಪ್ರೇಮ ಹಾಗೂ ದೇಶವನ್ನು ರಕ್ಷಿಸುವವರ ಮೇಲಿರುವ ಗೌರವ, ಸಾಮಾಜಿಕ ಕಳಕಳಿ ಇರುವಂತಹ ಸಚಿನ್ ರವರ ಕಾರ್ಗಿಲ್ ವನ ಶ್ಲಾಘನೀಯವಾಗಿದೆ.

ದಿನ ದರ್ಶಿಕೆ

ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಋತು ವರ್ಷಾ, ಆಷಾಢ ಮಾಸ, ಕೃಷ್ಣ ಪಕ್ಷ, ಸೂರ್ಯ ರಾಶಿ ಕರ್ಕ, ಚಂದ್ರ ರಾಶಿ ವೃಷಭ

ಮನೆಮದ್ದು

ಶುಂಠಿ ಮತ್ತು ಜೇನುತುಪ್ಪದ ಸೇವನೆಯು ನಾಯಿಕೆಮ್ಮಿಗೆ ಅತ್ಯುತ್ತಮ ಚಿಕಿತ್ಸೆಯಾಗಿದೆ. ಮೊದಲು ಶುಂಠಿಯನ್ನು ರುಬ್ಬಿ ಪೇಸ್ಟ್ ತಯಾರಿಸಿ ಜೇನುತುಪ್ಪದೊಂದಿಗೆ ಸೇವಿಸಿ. ಈ ಪರಿಹಾರವನ್ನು ಮಾಡುವುದರಿಂದ ನಾಯಿಕೆಮ್ಮಿನಿಂದ ಬೇಗನೆ ಪರಿಹಾರ ಪಡೆಯಬಹುದು.

ಸೌಂದರ್ಯ ಸೂತ್ರ

ತ್ರಿಫಲ ಪುಡಿ - 2 ಚಮಚ, ರೋಸ್ ವಾಟರ್ - 2 ಟೀಸ್ಪೂನ್, ಸೇರಿಸಿ ಒಂದು ಪಾತ್ರೆಯಲ್ಲಿ ಮಿಶ್ರಣ ಮಾಡಿ. ಈಗ ಅದನ್ನು ನಿಮ್ಮ ಮುಖದ ಮೇಲೆ ಹಚ್ಚಿ ಮತ್ತು 10 ನಿಮಿಷಗಳ ಕಾಲ ಒಣಗಲು ಬಿಡಿ. ನಂತರ ನಿಮ್ಮ ಮುಖವನ್ನು ತಣ್ಣೀರಿನಿಂದ ತೊಳೆಯಿರಿ. ಇದರಿಂದ ನಿಮ್ಮ ಮುಖದ ಕಲೆ ನಿವಾರಣೆಯಾಗುತ್ತದೆ.

ದಿನ ಭವಿಷ್ಯ

ಮೇಷ ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿಯನ್ನು ಸ್ಥಿಮಿತವಾಗಿಟ್ಟುಕೊಳ್ಳಿ.

ವೃಷಭ ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳನ್ನು ಸಾಕ್ಷಾತ್ಕಾರಗೊಳಿಸಲು ಇದು ಸಹಾಯ ಮಾಡುತ್ತವೆ.

ಮಿಥುನ ದೈಹಿಕ ಅನಾರೋಗ್ಯದಿಂದ ಚೇತರಿಸಿಕೊಳ್ಳುವ ಸಾಧ್ಯತೆಗಳಿವೆ. ಹೆಚ್ಚುವರಿ ಹಣವನ್ನು ರಿಯಲ್ ಎಸ್ಟೇಟ್‌ನಲ್ಲಿ ಹೂಡಿಕೆ ಮಾಡಬಹುದು.

ಕಟಕ ಪ್ರತಿ ವ್ಯಕ್ತಿಯನ್ನೂ ಆಲಿಸಿ ನಿಮ್ಮ ಸಮಸ್ಯೆಗಳಿಗೆ ಪರಿಹಾರ ದೊರಕಬಹುದು. ಇಂದು ನಿಮ್ಮ ವಸ್ತುಗಳ ಮೇಲೆ ನಿಗಾವಹಿಸಿರಿ.

ಸಿಂಹ ಇಂದು ಚುರುಕುತನವನ್ನು ನೋಡಬಹುದು. ನಿಮ್ಮ ಆರೋಗ್ಯವು ನಿಮ್ಮನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ರಿಯಲ್ ಎಸ್ಟೇಟ್‌ನ ಹೂಡಿಕೆ ಲಾಭದಾಯಕವಾಗಬಹುದು.

ಕನ್ಯಾ ನಿಮ್ಮ ಆಹಾರವನ್ನು ನಿಯಂತ್ರಣದಲ್ಲಿರಿಸಿಕೊಳ್ಳಿ ಮತ್ತು ಫಿಟ್ ಆಗಿರಲು ವ್ಯಾಯಾಮ ಮಾಡಿ. ಸ್ನೇಹಿತ ಲಾಭಗಳಿಸಲು ಸಲಹೆ ನೀಡಬಹುದು.

ತುಲಾ ನಿಮ್ಮ ಸುತ್ತಲಿನ ಸುಮಾರು ತುಂಬ ಬೇಡಿಕೆಯಿಡುತ್ತಾರೆಂದು ನಿಮಗನಿಸುತ್ತದೆ. ಆದ್ದರಿಂದ ನಿಮಗೆ ಸಾಧ್ಯವಿರುವುದಕ್ಕಿಂತ ಹೆಚ್ಚು ಮಾಡಲು ಒಪ್ಪಿಕೊಳ್ಳಬೇಡಿ.

ವೃಶ್ಚಿಕ ನಿಮ್ಮ ಅನುಮಾನದ ಪ್ರಕೃತಿ ನಿಮಗೆ ಸೋಲಿನ ಮುಖ ತೊರಿಸಬಹುದು. ನಿಮ್ಮ ಮನೆಗೆ ಸಂಬಂಧಿಸಿದ ಹೂಡಿಕೆ ಲಾಭದಾಯಕವಾಗಿರುತ್ತದೆ.

ಧನು ಗಾಳಿಯಲ್ಲಿ ಮನೆ ಕಟ್ಟುವುದು ನಿಮಗೆ ಸಹಾಯ ಮಾಡಲಾರದು. ನೀವು ಕುಟುಂಬದ ನಿರೀಕ್ಷೆಗಳನ್ನು ಪೂರ್ಣಗೊಳಿಸಲು ಏನಾದರೂ ಮಾಡಬೇಕು.

ಮಕರ ತಮ್ಮ ಆಪ್ತರು ಅಥವಾ ಸಂಬಂಧಿಕರೊಂದಿಗೆ ಸೇರಿ ವ್ಯಾಪಾರವನ್ನು ಮಾಡುತ್ತಿರುವ ಜನರು ಇಂದು ತುಂಬಾ ಯೋಚಿಸಿ ಹೆಜ್ಜೆಯನ್ನು ಹಾಕುವ ಅಗತ್ಯವಿದೆ.

ಕುಂಭ ಒತ್ತಡದ ಅವಧಿಯಿದ್ದರೂ ಕುಟುಂಬದ ಬೆಂಬಲ ನಿಮಗೆ ಸಹಾಯ ಮಾಡುತ್ತದೆ. ಮನೆಯವರೊಡನೆ ಇದ್ದ ನಿಮ್ಮ ದೀರ್ಘಕಾಲದ ಜಗಳವನ್ನು ಪರಿಹರಿಸಿಕೊಳ್ಳಿ.

ಮೀನ ಇಂದು ನಿಮಗೆ ದೊರಕುವ ಹೊಸ ಹೂಡಿಕೆಯ ಅವಕಾಶಗಳನ್ನು ಅನ್ವೇಷಿಸಿ- ಆದರೆ ಅಧ್ಯಯನ ಮಾಡಿದ ನಂತರವೇ ನೀವು ಇದರಲ್ಲಿ ತೊಡಗಿಸಿಕೊಳ್ಳಬೇಕು.

ಈ ದಿನ ಇತಿಹಾಸ



- 1940 ಸ್ವಾತಂತ್ರ ಹೋರಾಟಗಾರ ಉಧಮ್ ಸಿಂಗ್ ಅವರನ್ನು ನೇಣಿಗೇರಿಸಿ ಕೊಲ್ಲಲಾಯಿತು.
- 1498: ಕೊಲಂಬಸ್‌ನು ಟ್ರಿನಿನಾಡ್ ದ್ವೀಪಗಳನ್ನು ಕಂಡುಹಿಡಿದನು.
- 1880: ಖ್ಯಾತ ಹಿಂದಿ ಲೇಖಕ ಮುನ್ಷಿ ಪ್ರೇಮ್‌ಚಂದ್ ಅವರ ಜನ್ಮದಿನ
- 1980: ಖ್ಯಾತ ಗಾಯಕ ಮಹಮ್ಮದ್ ರಫಿ ಮರಣ ಹೊಂದಿದ ದಿನ

ಚಿತ್ರಸ್ಫೂರ್ತಿ



ಪ್ರಾಣಿಗಳಲ್ಲಿ ವಲಸೆ ಹೋಗುವುದು ಆಗಾಗ ನಡೆದೇ ಇರುತ್ತದೆ. ಒಂದು ಊರಿನಿಂದ ಮತ್ತೊಂದೂರಿಗೆ ಹೋಗುವುದು, ಕೆಲವೊಮ್ಮೆ ಖಂಡಾಂತರವಾಗುವುದನ್ನೂ ಕೇಳಿದ್ದೇವೆ. ಕಳೆದ ನವೆಂಬರ್‌ನಲ್ಲಿ ಕೆನಡಾದ ಒಂದು ತುದಿಯಿಂದ ಮತ್ತೊಂದು ತುದಿಗೆ ಸಂಚಾರ ನಡೆಸಿರುವ 4 ಸಾವಿರಕ್ಕೂ ಹೆಚ್ಚು ಹಿಮಸಾರಂಗಗಳು. ನ್ಯಾಟ್ ಜಿಯೋನ ಫೋಟೋಗ್ರಾಫರ್ ಕಾಟೀ ಒರ್ಲಿನ್‌ಸ್ಕೈ ಕೆಮೆರಾ ಕಣ್ಣಿಗೆ ಬಿದ್ದಿದ್ದು ಹೀಗೆ..

ಅಂತರಾಳದ ಬೆಳಕಿಗೆ ಬಲವಾದ ಗಾಳಿಯ ಭಯವಿಲ್ಲ

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಬುದ್ಧರು ತಮ್ಮ ಹಳ್ಳಿಗೆ ತಮ್ಮ ಶಿಷ್ಯರೊಂದಿಗೆ ಬರುತ್ತಿರುವ ವಿಷಯ ತಿಳಿದು, ಒಬ್ಬ ಬಡ ಕುಟುಂಬದ ಮಹಿಳೆಗೆ ಬಹಳ ಸಂತೋಷವಾಯಿತು. ಈ ಹಿಂದೆ ಎಲ್ಲೋ ಒಮ್ಮೆ, ಬುದ್ಧರನ್ನು ನೋಡಿದಾಗಿನಿಂದ ಅವಳು ಮನಸ್ಸಿನಲ್ಲಿಯೇ ಅವರನ್ನು ಆರಾಧಿಸುತ್ತಿದ್ದಳು. ಯಾರಾದರೂ ಬುದ್ಧನ ವಿಷಯ ಮಾತಾನಾಡಿದರೇ ಸಾಕು, ಅದನ್ನು ಕೇಳಿ ಈ ಮಹಿಳೆ ಬಹಳ ಖುಷಿ ಪಡುತ್ತಿದ್ದಳು.

ಬುದ್ಧರ ದಿವ್ಯ ಪ್ರೇಮ ಸಂದೇಶವನ್ನು ಕೇಳಲು ಬಂದ ಹಳ್ಳಿಯ ಜನರೆಲ್ಲರೂ ಬುದ್ಧರಿಗೆ, ಹಣ್ಣು-ಹಂಪಲಗಳ ಜತೆ ವಿಧವಿಧವಾದ ಉಡುಗೊರೆಯನ್ನು ಅರ್ಪಿಸುತ್ತಿದ್ದರು. ಎಲ್ಲರ ಹಾಗೆ ತಾನೂ ಅಲ್ಲಿಗೆ ಹೋಗಿ ಅವರನ್ನು ನೋಡಿ ಅವರಿಗೆ ಏನಾದರೂ ನೀಡುವ ಆಸೆ ಈ ಮಹಿಳೆಗೆ, ಆದರೆ ಅವರಿಗೆ ಕೊಡಲು ಇವಳ ಬಳಿ ಏನೂ ಇರಲಿಲ್ಲ. ಇದರಿಂದಾಗಿ ಈ ಬಡ ಮಹಿಳೆ ಬಹಳವಾಗಿ ನೊಂದುಕೊಂಡಳು. ಒಂದು ಹಿಡಿ ಅನ್ನವನ್ನಾದರೂ ಬೇಯಿಸಿ, ಬುದ್ಧರ ಒಬ್ಬ ಶಿಷ್ಯನಿಗಾದರೂ ತಿನ್ನಿಸಿದರೆ, ತನ್ನ ಜನ್ಮ ಸಾರ್ಥಕವಾಗುವುದು ಎಂದುಕೊಂಡು, ಬೆಳಗ್ಗೆ ಬೇಗ ಎದ್ದು ಭಿಕ್ಷೆ ಬೇಡುತ್ತಾ, ಪ್ರತಿ ಮನೆ ಬಾಗಿಲಿಗೂ ಹೋಗಿ ಬಂದಳು. ಸಾಕಷ್ಟು ಅಕ್ಕಿ ಸಿಕ್ಕಿತು. ಮಧ್ಯಾಹ್ನ ತನ್ನ ಗುಡಿಸಲಿಗೆ ಬಂದು, ಅನ್ನ ಬೇಯಿಸಿದಳು. ಸಂಜೆ ತನಕ ಕಾದರೂ ಬುದ್ಧರ ಯಾವ ಭಿಕ್ಷುವೂ, ಇವಳ ಗುಡಿಸಲಿನತ್ತ ಭಿಕ್ಷೆಗಾಗಿ ಬರಲೇ ಇಲ್ಲ. ಇದರಿಂದ ಇವಳು ಬಹಳವಾಗಿ ದುಃಖಿತಳಾದಳು.

ಬುದ್ಧರಿಗೆ, ಇನ್ಯಾವ ರೀತಿಯಲ್ಲಿ ತಾನು ಸೇವೆ ಸಲ್ಲಿಸಬಹುದೆಂದು ಯೋಚಿಸುತ್ತಿದ್ದಳು. ಬೆಳಗ್ಗೆ ಭಿಕ್ಷೆಗೆ ಹೋಗಿದ್ದಾಗ ಕೆಲವರು ನಾಲ್ಕಾರು ಪುಡಿಗಾಸುಗಳನ್ನು ನೀಡಿದ್ದು, ಅವಳ ನೆನಪಿಗೆ ಬಂತು. ತಕ್ಷಣ ಆಕೆ, ಪುಡಿಗಾಸು ಹಿಡಿದು ಅಂಗಡಿಗೆ ಹೋಗಿ ದೀಪದ ಎಣ್ಣೆ ತಂದಳು.

ಬುದ್ಧರು ಉಳಿದುಕೊಂಡಿದ್ದ ವಿಹಾರದಲ್ಲಿ, ರಾತ್ರಿಗಾಗಿ ಸಾವಿರಾರು ದೀಪಗಳು ಸಿದ್ಧವಾಗಿದ್ದವು. ತಾನು ಕೂಡ ಒಂದು ದೀಪವನ್ನು ಹಚ್ಚಲೆಂದು ಯಾರಿಗೂ ಕಾಣದಂತೆ ಅಲ್ಲಿಗೆ ಹೋದಳು. ತಾನು ತಂದ ಎಣ್ಣೆಯನ್ನು ಅಲ್ಲಿನ ಯಾವ ಹಣತೆಗೆ ಹಾಕುವುದೆಂದು ಯೋಚಿಸುತ್ತಾ ನಿಂತಳು. ನಾನೇನಾದರೂ ಹಣತೆಯೊಳಗೆ ಎಣ್ಣೆ ಹಾಕುವುದನ್ನು ಅಲ್ಲಿರುವ ಅವರು ನೋಡಿದರೆ, ಏನಾದರೂ ಹೇಳಬಹುದೆಂದು ಅವಳಿಗೆ ಭಯವಾಯಿತು.

ಅಷ್ಟರಲ್ಲಿ ಅವಳಿಗೆ, ಸಣ್ಣ ಮುರುಕು ಹಣತೆಯೊಂದು, ದೂರದಲ್ಲಿ ಬಿದ್ದಿರುವುದು ಕಂಡಿತು. ಅಲ್ಲಿದ್ದವರೆಲ್ಲ ದೀಪ ಹಚ್ಚಿ ಹೋದನಂತರ, ಅದನ್ನು ಎತ್ತಿಕೊಂಡು, ತಾನು ತಂದಿದ್ದ ಎಣ್ಣೆಯನ್ನು ಅದಕ್ಕೆ ಸುರಿದು ಬತ್ತಿ ಹೊಸೆದು, ದೀಪ ಹಚ್ಚಿದಳು. ಕಣ್ಣು ಮುಚ್ಚಿ, ಕೈ ಮುಗಿದು, ಮನಸ್ಸಿನಲ್ಲೇ ಬುದ್ಧರನ್ನು ನೆನೆದು, ಅವರಿಗೆ ವಂದಿಸಿ, ಆಶೀರ್ವಾದವನ್ನು ಬೇಡಿ, ಅಲ್ಲಿಂದ ಹೊರಟುಬಿಟ್ಟಳು.

ಸ್ವಲ್ಪ ಸಮಯದಲ್ಲಿ, ಇದ್ದಕ್ಕಿದ್ದಂತೆ ಬಲವಾದ ಗಾಳಿ ಬೀಸಿ, ಗಾಳಿಯ ಅಬ್ಬರಕ್ಕೆ ಹಣತೆಯಲ್ಲಿ ಉರಿಯುತ್ತಿದ್ದ ದೀಪವೆಲ್ಲ ನಂದಿ ಹೋಗಿ, ಕತ್ತಲು ಆವರಿಸಿತು. ಆದರೆ ಆಶ್ಚರ್ಯವೆನ್ನುವಂತೆ, ಆ ಬಡ ಮಹಿಳೆ ಹಚ್ಚಿದ, ಮುರುಕು ಹಣತೆಯಲ್ಲಿದ್ದ ದೀಪ ಮಾತ್ರ ತಾನೊಂದೇ, ನಗುತ್ತಾ ಉರಿಯುತ್ತಿತ್ತು.

ದೊಡ್ಡ ದೊಡ್ಡ, ಹಣತೆಯ ದೀಪಗಳೆಲ್ಲ ಆರಿ ಹೋಗಿ, ಮುರುಕು ಹಣತೆಯಲ್ಲಿ ಮಾತ್ರ ದೀಪ ಉರಿಯುತ್ತಿರುವುದನ್ನು ನೋಡಿದ ಬುದ್ಧರ ಶಿಷ್ಯರು ಆಶ್ಚರ್ಯಪಟ್ಟು, ಆ ವಿಷಯವನ್ನು ಬುದ್ಧರಿಗೆ ತಿಳಿಸಿದರು.

ಅವರ ಮಾತನ್ನು ಕೇಳಿ ನಕ್ಕ ಬುದ್ಧರು, 'ಆ ಹಣತೆ ಹಚ್ಚಿದವರ ಮನಸ್ಸು ಬಹಳ ಪರಿಶುದ್ಧವಾದದ್ದು, ಅವರ ಪ್ರೀತಿ ಗೌರವ, ಬಹಳ ಅಮೂಲ್ಯವಾದದ್ದು. ಯಾವ ಅಪೇಕ್ಷೆಯೂ ಇಲ್ಲದೇ ನಿರ್ಮಲ ಮನಸ್ಸಿನಿಂದ ಹಚ್ಚಲಾದ ಇಂತಹ ಹಣತೆಗಳನ್ನು ಅಷ್ಟು ಸುಲಭಕ್ಕೆ, ಯಾರಿಂದಲೂ ಆರಿಸಲಾಗದು, ಅಂತರಾಳದಿಂದ ಹುಟ್ಟುವ ನಿಜವಾದ ಬೆಳಕು ಎಂದಿಗೂ ಆರುವುದಿಲ್ಲ' ಎಂದರು.

ನಮ್ಮಲ್ಲಿ ಒಳ್ಳೆಯತನವನ್ನು ಕಾಯ್ದಿರಿಸಿಕೊಂಡು, ಏನೇ ಪರಿಸ್ಥಿತಿ ಇದ್ದರೂ ನಮ್ಮ ಮೌಲ್ಯಗಳಲ್ಲಿ ರಾಜಿ ಮಾಡಿಕೊಳ್ಳದೆ ಬದುಕಿದಾಗ ಇಂತಹ ಒಂದು ಅಂತರಂಗದ ಬೆಳಕು ನಮಗೆ ದಾರಿ ದೀಪವಾಗುತ್ತದೆ.

ಪದಬಂಧ



ಎಡದಿಂದಬಲಕ್ಕೆ:

2. ಪತಾಕೆಯೊಂದಿಗೆ ಬಂದ ಸೈನ್ಯಕ್ಕೆ ಮತ್ತೊಂದು ಹೆಸರು (4)
5. ಬ್ರಹ್ಮನಿಗೆ ಇನ್ನೊಂದು ಹೆಸರು (3)
7. ಬಳಿ ಬಂದಾಗ ಜ್ಞಾನ ತಪ್ಪುವುದು (3)
10. ಅರಶಿನದ ಬಣ್ಣ (3)
12. ಮನ್ಮಥನ ವೈರಿ ಎಂಬರ್ಥದಲ್ಲಿ ಶಿವ (4)
13. ಗಾಳಿಯ ಪುತ್ರ (4)
14. ಪತನವಾದಾಗ ಕಂಡ ಸೂರ್ಯ (3)
16. ವಿರಳವಾಗಿ ಬಂದ ಸರಳ ಸ್ವಭಾವದ ಹೆಂಗಸು (3)
20. ಫಿರಂಗಿಯ ಮದ್ದು (3)
21. ಮರ್ಯಾದೆಯಿಂದ ಆರಂಭವಾಗುವ ಅಳತೆಗೋಲು (4)

ಮೇಲಿನಿಂದಕೆಳಕ್ಕೆ:

1. ಸತ್ಯವಾನನನ್ನು ಬದುಕಿಸಿಕೊಂಡ ಪತಿವ್ರತೆ (4)
2. ತಿಂದ ಆಹಾರ ಅರಗುವಿಕೆ (3)
3. ತಳಮಳ ಉಂಟುಮಾಡಿದ ಕಾಟ (4)
4. ಹಾಳು ಮಾಡಿದ ತೊಂದರೆ (3)
6. ದಡ್ಡ ಅಥವಾ ಅವಿವೇಕಿ (2)
8. ಕಾಡಿನಲ್ಲರಳಿದ ಹೂವು (4)
9. ವ್ಯತ್ಯಾಸಗೊಳ್ಳು ಎಂದರ್ಥ (4)
10. ಹರಿಯುವಿಕೆ ಅಥವಾ ತೀಕ್ಷ್ಣತೆ (3)
11. ದಿನವೂ ಬರುವ ಮಂತ್ರಿ (3)
15. ಸಂಪೂರ್ಣವಾದ ಅರಿವು (4)
16. ಪುಸ್ತಕಗಳಲ್ಲಿ ಕಾಣಸಿಗುವ ಮೊದಲ ಮಾತು (3)
17. ಅವಸ್ಥೆ ಅಥವಾ ದಿಕ್ಕು (2)
18. ಭರಣಿಗೆ ಮತ್ತೊಂದು ಹೆಸರು (3)
19. ನೂಲು ತೆಗೆಯುವ ಒಂದು ಸಾಧನ (3)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಫಲಶ್ರುತಿ 3. ಕಾಣಿಕೆ 4. ಸಂಶಯ 5. ಮುಖಭಂಗ 7. ಕರ್ಚಅ 10. ತಿಲ 12. ಬಾಲರವಿ 14. ವರಮಾನ 16. ಕಸ 18. ಕಣಜ 20. ವರ್ತಮಾನ 22. ತಳಿರು 23. ಸೋಪಾನ 24. ದಿನಕರ

ಮೇಲಿನಿಂದ ಕೆಳಕ್ಕೆ: 2. ಲಗಾಮು 3. ಕಾಯಕ 4. ಸಂಗತಿ 6. ಖರ್ಜೂರ 8. ಅವನತಿ 9. ಹಿಂಬಾಲಕ 11. ಲವ 13. ವಿಕ 15. ಕರಮಾ 17. ಸವರು 19. ಜತನ 21. ನಡುಕ

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಮೋಡದ ತೂಕ!

ಈಗಂತೂ ಮಳೆಗಾಲ, ರಾಜ್ಯದ ಹಲವೆಡೆ ಮಳೆಯಾವೃತಿಯಾಗಿದೆ. ಇನ್ನೂ ಕೆಲವೆಡೆ ಮೋಡಮುಚ್ಚಿದ ವಾತಾವರಣ ಇದೆ. ಎಲ್ಲರಿಗೂ ಮೋಡವೆಂದರೆ, ಅದು ಗಾಳಿ ಅಥವಾ ಮಂಜಿನ ತರಹ ಇರುತ್ತದೆ ಎಂಬ

ಸಣ್ಣ ಕಲ್ಪನೆ. ನಾವೆಲ್ಲರೂ ಮಂಜನ್ನು ನೋಡಿದ್ದೇವೆ, ಆದರೆ, ಯಾವತ್ತೂ ಅದರ ತೂಕದ ಬಗ್ಗೆ ಕೇಳಿಯೇ ಇಲ್ಲ. ಹಾಗೇ ಮೋಡವನ್ನೂ ನೋಡಿದ್ದೇವೆ. ಆದರೆ ಅದು ಎಷ್ಟು ಕೆಜಿ ಇರಬಹುದು? ಎನ್ನುವ ಪ್ರಶ್ನೆಗೆ ಇಲ್ಲಿ ಉತ್ತರವಿದೆ. ಒಂದು ಮೋಡ ಮಿಲಿಯನ್‌ಗಟ್ಟಲೇ ಟನ್‌ಗಳಷ್ಟು ತೂಕ ಹೊಂದಿರುತ್ತದೆ ಎಂದರೆ, ಊಹಿಸಿ! ಒಂದು ಮೋಡವು ಒಂದು ಕ್ಯೂಬಿಕ್ ಕಿಲೋಮೀಟರುಗಳಷ್ಟು ಪರಿಮಾಣಗಳನ್ನು ಹೊಂದಿರುತ್ತದೆ. ಒಂದು ಕ್ಯೂಬಿಕ್ ಮೀಟರ್‌ಗೆ 1.003 ಕೆಜಿಯನ್ನು ವ್ಯಯಿಸುವ ಮೋಡಗಳ ಸಾಂದ್ರತೆ ಸುತ್ತಲಿನ ಗಾಳಿಯ ಸಾಂದ್ರತೆಗಿಂತ 4 ಪಟ್ಟು ಕಡಿಮೆ ಇರುತ್ತದೆಯಂತೆ. ಆ ಸಾಂದ್ರತೆಯಲ್ಲಿನ ವ್ಯತ್ಯಾಸದಿಂದಲೇ ಮೋಡ ಗಾಳಿಯಲ್ಲಿ ತೇಲುತ್ತಿರುತ್ತದೆ. ಇನ್ನುಮುಂದೆ ಎಲ್ಲಾದರೂ ಮೋಡವನ್ನು ನೋಡಿದರೆ, ಅದರ ತೂಕದ ಬಗ್ಗೆ ಊಹಿಸಿಕೊಳ್ಳಿ. ಆದರೆ, ಅದು ಎಷ್ಟೇ ತೂಕದ್ದಿದ್ದರೂ ನಿಮ್ಮ ಮೇಲೆ ಬೀಳುವುದಿಲ್ಲ.

ಪುಸ್ತಕ ಲೋಕ

ಗಿಣಿ ಬಾಗಿಲು

ಹರೀಶ ಕೇರ ಅವರು ಬರೆದಿರುವ ಈ ಕವನ ಸಂಕಲನದಲ್ಲಿ ಕಿಟಕಿ ಎಲ್ಲೆಲ್ಲಿ ಇರುತ್ತದೋ ಅಲ್ಲಿ ಎರಡು ಜಗತ್ತುಗಳಿರುತ್ತವೆ. ಒಂದು ನಮಗೆ ಗೊತ್ತಿರುವ, ನಾವು ಬದುಕುತ್ತಿರುವ ಜಗತ್ತು. ಇನ್ನೊಂದು ನಾವು ನೋಡಿಯೇ ಇರದ ಅಥವಾ ಅರೆಬರೆ ನೋಡಿರುವ, ಕಲ್ಪಿಸಿಕೊಂಡಷ್ಟು ಅಗಾಧವಾಗಿ ತೋರುವ ಅಚ್ಚರಿಯೇ ತುಂಬಿಕೊಂಡಿರುವ ಹೊರಗಿನ ಜಗತ್ತು. ಪ್ರತಿಯೊಬ್ಬರ ಬದುಕಿನಲ್ಲೂ ಇಂತಹ ಕಿಟಕಿ ಇರಲೇಬೇಕು. ಇಲ್ಲದಿದ್ದರೆ ಬದುಕು ಉಸಿರುಗಟ್ಟಿದಂತಾಗುತ್ತದೆ. ಇಂತಹದೇ ಒಂದು ಕಿಟಕಿಯನ್ನು ನಮ್ಮ ಮುಂದೆ ತೆರೆದು ಅಲ್ಲಿಂದ ಕಾಣಿಸುವ ವಿಸ್ಮಯಗಳನ್ನು ಒಂದೊಂದಾಗಿ ಪರಿಚಯಿಸುತ್ತ ಹೋಗುವ ಹೋಗುವ ಕವನ ಸಂಕಲನ ಇದು

ಟ್ವೀಟ್‌ಮೆಂಟ್

ಸಿದ್ದರಾಮಯ್ಯ: ನಮ್ಮ ಮೈಸೂರಿನ ಮೈಲಾರಿ ಹೋಟೆಲ್‌ನಲ್ಲಿ ತಿಂಡಿ ತಿಂದರೆ ಒಂಥರಾ ಸಮಾಧಾನ, ತೃಪ್ತಿ. ಇಂದು ಕೂಡಾ ಹಾಗೆಯೇ ಆಯಿತು.

ಯಾವ್ರೋ ಇವೆಲ್ಲ: ತಿನ್ನಪಾ ತಿನ್ನು. ನೀನು ಯಾವಾಗ ಕ್ಯಾಮೆರಾ ಜೀವಿ ಆದೆ. ನಿಮ್ಮ ಗುಲಾಮರಿಗೆ ಹೇಳು ಬೇರೆಯವರಿಗೆ ಕ್ಯಾಮೆರಾ ಜೀವಿ ಅಂತ ಹೇಳಬೇಡಿ ಅಂತ

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

- ಚೀನಾದ 'ಮಾರ್ನಿಂಗ್ ಸ್ಟಾರ್' ಎಂದು ಯಾರನ್ನು ಕರೆಯಲಾಗುತ್ತದೆ?
- ಎ. ಚೋ ಸಿ ಮಿನ್.
- ಬಿ. ಹಂಗ್ ಕುನ್ ಚಿಮಿನ್ ಹೋ.
- ಸಿ. ಜಂಗ್ ಹಿನಿತಾ ಸನ್.
- ಡಿ. ಡಾ. ಸನ್ ಯಾತ್ ಸೇನ್.

ಉತ್ತರ: ಡಾ. ಡಾ. ಸನ್ ಯಾತ್ ಸೇನ್.

ಮಾಹಿತಿ

ಬಾಕ್ಸರ್ ದಂಗೆಯ ಸಮಯದಲ್ಲಿ, ಒಬ್ಬ ಬುದ್ಧಿಜೀವಿ ಚೀನಾದ ನಿರ್ವಿವಾದ ನಾಯಕನಾಗಿ ಹೊರಹೊಮ್ಮಿದನು. ಅವರೇ ಡಾ. ಸನ್ ಯಾತ್ ಸೇನ್. ಹೀಗಾಗಿ ಅವರನ್ನು ಚೀನಾದ 'ಮಾರ್ನಿಂಗ್ ಸ್ಟಾರ್' ಎಂದು ಕರೆಯಲಾಗುತ್ತದೆ. ಇವರ ಮೂಲ ಹೆಸರು ತೈಚಿಯೊಂಗ್. ಇವರು ಕ್ಯಾಂತನ್‌ಗೆ ನಲವತ್ತು ಮೈಲಿ ದೂರದ ಸಿಯಾಂಗ್ಶಾನ್ ಎಂಬ ಹಳ್ಳಿಯೊಂದರಲ್ಲಿ 1866 ರ ನವೆಂಬರ್ 12 ರಂದು ಒಬ್ಬ ಬಡ ರೈತನ ಕುಟುಂಬದಲ್ಲಿ ಜನ್ಮ ತಾಳಿದರು.

ಶ್ರಾವಣಾ ಬಂತ್ರಿ, ಶ್ರಾವಣ!

● ವಾಣಿ ಹುಗ್ಗಿ

ಶ್ರಾವಣಾ ಬಂತು ಕಾಡಿಗೆ, ಬಂತು ನಾಡಿಗೆ ಬಂತು ಬೀದಿಗೆ ಓ ಬಂತು ಶ್ರಾವಣಾ.. ಶ್ರಾವಣವೆಂದರೆ ಸಂಭ್ರಮ, ಉಲ್ಲಾಸ. ಹಬ್ಬಗಳನ್ನು ಹೊತ್ತುಕೊಂಡು ಬರ್ತೇತಿ ಈ ಶ್ರಾವಣ ಮಾಸ. ನಾಗರ ಪಂಚಮಿ ನಾಡಿಗೆಲ್ಲ ದೊಡ್ಡ ಹಬ್ಬ. ನಾಗಪ್ಪಗ ತನಿ ಎರಿಯೋದ್ರಿ, ನಾವೆಲ್ಲ ನಾನಾ ತರ ಉಂಡಿ ತಿನ್ನೋದ್ರಿ. ಎಳ್ಳುಂಡಿ, ಶೇಂಗಾ, ಬೇಸನ್, ರವಾ, ಸೇವ್, ಚುರುಮುರಿ, ರಾಜಗಿರಿ ಉಂಡಿ, ಅಳಿಟ್ಟ ಹಿಂಗ ಉಂಡಿ ಲಿಸ್ಟ್ ದೊಡ್ಡದಾಗತೇತ್ರಿ. ಬೀಗ್ರಿಗೆ, ಆಜುಬಾಜುದಾವ್ರಿಗೆ ಉಂಡಿ ಹಂಚುದ್ರಿ. ದಿನಾಉಂಡಿ ತಿಂದ್ರು ತಿಂಗಳತನ ಮುಗ್ಯಾಂಗಿಲ್ರಿ. ಈ ಶ್ರಾವಣ ದೇವ್ರಿಗೆ ಭಾಳ ಇಷ್ಟ ಆಗತೇತಿ, ಪೂಜಾ ಮಾಡಿದ್ರ ಬೇಡಿದ್ದ ಕೊಡತಾನಂತ! ಅದ್ಕ ಪೂಜಾಪುನಸ್ಕಾರ, ಭಜನಿ, ಉಪವಾಸ, ಉಡಿ ತುಂಬಿಸ್ಕೊಳ್ಳೊದು (ಅರಸಿನ ಕುಂಕುಮಕ್ಕ ಹೋಗೋದು) ಜೋರ ನಡಿತಾವ್ರಿ. ಸತ್ಯನಾರಾಯಣ ಪೂಜಾ, ನಾಕ ಸೋಮವಾರ, ನಾಕ ಮಂಗಳಗೌರಿ ಪೂಜಾ, ನಾಕ ಸಂಪತ್ತ ಶುಕ್ರಾರ, ನಾಕ ಶನಿವಾರ ಅಗಧಿ ಚಲೋ ಆಗತಾವ್ರಿ. ಸಂಪತ್ತ ಶುಕ್ರಾರ ಅಂದ್ರ ನಾಕು ಶ್ರಾವಣ ಶುಕ್ರಾರ ಶ್ರೀಲಕ್ಷ್ಮಿದೇವಿನ ಪೂಜಾ ಮಾಡುದ್ರಿ. ಇದ ಭಾಳ ಹಳಿ ಸಂಪ್ರದಾಯ ಐತ್ರಿ. ಸಂಪತ್ತಿನ ಅಧಿದೇವತೆ ಶ್ರೀಮಹಾಲಕ್ಷ್ಮಿ ಪೂಜಾ ಮಾಡಿ ಗಂಟಿ ಬಾರ್ಸುದ. ಒಂದನೇ ವಾರ ಬರಲಿಲ್ಲಂದ್ರ ನಾಕನೇ ವಾರಕ್ಕ ಬಂದ ಬರ್ತಾಳ! ನಮ್ಮವ್ವ ಲಕ್ಷ್ಮವ್ವ ಮನಿಗಿ ಬರುತನ್ಕ ಪೂಜಾ ಮಾಡುದ ವರಮಹಾಲಕ್ಷ್ಮಿ ಹಬ್ಬ ಅಂತ ಯಾಡ್ನೆ ಶುಕ್ರಾರ ಅಷ್ಟ ಮಾಡುದಿಲ್ರಿ. ನಾಕುವಾರ ಮಾಡಿ, ನೈವೇದ್ಯಕ್ಕ ಬ್ಯಾಳಿ ಹೋಳಿಗೆ ಇಲ್ಲಂದ್ರ ಕರಿಗಡುಬು ಮಾಡ್ಬೇಕ್ರಿ. ಕೆಲ್ಸಕ್ಕ ಹೋಗಾವ್ರು, ಬೆಂಗಳೂರಿನ ಶಕಾ ಬಡದಾವ್ರು ಒಂದ ವರಮಹಾಲಕ್ಷ್ಮಿ ಹಬ್ಬ ಮಾಡ್ತಾರ್ರಿ. ಹೆಂಗ ಮಾಡಿದ್ರೂ ಸಂಜಿಕುಡಿ ತುಂಬಸ್ಕೊಳ್ಳಾಕ ಹೋಗ್ಬೇಕ್ರಿ. ವೀಳ್ಯದೆಲೆ,ಅಡಿಕಿ,ಅರಸಿನ ಬೇರ, ಕಾರಿಕ್, ಕೊಬ್ರಿ, ನೆಲಗಡ್ಲಿ, ಬ್ಲೌಸ್ ಪೀಸ್, ಸೀರಿ, ಬಳಿ, ನಾಷ್ಟಾ ತಾಟ, ಸಣ್ಣ ಬಟ್ಲ ಹಿಂಗ ಯಾರಿಗೆ ಏನ್ ಅನುಕೂಲ ಆಗತೇತಿ ಅದ್ನ ಐದ ತರ ಮಾಡಿ ಉಡಿ ತುಂಬ್ತಾರ್ರಿ. ಚಂದ ಚಂದ ಸೀರಿ ಉಟ್ಕೊಂಡ ಹೆಣ್ಮಕ್ಕಳು ಓಣಿ ತುಂಬ ಎಲ್ಲಾರ ಮನಿಗೆ ಹೋಗಿ ಬರೋದು ನೋಡಾಕ ಎರಡ್ ಕಣ್ಣು ಸಾಲಾಂಗಿಲ್ರಿ.

ಇದ್ರಾಗ ಗಂಡಮಕ್ಕಳ್ದ ಏನೂ ಕೆಲ್ಸ ಇಲ್ರಿ. ಅವ್ರದ್ದ ಬರೀ ನೋಡುದ. ಅವತ್ತಿನ ದಿನಾ ಮನಿ ಗಂಡಮಕ್ಕಿಗೆ ಫೋನ್ ಮಾಡುತನ್ಕ ಮನಿಗಿ ಬರಬ್ಯಾಡ್ರಿ, ರಾತ್ರಿ ಒಂಭತ್ತಕ್ಕ ಮನಿಗಿ ಬರ್ರಿ ಅಂತ ಹೇಳಿರ್ತಾರ್ರಿ. ಈ ವರ್ಕ್ ಫ್ರಂ ಹೋಮ್, ಮನಿ ಬಿಟ್ರ ಬ್ಯಾರೆ ಏನೂ ಗೊತ್ತಿಲ್ಲಾದ್ವ್ರು ಕೋಲೆದಾಗ ಫಿಕ್ಸ್ ಆಗಿರ್ತಾರ್ರಿ. ಈ ಅರಸಿನ ಕುಂಕುಮದ ಸಂಭ್ರಮ ನೋಡಿ ಸಂತೋಷ ಪಡು ದೊಡ್ಮನಸ್ಸು ಒಂದಿಷ್ಟ ಗಂಡಸರಿಗೆ ಇರ್ತೇತ್ರಿ. ಅವ್ರ ನೀವ ನಮ್ಮನಿ ಮಹಾಲಕ್ಷ್ಮಿ, ದಿನಾ ಹಿಂಗ ಸೀರಿ ಉಟ್ಕೊ. ಚಂದಂಗ ಇರು ಮತ್ತೇನರ ಬೇಕೇನ ತಂದಕೊಡ್ತೀನಿ ಅಂತ ಹೇಳ್ತಾರ್ರಿ. ದೂರ ಇರು ಮನಿಗೊಳಿಗೆ ಉಡಿ ತುಂಬುಸ್ಕೊಳ್ಳಾಕ ಕರ್ಕೊಂಡ ಹೋಗಿ ಬರೋದು ಮಾಡ್ತಾರ್ರಿ.

ಬರೀ ಶ್ರಾವಣಕ್ಕ ಮುಗ್ಯಾಂಗಿಲ್ರಿ. ಭಾದ್ರಪದದ ಗೌರಿ ಹಬ್ಬಕ್ಕ ಬಾಗೀನ ಕೊಡುವಾಗು ಹಿಂಗ ನಡೀತೇತ್ರಿ. ಅಶ್ವೀಜದ ದಸರಾದಾಗೂ ಹಿಂಗರೀ. ಹತ್ತ ದಿನಾ ಬನ್ನಿ ಗಿಡಕ್ಕ ಹೋಗಿ (ಎಲ್ಲಾರೂ ಒಂದ ಬಣ್ಣದ ಸೀರಿ ಉಟ್ಕೊಳೊದ್ರಿ) ಹೆಣ್ಮಕ್ಕಿಗಿ ಉಡಿ ತುಂಬಿ ಮುಗಿಸೋದ್ರಿ. ಮುಂದ ಕಾರ್ತಿಕದ ದೀಪಾವಳಿ ಲಕ್ಷ್ಮಿ ಪೂಜೆದಾಗೂ ಉಡಿ ತುಂಬುದ ಪದ್ಧತಿರಿ. ಎಲ್ಲಾ ಹಬ್ಬದಾಗೂ ಉಡಿ ತುಂಬೊ ಸಂಭ್ರಮ ಇದ್ದ ಇರ್ತೇತ್ರಿ.

ಇದ್ನೆಲ್ಲ ನೋಡಿ ಒಂದಿಷ್ಟ ಗಂಡಸರು ನಾವ್ ರೊಕ್ಕ ಕೊಡೊದು, ನೀವ್ ಮಜಾ ಮಾಡುದು ಎಲ್ಲಾ ನಿಮ್ದು, ನಮ್ದು ಏನೈತ್ರಿ? ಅಂತ ಹೊಟ್ಟಿ ಉರ್ಕೊಳ್ತಾರ್ರಿ. ಹೌದಲ್ರಿ ಪಾಪ, ತೂತ ಬಿದ್ದ ಬನಿಯನ್, ಬಾಟ್ಲಿ ಅಲಿದ್ ಬಿಟ್ರ ಏನೈತ್ರಿ ಈ ಗಂಡಸರಿಗೆ? ಅವ್ರಿಗೂ ಹಿಂಗ ಏನರ ಹಬ್ಬಗೋಳ್ ಇರ್ಬೇಕಿತ್ರಿ ಚಲೋ ಆಗ್ತಿತ್ರಿ. ಅರಸಿನ ಕುಂಕುಮ ತುಗೊಳುದು, ಉಡಿ ತುಂಬಸ್ಕೊಳ್ಳೊದು ಎಲ್ಲ ಅವ್ರಿಗೂ ಇರ್ಬೇಕಿತ್ತಲ್ರಿ. ಅದ ಲಬಾಲಬಾ ಹೊಕೊಳ್ಳು ಹೋಳಿ ಹುಣ್ಣಿಮಿ ಬಿಟ್ಟ ಮತ್ತೇನರ ಇರ್ಬೇಕಿತ್ರಿ ಈ ಗಂಡಮಕ್ಕಿಗಿ. ಪಾಪ ಅವ್ರ ಜನ್ಮಕ್ಕೂ ಖುಷಿ ಆಗತಿತ್ತ!

ಮೌನ ಸಮರದ ನಡುವೆ ನೆನಪುಗಳ ಸರಸ

● ಲಕ್ಷ್ಮೀಕಾಂತ್ ಎಲ್ ವಿ

ಅದೆಷ್ಟೇ ಮುಂಜಾಗ್ರತೆ ವಹಿಸಿದರೂ ತಪ್ಪಿಸಿಕೊಳ್ಳಲಾಗದ ಅಪಘಾತ ಅನ್ನುವಂತಹ ಈ ಪ್ರೇಮವೇ ಹೀಗೆ ಅನಿಸುತ್ತದೆ. ಪ್ರೀತಿ-ಪ್ರೇಮ ಬೇಡ ಎಂದು ಸತ್ಯಾಗ್ರಹ ಹೂಡಿದ್ದ ಮನಸ್ಸು ಜೀವನದ ಅದ್ಯಾವುದೋ ಒಂದು ಘಳಿಗೇಲಿ ಅವಳ ಕುಡಿನೋಟಕ್ಕೋ, ನಗುವಿಗೋ ಸೋತು ಹೋಗುತ್ತದೆ. ಕ್ಷಣದಲ್ಲೇ ಅವಳೊಂದಿಗೆ ಅನುರಕ್ತನಾಗಿಬಿಡಬೇಕೆಂಬ ಆಸೆ ಕಾಡುತ್ತದೆ. ಜೀವನದಲ್ಲಿನ ಪ್ರೀತಿಯ ಡಿ.ವಿ.ಡಿಗಳ ಅಂಗಡಿ ತನ್ನಂತಾನೆ ಉದ್ಘಾಟನೆ ಮಾಡಿಕೊಳ್ಳುತ್ತದೆ. ಎಡಬಿಡದೆ ಸುರಿವ ಮುಂಗಾರಿನ ಹನಿಗಳಂತೆ ಒಲವ ನೆನಪುಗಳ ಕದ ತೆರೆಯುತ್ತಾ, ಕಾಡುತ್ತಾ ಮನಸ್ಸು ಹಸಿಯಾಗಿಬಿಡುತ್ತದೆ. ಪ್ರೀತಿಯೇ ಸವಿಯೆಂದರೆ, ಪ್ರೀತಿಯ ಮೊದಲ ಪುಟ ಸವಿಜೇನೆಂದೇ ಹೇಳಬೇಕು. ಅದೇ ಮೊದಲ ಪ್ರೇಮದ ಗಮ್ಮತ್ತು. ಯಾವುದೇ ಫೋಟೋ ಅಲ್ಬಂ ನೋಡುವ ಮೊದಲು ಅದರ ಕವರ್ ಪೇಜ್‌ನ್ನು ನೀವು ಗಮನಿಸಿರಬಹುದು. ಅದು ಎಷ್ಟು ಆಕರ್ಷಣೀಯವಾಗಿರುತ್ತದೆಯೋ ಅಷ್ಟೇ ರಮಣೀಯವೂ ಆಗಿರುತ್ತದೆ. ಅಂತೆಯೇ ಪ್ರತಿಯೊಬ್ಬರ ಜೀವನದಲ್ಲಿನ ಮೊದಲ ಪ್ರೇಮ ಕೂಡ! ಸವಿಯಾದ ನೆನಪುಗಳೊಂದಿಗೆ ಜೀವನದುದ್ದಕ್ಕೂ ಕಾಡುತ್ತಾ, ಖುಷಿ ಕೊಡುತ್ತಾ ತನ್ನ ತಾಜಾತನವನ್ನು ಉಳಿಸಿಕೊಳ್ಳುವುದರೊಂದಿಗೆ ಜೀವನಕ್ಕೂ ತಾಜಾತನ ತುಂಬುತ್ತದೆ.

ಹಾಗೆಯೇ ನನ್ನ ಪ್ರೀತಿ ಕೂಡ. ಒಮ್ಮೊಮ್ಮೆ ತುಂಬಾ ನೋವಾಗುತ್ತದೆ; ನಿನ್ನ ನೆನಪಾದಾಗಲೆಲ್ಲ ಅದೇ ಊರಾಚೆ ಒಂಟಿ ಮರದ ಅಡಿಯಲ್ಲಿ ಒಂಟಿಯಾಗಿ ಕೂತು ಕಣ್ಣೀರಾಗುತ್ತೇನೆ. ನೆನಪುಗಳು ತರುವ ನೋವಿಗೆ ಮದ್ದು ಎಲ್ಲಿದೆ ಎಂದು ಮತ್ತೆ ಹುಡುಕಾಡುತ್ತೇನೆ. ಕಾರಣಗಳೆ ಇಲ್ಲದೆ ದೂರವಾಗುವುದು ಅಂದ್ರೆ ಇದೆ ಅನಿಸುತ್ತದೆ..! ಈ ಪ್ರೀತಿಗೇ ತುಂಬಾ ಸ್ವಾಭಿಮಾನದ ಗುಣ ಇದೆ ಕಣೆ. ಅದು ಕೆಲವೊಮ್ಮೆ ಕೆಲವೊಂದನ್ನು ಸಹಿಸೋದಿಲ್ಲ. ನಮ್ಮಿಬ್ಬರ ಮಧ್ಯೆಯೂ ಇದೇ ನಡೆದಿದ್ದು. ಜಗಳಗಳನ್ನು ಮಾಡದೇ ಸುಮ್ಮನಾದರೂ ಅದ್ಯಾವ ಮಾತು ನಮ್ಮಿಬ್ಬರ ಸ್ವಾಭಿಮನವನ್ನು ಕೆರಳಿಸಿತೋ ತಿಳಿಯದು. ನಿನ್ನ ಮೇಲೆ ನನಗೆ ಯಾವ ಆರೋಪಗಳು ಇಲ್ಲ, ಆದರೆ ನಿನಗೆ ನನ್ನ ಮೇಲೆ ತುಂಬಾ ಅಸಮಾಧಾನಗಳಿವೆ. ಅದೆಲ್ಲವೂ ನನಗೆ ಸಮ್ಮತವೇ ಬಿಡು. ಏಕೆಂದರೆ ಇದು ಮೌನಗಳ ಸಮರ.

ಪ್ರತಿ ಬಾರಿಯೂ ನನ್ನೆದೆಯ ಮಾತುಗಳನ್ನು ಪದಗಳನ್ನಾಗಿಸಿ ನಿನ್ನ ಹೃದಯಕ್ಕೆ ತಲುಪಿಸುವಂತೆ ಈ ಬಾರಿಯೂ ನನ್ನೆಲ್ಲ ಮನಸ್ಸಿನ ಭಾರವನ್ನು ಇಳಿಸಲು ಪದಗಳ ಮೂಲಕ ನಿನ್ನ ಹೃದಯದ ಅಂಚೆಪೆಟ್ಟಿಗೆಯೊಳಗೆ ಇಳಿಸಿದ್ದೇನೆ. ಗೆಳತಿ, ನಿನಗಾಗಿ ಕೂಡಿಟ್ಟ ಅದೆಷ್ಟೋ ಕನಸುಗಳು ಅಟ್ಟದ ಮೂಲೆಯಲ್ಲಿರುವ ಆ ಪೆಟ್ಟಿಗೆಯೊಳಗಿನ ಪ್ರೇಮಪತ್ರಗಳಲ್ಲಿ ಮಾಸುತ್ತಿವೆ ಕಣೆ. ಬಗೆಹರಿಯದ ಮಾತುಗಳನ್ನು ಆಡಿ ಏನು ಪ್ರಯೋಜನ? ನೀನೆಲ್ಲೋ ದೂರದಲ್ಲಿ ಖುಷಿ ಆಗಿರ್ತಿಯಾ ಅಂತ ನಾನು ನಂಬುತ್ತೇನೆ. ನಾನು ಮಾತ್ರ ನಿನ್ನ ನೆನಪುಗಳ ಹೊತ್ತು ಆಗಾಗ ಬಂದು ಕಡಲ ತೀರದಲ್ಲಿ ಕೂರುತ್ತೇನೆ. ನಿನಗೆ ಗೊತ್ತಾ..! ಪ್ರತಿ ಬಾರಿಯೂ ಬಂದು ತೀರವನ್ನು ಚುಂಬಿಸಿ ಸಾಗುವ ಅಲೆಗಳ ಮೇಲೆ ಈ ತಂಗಾಳಿಗೆ ವಿಪರೀತ ವ್ಯಾಮೋಹ; ಹಾಗಾಗಿ ಅಲೆಗಳ ಮಾತನ್ನು ತೀರವಷ್ಟೆ ಆಲಿಸುತ್ತದೆ. ಇದನ್ನೆಲ್ಲ ದಿಟ್ಟಿಸಿ ನೋಡುತ್ತಿರುವಾಗಲೇ ಕಡಲ ಅಲೆಯು ಹಿಂದೆ ಸರಿಯುತ್ತದೆ. ಅದೇ ರೀತಿ ನೆನಪುಗಳು ಕೂಡ. ಅದೇನೆ ಆಗಲಿ ನಿನ್ನ ನೆನಪುಗಳ ಜೊತೆ ಬದುಕುವ ನನ್ನಂತೆ ಈ ಅಲೆಗಳ ಸರಸಗಳು ಸಾಗುತ್ತಲೇ ಇರುತ್ತದೆ.

ಈ ಪ್ರೀತಿ ಒಂಥರಾ ಹೀಗೆ ಕಣೆ..! ನೂರು ಸಲ ಅಪ್ಪಿದರೂ ಯಾಕೋ ಒಡಲನ್ನು ಹಿಂಡುವ ನೋವು ಕೂಡ ಹಿತವಾಗಿಸುತ್ತದೆ. ಈಗ ನನ್ನೆಲ್ಲ ಕನಸುಗಳು ನಿನ್ನ ಆಗಮನದ ತವಕದಲ್ಲಿ ನಿನ್ನ ದಾರಿಯನ್ನು ದೂರದವರೆಗೂ ದಿಟ್ಟಿಸುತ್ತಿವೆ. ಬಹುಶಃ ಪ್ರೀತಿ ಅಂದ್ರೆ ಇದೆ ಅಲ್ವ. ನಂಬಿಕೆಯ ಮೇಲೆ ಬದುಕುವುದು. ನೀನು ಬರುವುದಿಲ್ಲ ಅನ್ನುವ ಸತ್ಯಕ್ಕಿಂತಲೂ ಬರಬಹುದು ಅನ್ನುವ ನಂಬಿಕೆಗೆ ಬಲ ಜಾಸ್ತಿ..! ಅದಕ್ಕಾಗಿಯೇ 'Love happens only once, rest is just Life'ಎಂಬ ಮಾತಿದೆ. ಗೆಳತಿ, ಈ ಜಗತ್ತಿನಲ್ಲಿ ಹುಟ್ಟುವ ಅದೆಷ್ಟೋ ಪ್ರೇಮಗಳ ನಡುವೆ ಈ ಪ್ರೇಮವೂ ಸೇರಿ ಹೋಗಲಿ. ನಿನ್ನ ಅಗಾಧವಾದ ಮೌನಕ್ಕೆ ನನ್ನ ಮನಸ್ಸಿನ ಭಾವಗಳು ಸ್ವರವಾಗುವುದೇ ಇಲ್ಲ, ಈ ಸತ್ಯ ಒಪ್ಪಿಕೊಂಡ ಮೇಲೂ ನನ್ನ ಮನಸ್ಸಿನ ಮಾತುಗಳು ನಿನ್ನ ಹೃದಯದೂರಿಗೆ ನಿತ್ಯವೂ ಪಯಣಿಸುತ್ತಲೇ ಇವೆ. ಬಹುಶಃ ಇದು ಈ ಉಸಿರು ಇರುವವರೆಗೂ ಹೀಗೆ ಸಾಗುತ್ತದೆ. ಈ ನಡುವೆ ಒಮ್ಮೆಯಾದರೂ ನನ್ನ ನೆನಪು ನಿನಗೆ ಕಾಡುತ್ತದೆ ಅಲ್ವಾ..?

ಒಲಿಂಪಿಕ್ಸ್‌ನಲ್ಲಿ ಭಾರತ 2ನೇ ಪದಕ ಗೆದ್ದಿರುವುದು ಹೆಮ್ಮೆಯ ವಿಷಯವಾಗಿದೆ. ಕಂಚು ಗೆದ್ದ ಮನು ಭಾಕರ್ ಹಾಗೂ ಸರಬ್ಜೋತ್ ಅವರಿಗೆ ಅಭಿನಂದನೆಗಳು. ನಮ್ಮ ಕ್ರೀಡಾಪಟುಗಳು ಅದ್ಭುತ ಆರಂಭವನ್ನು ನೀಡಿದ್ದಾರೆ. -**ರಾಹುಲ್ ಗಾಂಧಿ,** ವಿಪಕ್ಷ ನಾಯಕ

ವಿಶ್ವವಾಣಿ
vishwavani.news
31.07.2024
ಬುಧವಾರ

ಪದಕ ಪಟ್ಟಿ

	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಭಾರತ	0	0	2	2
ಜಪಾನ್	7	2	4	13
ಚೀನಾ	6	6	2	14
ಫ್ರಾನ್ಸ್	5	8	4	17
ಆಸ್ಟ್ರೇಲಿಯಾ	5	4	0	9
ದಕ್ಷಿಣ ಕೊರಿಯಾ	5	3	3	11
ಅಮೇರಿಕ	3	8	9	20
ಗ್ರೇಟ್ ಬ್ರಿಟನ್	3	5	3	11
ಇಟಲಿ	2	3	3	8
ಕೆನಡಾ	2	1	2	5

ಮೈಕ್ರೋ ಮಾಹಿತಿ



124 ವರ್ಷಗಳ ಬಳಿಕ ದಾಖಲೆ ಬರೆದ ಭಾರತ

- 124 ವರ್ಷಗಳ ನಂತರ ಒಂದೇ ಆವೃತ್ತಿನಲ್ಲಿ ಓರ್ವ ಭಾರತದ ಕ್ರೀಡಾ ಪಟುವಿನಿಂದ 2 ಪದಕ

10 ಮೀಟರ್ ಶೂಟಿಂಗ್‌ನಲ್ಲಿ ಕಂಚು ಗೆದ್ದ ಮನು-ಸರಬ್ ಜೋತ್ ಜೋಡಿ

ಮನುಗೆ ಎರಡನೇ ಕಂಚಿನ ಪದಕ

ನಾರ್ಮನ್ ಪಿಚಾರ್ಡ್

- ಮೊದಲನೇ ಒಲಿಂಪಿಕ್ಸ್‌ನಲ್ಲೇ ಭಾರತದ ನಾರ್ಮನ್ ಪಿರ್ಚಾಡ್‌ನಿಂದ ಸಾಧನೆ

1900 ಒಲಿಂಪಿಕ್ಸ್‌ನಲ್ಲಿ ನಾರ್ಮನ್ ಅಥ್ಲೆಟಿಕ್ಸ್‌ನಲ್ಲಿ 2 ಬೆಳ್ಳಿ ಗೆದ್ದಿದ್ದರು.

ಸಮಾಚಾರ ಸಣ್ಣದಲ್ಲ

7 ತಿಂಗಳ ಗರ್ಭಿಣಿ ಭಾಗಿ



ಪ್ಯಾರಿಸ್: ಈಜಿಪ್ಟ್‌ನ ಫೆನ್ಸರ್ ನಾದಾ ಹಫೀಜ್ ಅವರು 7 ತಿಂಗಳ ಗರ್ಭಿಣಿಯಾಗಿದ್ದ ಹೊರತಾಗಿಯೂ ಜಾಗತಿಕ ಸ್ಪರ್ಧೆಯಲ್ಲಿ ಪಾಲ್ಗೊಂಡು ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಿ ಅಚ್ಚರಿ ಮೂಡಿಸಿದ್ದಾರೆ. ಮಹಿಳೆಯರ ವೈಯಕ್ತಿಕ ಫೆನ್ಸಿಂಗ್‌ನಲ್ಲಿ ಹಫೀಜ್ ಮೊದಲ ಪಂದ್ಯವನ್ನು ಟಾರ್ಟಾಕೋವ್ಸಿ ವಿರುದ್ಧ 15-13 ಅಂತರದಿಂದ ಗೆದ್ದಿದ್ದರು. ಆದರೆ 16 ನೇ ಸುತ್ತಿನಲ್ಲಿ ದಕ್ಷಿಣ ಕೊರಿಯಾದ ಜಿಯೊನ್ ಹಯೋಂಗ್ ವಿರುದ್ಧ ಸೋತರು. ತಮ್ಮ ನಿರ್ಗಮನದ ಬಳಿಕ ಭಾವುಕರಾದ ಅವರು, ತನ್ನ ಕಠಿಣ ಪ್ರಯಾಣದ ಬಗ್ಗೆ ಮಾತನಾಡಿದ್ದಾರೆ. ಆದರೆ, ತಮ್ಮ ಗೆಲುವು ಹೆಚ್ಚು ಮೌಲ್ಯಯುತ ಎಂದು ಹೇಳಿದ್ದಾರೆ. ಸೋಮವಾರ ನಡೆದ ಸ್ಪರ್ಧೆಯಲ್ಲಿ ಹಯೋಂಗ್ ವಿರುದ್ಧ 15-7 ಅಂತರದಿಂದ ಸೋತ ನಂತರ ಹಫೀಜ್ ತನ್ನ ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ತನ್ನ ಗರ್ಭಧಾರಣೆಯ ಸುದ್ದಿ ಬಹಿರಂಗಪಡಿಸಿದ್ದಾರೆ. ಇದು ಇಡೀ ವಿಶ್ವ ಅಥ್ಲೆಟಿಕ್ ಕ್ಷೇತ್ರದಲ್ಲಿ ವ್ಯಾಪಕ ಸಂಚಲನ ಉಂಟು ಮಾಡಿತು. ಹಫೀಜ್ ಅವರ ಫೆನ್ಸಿಂಗ್ ಪ್ರೀತಿ ಮತ್ತು ಉತ್ಸಾಹದ ಬಗ್ಗೆ ಪ್ರಶಂಸೆ ಗಳಿಸಿದ್ದಾರೆ.

ಇಂದು ಕಣದಲ್ಲಿ

- ಶೂಟಿಂಗ್: ಪುರುಷರ 50 ಮೀಟರ್ ರೈಫಲ್, ಮಹಿಳೆಯರ ಟ್ರ್ಯಾಪ್ 12:30ಕ್ಕೆ
- ಬ್ಯಾಡ್ಮಿಂಟನ್: ಮಹಿಳಾ ವೈಯಕ್ತಿಕ 1ಗಂಟೆಗೆ, ಪುರುಷರ ವೈಯಕ್ತಿಕ 1:40, ಪುರುಷರ ವೈಯಕ್ತಿಕ ರಾತ್ರಿ 11ಕ್ಕೆ
- ಈಕ್ವೆಸ್ಟ್ರಿಯನ್ ಇಂಡಿವಿಜುವಲ್ ಡ್ರೆಸೇಜ 1:30ಕ್ಕೆ
- ಟೇಬಲ್ ಟೆನಿಸ್: ಮಹಿಳಾ ವೈಯಕ್ತಿಕ 2:30ಕ್ಕೆ
- ಕುಸ್ತಿ: ಮಹಿಳೆಯರ 75 ಕೆಜಿ 3:34ಕ್ಕೆ, ಪುರುಷರ 71 ಕೆಜಿ ವಿಭಾಗದ 16 ಕೆಜಿ 12:18 ರಾತ್ರಿ
- ಆರ್ಚರಿ: ಮಹಿಳೆಯರ ವೈಯಕ್ತಿಕ 3:56ಕ್ಕೆ, ಪುರುಷರ ವೈಯಕ್ತಿಕ ರಾತ್ರಿ 9:15

ಮತ್ತೊಂದು ಕಂಚಿಗೆ ಶೂಟ್

ದ.ಕೊರಿಯಾ ವಿರುದ್ಧ ಗೆದ್ದ ಮನು, ಸರಬ್‌ಜೋತ್

ಪ್ಯಾರಿಸ್: ಭಾರತ ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಮತ್ತೊಂದು ಪದಕವನ್ನು ಗೆದ್ದುಕೊಂಡಿದ್ದು, ತನ್ನ ಪದಕದ ಅಭಿಯಾನವನ್ನು ಮುಂದುವರೆಸಿದೆ. ಈ ಹಿಂದೆ ಮನು ಭಾಕರ್ ಅವರು 10 ಮೀ. ಏರ್ ಪಿಸ್ತೂಲ್ ಮಹಿಳಾ ವಿಭಾಗದಲ್ಲಿ ಕಂಚು ಗೆದ್ದು ಇತಿಹಾಸ ಬರೆದಿದ್ದರು. ಇದೀಗ ಅವರು ಎರಡನೇ ಪದಕವನ್ನು ಗೆದ್ದಿದ್ದು, 10 ಮೀ. ಏರ್ ಪಿಸ್ತೂಲ್ ಮಿಶ್ರತಂಡ ವಿಭಾಗದ ಸ್ಪರ್ಧೆಯಲ್ಲಿ ಸರಬ್ಜೋತ್ ಸಿಂಗ್ ಮತ್ತು ಮನು ಭಾಕರ್ ಜೋಡಿ ಕಂಚಿನ ಪದಕಕ್ಕೆ ಮುತ್ತಿಕ್ಕಿದೆ.

> **ಪದಕ ಗೆಲ್ಲುವ ನನ್ನ ಹಾಗೂ ನನ್ನನ್ನು ಬೆಂಬಲಿಸಿದ ಪ್ರತಿಯೊಬ್ಬರ ಕನಸು ನನಸಾಗಿದೆ. ಭಾರತದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯ, ತರಬೇತುದಾರ ಜಸ್ಪಾಲ್ ರಾಣಾ, ಹರಿಯಾಣ ಸರಕಾರ ನನಗೆ ಶುಭಹಾರೈಸಿದ ದೇಶದ ಎಲ್ಲ ಜನರಿಗೂ ನಾನು ತುಂಬಾ ಕೃತಜ್ಞನಾಗಿದ್ದೇನೆ. ಅವರ ಅವಿಸ್ಮರಣೀಯ ಬೆಂಬಲ ಮತ್ತು ಪ್ರೀತಿಗಾಗಿ ನಾನು ಈ ವಿಜಯವನ್ನು ನನ್ನ ದೇಶಕ್ಕೆ ಅರ್ಪಿಸುತ್ತೇನೆ.**
>
> **-ಮನು ಭಾಕರ್,** ಪದಕ ವಿಜೇತೆ

2 ದಿನಗಳ ಹಿಂದಷ್ಟೇ ಮಹಿಳೆಯರ 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಕಂಚಿನ ಪದಕ ಗೆದ್ದು ಭಾರತಕ್ಕೆ ಮೊದಲ ಪದಕ ತಂದುಕೊಟ್ಟಿದ್ದ ಮನು, ಇದೀಗ 2ನೇ ಪದಕ ಗೆಲ್ಲುವ ಮೂಲಕ ಒಂದೇ ಒಲಿಂಪಿಕ್ಸ್‌ನಲ್ಲಿ ಎರಡು ಪದಕ ಜಯಿಸಿದ ಭಾರತದ ಮೊದಲ ಮಹಿಳಾ ಕ್ರೀಡಾಪಟು ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಸರಬ್ಜೋತ್ ಸಿಂಗ್ ಜತೆಗೂಡಿ 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ಸ್ಪರ್ಧೆದಲ್ಲಿ ಕಂಚಿನ ಪದಕ ಗೆಲ್ಲುವಲ್ಲಿ ಮನು ಭಾಕರ್ ಯಶಸ್ವಿಯಾಗಿದ್ದು, ಭಾರತಕ್ಕೆ ಎರಡನೇ ಪದಕ ತಂದುಕೊಟ್ಟಿದ್ದಾರೆ. ಮಿಶ್ರ ವಿಭಾಗದಲ್ಲಿ ಸೋಮವಾರ ಅಮೋಘ ಪ್ರದರ್ಶನ ತೋರಿದ ಈ ಜೋಡಿ ಕಂಚಿನ ಪದಕದ ಸುತ್ತಿಗೆ ಪ್ರವೇಶ ಮಾಡಿದ್ದರು. ಇದೀಗ ಮಂಗಳವಾರ ನಡೆದ ಕಂಚಿನ ಪದಕ ಸ್ಪರ್ಧೆಯಲ್ಲಿ ಭಾರತೀಯ ಜೋಡಿ ದಕ್ಷಿಣ ಕೊರಿಯಾದ ಯೆ ಜಿನ್ ಒಹ್ ಮತ್ತು ವೊನೊಹೊ ಲೀ ವಿರುದ್ಧ 16-10 ಅಂಕಗಳಿಂದ ಗೆದ್ದು ಕಂಚಿನ ಪದಕ ತನ್ನದಾಗಿಸಿ ಕೊಂಡಿತು. ಸೋಮವಾರ ನಡೆದಿದ್ದ ಮಿಶ್ರ ತಂಡ ಸ್ಪರ್ಧೆಯಲ್ಲಿ ಮನು ಭಾಕರ್ -ಸರಬ್ಜೋತ್ ಸಿಂಗ್ 580 ಅಂಕ ಗಳಿಸಿದ್ದರು. ಕೊರಿಯಾದ ಜೋಡಿ 579 ಅಂಕ ಗಳಿಸಿತ್ತು.

124 ವರ್ಷದ ದಾಖಲೆ ಸರಿಗಟ್ಟಿದ ಮನು

ಇತಿಹಾಸ ಬರೆದ ಮನು ಭಾಕರ್

10 ಮೀ. ಏರ್‌ಪಿಸ್ತೂಲ್‌ನಲ್ಲಿ ಗೆಲ್ಲುವ ಮೂಲಕ ಆ ವಿಭಾಗದಲ್ಲಿ ಪದಕ ಗೆದ್ದ ಮೊದಲ ಮಹಿಳೆ ಎನ್ನಿಸಿಕೊಂಡಿದ್ದ ಮನು, ಎರಡನೇ ಪದಕ ಗೆಲ್ಲುವ ಮೂಲಕ ಈ ಸಾಧನೆ ಮಾಡಿದ ಎರಡನೇ ಭಾರತೀಯ ಎನ್ನಿಸಿದ್ದಾರೆ. ಭಾರತ ಭಾಗವಹಿಸಿದ್ದ ಮೊದಲನೇ ಒಲಿಂಪಿಕ್ಸ್ ಅಂದರೆ 1900 ರಲ್ಲಿ ಭಾರತದಿಂದ ಭಾಗವಹಿಸಿದ್ದ ಮೊದಲನೇ ಕ್ರೀಡಾಪಟು ನಾರ್ಮನ್ ಪಿರ್ಚಾಡ್ ಅವರು ಅಥ್ಲೆಟಿಕ್ಸ್ ವಿಭಾಗದಲ್ಲಿ ಎರಡು ಬೆಳ್ಳಿ ಗೆಲ್ಲುವ ಮೂಲಕ ದಾಖಲೆ ಬರೆದಿದ್ದರು. ಇದೀಗ ಪ್ಯಾರಿಸ್‌ನಲ್ಲಿ ಎರಡು ಕಂಚು ಗೆಲ್ಲುವ ಮೂಲಕ ಭಾಕರ್ ಅವರು ಈ ಸಾಧನೆಯನ್ನು ಸರಿಗಟ್ಟಿದ್ದಾರೆ.

ಮನುಗೆ ಇನ್ನೊಂದು ಪದಕ ನಿರೀಕ್ಷೆ

ಇದೇ ವೇಳೆ, ಮನು ಭಾಕರ್ 25 ಮೀಟರ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲೂ ಭಾಗವಹಿಸುತ್ತಿದ್ದು, ಆಕೆಯಿಂದ 3ನೇ ಪದಕ ನಿರೀಕ್ಷೆ ಹೆಚ್ಚಾಗಿದೆ. ಸತತ ಎರಡು ಪದಕ ಗೆದ್ದಿರುವ ಅವರು, ಮೂರನೇ ಪದಕದ ಮೇಲೆ ಕಣ್ಣಿಟ್ಟಿದ್ದಾರೆ. ಅವರು ಗೆದ್ದರೆ, ಈ ಸಾಧನೆ ಮಾಡಿದ ಮೊದಲ ಕ್ರೀಡಾಪಟು ಎಂಬ ದಾಖಲೆಗೆ ಭಾಜನರಾಗಲಿದ್ದಾರೆ.

ಪ್ರಧಾನಿ, ರಾಷ್ಟ್ರಪತಿಯಿಂದ ಅಭಿನಂದನೆ

ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದ ಸರಬ್ಜೋತ್ ಸಿಂಗ್ ಮತ್ತು ಮನು ಭಾಕರ್ ಅವರಿಗೆ ಪ್ರಧಾನ ಮಂತ್ರಿ ಮೋದಿ ಹಾಗೂ ರಾಷ್ಟ್ರಪತಿ ದ್ರೌಪದಿ ಮುರ್ಮು ಶುಭಾಶಯ ತಿಳಿಸಿದ್ದಾರೆ. ಈ ಬಗ್ಗೆ ಹೇಳಿಕೆ ಹಾಕಿರುವ ಪ್ರಧಾನಿ ಮೋದಿ, ನಮ್ಮ ಗುರಿಕಾರರು ನಮ್ಮನ್ನು ಹೆಮ್ಮೆಪಡಿಸುವುದನ್ನು ಮುಂದುವರಿಸಿದ್ದಾರೆ. 10 ಮೀಟರ್ ಏರ್ ಪಿಸ್ತೂಲ್ ಮಿಶ್ರ ತಂಡ ಸ್ಪರ್ಧೆಯಲ್ಲಿ ಕಂಚಿನ ಪದಕ ಮನು ಭಾಕರ್ ಹಾಗೂ ಸರಬ್ಜೋತ್ ಸಿಂಗ್ ಅವರು ಕಂಚಿನ ಪದಕ ಗೆದ್ದಿದ್ದಾರೆ. ಇಬ್ಬರೂ ಉತ್ತಮ ಕೌಶಲ್ಯ ಹಾಗೂ ತಂಡದ ಆಟ ಪ್ರದರ್ಶಿಸಿದ್ದಾರೆ. ಕಂಚಿನ ಪದಕ ಗೆದ್ದಿರುವುದು ಬಹಳಷ್ಟು ಸಂತಸ ತಂದಿದೆ. ಮನು ಅವರಿಗೆ ಇದು ಸತತ 2ನೇ ಪದಕವಾಗಿದ್ದು, ಇದು ಅವರ ಶ್ರೇಷ್ಠತೆ ಹಾಗೂ ಸಮರ್ಪಣೆಯನ್ನು ತೋರಿಸುತ್ತದೆ ಎಂದು ಹಾಡಿ ಹೊಗಳಿದ್ದಾರೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ತಮ್ಮ ಹೇಳಿಕೆಯಲ್ಲಿ, ಒಲಿಂಪಿಕ್ಸ್‌ನಲ್ಲಿ ದೇಶಕ್ಕೆ ಕಂಚಿನ ಪದಕ ತಂದುಕೊಟ್ಟ ಮನು ಭಾಕರ್ ಮತ್ತು ಸರಬ್ಜೋತ್ ಸಿಂಗ್ ಅವರಿಗೆ ಅಭಿನಂದನೆಗಳು, ಭಾಕರ್ ಅವರು ಒಂದೇ ಜಾಗತಿಕ ಕೂಟದಲ್ಲಿ ಎರಡು ಪದಕ ಗೆದ್ದ ಭಾರತದ ಮೊದಲ ಮಹಿಳಾ ಶೂಟರ್ ಎಂಬ ಇತಿಹಾಸವನ್ನು ಸೃಷ್ಟಿಸಿದ್ದಾರೆ. ಅವರು ನಮಗೆ ಅಪಾರ ಹೆಮ್ಮೆ ತಂದಿದ್ದಾರೆ. ಎಂದು ಶುಭ ಹಾರೈಸಿದ್ದಾರೆ.

ಐರ್ಲೆಂಡ್ ವಿರುದ್ಧ ಭಾರೀ ಗೆಲುವು | ಕ್ವಾ.ಫೈನಲ್ ಬಹುತೇಕ ಖಚಿತ

ಹಾಕಿ: ಭಾರತಕ್ಕೆ 2ನೇ ಗೆಲುವು

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಭಾರತ ಹಾಕಿ ತಂಡ ಗೆಲುವಿನ ಓಟ ಮುಂದುವರೆಸಿದ್ದು, ಗುಂಪು ಹಂತದ ಮೂರನೇ ಪಂದ್ಯದಲ್ಲಿ ಐರ್ಲೆಂಡ್ ವಿರುದ್ಧ 2-0 ಗೋಲುಗಳಿಂದ ಭರ್ಜರಿ ಗೆಲುವು ಸಾಧಿಸಿದೆ. ಈ ಮೂಲಕ ಭಾರತ ಪ್ಯಾರಿಸ್ ಒಲಿಂಪಿಕ್ಸ್ ಹಾಕಿಯಲ್ಲಿ ಕ್ವಾರ್ಟರ್ ಫೈನಲ್‌ಗೆ ತನ್ನ ಸ್ಥಾನ ಬಹುತೇಕ ಖಚಿತಪಡಿಸಿಕೊಂಡಿದೆ.

ಅರ್ಜೆಂಟೀನಾ ವಿರುದ್ಧದ ಪಂದ್ಯವನ್ನು ಡ್ರಾ ಮಾಡಿಕೊಂಡ ನಂತರ ಭಾರತ ಎದುರಾಳಿ ಐರ್ಲೆಂಡ್ ತಂಡಕ್ಕೆ ಒಂದೇ ಒಂದು ಗೋಲು ಗಳಿಸುವ ಅವಕಾಶವನ್ನು ನೀಡಲಿಲ್ಲ. ಐರ್ಲೆಂಡ್ ಕೆಲವು ಪ್ರತಿದಾಳಿಗಳೊಂದಿಗೆ ಮೇಲುಗೈ ಸಾಧಿಸಲು ಯತ್ನಿಸಿದರೂ, ಭಾರತದ ಎದುರು ಯಶಸ್ಸು ಸಾಧಿಸಲಾಗಲಿಲ್ಲ. ಹೆಚ್ಚುವರಿಯಾಗಿ, ಪೆನಾಲ್ಟಿ ಕಾರ್ನರ್‌ಗಳನ್ನು ಪರಿವರ್ತಿಸುವಲ್ಲಿ ಐರ್ಲೆಂಡ್ ವಿಫಲವಾಯಿತು. ಹೀಗಾಗಿ ಭಾರತ ಎದುರು ಸೋಲಿಗೆ ಶರಣಾಗಬೇಕಾಯಿತು. 11ನೇ ನಿಮಿಷದಲ್ಲಿ ಪೆನಾಲ್ಟಿ ಸ್ಟ್ರೋಕ್ ಮೂಲಕ ಭಾರತಕ್ಕೆ ಮೊದಲ ಗೋಲು ಬಂದಿತು. ನಾಯಕ ಅದನ್ನು ಗೋಲಾಗಿ ಪರ್ವತಿಸಿದರು. ಇದಾದ ಬಳಿಕ 19ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್‌ನಿಂದ ಮತ್ತೊಂದು ಗೋಲು ಭಾರತ ಗಳಿಸಿ ಐರ್ಲೆಂಡ್ ವಿರುದ್ಧ ಪ್ರಾಬಲ್ಯ ಸಾಧಿಸಿತು. ಪಂದ್ಯದಲ್ಲಿ 9 ಪೆನಾಲ್ಟಿ ಕಾರ್ನರ್‌ಗಳನ್ನು ಪಡೆದ ಭಾರತ ಕೇವಲ ಒಂದನ್ನು ಗೋಲಾಗಿ ಪರಿವರ್ತಿಸಿತು. ಆದರೆ ಐರ್ಲೆಂಡ್ ತಂಡವು ಯಾವುದೇ ಪೆನಾಲ್ಟಿ ಕಾರ್ನರ್‌ನ ಲಾಭ ಪಡೆಯಲು ಸಫಲವಾಗಲಿಲ್ಲ.

ಕ್ವಾ.ಫೈನಲ್ ಖಚಿತ: ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಇದು ಎರಡನೇ ಜಯವಾಗಿದ್ದು, ಇದಕ್ಕೂ ಮುನ್ನ ತನ್ನ ಮೊದಲ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಸೋಲಿಸಿತ್ತು. ಇದಾದ ಬಳಿಕ ತಂಡ ಅರ್ಜೆಂಟೀನಾ ವಿರುದ್ಧ 1-1 ಡ್ರಾ ಮಾಡಿಕೊಂಡಿತು. ಇದೀಗ ಗೆಲುವು ಭಾರತಕ್ಕೆ ಕ್ವಾರ್ಟರ್ ಫೈನಲ್‌ಗೆ ತಲುಪ ದಾರಿ ಸುಗಮವಾಗಿದೆ. ಏಕೆಂದರೆ ಪ್ರತಿ ಗುಂಪಿನಿಂದ ಅಗ್ರ ನಾಲ್ಕು ತಂಡಗಳು ಕ್ವಾರ್ಟರ್‌ಫೈನಲ್ ಅರ್ಹತೆ ಪಡೆಯಲಿವೆ. ಆಸ್ಟ್ರೇಲಿಯಾ ಮತ್ತು ಬೆಲ್ಜಿಯಂ ಭಾರತದ ಗುಂಪಿನಲ್ಲಿದ್ದು, ಆಗಸ್ಟ್ 1 ರಂದು ಬೆಲ್ಜಿಯಂ ಮತ್ತು ಆಗಸ್ಟ್ 2 ರಂದು ಆಸ್ಟ್ರೇಲಿಯಾವನ್ನು ಭಾರತ ಎದುರಿಸಲಿದೆ.

ಆರ್ಚರಿ: 16ರ ಸುತ್ತಿಗೆ ಭಜನ್ ಕೌರ್

ಪ್ಯಾರಿಸ್: ಭಾರತದ ಬಿಲ್ಲುಗಾರ್ತಿ ಭಜನ್ ಕೌರ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ವೈಯಕ್ತಿಕ ವಿಭಾಗದಲ್ಲಿ ಪ್ರೀಕ್ವಾರ್ಟರ್‌ಫೈನಲ್ ತಲುಪಿದ್ದಾರೆ. 64ನೇ ಸುತ್ತಿನ ಪಂದ್ಯದಲ್ಲಿ ಇಂಡೋನೇಷ್ಯಾದ ಸೈಫಾ ನುರಾಫಿಫಾ ಕಮಾಲ್ ವಿರುದ್ಧ ಗೆದ್ದ ನಂತರ ಎರಡನೇ ಪಂದ್ಯದಲ್ಲಿ ಅವರು ಪೋಲೆಂಡ್‌ನ ವಿಯೊಲೆಟಾ ಮೈಸ್ಜೋರ್ ವಿರುದ್ಧ ಗೆಲುವು ಸಾಧಿಸಿದ್ದಾರೆ.

ಮಂಗಳವಾರ ನಡೆದ ಆರ್ಚರಿಯಲ್ಲಿ ಅವರು 7-3 ಅಂತರದಲ್ಲಿ ಭಾರಿ ಜಯ ಸಾಧಿಸಿದ್ದಾರೆ. ಎರಡು ಸೆಟ್‌ಗಳ ನಂತರ ಎದುರಾಳಿ 3-1 ಮುನ್ನಡೆ ಸಾಧಿಸಿದ್ದರು. ಆದರೆ ಈ ಬಳಿಕ ಭಜನ್, ಸತತ ಮೂರು ಸೆಟ್‌ಗಳನ್ನು ಗೆಲ್ಲುವ ಮೂಲಕ ಅವರು 32ನೇ ಸುತ್ತಿಗೆ ಲಗ್ಗೆ ಇಟ್ಟರು. 32ನೇ ಸುತ್ತಿನಲ್ಲೂ ಭರ್ಜರಿ ಪ್ರದರ್ಶನ ಮುಂದುವರಿಸಿದ ಅವರು, ಪೋಲೆಂಡ್‌ನ ವಿಯೊಲೆಟಾ ಮೈಸ್ಜೋರ್ ವಿರುದ್ಧ 6-0 ರಿಂದ ಗೆಲುವು ದಾಖಲಿಸಿ, ಪ್ರೀಕ್ವಾರ್ಟರ್ ಫೈನಲ್‌ಗೆ ತಲುಪಿದ್ದಾರೆ. ಆಗಸ್ಟ್ 3 ರಂದು ನಡೆಯಲಿರುವ ಪ್ರೀಕ್ವಾರ್ಟರ್ ಪಂದ್ಯ ನಡೆಯಲಿದೆ.

ಮತ್ತೊಂದೆಡೆ ಇನ್ನೋರ್ವ ಆಟಗಾರ್ತಿ ಅಂಕಿತಾ ಭಕತ್ ಅ ನಿರಾಸೆ ಅನುಭವಿಸಿದ್ದು, 64 ರ ಸುತ್ತಿನಲ್ಲಿ ಸೋಲನುಭವಿದ್ದಾರೆ. 11 ನೇ ಶ್ರೇಯಾಂಕದ ಅವರು, ಪೋಲೆಂಡ್‌ನ ವಿಯೊಲೆಟಾ ಮೈಸ್ಜೋರ್ ವಿರುದ್ಧ 6-4 ರಿಂದ ಸೋತರು.

ಸ್ಕೋರ್: ಆರ್ಚರಿ ಮಹಿಳೆಯರ ವೈಯಕ್ತಿಕ ಸುತ್ತಿನ 64 ರಲ್ಲಿ ಭಜನ್ ಕೌರ್ 7-3 ರಲ್ಲಿ ಸೈಫಾ ನುರಾಫಿಫಾ ಕಮಾಲ್ ಅವರನ್ನು ಸೋಲಿಸಿದರು.

ಭಾಕರ್ ಭವಿಷ್ಯ ಬದಲಿಸಿದ ಕೋಚ್ ಮಾತು

ಕೋಚ್ ಎಂದರೆ ಹೀಗಿರಬೇಕು

ಪ್ಯಾರಿಸ್: ಸತತ ಎರಡು ದಿನದಲ್ಲಿ ದೇಶಕ್ಕೆ ಎರಡು ಕಂಚಿನ ಪದಕ ತಂದುಕೊಟ್ಟ ಗುರಿಗಾರ್ತಿ ಮನು ಭಾಕರ್ ಭವಿಷ್ಯವನ್ನು ಬದಲಿಸಿದ್ದು ಯಾರು ಗೊತ್ತೇ..? ತರಬೇತುದಾರ ಜಸ್ಪಾಲ್ ರಾಣಾ ಅವರ ಸ್ಫೂರ್ತಿಯ ಮಾತುಗಳು. ಹಿಂದೊಮ್ಮೆ ಶೂಟಿಂಗ್ ಬಿಟ್ಟು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳಲು ಸಜ್ಜಾಗಿದ್ದ ಮನು ತನ್ನ ಕೋಚ್ ಮಾತುಗಳಿಂದ ಪ್ರಭಾವಿತರಾಗಿ ಶೂಟಿಂಗ್‌ಗೆ ಮರಳಿದ್ದು, ಈಗ ಜಾಗತಿಕ ಕ್ರೀಡೆಯಲ್ಲಿ ಭಾರತಕ್ಕೆ ಎರಡು ಪದಕ ತಂದುಕೊಟ್ಟ ಸ್ಮರಣೀಯ ದಾಖಲೆ ಬರೆದಂತಾಗಿದೆ. ಮಂಗಳವಾರದ ಗೆಲುವಿನ ನಂತರ ಮನು ಭಾಕರ್, ತಾವು ಶೂಟಿಂಗ್ ತ್ಯಜಿಸಲು ಸಿದ್ಧರಾಗಿದ್ದ ಬಗ್ಗೆ ಬಹಿರಂಗ ಪಡಿಸಿದ್ದಾರೆ.

ಆಲೋಚನೆ ಬದಲಿಸಿದ ಕೋಚ್: 2023ರವರೆಗೂ ಶೂಟಿಂಗ್‌ನಲ್ಲಿ ಹೆಚ್ಚಿನ ಸಾಧನೆ ಮಾಡದ ಮನು, ಕೊನೆಗೆ ಕ್ರೀಡಾರಂಗದಿಂದಲೇ ದೂರವಾಗಿ ಉನ್ನತ ಶಿಕ್ಷಣದ ಕಡೆಗೆ ಗಮನ ಹರಿಸಲು ಮುಂದಾಗಿದ್ದರು. ಒಂದು ದಿನ ಕೋಚ್‌ಗೆ 'ಜೀವನದಲ್ಲಿ ಏನು ಮಾಡಬೇಕೆಂದು ಬಯಸುತ್ತೀಯಾ' ಎಂದು ಪ್ರಶ್ನಿಸಿದಾಗ ಆಕೆ, ಒಂದೆರಡು ವರ್ಷದಲ್ಲಿ ಶೂಟಿಂಗ್ ಬಿಟ್ಟು ಉನ್ನತ ಶಿಕ್ಷಣಕ್ಕಾಗಿ ವಿದೇಶಕ್ಕೆ ತೆರಳುವ ಆಲೋಚನೆ ಇದೆ ಎಂದು ಉತ್ತರಿಸಿದ್ದರು. ಆಗ ಕೋಚ್ ಕೊಟ್ಟ ಉತ್ತರ ಆಕೆಯನ್ನು ಪ್ರಭಾವಿತಗೊಳಿಸಿತು. 'ನೀನು ವಿಶ್ವಮಟ್ಟದ ಶ್ರೇಷ್ಠ ಶೂಟರ್ ಎಂದು ನಂಬಿದ್ದೇನೆ. ಆ ನಂತರ ನಿನ್ನಿಷ್ಟ. ಮುಂದಿನ ನಿರ್ಧಾರ ನಿನ್ನದೇ' ಎಂದಾಗ ಮನು ಭಾಕರ್ ಯೋಚನಾ ಲಹರಿ ಬದಲಿಸಿತು. 'ಒಂದು ವೇಳೆ, ನೀವು ನನ್ನ ಸ್ಥಾನದಲ್ಲಿದ್ದರೆ ಏನು ಮಾಡುತ್ತೀರಿ 'ಎಂಬ ಮಾತಿಗೆ ಕೋಚ್ ನೀಡಿದ ಉತ್ತರವೂ ಮತ್ತಷ್ಟು ಉತ್ತೇಜನಕಾರಿಯಾಗಿತ್ತು. 'ಒಲಿಂಪಿಕ್ ಪದಕವೇ, ಇನ್ನೊಂದೇ ಎಂದು ಹಿಂದಕ್ಕೆ ತಿರುಗಿ ನೋಡುವುದನ್ನು ಬಿಟ್ಟು ನನ್ನ ಕನಸು ನೆರವೇರುವವರೆಗೂ ಈ ಸ್ಥಾನದಲ್ಲಿರಲು ಅವಿಶ್ರಾಂತವಾಗಿ ಶ್ರಮಿಸುತ್ತೇನೆ' ಎಂದು ಕೋಚ್ ಸ್ಪಷ್ಟ ಧ್ವನಿಯಲ್ಲಿ ಹೇಳಿದಾಗ ಮನು ಭಾಕರ್, ತಮ್ಮ ನಿರ್ಧಾರ ಕೈಬಿಟ್ಟು ಶೂಟಿಂಗ್‌ನಲ್ಲಿ ಮುಂದುವರಿದರು. ತನಗೆ ಸಿಗುವುದು ಬಂಗಾರದ ಪದಕವೇ ಅಥವಾ ಎಲಿಮಿನೇಟ್ ಆಗುತ್ತೇನೆಯೇ ಎಂಬುದನ್ನು ನೋಡದೇ ತನ್ನ ಗುರಿಯ ಕಡೆಗೆ ಲಕ್ಷ್ಯ ನೆಟ್ಟರು. ವಾಸ್ತವವಾಗಿ ತಾನು ಸ್ಕೋರ್ ಬೋರ್ಡ್ ನೋಡುತ್ತಲೇ ನೋಡಲಿಲ್ಲ ಎಂದು ಮನು ಎರಡನೇ ಕಂಚಿನ ಪದಕ ಗೆದ್ದ ನಂತರ ಹೇಳಿಕೊಂಡರು. ತಮ್ಮನ್ನು ಬೆಂಬಲಿಸಿದ ಎಲ್ಲರಿಗೂ ಆಕೆ ಕೃತಜ್ಞತೆ ಸಲ್ಲಿಸಿದ್ದಾರೆ.

ರೋಯಿಂಗ್ ಪುರುಷರ ಸಿಂಗಲ್ಸ್ ಸ್ಕಲ್ಸ್ ಕ್ವಾರ್ಟರ್‌ಫೈನಲ್‌ನಲ್ಲಿ ಬಲರಾಜ್ ಪನ್ವರ್ ಐದನೇ ಶ್ರೇಯಾಂಕದೊಂದಿಗೆ ತಮ್ಮ ಓಟ ನಿಲ್ಲಿಸಿದ್ದಾರೆ.

ರೋಯಿಂಗ್ ನಿಲ್ಲಿಸಿದ ಪನ್ವರ್

ಪ್ಯಾರಿಸ್: ಒಲಿಂಪಿಕ್ಸ್‌ನ ರೋಯಿಂಗ್ ಸ್ಪರ್ಧೆಯಿಂದ ಭಾರತ ಹೊರಬಿದ್ದಿದೆ. ದೇಶದ ಏಕೈಕ ರೋವರ್ ಬಲರಾಜ್ ಪನ್ವರ್ ಕ್ವಾರ್ಟರ್‌ಫೈನಲ್‌ನಲ್ಲಿ ಐದನೇ ಸ್ಥಾನ ಪಡೆದರು. 25 ವರ್ಷ ವಯಸ್ಸಿನ ಈ ಸೈನಿಕ ಮಂಗಳವಾರ ನಡೆದ ಸಿಂಗಲ್ಸ್ ಸ್ಕಲ್ಸ್ ಸ್ಪರ್ಧೆಯಿಂದ ನಿರ್ಗಮಿಸಿದ್ದಾರೆ. ಆದಾಗ್ಯೂ, ಪನ್ವರ್ ಅವರು ಸೆಮಿಫೈನಲ್‌ನಲ್ಲಿ ಬುಧವಾರ, ಸ್ಪರ್ಧಿಸಲಿದ್ದಾರೆ. ಒಲಿಂಪಿಕ್ ರೋಯಿಂಗ್‌ನಲ್ಲಿ ಭಾರತದ ಅತ್ಯುತ್ತಮ ಸಾಧನೆಯನ್ನು ದಾಖಲಿಸುವ ಗುರಿಯನ್ನು ಅವರು ಹೊಂದಿದ್ದು, ಪುರುಷರ ಡಬಲ್ ಸ್ಕಲ್ಸ್ ಜೋಡಿ ಅರ್ಜುನ್‌ಲಾಲ್ ಜಾಟ್ ಮತ್ತು ಅರವಿಂದ್ ಸಿಂಗ್ ಪ್ರಸ್ತುತ ಟೋಕಿಯೊ 2020ರಲ್ಲಿ 11ನೇ ಶ್ರೇಯಾಂಕದ ದಾಖಲೆಯನ್ನು ಹೊಂದಿದ್ದಾರೆ.

ಟಿಟಿ: 16ನೇ ಸುತ್ತಿಗೆ ಮನಿಕಾ

ಪ್ಯಾರಿಸ್: ಮಣಿಕಾ ಬಾತ್ರಾ ಅವರು ಒಲಿಂಪಿಕ್ ಟೇಬಲ್ ಟೆನಿಸ್ ಮಹಿಳಾ ಸಿಂಗಲ್ಸ್‌ನಲ್ಲಿ 16ನೇ ಸುತ್ತಿಗೆ ಪ್ರವೇಶಿಸಿ ಇತಿಹಾಸ ನಿರ್ಮಿಸಿದ್ದಾರೆ. ಸೋಮವಾರ, ನಡೆದ ಪಂದ್ಯದಲ್ಲಿ ಫ್ರಾನ್ಸ್‌ನ ಪ್ರಿತಿಕಾ ಪವಾಡೆ ಅವರನ್ನು 4-0 (11-9, 11-6, 11-9, 11-7) ಅಂತರದಲ್ಲಿ ಸೋಲಿಸಿದರು. ಬಾತ್ರಾ ಮುಂದಿನ ಪಂದ್ಯದಲ್ಲಿ' ಝು ಚೆಂಗ್ಜು ಮತ್ತು ಜಪಾನ್‌ನ ಮಿಯು ಹಿರಾನೊ ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.

ಶೂಟಿಂಗ್ ಟ್ರ್ಯಾಪ್‌ನಲ್ಲಿ ಭಾರತಕ್ಕೆ ನಿರಾಸೆ

21ನೇ ಸ್ಥಾನಕ್ಕೆ ತೃಪ್ತಿಪಟ್ಟ ತೊಂಡೈಮಾನ್

ಪ್ಯಾರಿಸ್: ಒಲಿಂಪಿಕ್ಸ್‌ನಲ್ಲಿ ಭಾರತೀಯ ಶೂಟರ್‌ಗಳು ಭರ್ಜರಿ ಪ್ರದರ್ಶನ ತೋರಿದ್ದು, ಈಗಾಗಲೇ ಎರಡು ಪದಕ ಗೆದ್ದಿದೆ. ಇದೀಗ ಶೂಟಿಂಗ್‌ನ ಇನ್ನೊಂದು ವಿಭಾಗದಲ್ಲಿ ಭಾರತ ನಿರಾಸೆ ಅನುಭವಿಸಿದೆ. ಪುರುಷರ ಟ್ರ್ಯಾಪ್ ಅರ್ಹತಾ ಸುತ್ತಿನಲ್ಲಿ ಭಾರತದ ಪೃಥ್ವಿರಾಜ್ ತೊಂಡೈಮಾನ್ 21ನೇ ಶ್ರೇಯಾಂಕದೊಂದಿಗೆ ಪಯಣ ನಿಲ್ಲಿಸಿದ್ದಾರೆ. ಮಂಗಳವಾರ ನಡೆದ ಪಂದ್ಯಾವಳಿಯಲ್ಲಿ ಅವರು, ಐದು ಸುತ್ತುಗಳಲ್ಲಿ 22, 25, 21, 25 ಮತ್ತು 25 ಅಂಕಗಳನ್ನು ದಾಖಲಿಸಿ 118 ಅಂಕ ಗಳಿಸಿದರು. ತೊಂಡೈಮನ್ ಟ್ರ್ಯಾಪ್ ಸ್ಪರ್ಧೆಯಲ್ಲಿ ಏಕೈಕ ಭಾರತೀಯ ಶೂಟರ್ ಆಗಿದ್ದರು. ವಿಶ್ವಕಪ್ ಗೆದ್ದಿದ್ದ ಅವರು, ಇದೀಗ ನಿರಾಸೆ ಮೂಡಿಸಿದ್ದಾರೆ.

ಸ್ಕೋರ್: ಪೃಥ್ವಿರಾಜ್ ತೊಂಡೈಮಾನ್ ಪುರುಷರ ಟ್ರ್ಯಾಪ್ ಅರ್ಹತಾ ಸುತ್ತಿನಲ್ಲಿ 118 ಅಂಕಗಳೊಂದಿಗೆ 21 ನೇ ಸ್ಥಾನ ಪಡೆದರು. ಶ್ರೇಯಸಿ ಸಿಂಗ್ 68 ಶಾಟ್‌ಗಳೊಂದಿಗೆ 21 ನೇ ಸ್ಥಾನದಲ್ಲಿದ್ದಾರೆ, ರಾಜೇಶ್ವರಿ ಕುಮಾರಿ 68 ಸ್ಕೋರ್ ನೊಂದಿಗೆ 22ನೇ ಸ್ಥಾನದಲ್ಲಿದ್ದಾರೆ.

ಮಹಿಳಾ ವಿಭಾಗ

ಮತ್ತೊಂದೆಡೆ ಮಹಿಳೆಯರ ಟ್ರ್ಯಾಪ್ ಅರ್ಹತಾ ಸುತ್ತಿನಲ್ಲಿ ಶ್ರೇಯಸಿ ಸಿಂಗ್ ಮತ್ತು ರಾಜೇಶ್ವರಿ ಕುಮಾರಿ ಕ್ರಮವಾಗಿ 21 ಮತ್ತು 22 ನೇ ಸ್ಥಾನಕ್ಕೆ ತೃಪ್ತಿಪಟ್ಟಿದ್ದಾರೆ. ಮೊದಲ ಮೂರು ಸುತ್ತುಗಳಲ್ಲಿ ಇಬ್ಬರೂ ಶೂಟರ್‌ಗಳು 68 ಅಂಕ ಗಳಿಸಿದ್ದು, ರಾಜೇಶ್ವರಿ ತಮ್ಮ ಮೂರನೇ ಸುತ್ತಿನ ಪ್ರಯತ್ನದಲ್ಲಿ 25 ಅಂಕ ಪಡೆದಿದ್ದಾರೆ. ಬುಧವಾರ ಈ ಜೋಡಿ ಮತ್ತೆ ಕಣಕ್ಕಿಳಿಯಲಿದ್ದು, ಅಗ್ರ ಆರು ಶೂಟರ್‌ಗಳು ಫೈನಲ್‌ಗೆ ಪ್ರವೇಶಿಸಲಿದ್ದಾರೆ.

ಶ್ರೇಯಸಿ ಸಿಂಗ್

ತೊಂಡೈಮಾನ್

ಬ್ಯಾಡ್ಮಿಂಟನ್‌ನಲ್ಲಿ ಮುಂದುವರಿಸಿದ ಜಯದ ನಾಗಾಲೋಟ

ಸಾತ್ವಿಕ್-ಚಿರಾಗ್ ಅಗ್ರಸ್ಥಾನಕ್ಕೆ

ಪ್ಯಾರಿಸ್: ಒಲಿಂಪಿಕ್ಸ್‌ನ ಬ್ಯಾಡ್ಮಿಂಟನ್‌ನಲ್ಲಿ ಭಾರತದ ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಜೋಡಿ ಇಂಡೋನೇಷ್ಯಾದ ಫಜರ್ ಅಲ್ಫಿಯಾನ್ ಮತ್ತು ಮುಹಮ್ಮದ್ ರಿಯಾನ್ ಅರ್ಡಿಯಾಂಟೊ ವಿರುದ್ಧ ತಮ್ಮ ಅಂತಿಮ ಗುಂಪಿನ ಸಿ ಪಂದ್ಯದಲ್ಲಿ ನೇರ ಸೆಟ್‌ಗಳಲ್ಲಿ ಸೋಲಿಸಿದರು.

ಸೋಮವಾರ ಐತಿಹಾಸಿಕ ಕ್ವಾರ್ಟರ್ ಫೈನಲ್ ಸ್ಥಾನವನ್ನು ದೃಢಪಡಿಸಿದ ಭಾರತದ ಜೋಡಿ ಮಂಗಳವಾರ ಲಾ ಚಾಪೆಲ್ಲೆ ಅರೆನಾದಲ್ಲಿ ವಿಶ್ವದ ನಂ.7 ಜೋಡಿ ವಿರುದ್ಧ 40 ನಿಮಿಷಗಳಲ್ಲಿ 21-13, 21-13 ಗೆಲುವು ಸಾಧಿಸಿತು.

ಇದರೊಂದಿಗೆ ಸಾತ್ವಿಕ್-ಚಿರಾಗ್ ಎರಡು ಪಂದ್ಯಗಳಲ್ಲಿ ಎರಡು ಗೆಲುವಿನೊಂದಿಗೆ ಸಿ ಗುಂಪಿನ ಅಂಕಪಟ್ಟಿಯಲ್ಲಿ ಅಗ್ರಸ್ಥಾನ ಪಡೆದರು. ಪುರುಷರ ಡಬಲ್ಸ್ ಕ್ವಾರ್ಟರ್‌ಫೈನಲ್ ಪಂದ್ಯಗಳು ಗುರುವಾರ, ಆಗಸ್ಟ್ 1 ರಂದು ಪ್ರಾರಂಭವಾಗಲಿವೆ.

ಎಲ್ಲ ಪಂದ್ಯಗಳಲ್ಲೂ ಗೆಲುವು

ಇತರ ಕ್ರೀಡಾಕೂಟಗಳಲ್ಲಿ ಭರ್ಜರಿ ಪ್ರದರ್ಶನ ತೋರುವುದರೊಂದಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದು ಭಾರತೀಯರಲ್ಲಿ ನಿರೀಕ್ಷೆ ಮೂಡಿಸಿದ್ದ ಸಾತ್ವಿಕ್ ಹಾಗೂ ಚಿರಾಗ್ ಒಲಿಂಪಿಕ್ಸ್‌ನ ಗುಂಪು ಪಂದ್ಯಗಳ ನಂತರ ಅಗ್ರಸ್ಥಾನಕ್ಕೆ ಏರಿದ್ದಾರೆ. ಮೊದಲ ಪಂದ್ಯದಿಂದಲೂ ಗೆಲುವಿನ ಲಯದಲ್ಲಿರುವ ಅವರು, ಆಡಿರುವ ಎಲ್ಲ ಪಂದ್ಯಗಳಲ್ಲಿ ಗೆದ್ದಿದ್ದಾರೆ. ಸೋಮವಾರ ನಡೆಯಬೇಕಿದ್ದ ಪಂದ್ಯ ಮಾತ್ರ ರದ್ದಾಗಿದೆ.